# ಕರ್ನಾಟಕ ವಿಧಾನಮಂಡಲ

**ಕರ್ನಾಟಕ ಶಾಸಕಾಂಗ ಪತ್ರಿಕೆ**

**(ತ್ರೈಮಾಸಿಕ ಪತ್ರಿಕೆ)**

**ಏಪ್ರಿಲ್ – ಮೇ – ಜೂನ್ – 2021**

**ಸಂಪುಟ–III ಸಂಖ್ಯೆ–2**

**ಪ್ರಕಟಣೆ**
**ಸಂಶೋಧನಾ ಮತ್ತು ಉಲ್ಲೇಖನಾ ಶಾಖೆ,**
**ಕರ್ನಾಟಕ ವಿಧಾನ ಸಭೆ ಸಚಿವಾಲಯ, ವಿಧಾನಸೌಧ,**
**ಬೆಂಗಳೂರು – 560 233.**

## ವಿಶೇಷ ಸೂಚನೆ

ಕರ್ನಾಟಕ ಶಾಸಕಾಂಗ ಪತ್ರಿಕೆಯು ಕರ್ನಾಟಕ ವಿಧಾನ ಸಭೆ/ವಿಧಾನ ಪರಿಷತ್ತಿನ ಸದಸ್ಯರುಗಳ ಪರಾಮರ್ಶೆಗಾಗಿ ಪ್ರಕಟಿಸಲಾಗುತ್ತಿದ್ದು, ಇದು ಆಂತರಿಕ ಪ್ರಕಟಣೆಗೆ ಮಾತ್ರ ಸೀಮಿತವಾಗಿರುತ್ತದೆ.

ಈ ಪತ್ರಿಕೆಯಲ್ಲಿ ಅಳವಡಿಸಲಾಗಿರುವ ಮಾಹಿತಿಗಳು ವಿವಿಧ ದಿನ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಸುದ್ದಿಗಳ ಆಧಾರಿತವಾಗಿದ್ದು, ಇದರಲ್ಲಿ ನ್ಯೂನತೆ, ವ್ಯತ್ಯಾಸಗಳಿಂದ ಅಥವಾ ನಿಖರತೆಯ ಕೊರತೆಯಿಂದ ಯಾವುದೇ ವ್ಯಕ್ತಿಗೆ ಉಂಟಾಗಬಹುದಾದ ನಷ್ಟ/ಹಾನಿಗೆ ವಿಧಾನ ಸಭಾ ಸಚಿವಾಲಯವು ಯಾವುದೇ ರೀತಿ ಜವಾಬ್ದಾರವಾಗುವುದಿಲ್ಲ.

**ಸೂಚನೆ* ಪತ್ರಿಕೆಯು ವಿಧಾನ ಮಂಡಲದ ಅಂತರ್ಜಾಲ http:/kla.kar.nic.inನಲ್ಲೂ ಲಭ್ಯವಿದೆ.**

# ಮುನ್ನುಡಿ

ಕರ್ನಾಟಕ ವಿಧಾನಮಂಡಲದ ಸಂಶೋಧನಾ ಮತ್ತು ಉಲ್ಲೇಖನಾ ಶಾಖೆಯು ಉಭಯ ಸದನಗಳ ಮಾನ್ಯ ಸದಸ್ಯರುಗಳ ಉಪಯೋಗಕ್ಕಾಗಿ ಕರ್ನಾಟಕ ಶಾಸಕಾಂಗ ತ್ರೈಮಾಸಿಕ ಪತ್ರಿಕೆಯ ಸಂಪುಟ – III ರ ಎರಡನೇ ಸಂಚಿಕೆಯನ್ನು ಪ್ರಕಟಪಡಿಸುತ್ತಿದೆ.

ತ್ರೈಮಾಸಿಕ ಶಾಸಕಾಂಗ ಪತ್ರಿಕೆಯು ಮುಖ್ಯವಾಗಿ ಕರ್ನಾಟಕ ವಿಧಾನಮಂಡಲದ ಎರಡೂ ಸದನಗಳ ಶಾಸಕಾಂಗದ ಸುದ್ದಿಗಳು, ಲೋಕಸಭೆ, ರಾಜ್ಯಸಭೆಗಳ, ಸಂಸದೀಯ ವ್ಯವಹಾರಗಳಿಗೆ ಸಂಬಂಧಿಸಿದ ಪ್ರಮುಖ ಸುದ್ದಿಗಳು, ರಾಜ್ಯಗಳ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಹಾಗೂ ಇತರೆ ವಿಷಯಗಳನ್ನೊಳಗೊಂಡಿರುತ್ತದೆ.

ಈ ಸಂಚಿಕೆಯಲ್ಲಿ 2021ನೇ ಸಾಲಿನ ಏಪ್ರಿಲ್, ಮೇ ಮತ್ತು ಜೂನ್ ತಿಂಗಳ ಅವಧಿಯಲ್ಲಿನ ಪ್ರಮುಖ ಸುದ್ದಿ, ಮಾಧ್ಯಮಗಳಲ್ಲಿ ಪ್ರಕಟವಾದ ದೈನಂದಿನ ಸುದ್ದಿಗಳನ್ನು ಸಂಗ್ರಹಿಸಿ ಪ್ರಕಟಿಸಲಾಗಿದೆ.

ಸಂಶೋಧನಾ ಮತ್ತು ಉಲ್ಲೇಖನಾ ವಿಭಾಗವು ಸಿದ್ಧಪಡಿಸಿ ಹೊರತರುತ್ತಿರುವ ಈ ಪತ್ರಿಕೆಯ ಗುಣಮಟ್ಟವನ್ನು ಉನ್ನತೀಕರಿಸಲು ಹಾಗೂ ಹೆಚ್ಚು ವಿಷಯಾಸಕ್ತವಾಗಿಸಲು ಇದರ ಬೆಳವಣಿಗೆಯ ಸುಧಾರಣೆಗೆ ಮಾನ್ಯ ಸದಸ್ಯರುಗಳಿಂದ ಅಮೂಲ್ಯ ಸಲಹೆ ಮತ್ತು ಸೂಚನೆಗಳನ್ನು ಬರಹ ರೂಪದಲ್ಲಿ ಸ್ವೀಕರಿಸಲು ಸದಾ ಸ್ವಾಗತವಿರುತ್ತದೆ.

**ಎಂ.ಕೆ.ವಿಶಾಲಾಕ್ಷಿ**
ಕಾರ್ಯದರ್ಶಿ(ಪ್ರ),
ಕರ್ನಾಟಕ ವಿಧಾನ ಸಭೆ.

ಬೆಂಗಳೂರು
ದಿನಾಂಕ: 13–09–2021

# ಕರ್ನಾಟಕ ಶಾಸಕಾಂಗ ತ್ರೈಮಾಸಿಕ ಪತ್ರಿಕೆಯ ಸಂಪಾದಕ ವರ್ಗ

## ಕರ್ನಾಟಕ ವಿಧಾನ ಸಭೆ ಸಚಿವಾಲಯ

1. ಶ್ರೀಮತಿ ಎಂ.ಕೆ. ವಿಶಾಲಾಕ್ಷಿ : ಕಾರ್ಯದರ್ಶಿ (ಪ್ರ)
2. ಶ್ರೀಮತಿ ಎಂ. ಮಂಜುಳ : ಜಂಟಿ ನಿರ್ದೇಶಕರು
3. ಶ್ರೀಮತಿ ಜಿ. ಮಮತ : ಸಹಾಯಕ ನಿರ್ದೇಶಕರು

## ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ

1. ಶ್ರೀಮತಿ ಕೆ. ಆರ್. ಮಹಾಲಕ್ಷ್ಮಿ : ಕಾರ್ಯದರ್ಶಿ
2. ಶ್ರೀಮತಿ ಎಸ್. ನಿರ್ಮಲ : ಅಪರ ಕಾರ್ಯದರ್ಶಿ

# ಕರ್ನಾಟಕ ಶಾಸಕಾಂಗ ಪತ್ರಿಕೆ
## (ತ್ರೈಮಾಸಿಕ ಪತ್ರಿಕೆ)

ಏಪ್ರಿಲ್, ಮೇ ಮತ್ತು ಜೂನ್ 2021
ಸಂಪುಟ–III ಸಂಖ್ಯೆ–2

## ಪರಿವಿಡಿ

### ಭಾಗ–1

### ವಿಧಾನ ಮಂಡಲದ ಸುದ್ದಿಗಳು


| ಕ್ರಮ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| 1 | ಹಣ ದುರ್ಬಳಕೆ: ಸಮಗ್ರ ವರದಿಗೆ ಪಿಎಸಿ ಸೂಚನೆ | 1 |
| 2 | ಸದನ ಸಮಿತಿ ಅಸ್ತಿತ್ವದ ಗೊಂದಲ | 1 |
| 3 | ಬಯೋಮೆಟ್ರಿಕ್, ಸಮವಸ್ತ್ರ ಕಡ್ಡಾಯ | 2 |
| 4 | ನರ್ಸಿಂಗ್ ಅಕ್ರಮ ತನಿಖೆಗೆ ಜಂಟಿ ಸದನ ಸಮಿತಿ ರಚನೆ | 2 |
| 5 | ಸೋಂಕು ನಿಗ್ರಹಕ್ಕೆ ಪ್ರಯತ್ನ ಅಗತ್ಯ | 3 |
| 6 | ಕೊರೋನಾ ಹಿನ್ನೆಲೆ: ಸಮಿತಿಗಳ ಸಭೆ ರದ್ದು | 3 |
| 7 | ರಾಜ್ಯಪಾಲರ ಅಧ್ಯಕ್ಷತೆಯಲ್ಲಿ ಸದನ ನಾಯಕರ ಸಭೆ ಇಂದು | 4 |
| 8 | ಕೋವಿಡ್ ಬಗ್ಗೆ ಜಾಗೃತಿ ಮೂಡಿಸಿ: ಸ್ಪೀಕರ್ ಕರೆ | 4 |
| 9 | ಶಿಕ್ಷಕರ ಸಮಸ್ಯೆ ಪರಿಹಾರಕ್ಕೆ ಸಿಎಂ ಗಮನಕ್ಕೆ | 5 |
| 10 | ಶಾಸಕರ ಜೊತೆ ಸಭಾಧ್ಯಕ್ಷ ಕಾಗೇರಿ ಸಮಾಲೋಚನೆ | 5 |
| 11 | ದೇಹ–ಮನಸ್ಸಿನ ಸಾಮರಸ್ಯ ಸಾಧನ | 6–7 |
| 12 | ಲೋಕಸಭಾಧ್ಯಕ್ಷ ಓಂ ಬಿರ್ಲಾ ಸಭೆ ಇಂದು | 8–9 |
| 13 | ಕಾಗದ ರಹಿತ ವಿಧಾನ ಪರಿಷತ್ತು | 10 |
| 14 | ವಿಧಾನ ಮಂಡಲದಲ್ಲಿ ವಕ್ಫ್ ವರದಿ ಮಂಡನೆ ವಿವರ ಕೊಡಿ | 10 |
| 15 | ಸಭೆಗೆ ಷರತ್ತುಬದ್ದ ಅನುಮತಿ | 11 |
| 16 | ಮೇಲ್ಮನೆಯಲ್ಲಿ ಕಾಗದರಹಿತ ಕಲಾಪಕ್ಕೆ ಕ್ರಮ: ಹೊರಟ್ಟಿ | 11 |
| 17 | ಜನರ ರೋಗ ನಿರೋಧಕ ಶಕ್ತಿ ಹೆಚ್ಚಿಸಿ | 11 |
| 18 | ಕೋವಿಡ್ ಸೇರಿ ಹಲವು ವಿಷಯಗಳ ಚರ್ಚೆಗೆ ವಿಶೇಷ ಅಧಿವೇಶನ ಕರೆಯಿರಿ | 12 |

| ಕ್ರಮ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| 19 | ಅಧಿವೇಶನ ಬೇಡ ಎಂದು ವಿಷಯ ಸಮಿತಿಯ ವರದಿ | 12 |
| 20 | ವಿಶೇಷ ಅಧಿವೇಶನಕ್ಕೆ ಹೆಚ್‌ಡಿಕೆ ಆಗ್ರಹ | 12 |
| 21 | ಮಾನವೀಯತೆ ಮೆರೆದ ಬಸವರಾಜ್ ಹೊರಟ್ಟಿ | 13 |
| 22 | ಬೆಳಗಾವಿಯಲ್ಲಿ ಅಧಿವೇಶನ ಮುಖ್ಯಮಂತ್ರಿಗೆ ಸಭಾಪತಿ ಪತ್ರ | 13 |
| 23 | ಶಾಲಾ ಶುಲ್ಕ ನಿರ್ಧಾರವಾಗಲಿ ಸಭಾಪತಿಗಳ ಸೂಚನೆ | 13 |
| 24 | ಕೊರೋನಾ ಖರ್ಚಿನ ವಿವರಕ್ಕೆ ಪಿಎಸಿ ಗರಂ | 14 |
| 25 | ಸಾವಿನ ನಿಖರ ಮಾಹಿತಿ ಕೊಡಿ | 14–40 |
| | **ಭಾಗ–2**<br>**ಕೇಂದ್ರ ಸರ್ಕಾರದ ಸುದ್ದಿಗಳು** | |
| 1 | ಆಹಾರ ಸಂಸ್ಕರಣೆಗೆ ರೂ.10,000 ಕೋಟಿ | 41 |
| 2 | ದೇಶಾದ್ಯಂತ ಮತ್ತೆ ಲಕ್ಷ ದಾಟಿದ ಕೊರೋನಾ ಪ್ರಕರಣ | 41 |
| 3 | ಕಛೇರಿಯಲ್ಲೇ ಸಿಗಲಿದೆ ಲಸಿಕೆ | 42 |
| 4 | ಕೊರೋನಾ: ಸಿಬಿಎಸ್‌ಇ 10ನೇ ಕ್ಲಾಸ್ ಪರೀಕ್ಷೆ ರದ್ದು | 42 |
| 5 | 3.32 ಲಕ್ಷ ಕೇಸ್: ಭಾರತ ವಿಶ್ವದಾಖಲೆ | 43 |
| 6 | 80 ಕೋಟಿ ಜನರಿಗೆ ಅನ್ನಭಾಗ್ಯ | 44 |
| 7 | ದಾಖಲೆಯ 2760 ಜನ ಸಾವು | 45 |
| 8 | ಕೋವಿಡ್: ಕೇಂದ್ರದಿಂದ ಎಸ್‌ಡಿಆರ್‌ಎಫ್ ಮಂಜೂರು | 46 |
| 9 | 3 ರಾಜ್ಯಕ್ಕೆ 1000 ಕೋಟಿ | 46 |
| 10 | ದೇಶಕ್ಕೆ ಈಗ ಡೆಲ್ಟಾ ಪ್ಲಸ್ ತಳಿ ತಲೆಬಿಸಿ | 46 |
| 11 | ಭಾರತದ ಲಸಿಕೆ ಸಂಪೂರ್ಣ ಸುರಕ್ಷಿತ | 47 |
| 12 | Large study finds Novavax about 90% effective | 47 |
| 13 | 2.6 ಕೋಟಿ ಹೆಕ್ಟೇರ್ ಬಂಜರು ಭೂಮಿ ಅಭಿವೃದ್ಧಿ ಗುರಿ: ಮೋದಿ | 48 |
| 14 | ದೇಶದ ಮೊದಲ ಮಕ್ಕಳ ಲಸಿಕೆಗೆ ಇನ್ನೊಂದು ವಾರದಲ್ಲಿ ಅನುಮತಿ | 48 |
| 15 | House panel for study on malnutrition | 49 |
| 16 | ದೇಶದಲ್ಲಿ 22 ಡೆಲ್ಟಾ ಪ್ಲಸ್ ಪ್ರಕರಣ ಪತ್ತೆ | 50 |

| ಕ್ರಮ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| 17 | Speaker or Lokpal to allow MP's prosecution : LS seeks legal view | 50 |
| 18 | ಹುಟ್ಟೂರಿಗೆ ಭೇಟಿ, ಭಾವಪರವಶರಾದ ರಾಷ್ಟ್ರಪತಿ | 51 |
| 19 | ಜುಲೈ 19 ರಿಂದ ಸಂಸತ್ತಿನ ಮುಂಗಾರು ಅಧಿವೇಶನ | 51 |
| **ಭಾಗ–3**<br>**ರಾಜ್ಯ ಸರ್ಕಾರದ ಸುದ್ದಿಗಳು** | | |
| 1 | ಕೋವಿಡ್: 6–9 ತರಗತಿ ಬಂದ್ | 52 |
| 2 | ಎಚ್ಚೆತ್ತುಕೊಳ್ಳದಿದ್ದರೆ ಸಂಕಷ್ಟ | 52 |
| 3 | 30 ಲಕ್ಷ ರೈತರಿಗೆ ಸಾಲಭಾಗ್ಯ | 53 |
| 4 | ಸೋಂಕಿತರಿಗೆ ಶೇ.50 ಹಾಸಿಗೆ ಮೀಸಲಿಡಿ | 54 |
| 5 | ನಾಳೆಯಿಂದ ರಾತ್ರಿ ಕರ್ಫ್ಯೂ: ರಾಜ್ಯದ 8 ಕಡೆ ಜಾರಿ | 55 |
| 6 | ವಿವಾಹಿತ ಪುತ್ರಿಗೂ ಅನುಕಂಪದ ನೌಕರಿ: ಸರ್ಕಾರ ಮಹತ್ವದ ಆದೇಶ | 55 |
| 7 | 8 ನಗರಗಳಲ್ಲಿ ರಾತ್ರಿ ಕರ್ಫ್ಯೂ ಜಾರಿ | 56 |
| 8 | ಮೇನಲ್ಲಿ ಕೊರೋನಾ ತಾರಕಕ್ಕೆ | 56 |
| 9 | ರಾಜ್ಯಪಾಲರಿಂದ ಇಂದು ಮೊದಲ ಸರ್ವಪಕ್ಷ ಸಭೆ | 57 |
| 10 | ಅಂತ್ಯಕ್ರಿಯೆಗೆ ಗೋಮಾಳದಲ್ಲಿ ತಾತ್ಕಾಲಿಕ ಸ್ಮಶಾನ | 57 |
| 11 | ವೈದ್ಯಾಧಿಕಾರಿಗಳಿಂದ ಮರಣ ಪ್ರಮಾಣ ಪತ್ರ ಕಡ್ಡಾಯ | 58 |
| 12 | 18 ಇಲಾಖೆ ಸಿಬ್ಬಂದಿಗೆ ಹಾಜರಿ ಕಡ್ಡಾಯ | 58 |
| 13 | ಶವಸಂಸ್ಕಾರಕ್ಕೆ ರಾಜಧಾನಿಯಲ್ಲಿ ತಪ್ಪದ ಸಮಸ್ಯೆ | 59 |
| 14 | ಬಿಬಿಎಂಪಿ, ಪೊಲೀಸ್ ಅಧಿಕಾರಿಗಳ 8 ತಂಡ ರಚನೆ | 60 |
| 15 | ಅಘೋಷಿತ ಲಾಕ್‌ಡೌನ್ | 60 |
| 16 | 24 ಗಂಟೆ: 25 ಸಾವಿರ ದಾಟಿದ ಕೋವಿಡ್ | 61 |
| 17 | ವಾರಾಂತ್ಯ ಕರ್ಫ್ಯೂ: ಯಾವುದಕ್ಕೆಲ್ಲ ವಿನಾಯ್ತಿ | 62 |
| 18 | ವಿಧಾನ ಸಭಾ ಕ್ಷೇತ್ರಕ್ಕೆ ತಲಾ ಲಕ್ಷ ರೂ.25 ಅನುದಾನ ಬಿಡುಗಡೆ | 63 |
| 19 | ರಾಜ್ಯಕ್ಕೆ ರೆಮ್‌ಡಿಸಿವಿರ್ 1.22 ಲಕ್ಷ, ಅಕ್ಸಿಜನ್ 800 ಟನ್ | 63 |
| 20 | ರಾಜ್ಯದಲ್ಲಿ ದಾಖಲೆ 208 ಸಾವು | 63 |
| 21 | 1.5 ಲಕ್ಷ ಸಕ್ರಿಯ ಕೇಸ್: ಬೆಂಗಳೂರು ದೇಶಕ್ಕೆ ನಂ.1 | 64 |

| ಕ್ರಮ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| 22 | ರಾಜ್ಯದಲ್ಲಿ 34508 ಕೇಸ್ | 65 |
| 23 | ಒಂದೇ ತಿಂಗಳಲ್ಲಿ 3 ಲಕ್ಷ ಮಂದಿಗೆ ಸೋಂಕು | 65 |
| 24 | ಐದು ಸಚಿವರಿಗೆ ಕೋವಿಡ್ ಹೊಣೆ | 66 |
| 25 | 18 ವರ್ಷ ಮೇಲ್ಪಟ್ಟವರಿಗೆ ಇಂದಿನಿಂದ ಸರ್ಕಾರಿ ಆಸ್ಪತ್ರೆಗಳಲ್ಲಿ ಲಸಿಕೆ | 67 |
| 26 | 3ನೇ ಅಲೆ ತಡೆಗೆ ಟಾಸ್ಕ್ ಫೋರ್ಸ್: ಸಿಎಂ ಸೂಚನೆ | 67 |
| 27 | ಮೇವಿನ ಕೊರತೆ ಇಲ್ಲ: ಪ್ರಭು ಚವ್ಹಾಣ್ | 68 |
| 28 | ಬ್ಲಾಕ್ ಫಂಗಸ್‌ಗೆ ಉಚಿತವಾಗಿ ಚಿಕಿತ್ಸೆ | 68 |
| 29 | ಕಡಿಮೆಯಾದರೂ ಕೊರೋನಾ ಏರಲಿದೆ ಮರಣ ಪ್ರಮಾಣ | 69 |
| 30 | ಕೋವಿಡ್: ಅನಾಥ ಮಕ್ಕಳ ಪೋಷಣೆಗೆ ವ್ಯವಸ್ಥೆ | 69 |
| 31 | ಕೋವಿಡ್ ಹೊಣೆ ಡಿಸಿಗಳಿಗೆ | 70 |
| 32 | 3ನೇ ಅಲೆ: ಎಲ್ಲ ಜಿಲ್ಲೆಲೂ ಮಕ್ಕಳ ಕ್ವಾರಂಟೈನ್ ಕೇಂದ್ರ | 71 |
| 33 | 1 ತಿಂಗಳಲ್ಲಿ ವರ್ಷದ ಕೇಸ್ | 72 |
| 34 | ಬೆಳಗಾವಿಯಲ್ಲಿ ಜಯಮಂಗಲಂ | 73 |
| 35 | 20 ಜಿಲ್ಲೆಗಳು ಸ್ವಲ್ಪ ರಿಲ್ಯಾಕ್ಸ್ | 74 |
| 36 | ಹೊರಗುತ್ತಿಗೆ ನೌಕರರಿಗೆ ಸೇವಾ ಭದ್ರತೆ | 75 |
| 37 | ಕೊರೋನಾ ಸಾವು ರೂ.1 ಲಕ್ಷ ಪರಿಹಾರ | 76 |
| 38 | ಒತ್ತುವರಿ ತೆರವುಗೊಳಿಸಲು ಡಿ.ಸಿ. ಸೂಚನೆ | 76 |
| 39 | ಖಾಸಗಿ ಶಾಲೆ ಶುಲ್ಕ ನಿಗದಿಗೆ ನಿವೃತ್ತ ಜಡ್ಜರ ಸಮಿತಿ | 77 |
| 40 | ನಗರದಲ್ಲಿ ಇನ್ನೂ ಇದೆ ಕೊರೋನಾ ಅಪಾಯ | 78 |
| 41 | ಸ್ಮಾರ್ಟ್‌ಸಿಟಿ ಯೋಜನೆ ಕಾಲಮಿತಿಯಲ್ಲಿ ಕಾಮಗಾರಿ ಪೂರ್ಣಕ್ಕೆ ಸಿಎಂ ಸೂಚನೆ | 79 |
| 42 | ಒಂದು ಲಕ್ಷ ರೂಪಾಯಿ ಪರಿಹಾರ | 80 |
| 43 | ಹಿಗ್ಗಿತು ಬಿಬಿಎಂಪಿ ಬಜೆಟ್ ಗಾತ್ರ | 80–81 |
| 44 | ನನ್ನ ಫೋನ್ ಟ್ಯಾಪ್ ಆಗುತ್ತಿದೆ | 82 |
| 45 | ನಗರ ಸ್ಥಳೀಯ ಸಂಸ್ಥೆ ಚುನಾವಣೆ 6 ತಿಂಗಳು ಮುಂದೂಡಿಕೆ | 82 |
| 46 | ಶಿಕ್ಷಣ ನೀತಿ ಜಾರಿ : ರಾಜ್ಯ ಮುಂಚೂಣಿ | 83 |
| 47 | ಮೇಕೆದಾಟು: ರಾಜ್ಯದ ಮತ್ತೊಂದು ಆತಂಕ ದೂರ | 83 |
| 48 | ಲಸಿಕೆ ಬಳಿಕ ಪದವಿ ತರಗತಿ | 84 |

| ಕ್ರಮ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| 49 | ಮಳೆ : ಇಂದು ಡಿಸಿಗಳ ಜೊತೆ ಸಿಎಂ ಬಿಎಸ್‌ವೈ ಸಭೆ | 84 |
| 50 | ಬೆಲ್ಲದ್ ಕರೆ ಕದ್ದಾಲಿಕೆ ತನಿಖೆಗೆ ಸರ್ಕಾರ ಆದೇಶ | 85 |
| 51 | ಕೊರೋನಾ ಬೆನ್ನಲ್ಲೇ ಪ್ರವಾಹ ಭೀತಿ | 86 |
| 52 | 3ನೇ ಅಲೆಯಲ್ಲಿ ರಾಜ್ಯದ 1–1.5 ಲಕ್ಷ ಮಕ್ಕಳಿಗೆ ಸೋಂಕು | 87 |
| 53 | 3rd wave may hit 3.4L Kids in state: Devi Shetty panel | 88 |
| 54 | ಪರೀಕ್ಷೆಯಿಲ್ಲದೇ ಎಲ್ಲರೂ ಪಾಸ್ | 88 |
| 55 | ರೈತರ ಮಕ್ಕಳಿಗೆ ಸಿಹಿ | 89 |
| 56 | ಟಿಡಿಆರ್ ನಿಯಮ ಬದಲು | 90 |
| 57 | ಶಾಲಾರಂಭದ ಜಿಜ್ಞಾಸೆ | 90 |
| 58 | ಜಂಟಿ ಸದನ ಸಮಿತಿ ರಚಿಸಲಿ | 91 |
| 59 | 30 ಲಕ್ಷ ರೈತರಿಗೆ ಶೂನ್ಯ ಬಡ್ಡಿಯಲ್ಲಿ ಸಾಲ | 92 |
| 60 | ಮಹಿಳಾ ಸರ್ಕಾರಿ ನೌಕರರಿಗೆ 180 ದಿನ ಶಿಶುಪಾಲನಾ ರಜೆ | 93 |
| 61 | 25 ಲಕ್ಷ ಗ್ರಾಮೀಣ ಮನೆಗಳಿಗೆ ನೀರು | 94 |
| 62 | ಲಸಿಕೆ ಬಳಿಕ ಪದವಿ ತರಗತಿ | 94 |
| 63 | ಡೆಲ್ಟಾ ಗಂಡಾಂತರ | 95 |
| 64 | 6500 ತರಗತಿ ಸ್ಮಾರ್ಟ್ ತರಗತಿಗಳಾಗಿ ಪರಿವರ್ತನೆ | 96 |
| 65 | ರಾಜ್ಯದಲ್ಲಿ ಡೆಲ್ಟಾ ಪ್ಲಸ್ 2 ಪ್ರಕರಣ | 96 |
| 66 | 3ನೇ ಅಲೆ: ಮಕ್ಕಳಿಗೆ 95000 ಬೆಡ್ ಬೇಕು | 97 |
| 67 | ಕಾರ್ಮಿಕರಿಗೆ ಭರ್ಜರಿ ಭತ್ಯೆ | 98 |
| 68 | ಬೆಂಗಳೂರನ್ನು ಮಾದರಿ ನಗರವನ್ನಾಗಿಸಲು ಶ್ರಮ | 99 |
| | **ಭಾಗ–4**<br>**ರಾಜ್ಯ ನೆಲ – ಜಲ ಭಾಷೆ** | |
| 1 | ತೌಕ್ತೆ ಚಂಡಮಾರುತ ಅಬ್ಬರಕ್ಕೆ ಕರಾವಳಿ ತತ್ತರ | 100 |
| 2 | ರಾಜ್ಯದಲ್ಲಿ ಮುಂಗಾರು ಅಬ್ಬರ, ನಷ್ಟ ಅಪಾರ | 100 |
| 3 | ಲೋಕಸಭೆ ತರಬೇತಿಗೆ ಕೊನೆಗೂ ಕನ್ನಡ ಸೇರ್ಪಡೆ | 101 |
| 4 | ಉತ್ತರ ಕರ್ನಾಟಕದ ನದಿಗಳು ಭರ್ತಿ; 4 ದೇಗುಲ ಮುಳುಗಡೆ | 102 |

| ಕ್ರಮ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| 5 | ಎನ್‌ಜಿಟಿ ಸಂಕಟ ದಾಟಿದ ಮೇಕೆದಾಟು | 102 |
| 6 | ಮೇಕೆದಾಟು: ಕರ್ನಾಟಕಕ್ಕಿದ್ದ ಅಡ್ಡಿ ನಿವಾರಣೆ | 102–103 |
| 7 | ವಿಶ್ವ ಯೋಗ ದಿನಕ್ಕೆ ರಾಜ್ಯದಿಂದ ಹಂಪಿ ಆಯ್ಕೆ | 104 |
| 8 | ವಾಸಯೋಗ್ಯ ರಾಜಧಾನಿ ಬೆಂಗಳೂರು ನಂ.1 | 104 |
| 9 | ಆಯುಷ್ಮಾನ್ ಭಾರತದಲ್ಲಿ ಕರ್ನಾಟಕ ದೇಶಕ್ಕೆ ನಂ.1 | 104 |
| 10 | ಲೋಕಸಭಾ ಸಚಿವಾಲಯದಿಂದ ಕನ್ನಡ ಕಡೆಗಣನೆ | 105 |
| | **ಭಾಗ–5**<br>**ಸರ್ವೋಚ್ಚ / ಉಚ್ಚ ನ್ಯಾಯಾಲಯದ ಸುದ್ದಿಗಳು** | |
| 1 | ಕೃಷಿ ಕಾಯಿದೆ : ತಜ್ಞರ ಸಮಿತಿಯಿಂದ ಸುಪ್ರೀಂಗೆ ವರದಿ | 106 |
| 2 | ರಾಷ್ಟ್ರೀಯ ತುರ್ತು ಪರಿಸ್ಥಿತಿಯಂತಿದೆ | 106 |
| 3 | ಸಮರೋಪಾದಿಯಲ್ಲಿ ಕ್ರಮ ಕೈಗೊಳ್ಳಿ : ಹೈಕೋರ್ಟ್ ತಾಕೀತು | 107 |
| 4 | 48ನೇ ಸಿಜೆಐ ಆಗಿ ನ್ಯಾಯಾಮೂರ್ತಿ ರಮಣ ಪ್ರತಿಜ್ಞೆ | 108 |
| 5 | ಇಡೀ ದೇಶ ಮತ್ತೆ ಲಾಕ್‌ಡೌನ್ ಮಾಡಿ : ಸುಪ್ರೀಂಕೋರ್ಟ್ | 108 |
| 6 | ಕರ್ನಾಟಕಕ್ಕೆ ಆಕ್ಸಿಜನ್ ನೀಡಿ: ಸುಪ್ರೀಂ | 109 |
| 7 | ಸದನದಲ್ಲಿ ಮಂಡಿಸಿದ ವಕ್ಫ್ ಆಸ್ತಿ ವರದಿ ವಿವರ ಸಲ್ಲಿಸಲು ಆದೇಶ | 110 |
| 8 | ಕೆರೆ ಒತ್ತುವರಿ ತೆರವಿಗೆ ಮೂರು ವಾರಗಳಲ್ಲಿ ನಿರ್ಧಾರ ಕೈಗೊಳ್ಳಿ | 111 |
| | **ಭಾಗ–6**<br>**ಹೊರ ರಾಜ್ಯಗಳ ಸುದ್ದಿಗಳು** | |
| 1 | Gujarat Assembly Passes, stricter bill on ‘love jihad’ | 112 |
| 2 | Disqualification pleas: Goa Speaker to rule on April 20 | 112 |
| 3 | ಬಿಜೆಪಿ ಅಭ್ಯರ್ಥಿ ಪತ್ನಿ ಕಾರಿನಲ್ಲಿ ಮತಯಂತ್ರ | 113 |
| 4 | ಒಡಿಶಾ ವಿಧಾನಸಭೆ ಸ್ಪೀಕರ್ ಪೀಠದತ್ತ ಚಪ್ಪಲಿ, ಕಾಗದ ಎಸೆತ | 114 |
| 5 | ಮಹಾ ಸೆಮಿಲಾಕ್ | 115 |
| 6 | ಪಂಚ ರಾಜ್ಯಗಳ ಚುನಾವಣೆ | 115 |

| ಕ್ರಮ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| 7 | ಮಹಾರಾಷ್ಟ್ರದತ್ತ ಮೂರನೇ ಅಲೆ | 116 |
| 8 | ಮತ್ತೆ ಎಡಕ್ಕೆ ವಾಲಿದ ಕೇರಳ | 116–117 |
| 9 | ದೀದಿ ಬಂಗಾಳ ದಿಗ್ವಿಜಯ | 118–119 |
| 10 | ತಮಿಳುನಾಡಿಗೆ ಸ್ಟಾಲಿನ್ ಬಾಸ್ | 119–120 |
| 11 | ಸರ್ಕಾರಿ ಯೋಜನೆ ಲಾಭಕ್ಕೆ ಎರಡು ಮಕ್ಕಳು ಕಡ್ಡಾಯ | 120–121 |
| 12 | ಆಂಧ್ರ : ಒಂದೇ ದಿನ 13 ಲಕ್ಷ ಡೋಸ್ ಲಸಿಕೆ ನೀಡಿಕೆ ದಾಖಲೆ | 121 |
| 13 | Minister offers Rs.1 lakh for parent with most children | 121 |
| | **ಭಾಗ–7**<br>**ಶ್ರದ್ಧಾಂಜಲಿ** | |
| 1 | ಪಂಡಿತ್ ತರ್ಲಗಟ್ಟಿ, ಖ್ಯಾತ ಸಿತಾರ್ ಕಲಾವಿದ | 122 |
| 2 | ಗಾಂಧಿವಾದಿ ಸದಾಶಿವ ಭೋಸಲೆ | 122 |
| 3 | ಸೈಯದ್ ಜುಲ್ಫೀಕರ್ ಹಷ್ಮಿ, ಮಾಜಿ ಶಾಸಕರು | 122 |
| 4 | ಎಂ.ಎ. ಹೆಗಡೆ, ಯಕ್ಷಗಾನ ಅಕಾಡೆಮಿ ಅಧ್ಯಕ್ಷ | 122 |
| 5 | ವೆಂಕಟಸುಬ್ಬಯ್ಯ, ನಿಘಂಟು ತಜ್ಞರು | 123 |
| 6 | ಮೋಹನ ಶಾಂತನಗೌಡರ, ನ್ಯಾಯಮೂರ್ತಿಗಳು | 123 |
| 7 | ಪಂಡಿತ್ ರಾಜನ್ ಮಿಶ್ರಾ, ಖ್ಯಾತ ಹಿಂದೂಸ್ತಾನಿ ಸಂಗೀತಗಾರ | 124 |
| 8 | ಮಹಮ್ಮದ್ ಲೈಕೊದ್ದೀನ್, ಮಾಜಿ ಶಾಸಕರು | 124 |
| 9 | ಸೋಲಿ ಸೋರಾಬ್ಜಿ, ಖ್ಯಾತ ನ್ಯಾಯವಾದಿ | 124 |
| 10 | ಜಗಮೋಹನ್ ಮಲ್ಹೋತ್ರ, ಕೇಂದ್ರ ಮಾಜಿ ಸಚಿವರು | 124 |
| 11 | ಅಜಿತ್ ಸಿಂಗ್, ಕೇಂದ್ರ ಮಾಜಿ ಸಚಿವರು | 125 |
| 12 | ಕೆ.ಬಿ. ಶಾಣಪ್ಪ, ಮಾಜಿ ಸಚಿವರು | 125 |
| 13 | ಮನೋಹರ್ ಕಟ್ಟಿಮನಿ, ಮಾಜಿ ಶಾಸಕರು | 125 |
| 14 | ಆರ್.ಆರ್. ಕಲ್ಲೂರ, ಮಾಜಿ ಶಾಸಕರು | 125 |
| 15 | ಮಹದೇವ ಪ್ರಕಾಶ್, ಹಿರಿಯ ಪತ್ರಕರ್ತರು | 126 |
| 16 | ಬಾಬಾಗೌಡ ಪಾಟೀಲ, ಕೇಂದ್ರ ಮಾಜಿ ಸಚಿವರು | 126 |

| ಕ್ರಮ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| 17 | ಕೆ.ಆರ್.ಪೇಟೆ ಕೃಷ್ಣ, ಮಾಜಿ ವಿಧಾನ ಸಭಾಧ್ಯಕ್ಷರು | 126 |
| 18 | ದೊರೆಸ್ವಾಮಿ, ಸ್ವಾತಂತ್ರ್ಯ ಹೋರಾಟಗಾರರು | 127 |
| 19 | ಎನ್.ಎಸ್. ಖೇಡ್, ಮಾಜಿ ಶಾಸಕರು | 127 |
| 20 | ಮಮ್ತಾಜ್ ಆಲಿ ಖಾನ್, ಮಾಜಿ ಸಚಿವರು | 127 |
| 21 | ಸಿ.ಎಂ.ಉದಾಸಿ, ಮಾಜಿ ಸಚಿವರು | 128 |
| 22 | ಡಾ: ಸಿದ್ದಲಿಂಗಯ್ಯ, ಖ್ಯಾತ ಸಾಹಿತಿ | 128 |
| 23 | ಸಂಚಾರಿ ವಿಜಯ್, ಖ್ಯಾತ ಚಲನಚಿತ್ರ ನಟ | 128 |
| 24 | ಕೆಸಿಎನ್ ಚಂದ್ರು, ಖ್ಯಾತ ನಿರ್ಮಾಪಕ | 128 |
| 25 | ಬಿ. ವಿಜಯಕೃಷ್ಣ, ಮಾಜಿ ಕ್ರಿಕೆಟಿಗ | 128 |
| 26 | ರಾಮಯ್ಯ, ಸ್ವಾತಂತ್ರ್ಯ ಹೋರಾಟಗಾರರು | 129 |
| 27 | ಮಿಲ್ಖಾ ಸಿಂಗ್, ಆಟಗಾರರು | 129 |
| 28 | ಡಾ:ಎಂ.ಉದಯಕುಮಾರ್, ಖ್ಯಾತ ವಿಜ್ಞಾನಿ | 129 |
| 29 | ಎಸ್.ಬಿ.ಸಿದ್ನಾಳ್, ಮಾಜಿ ಸಂಸದರು | 130 |
| | **ಭಾಗ–8**<br>**ಪ್ರಮುಖ ಲೇಖನಗಳು** | |
| 1 | ಶಾಲೆಗಳ ಜೀರ್ಣೋದ್ಧಾರದಿಂದ ಹರಡುತ್ತಿದೆ ಅಕ್ಷರಗಳ ಬೆಳಕು | 131–133 |
| 2 | ಕೋವಿಡ್ ನಿಗ್ರಹಕ್ಕೆ ರಾಷ್ಟ್ರೀಯ ನೀತಿ: 'ಸುಪ್ರೀಂ' ಸೂಕ್ತ ಸಲಹೆ | 133–134 |
| 3 | ಮಾಸ್ ಲೀಡರ್ ಸಿಎಂ ಬದಲಾವಣೆ ಸುಲಭವಲ್ಲ | 134–137 |
| 4 | ಗಿಮಿಕ್ ಅಲ್ಲ ತಜ್ಞರ ಶಿಫಾರಸ್ಸು | 137–139 |
| 5 | ರಾಷ್ಟ್ರೀಯ ಸರ್ಕಾರವೆಂಬುದೇ ಸಾಂವಿಧಾನಿಕ | 139–141 |
| 6 | ಇದು ಕೆಸರೆರಚಾಟದ ಸಮಯ ಅಲ್ಲ | 141–143 |
| 7 | ಫೋನ್ ಕದ್ದಾಲಿಕೆ ಭೂತ ರಾಜಕೀಯದ ಪ್ರೇತ | 144–145 |
| 8 | ಆರೋಗ್ಯ ಸುಧಾರಣೆ ಚರ್ಚೆಗೆ ನಡೆಯಲಿ ವಿಶೇಷ ಅಧಿವೇಶನ | 146–148 |


ಸೂಚನೆ: – ಇಲ್ಲಿ ಆಯ್ಕೆ ಮಾಡಿರುವ ಲೇಖನಗಳು ಪ್ರಮುಖ ದಿನಪ್ರತಿಕೆಗಳಿಂದ ಆಯ್ದು ಪ್ರಕಟಿಸಲಾಗಿದೆ. ಇಲ್ಲಿನ ಅಭಿಪ್ರಾಯಗಳು ಸಂಪೂರ್ಣ ಲೇಖಕರದ್ದಾಗಿರುತ್ತದೆ.

# ಭಾಗ–1

# ವಿಧಾನ ಮಂಡಲದ ಸುದ್ದಿಗಳು

## 1. ಹಣ ದುರ್ಬಳಕೆ: ಸಮಗ್ರ ವರದಿಗೆ ಪಿಎಸಿ ಸೂಚನೆ

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯಲ್ಲಿ ಸರ್ಕಾರಿ ಪ್ರೌಢ ಶಾಲೆಗಳ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಶಿಕ್ಷಣ ಯೋಜನೆ ಜಾರಿಯಲ್ಲಿ ಅಕ್ರಮ, ಸರ್ಕಾರಿ ಮುದ್ರಣಾಲಯದಲ್ಲಿ ಸಾಮಗ್ರಿ ಖರೀದಿಯಲ್ಲಿ ಲೋಪ ಮತ್ತು ಅಂಗವಿಕಲ ವಿದ್ಯಾರ್ಥಿಗಳಿಗೆ ನೆರವು ನೀಡುವ ಯೋಜನೆಯಲ್ಲಿ ಹಣ ದುರ್ಬಳಕೆ ಕುರಿತಂತೆ ಸಾರ್ವಜನಿಕ ಲೆಕ್ಕಪತ್ರ ಸಮಿತಿ (ಪಿಎಸಿ) ಸಭೆಯಲ್ಲಿ ಚರ್ಚೆ ನಡೆದಿದೆ.

ಸಮಿತಿಯ ಅಧ್ಯಕ್ಷರಾದ ರಾಮಲಿಂಗಾರೆಡ್ಡಿ ಅನುಪಸ್ಥಿತಿಯಲ್ಲಿ ಎ.ಟಿ.ರಾಮಸ್ವಾಮಿ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಸಿಎಜಿ ವರದಿ ಹಾಗೂ ಆರ್ಥಿಕ ಇಲಾಖೆಗೆ ಸಂಬಂಧಪಟ್ಟ ಧನವಿನಿಯೋಗ ಲೆಕ್ಕದಲ್ಲಿ ಆರ್ಥಿಕ ಸಮಿತಿಗಳ ಪರಿಷ್ಕರಣೆ ಪ್ರಸ್ತಾವನೆ ಕುರಿತು ಸಭೆಯಲ್ಲಿ ಚರ್ಚೆ ನಡೆದಿದೆ.

2010ರಲ್ಲಿ ಕೇಂದ್ರ ಸರ್ಕಾರದ ಯೋಜನೆಯಡಿ ಸರ್ಕಾರಿ ಪ್ರೌಢ ಶಾಲೆಯ ವಿದ್ಯಾರ್ಥಿಗಳ ಕಂಪ್ಯೂಟರ್ ಶಿಕ್ಷಣಕ್ಕೆ ರೂ. 426 ಕೋಟಿ ಮೊತ್ತದಲ್ಲಿ ಪರಿಕರಗಳನ್ನು ಖರೀದಿಸಲಾಗಿತ್ತು. ಈ ಬಗ್ಗೆ ಯೋಜನಾ ವಿವರ ಇರಲಿಲ್ಲ. ಕೆಲವು ಪರಿಕರ, ಸಾಫ್ಟ್‌ವೇರ್ ನೀಡಿ ಹಾರ್ಡ್‌ವೇರ್ ಪೂರೈಸದ ಕಾರಣ ಯೋಜನೆಯ ಉದ್ದೇಶ ಈಡೇರಲಿಲ್ಲ. ಇದರಲ್ಲಿ ಅವ್ಯವಹಾರ ಕಿಯೋನಿಕ್ಸ್ ಸಂಸ್ಥೆ ನೀಡಿದ ತಪ್ಪು ಮಾಹಿತಿಯಿಂದ ಹಣ ದುರ್ಬಳಕೆ ಆಗಿರುವ ಬಗ್ಗೆಯೂ ಚರ್ಚೆ ನಡೆದು, 15 ದಿನಗಳಲ್ಲಿ ಸಮಗ್ರ ವರದಿ ಸಲ್ಲಿಸಲು ಸಮಿತಿ ಸೂಚಿಸಿದೆ ಎಂದು ಮೂಲಗಳು ಹೇಳಿವೆ.

ಸರ್ಕಾರಿ ಮುದ್ರಣಾಲಯದಲ್ಲಿ 2008 ರಲ್ಲಿ ರೂ. 82.34 ಲಕ್ಷ ನಿಷ್ಫಲವಾಗಿತ್ತು ಎಂದು ಸಿಎಜಿ ವರದಿ ಆಕ್ಷೇಪಿಸಿತ್ತು. ತಪ್ಪಿತಸ್ಥ 19 ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಇಲಾಖೆ ಪ್ರಧಾನ ಕಾರ್ಯದರ್ಶಿ ವರದಿ ನೀಡಿದ್ದರು. ಏಪ್ರಿಲ್ 5 ರಂದು ಈ ಅಧಿಕಾರಿಗಳನ್ನು ಆರೋಪ ಮುಕ್ತಗೊಳಿಸಿ ಸರ್ಕಾರ ಆದೇಶ ಹೊರಡಿಸಿದೆ. ಸಮಿತಿಯ ಮುಂದೆ ಈ ವಿಷಯ ಚರ್ಚೆಯಲ್ಲಿರುವಾಗಲೇ ಆರೋಪಕ್ಕೆ ಗುರಿಯಾದ ಅಧಿಕಾರಿಗಳನ್ನು ಆರೋಪ ಮುಕ್ತಗೊಳಿಸಿರುವ ಬಗ್ಗೆ ಚರ್ಚೆ ನಡೆದಿದ್ದು, ಪ್ರಕರಣ ಸಂಬಂಧ ಪಡೆದಿರುವ ಬೆಳವಣಿಗೆಗಳ ಕುರಿತು ವರದಿ ಸಲ್ಲಿಸಲು ಸಭೆಯಲ್ಲಿ ಸೂಚಿಸಲಾಯಿತು.

ಅಂಗವಿಕಲ ವಿದ್ಯಾರ್ಥಿಗಳಿಗೆ ನೆರವು ನೀಡಲು ಕೇಂದ್ರ ಸರ್ಕಾರ ಜಾರಿಗೊಳಿಸಿದ್ದ ಯೋಜನೆಯಲ್ಲಿ ಅಸ್ತಿತ್ವದಲ್ಲೇ ಇಲ್ಲದ ಸ್ವಯಂಸೇವಾ ಸಂಸ್ಥೆಗಳಿಗೆ ಹಣ ಬಿಡುಗಡೆ ಮಾಡಲಾಗಿತ್ತು. ಈ ಪ್ರಕರಣದಲ್ಲಿ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸುವ ಬಗ್ಗೆಯೂ ಸಭೆಯಲ್ಲಿ ಚರ್ಚೆ ನಡೆಯಿತು ಎಂದು ತಿಳಿದುಬಂದಿದೆ.

ಆಧಾರ:ಪ್ರಜಾವಾಣಿ, ದಿನಾಂಕ:07.04.2021

## 2. ಸದನ ಸಮಿತಿ ಅಸ್ತಿತ್ವದ ಗೊಂದಲ

ವಿಧಾನ ಪರಿಷತ್‌ನಲ್ಲಿ ಡಿಸೆಂಬರ್ 15 ರಂದು ಸಭಾಪತಿ ಪೀಠಕ್ಕೆ ಅಗೌರವ ಉಂಟು ಮಾಡಿದ್ದ ಘಟನಾವಳಿಗಳ ಬಗ್ಗೆ ತನಿಖೆ ನಡೆಸಿ ಮಧ್ಯಂತರ ವರದಿ ಮಂಡನೆ ಮಾಡಿರುವ ಮರಿತಿಬ್ಬೇಗೌಡ ನೇತೃತ್ವದ ಸದನ ಸಮಿತಿ ಅಸ್ತಿತ್ವದ ಪ್ರಶ್ನೆ ಮುನ್ನೆಲೆಗೆ ಬಂದಿದೆ. ಅಂತಿಮ ವರದಿ ನೀಡುವ ತನಕ ಈ ಸಮಿತಿ ಮುಂದುವರಿಯಲಿದೆಯೋ ಅಥವಾ ಹೊಸ ಸದಸ್ಯರನ್ನು ಸೇರಿಸಿ ಸಮಿತಿ ಮರು ರಚನೆ ಮಾಡಬೇಕಾ ಎನ್ನುವ ಗೊಂದಲಕ್ಕೆ ಇನ್ನು ಪರಿಹಾರ ಸಿಕ್ಕಿಲ್ಲ.

ಸದನ ಸಮಿತಿ ಸಂವಿಧಾನಾತ್ಮಕವಾಗಿ ರಚನೆಯಾಗಿದ್ದು, ಕೋರಂ ಇರುವುದರಿಂದ ಸಭೆ ನಡೆಸಬಹುದು. ಅಂತಿಮ ವರದಿ ಸಲ್ಲಿಕೆಗೆ ಈ ಹಿಂದೆ ಇದ್ದ ಸಭಾಪತಿ ಪ್ರತಾಪಚಂದ್ರ ಶೆಟ್ಟಿ 3 ತಿಂಗಳ ಕಾಲಾವಕಾಶ ನೀಡಿರುವ ಕಾರಣ ಅಲ್ಲಿಯ ತನಕ ಸದನ ಸಮಿತಿ ಅಸ್ತಿತ್ವದಲ್ಲಿರಲಿದೆ ಎಂಬ ವಾದ

ಒಂದೆಡೆಯಾದರೆ, ಈಗಾಗಲೇ ಸದನಕ್ಕೆ ಮಧ್ಯಂತರ ವರದಿಯನ್ನು ನೀಡಿರುವ ಹಿನ್ನೆಲೆಯಲ್ಲಿ ಅದು ಸರ್ಕಾರದ ಆಸ್ತಿಯಾಗಿದೆ. ಸದನ ಸಮಿತಿ ಕೆಲಸವೂ ಮುಗಿದಿದೆ. ಈ ಸಮಿತಿ ಮುಂದುವರಿಯಬೇಕೇ ಬೇಡವೇ, ಎನ್ನುವ ಬಗ್ಗೆ ಸದನ ತೀರ್ಮಾನ ತೆಗೆದುಕೊಳ್ಳಬೇಕಿದೆ ಎಂಬ ಪ್ರತಿವಾದ ನಡೆಯುತ್ತಿದೆ. ಈ ಹಿನ್ನೆಲೆಯಲ್ಲಿ ಎಲ್ಲವೂ ಗೊಂದಲದಲ್ಲಿದೆ.

**ಸಮಿತಿಯಲ್ಲಿ ಯಾರ್‍ಯಾರಿದ್ದಾರೆ?**: ಜೆಡಿಎಸ್‌ನ ಮರಿತಿಬ್ಬೇಗೌಡ, ಕಾಂಗ್ರೆಸ್ ಬಿ.ಕೆ.ಹರಿಪ್ರಸಾದ್, ಆರ್.ಬಿ.ತಿಮ್ಮಾಪುರ, ಬಿಜೆಪಿಯ ಹೆಚ್.ವಿಶ್ವನಾಥ್ ಮತ್ತು ಎಸ್.ವಿ.ಸಂಕನೂರ ಅವರನ್ನು ನೇಮಕ ಮಾಡಿ ಹಿಂದಿನ ಸಭಾಪತಿ ಪ್ರತಾಪಚಂದ್ರ ಶೆಟ್ಟಿ ಆದೇಶಿಸಿದ್ದರು. ಬಿಜೆಪಿಯ ಹೆಚ್.ವಿಶ್ವನಾಥ್ ಮತ್ತು ಎಸ್.ವಿ.ಸಂಕನೂರ ಅವರು ರಾಜೀನಾಮೆ ನೀಡಿದ್ದಾರೆ. ಮೂವರು ಸದಸ್ಯರು ಮಾತ್ರ ಸಮಿತಿಯಲ್ಲಿದ್ದಾರೆ.

ಆಧಾರ:ವಿಜಯವಾಣಿ, ದಿನಾಂಕ:13.04.2021

## 3. ಬಯೋಮೆಟ್ರಿಕ್, ಸಮವಸ್ತ್ರ ಕಡ್ಡಾಯ

ವಿಧಾನ ಪರಿಷತ್ತಿನ ಸಚಿವಾಲಯದ ಸಿಬ್ಬಂದಿಗೆ ಬಯೋಮೆಟ್ರಿಕ್ ಹಾಗೂ ಡಿ ಗ್ರೂಪ್ ನೌಕರರಿಗೆ ಸಮವಸ್ತ್ರ ಕಡ್ಡಾಯಗೊಳಿಸಲಾಗಿದ್ದು, ಸರಿಯಾದ ಸಮಯಕ್ಕೆ ಕಛೇರಿಗೆ ಹಾಜರಾಗದವರ ಮೇಲೆ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದ್ದಾರೆ. ವಿಧಾನಸೌಧದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಸಚಿವಾಲಯದ ಸಿಬ್ಬಂದಿಗೆ ಶಿಸ್ತು ಅಳವಡಿಸಿಕೊಳ್ಳಲು ಕೆಲ ಬದಲಾವಣೆ ಮಾಡಲಾಗುತ್ತಿದೆ. ಹಾಜರಾತಿಗೆ ಬಯೋಮೆಟ್ರಿಕ್ ವ್ಯವಸ್ಥೆ ಜಾರಿಗೆ ತರಲಾಗಿದ್ದು, ಸಿಬ್ಬಂದಿ ಸ್ಯಾನಿಟೈಸ್ ಮಾಡಿ ಬಯೋಮೆಟ್ರಿಕ್ ಉಪಯೋಗಿಸಬೇಕು. ಕೊರೋನಾ ನೆಪವೊಡ್ಡಿ ಬಯೋಮೆಟ್ರಿಕ್ ತೆಗೆಯುವಂತಿಲ್ಲ. ಬಯೋಮೆಟ್ರಿಕ್ ತೆಗೆದರೆ ಸಿಬ್ಬಂದಿಗಳು ಸರಿಯಾಗಿ ಕರ್ತವ್ಯ ನಿರ್ವಹಿಸುವುದಿಲ್ಲ. ಸಮಯಕ್ಕೆ ಸರಿಯಾಗಿ ಕೆಲಸಕ್ಕೆ ಬರುವುದಿಲ್ಲ. ಹೀಗಾಗಿ ಬಯೋಮೆಟ್ರಿಕ್ ಕಡ್ಡಾಯ ಮಾಡಿದ್ದೇವೆ. ಸರಿಯಾದ ಸಮಯಕ್ಕೆ ಬರದವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳುವುದಾಗಿ ಎಚ್ಚರಿಸಿದರು.

ಆಧಾರ:ಉದಯವಾಣಿ, ದಿನಾಂಕ:17.04.2021

## 4. ನರ್ಸಿಂಗ್ ಅಕ್ರಮ ತನಿಖೆಗೆ ಜಂಟಿ ಸದನ ಸಮಿತಿ ರಚನೆ

ರಾಜ್ಯದಲ್ಲಿ ನರ್ಸಿಂಗ್ ಹಾಗೂ ಅನ್ವಯಿಕ ಆರೋಗ್ಯ ವಿಜ್ಞಾನ ಕಾಲೇಜುಗಳಿಗೆ ನೀಡಿದ ಅನುಮತಿಯಲ್ಲಿ ನಡೆದಿದೆ ಎನ್ನಲಾದ ಅಕ್ರಮದ ತನಿಖೆಗೆ ವಿಧಾನ ಪರಿಷತ್ ಸದಸ್ಯ ಎನ್. ರವಿಕುಮಾರ್ ಅಧ್ಯಕ್ಷತೆಯಲ್ಲಿ ಜಂಟಿ ಸದನ ಸಮಿತಿ ರಚನೆಯಾಗಿದೆ.

ಉಭಯ ಸದನಗಳ 14 ಶಾಸಕರು ಈ ಸಮಿತಿಗೆ ಸದಸ್ಯರಾಗಿದ್ದಾರೆ. ಇದರಲ್ಲಿ 8 ಜನ ಶಾಸಕರು ವೈದ್ಯರಾಗಿರುವುದು ವಿಶೇಷ. ಒಟ್ಟು 15 ಅಂಶಗಳು ಸೇರಿ ಸಮಿತಿ ಬಯಸುವ ಇತರ ವಿಷಯ, ಅಂಶಗಳನ್ನು ಪರಿಶೀಲಿಸುವ ಜವಾಬ್ದಾರಿ ಸಮಿತಿಗೆ ನೀಡಲಾಗಿದೆ. ಪರಿಶೀಲನಾಂಶಗಳ ತನಿಖೆ ನಡೆಸಿ ಸಲಹೆ–ಸೂಚನೆಗಳ ಸಹಿತ ವರದಿ ಸಲ್ಲಿಸಲು ಸಮಿತಿಗೆ 3 ತಿಂಗಳ ಕಾಲಾವಕಾಶ ನೀಡಲಾಗಿದೆ. ಈ ಕುರಿತು ವಿಧಾನ ಪರಿಷತ್‌ನ ಕಾರ್ಯದರ್ಶಿ ಕೆ.ಆರ್.ಮಹಾಲಕ್ಷ್ಮಿ ಹೊರಡಿಸಿದ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಬಜೆಟ್ ಅಧಿವೇಶನದಲ್ಲಿ ಗದ್ದಲ**: ವಿಧಾನ ಪರಿಷತ್‌ನ ಬಜೆಟ್ ಅಧಿವೇಶನದಲ್ಲಿ ಎನ್.ರವಿಕುಮಾರ್ ಈ ವಿಷಯ ಪ್ರಸ್ತಾಪಿಸಿ ಸರ್ಕಾರದ ಗಮನ ಸೆಳೆದರೆ, ಪ್ರತಿಪಕ್ಷ ಜೆಡಿಎಸ್ ಧರಣಿ ಹೂಡಿ, ಜಂಟಿ ಸದನ ಸಮಿತಿ ತನಿಖೆಗೆ ಪಟ್ಟು ಹಿಡಿದಿದ್ದರಿಂದ ಕೋಲಾಹಲಕ್ಕೆ ಕಾರಣವಾಗಿತ್ತು. ಹೊಸದಾಗಿ ಅನುಮತಿ ನೀಡಿದ 101 ಸೇರಿ 700 ಕ್ಕೂ ಅಧಿಕ ನರ್ಸಿಂಗ್ ಹಾಗೂ ಅಲೈಡ್ ಹೆಲ್ತ್ ಸೈನ್ಸ್

ಕಾಲೇಜುಗಳಲ್ಲಿ ಲೋಪ–ದೋಷಗಳು ಇರುವುದು ನಿಜವೆಂದು ವೈದ್ಯಕೀಯ ಶಿಕ್ಷಣ ಸಚಿವ ಡಾ:ಕೆ.ಆರ್.ಸುಧಾಕರ್ ಒಪ್ಪಿಕೊಂಡಿದ್ದರು.

ಎಲ್ಲ ಕಾಲೇಜುಗಳ ವಸ್ತುಸ್ಥಿತಿ ತಪಾಸಣೆಗೆ ತಜ್ಞರು, ಹಿರಿಯ ಅಧಿಕಾರಿಗಳನ್ನು ಒಳಗೊಂಡ ಉನ್ನತಮಟ್ಟದ ಸಮಿತಿ ರಚಿಸುವ ಭರವಸೆ ನೀಡಿದ್ದರು. ಸಭಾಪತಿ ಕೊಠಡಿಯಲ್ಲಿ ಎರಡು ಬಾರಿ ರಾಜಿ ಸಂಧಾನದ ಪ್ರಯತ್ನ ಫಲಿಸಲಿಲ್ಲ. ಧರಣಿ ನಿರತ ಜೆಡಿಎಸ್ ಸದಸ್ಯರು ಪಟ್ಟು ಸಡಿಲಿಸದ ಕಾರಣ ಮುಖ್ಯಮಂತ್ರಿ ಮಧ್ಯೆ ಪ್ರವೇಶಿಸಿ, ಜಂಟಿ ಸದನ ಸಮಿತಿಗೆ ಒಪ್ಪಿಗೆ ನೀಡುವ ಮೂಲಕ ಬಿಕ್ಕಟ್ಟಿಗೆ ತೆರೆ ಎಳೆದರು.

ಆಧಾರ:ವಿಜಯವಾಣಿ, ದಿನಾಂಕ:20.04.2021

## 5. ಸೋಂಕು ನಿಗ್ರಹಕ್ಕೆ ಪ್ರಯತ್ನ ಅಗತ್ಯ

ದೇಶದಲ್ಲಿನ ಕೋವಿಡ್–19 ಪರಿಸ್ಥಿತಿ ಹಾಗೂ ಈ ಸಾಂಕ್ರಾಮಿಕ ರೋಗ ತಡೆಗಟ್ಟುವ ಹಿನ್ನೆಲೆ ರಾಜ್ಯದಲ್ಲಿ ಕೈಗೊಂಡ ಕ್ರಮಗಳ ಕುರಿತು ಲೋಕಸಭಾಧ್ಯಕ್ಷ ಓಂ ಬಿರ್ಲಾ ಅವರೊಂದಿಗೆ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು ವರ್ಚುವಲ್ ಸಭೆ ನಡೆಸಿದರು.

ವಿಡಿಯೋ ಕಾನ್ಫರೆನ್ಸ್‌ನಲ್ಲಿ ರಾಜ್ಯದಲ್ಲಿ ಕೋವಿಡ್–19 ನಿಯಂತ್ರಣಕ್ಕಾಗಿ ಕೈಗೊಂಡ ಕ್ರಮಗಳ ಬಗ್ಗೆ ವಿವರವಾಗಿ ಚರ್ಚಿಸಿ, ಉತ್ತಮ ಸಮಾಜ ನಿರ್ಮಾಣಕ್ಕಾಗಿ ದೇಶದ ಎಲ್ಲ ಜನಪ್ರತಿನಿಧಿಗಳು ಹಾಗೂ ಸಮುದಾಯದ ಸಹಕಾರ ಅಗತ್ಯತೆಯನ್ನು ಮಾನ್ಯ ಸಭಾಪತಿಗಳು ಪ್ರತಿಪಾದಿಸಿದರು.

ವಿಧಾನ ಪರಿಷತ್ ಅಧ್ಯಕ್ಷನಾಗಿ ಕೊರೋನಾ ಕುರಿತು ಜಾಗೃತಿ ಮೂಡಿಸುವಲ್ಲಿ ನನ್ನದೂ ಪಾತ್ರವಿದ್ದು, ಈಗಾಗಲೇ ಅರಿವು ಮೂಡಿಸುವಲ್ಲಿ ಮುಂದಾಗಿದ್ದೇನೆ. ಜೊತೆಗೆ ನನ್ನಂತೆ ರಾಜ್ಯದ ಜನಪ್ರತಿನಿಧಿಗಳು ರಾಜ್ಯದ ಜನರಿಗೆ ಶುದ್ಧ ಕುಡಿಯುವ ನೀರು, ಔಷಧಿ, ಆಹಾರ ಧಾನ್ಯಗಳಂತಹ ಮೂಲ ಸೌಲಭ್ಯ ಒದಗಿಸುವಲ್ಲಿ ಹಾಗೂ ಈ ಕುರಿತು ಗಮನ ಹರಿಸುವಲ್ಲಿ ಕಾರ್ಯನಿರತರಾಗಿದ್ದು, ಸಾರ್ವಜನಿಕ ಪ್ರತಿನಿಧಿಯಾಗಿ ನನಗೆ ಹೆಮ್ಮೆ ಇದೆ ಎಂದು ಸಭೆಯಲ್ಲಿ ತಿಳಿಸಿದರು.

45 ವರ್ಷ ಮೇಲ್ಪಟ್ಟವರಿಗೆ ಲಸಿಕಾ ಅಭಿಯಾನದಲ್ಲಿ ಭಾಗವಹಿಸಿ, ಲಸಿಕೆ ಪಡೆಯುವಂತೆ ಅರಿವು ಮೂಡಿಸಲಾಗುತ್ತಿದೆ. ಹೆಚ್ಚಿನ ಸಂಖ್ಯೆಯಲ್ಲಿ ಜನ ಲಸಿಕೆ ಪಡೆಯುತ್ತಿರುವುದು ಗಮನಾರ್ಹ ಸಂಗತಿ ಎಂದರು.

ಆಧಾರ:ಸಂಯುಕ್ತ ಕರ್ನಾಟಕ, ದಿನಾಂಕ:20.04.2021

## 6. ಕೊರೋನಾ ಹಿನ್ನೆಲೆ: ಸಮಿತಿಗಳ ಸಭೆ ರದ್ದು

ರಾಜ್ಯದಲ್ಲಿ ಕೊರೋನಾ ಎರಡನೇ ಅಲೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಏಪ್ರಿಲ್ 26 ರಿಂದ ವಿಧಾನ ಮಂಡಲದ ವಿವಿಧ ಸಮಿತಿಗಳ ಸಭೆಗಳನ್ನು ಮುಂದಿನ ಆದೇಶದವರೆಗೂ ಸ್ಥಗಿತಗೊಳಿಸಲಾಗಿದೆ ಎಂದು ವಿಧಾನ ಸಭಾಧ್ಯಕ್ಷರು ತಿಳಿಸಿದ್ದಾರೆ.

ದೇಶದಲ್ಲಿ ಕೋವಿಡ್–19 ಪರಿಸ್ಥಿತಿಯನ್ನು ತಡೆಗಟ್ಟುವುದು ಮತ್ತು ಜನಪ್ರತಿನಿಧಿಗಳ ಪಾತ್ರ ಮತ್ತು ಜವಾಬ್ದಾರಿ ಕುರಿತು ದೇಶದ ಎಲ್ಲ ವಿಧಾನಮಂಡಲಗಳ ಪೀಠಾಸೀನಾಧಿಕಾರಿಗಳು ಮತ್ತು ಪ್ರಮುಖರೊಂದಿಗೆ ಲೋಕಸಭಾಧ್ಯಕ್ಷ ಓಂ ಬಿರ್ಲಾ ನಡೆಸಿದ ವಿಡಿಯೋ ಸಂವಾದದಲ್ಲಿ ಪಾಲ್ಗೊಂಡು ಸಭೆಯ ತೀರ್ಮಾನಗಳ ಕುರಿತು ಪತ್ರಿಕಾ ಪ್ರಕಟಣೆ ಹೊರಡಿಸಿರುವ ಅವರು ಎಲ್ಲ ಶಾಸಕರು ಕೋವಿಡ್ ಲಸಿಕೆಯನ್ನು ಪಡೆಯಲು ಸೂಚಿಸಲಾಗಿದೆ.

ವಿಧಾನಸಭೆ ಸದಸ್ಯರು ಸರ್ಕಾರ ಹೊರಡಿಸುವ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸುವುದು ಮತ್ತು ಕೊರೋನಾ ನಿಯಂತ್ರಣಕ್ಕೆ ಶ್ರಮಿಸಬೇಕೆಂದು ತಿಳಿಸಲಾಗಿದೆ. ಶಾಸಕರು ತಮ್ಮ ಕ್ಷೇತ್ರಗಳಲ್ಲಿಯೇ ಉಳಿದು ಕೊರೋನಾ ನಿಯಂತ್ರಿಸುವುದು ಹಾಗೂ ಜನ ಜಾಗೃತಿ ಮೂಡಿಸುವ ಕೆಲಸ ಮಾಡುವಂತೆ ಸೂಚಿಸಲಾಗಿದೆ. ಈ ಹಿನ್ನೆಲೆಯಲ್ಲಿ ವಿಧಾನಮಂಡಲದ ವಿವಿಧ ಸಮಿತಿಗಳ ಸಭೆಯಲ್ಲಿ ಏಪ್ರಿಲ್ 26 ರಿಂದ ಮುಂದಿನ ಅದೇಶದವರೆಗೂ ಸ್ಥಗಿತಗೊಳಿಸಲಾಗಿದೆ ಎಂದು ಸಭಾಧ್ಯಕ್ಷರು ತಿಳಿಸಿದ್ದಾರೆ.

**ರಾಜಕೀಯ ಮೀರಿ ಕೆಲಸ ಮಾಡಬೇಕು**: ದೇಶದಲ್ಲಿ ಮಹಾಮಾರಿಯಾಗಿ ಕಾಡುತ್ತಿರುವ ಕೊರೋನಾ ಹೋಗಲಾಡಿಸಲು ಎಲ್ಲರೂ ರಾಜಕೀಯ ಮೀರಿ ಕೆಲಸ ಮಾಡಬೇಕು ಎಂಬ ಅಭಿಪ್ರಾಯ ದೇಶದ ಸ್ಪೀಕರ್‌ಗಳ ಸಭೆಯಲ್ಲಿ ವ್ಯಕ್ತವಾಗಿದೆ ಎಂದು ಗೃಹ ಮತ್ತು ಕಾನೂನು ಸಚಿವ ಬಸವರಾಜ್ ಬೊಮ್ಮಾಯಿ ತಿಳಿಸಿದ್ದಾರೆ.

ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಕೊರೋನಾ ಮಹಾಮಾರಿ ಹೋಗಲಾಡಿಸಲು ಜನ ಪ್ರತಿನಿಧಿಗಳು ಸರ್ಕಾರದೊಂದಿಗೆ ಕೈ ಜೋಡಿಸಬೇಕು. ಶಾಸಕರು, ವಿಧಾನ ಪರಿಷತ್ ಸದಸ್ಯರು, ಜಿಲ್ಲಾ ಪಂಚಾಯತ್ ಸದಸ್ಯರು ಜನ ಜಾಗೃತಿ ಮೂಡಿಸುವ ಕೆಲಸ ಮಾಡಬೇಕು ಎಂದು ಹೇಳಿದ್ದಾರೆ. ಪ್ರತಿ ವಿಧಾನ ಸಭಾ ಕ್ಷೇತ್ರದಲ್ಲಿ ಸರ್ಕಾರದಿಂದ ಜಾರಿಯಾಗುವ ಎಲ್ಲ ಮಾರ್ಗಸೂಚಿಗಳನ್ನು ಜನರಿಗೆ ತಲುಪಿಸುವ ಕೆಲಸ ಮಾಡಬೇಕು. ರಾಜಕೀಯ ಮೀರಿ ಜನಪ್ರತಿನಿಧಿಗಳು ಕೆಲಸ ಮಾಡಬೇಕು ಎಂಬ ಚಿಂತನೆ ಚರ್ಚೆಯಾಗಿದೆ. ವಿಶ್ವದಲ್ಲಿಯೇ ಈ ಮಹಾಮಾರಿ ಕಾಡುತ್ತಿದೆ. ನಾವೆಲ್ಲರೂ ರಾಜಕೀಯ ಮೀರಿ ಕೆಲಸ ಮಾಡಬೇಕು ಎನ್ನುವ ವಿಚಾರವನ್ನು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು ಸಲಹೆ ನೀಡಿದ್ದಾರೆ ಎಂದು ಬೊಮ್ಮಾಯಿ ತಿಳಿಸಿದರು.

ಆಧಾರ:ಉದಯವಾಣಿ, ದಿನಾಂಕ:20.04.2021

## 7. ರಾಜ್ಯಪಾಲರ ಅಧ್ಯಕ್ಷತೆಯಲ್ಲಿ ಸದನ ನಾಯಕರ ಸಭೆ ಇಂದು

ರಾಜ್ಯದಲ್ಲಿ ಕೋವಿಡ್ ನಿಯಂತ್ರಣ ಸಂಬಂಧ ಚರ್ಚಿಸಲು ರಾಜ್ಯಪಾಲರ ನೇತೃತ್ವದಲ್ಲಿ ವಿಧಾನ ಮಂಡಲದ ಉಭಯ ಸದನಗಳ ಅಧ್ಯಕ್ಷರು, ಸಿಎಂ ಪ್ರತಿಪಕ್ಷದ ನಾಯಕರು ಹಾಗೂ ನಾನಾ ರಾಜಕೀಯ ಪಕ್ಷಗಳ ಮುಖಂಡರ ಸಭೆ ನಡೆಯಲಿದೆ. ಸರ್ವಪಕ್ಷಗಳ ಮುಖಂಡರನ್ನು ಒಳಗೊಂಡು ರಾಜ್ಯಪಾಲರ ಅಧ್ಯಕ್ಷತೆಯಲ್ಲಿ ನಡೆಯುತ್ತಿರುವ ಅಪರೂಪದ ಸಭೆ ಇದಾಗಿದೆ.

ಕೋವಿಡ್ ಪಾಸಿಟೀವ್ ಕಾರಣ ಸಿಎಂ ಆಸ್ಪತ್ರೆಗೆ ದಾಖಲಾದದ್ದರಿಂದ ಈ ಸಭೆ ಮುಂದೂಡಿಕೆಯಾಗಿತ್ತು. ಇದರ ಮಧ್ಯೆ ರಾಜ್ಯಪಾಲರ ನೇತೃತ್ವದಲ್ಲಿ ಸರ್ವಪಕ್ಷಗಳ ಸಭೆ ನಿಗದಿಯಾಗಿದೆ. ವರ್ಚುವಲ್ ಸಭೆಯಲ್ಲಿ ಮುಖ್ಯಮಂತ್ರಿಯವರು ಭಾಗಿಯಾಗಲಿದ್ದಾರೆ. ಸಭಾಪತಿ ಬಸವರಾಜ ಹೊರಟ್ಟಿ, ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ, ಕಾಗೇರಿ, ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಹೆಚ್.ಡಿ.ಕುಮಾರಸ್ವಾಮಿ, ವಿಧಾನ ಪರಿಷತ್ ಪ್ರತಿಪಕ್ಷದ ನಾಯಕ ಎಸ್.ಆರ್.ಪಾಟೀಲ್ ಹಾಗೂ ತಜ್ಞರಿಗೂ ಸಭೆಯಲ್ಲಿ ಪಾಲ್ಗೋಳ್ಳಲು ಆಹ್ವಾನ ನೀಡಲಾಗಿದೆ.

ಆಧಾರ: ವಿಜಯಕರ್ನಾಟಕ, ದಿನಾಂಕ:20.04.2021.

## 8. ಕೋವಿಡ್ ಬಗ್ಗೆ ಜಾಗೃತಿ ಮೂಡಿಸಿ: ಸ್ಪೀಕರ್ ಕರೆ

ಕೋವಿಡ್–19ರಂತಹ ಸಾಂಕ್ರಾಮಿಕ ರೋಗಗಳು ಹರಡದಂತೆ ಮತ್ತು ರೋಗ ನಿರ್ಮೂಲನೆಗೆ ಎಲ್ಲ ರಾಜಕೀಯ ಪಕ್ಷಗಳು ಸಂಘ–ಸಂಸ್ಥೆಗಳು, ಸರ್ಕಾರೇತರ ಸಂಸ್ಥೆಗಳ ಸಹಾಯವನ್ನು ಪಡೆದು ಜನಜಾಗೃತಿ ಮೂಡಿಸುವಂತಹ ಕ್ರಮಕೈಗೊಳ್ಳಬೇಕು. ಕೋವಿಡ್ ಅಥವಾ ಯಾವುದೇ ಕಾಯಿಲೆಗಳಿಗೆ ಸಂಬಂಧಿಸಿದಂತೆ ಅಲೋಪತಿ ಮತ್ತು ಆಯುಷ್ ವೈದ್ಯ ಪದ್ಧತಿಯನ್ನು ಸಮಾನವಾಗಿ ಪರಿಗಣಿಸಿ ಅವುಗಳಿಂದಾಗುವ ಪ್ರಯೋಜನಗಳನ್ನು ಎಲ್ಲರೂ ಪಡೆದುಕೊಳ್ಳಬೇಕು. ಅವುಗಳಲ್ಲಿನ ರೋಗ ನಿರೋಧಕ

ಶಕ್ತಿ ಅಥವಾ ಕಾಯಿಲೆಗಳನ್ನು ಗುಣಪಡಿಸುವಂತಹ ಸಂಗತಿಗಳ ಕುರಿತು ಜನಸಾಮಾನ್ಯರಿಗೆ ಅರಿವು ಮೂಡಿಸುವುದು ಜನಪ್ರತಿನಿಧಿಗಳ ಮತ್ತು ಸರ್ಕಾರದ ಕರ್ತವ್ಯವಾಗಿದೆ. ರೋಗ ಲಕ್ಷಣ ಕಂಡುಬಂದವರಿಗೆ ಚಿಕಿತ್ಸೆ ಪಡೆಯುವಂತೆ ಉತ್ತೇಜಿಸಬೇಕು. ಈ ದಿಸೆಯಲ್ಲಿ ಎಲ್ಲರೂ ಜಾಗೃತರಾಗಬೇಕು. ಸರ್ಕಾರದ ಸೌಲಭ್ಯಗಳು ಫಲಾನುಭವಿಗಳಿಗೆ ಸಿಗುವಂತಹ ಬದ್ಧತೆಯನ್ನು ಸಂಬಂಧಪಟ್ಟವರು ಹೊಂದಿರುವುದು ಅತಿ ಮುಖ್ಯ.

ಆಧಾರ:ಕನ್ನಡ ಪ್ರಭ, ದಿನಾಂಕ:21.04.2021

## 9. ಶಿಕ್ಷಕರ ಸಮಸ್ಯೆ ಪರಿಹಾರಕ್ಕೆ ಸಿಎಂ ಗಮನಕ್ಕೆ

ಕೊರೋನಾ ವಾರಿಯರ್ಸ್ ಆಗಿ ಕಾರ್ಯನಿರ್ವಹಿಸುತ್ತಿದ್ದ ಸರ್ಕಾರಿ ಶಾಲೆಗಳ ಮತ್ತು ಅನುದಾನಿತ ಶಿಕ್ಷಣ ಸಂಸ್ಥೆಗಳ ಶಿಕ್ಷಕರು, ನೌಕರರ ಸಮಸ್ಯೆಗಳನ್ನು ಪರಿಹರಿಸುವ ಕುರಿತಂತೆ ಮುಖ್ಯಮಂತ್ರಿಗಳ ಗಮನಕ್ಕೆ ತರಲಾಗುವುದು ಎಂದು ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ತಿಳಿಸಿದರು.

ಪ್ರಾಥಮಿಕ ಮತ್ತು ಪ್ರೌಢ ಶಾಲೆ ಶಿಕ್ಷಕರು ಮತ್ತು ಶಿಕ್ಷಕೇತರ ಸಿಬ್ಬಂದಿಗಳ ಸಮಸ್ಯೆ ಕುರಿತು ವಿಧಾನಸೌಧದಲ್ಲಿ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಸರ್ಕಾರದ ಆರ್ಥಿಕ ಪ್ಯಾಕೇಜ್‌ನಲ್ಲಿ ಖಾಸಗಿ ಶಾಲೆಯಲ್ಲಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕರಿಗೆ ನೀಡುತ್ತಿರುವ 5 ಸಾವಿರ ಧನ ಸಹಾಯವನ್ನು ಶಾಲೆಯ ಇತರ ಸಿಬ್ಬಂದಿಗಳಿಗೂ ಮತ್ತು ಅನುದಾನಿತ ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ತಾತ್ಕಾಲಿಕ ಶಿಕ್ಷಕರಿಗೂ ವಿಸ್ತರಿಸಲು ಕ್ರಮನಿರ್ವಹಿಸುವಂತೆ ಸರ್ಕಾರಕ್ಕೆ ಪತ್ರ ಬರೆಯಲು ಅಧಿಕಾರಿಗಳಿಗೆ ಸೂಚಿಸಿದರು.

ಶೈಕ್ಷಣಿಕ ವರ್ಷ ಆರಂಭವಾಗುವ ಪೂರ್ವದಲ್ಲಿಯೇ ಶಾಲೆಯಲ್ಲಿರುವ ಎಲ್ಲ ಸಿಬ್ಬಂದಿಯನ್ನು ಕೊರೋನಾ ವಾರಿಯರ್ಸ್ ಎಂದು ಪರಿಗಣಿಸಿ ಲಸಿಕೆ ನೀಡಲು ಕ್ರಮವಹಿಸುವುದು ಸೇರಿದಂತೆ ಮುಂದಿನ ಪರೀಕ್ಷೆ ಸಮಯದಲ್ಲಿ ಹಾಜರಾಗುವ ಸಿಬ್ಬಂದಿಗೆ ಸಹ ಲಸಿಕೆ ನೀಡುವುದು ಮತ್ತು ತಕ್ಷಣಕ್ಕೆ ಅಗತ್ಯವಿರುವ ಕ್ರಮಗಳನ್ನು ಕೈಗೊಳ್ಳಲು ಶಿಕ್ಷಣ ಸಚಿವರ ಗಮನಕ್ಕೆ ತರಲಾಗುವುದು ಹಾಗೂ ಈ ಕುರಿತು ಮುಖ್ಯಮಂತ್ರಿಗಳಿಗೆ ಮನವಿ ಮಾಡಲಾಗುವುದು ಎಂದು ತಿಳಿಸಿದರು.

ಸೋಂಕಿನಿಂದಾಗಿ ಶಿಕ್ಷಣ ಕ್ಷೇತ್ರದಲ್ಲಾದ ಪರಿಣಾಮಗಳು ಮತ್ತು ಸಮಸ್ಯೆಗಳು ಕುರಿತಂತೆ ಚರ್ಚಿಸಲಾಯಿತು. ನಂತರ ಶಾಲೆಗಳ ಮಾನ್ಯತೆ ನವೀಕರಣ ಪ್ರಕ್ರಿಯೆಯು ಭ್ರಷ್ಟಾಚಾರಕ್ಕೆ ಎಡೆ ಮಾಡಿಕೊಡುತ್ತಿದ್ದು, ಅದನ್ನು ಸರಳೀಕರಿಸಿ ರಾಜ್ಯಾದ್ಯಂತ ಒಂದೇ ನಮೂನೆಯ ಪ್ರಸ್ತಾವನೆ ಸಲ್ಲಿಸುವಂತೆ ಕ್ರಮವಹಿಸುವುದು ಹಾಗೂ ಕನಿಷ್ಟ 5 ವರ್ಷಗಳಿಗೆ ಮಾನ್ಯತೆ ನೀಡುವುದು ಮತ್ತು ಸಂಪೂರ್ಣ ಪ್ರಕ್ರಿಯೆಯನ್ನು ಗಣಕೀಕೃತಗೊಳಿಸಲು ಅಧಿಕಾರಿಗಳಿಗೆ ಸೂಚಿಸಿದರು. ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಎಸ್.ಆರ್.ಉಮಾಶಂಕರ್ ಸೇರಿದಂತೆ ಇತರೆ ಉನ್ನತಾಧಿಕಾರಿಗಳು ಉಪಸ್ಥಿತರಿದ್ದರು.

ಆಧಾರ:ಸಂಯುಕ್ತ ಕರ್ನಾಟಕ, ದಿನಾಂಕ:18.06.2021

## 10. ಶಾಸಕರ ಜೊತೆ ಸಭಾಧ್ಯಕ್ಷ ಕಾಗೇರಿ ಸಮಾಲೋಚನೆ

ವಿಧಾನಸಭಾ ಅಧ್ಯಕ್ಷರಾದ ವಿಶ್ವೇಶ್ವರ ಹೆಗಡೆ, ಕಾಗೇರಿ ಅವರು ಕೋವಿಡ್ ನಿಯಂತ್ರಣ ಮತ್ತು ಮುನ್ನೆಚ್ಚರಿಕೆ ಕ್ರಮಗಳ ಕುರಿತು ಶಾಸಕರೊಂದಿಗೆ ಸಮಾಲೋಚನೆ ಮುಂದುವರಿಸಿದ್ದಾರೆ.

ಕೋವಿಡ್‌ನಿಂದ ಗುಣಮುಖರಾಗಿ ಬಂದಿರುವ ಸಭಾಧ್ಯಕ್ಷರು, ಪುನಃ ಶಾಸಕರೊಂದಿಗೆ ಸಮಾಲೋಚನೆ ಆರಂಭಿಸಿದ್ದಾರೆ, ಶಾಸಕರಿಗೆ ದೂರವಾಣಿ ಕರೆ ಮಾಡಿ, ಅವರ ಆರೋಗ್ಯ ವಿಚಾರಿಸುತ್ತಿದ್ದಾರೆ, ಆಯಾ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಕೋವಿಡ್ ನಿಯಂತ್ರಣ ಹಾಗೂ ಜನರ

ನೆರವಿಗಾಗಿ ಕೈಗೊಂಡಿರುವ ಕ್ರಮಗಳ ಕುರಿತು ಮಾಹಿತಿ ಪಡೆಯುತ್ತಿದ್ದಾರೆ ಎಂದು ಸಭಾಧ್ಯಕ್ಷರ ಕಛೇರಿಯ ಪ್ರಕಟಣೆ ತಿಳಿಸಿದೆ.

ಕೋವಿಡ್ ನಿಯಂತ್ರಣ ಮಾರ್ಗ ಸೂಚಿಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಎಲ್ಲಾ ಶಾಸಕರಿಗೂ ಸಭಾಧ್ಯಕ್ಷರು ಸಲಹೆ ನೀಡುತ್ತಿದ್ದಾರೆ. ಮಾಸ್ಕ್ ಧರಿಸುವುದು, ಅಂತರ ಕಾಯ್ದುಕೊಳ್ಳುವುದು, ಕೈ ತೊಳೆದುಕೊಳ್ಳುವುದು, ಸ್ಯಾನಿಟೈಸರ್ ಬಳಕೆ ಕುರಿತು ನೆನಪಿಸುತ್ತಿದ್ದಾರೆ. ಪ್ರಯಾಣದ ಅವಧಿಯಲ್ಲಿ ಸ್ಯಾನಿಟೈಸರನ್ನು ಜೊತೆಗೆ ಇರಿಸಿಕೊಳ್ಳುವಂತೆ ಸಲಹೆ ನೀಡಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಕೋವಿಡ್ ಮತ್ತು ಲಾಕ್‌ಡೌನ್‌ನಿಂದ ತೊಂದರೆಗೊಳಗಾದ ಜನರಿಗೆ ನೆರವು ಒದಗಿಸುವ ನಿಮ್ಮ ಪ್ರಯತ್ನ ಶ್ಲಾಘನೀಯ, ನಿಮ್ಮ ಆರೋಗ್ಯದ ಬಗ್ಗೆಯೂ ಕಾಳಜಿ ಇರಲಿ. ನೀವು ಆರೋಗ್ಯಯುತವಾಗಿ ಇದ್ದಲ್ಲಿ ಮಾತ್ರ ಜನರ ಸೇವೆ ಮಾಡಲು ಸಾಧ್ಯ. ಈ ಕಾರಣದಿಂದ ಜಾಗ್ರತೆಯಾಗಿ ಇರಿ. ಕೋವಿಡ್ ನಿಯಂತ್ರಣ ಕ್ರಮಗಳ ಕುರಿತು ಜನರಲ್ಲೂ ಅರಿವು ಮೂಡಿಸಿ ಎಂದು ಶಾಸಕರಿಗೆ ಸಭಾಧ್ಯಕ್ಷರು ಸಲಹೆ ನೀಡಿದ್ದಾರೆ. ರಾಜ್ಯದ 224 ಶಾಸಕರ ಜೊತೆಗೂ ಸಭಾಧ್ಯಕ್ಷರು ಸಮಾಲೋಚನೆ ನಡೆಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಆಧಾರ:ಪ್ರಜಾವಾಣಿ, ದಿನಾಂಕ:19.06.2021

## 11. ದೇಹ–ಮನಸ್ಸಿನ ಸಾಮರಸ್ಯ ಸಾಧನ

ಯೋಗಾಸನದಿಂದ ದೈಹಿಕ ಮತ್ತು ಮಾನಸಿಕ ಆರೋಗ್ಯ ಕಾಯ್ದುಕೊಳ್ಳಲು ಸಾಧ್ಯವಾಗಲಿದೆ ಎಂದು ಪ್ರತಿಪಾದಿಸಿದ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ, ಕಾಗೇರಿ ಅವರು, ದಿನ ನಿತ್ಯದ ಜೀವನದಲ್ಲಿ ಯೋಗವನ್ನು ಅಳವಡಿಸಿಕೊಳ್ಳುವಂತೆ ತಮ್ಮ ಸಿಬ್ಬಂದಿಗೆ ಕರೆ ನೀಡಿದರು.

ವಿಧಾನಸಭೆ ಸಚಿವಾಲಯ ಆಯೋಜಿಸಿದ್ದ ಅಂತರರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಯೋಗಾಸನ ಎಂಬುದು ಕೇವಲ ದೈಹಿಕ ಪರಿಶ್ರಮ ಮಾತ್ರವಲ್ಲ. ದೇಹ ಮತ್ತು ಮನಸ್ಸಿನ ನಡುವಿನ ಸಾಮರಸ್ಯದ ಸಾಧನ, ಆಲೋಚನೆ, ಕ್ರಿಯೆ ಮತ್ತು ನಿಗ್ರಹಗಳ ನಡುವಿನ ಕೊಂಡಿಯಾಗಿದ್ದು, ವಿಜ್ಞಾನ ಮತ್ತು ತತ್ವಶಾಸ್ತ್ರಗಳ ಸಮಾಗಮ ಎಂದು ವಿಶ್ಲೇಷಿಸಿದರು.

ಭಾರತವು ಜಾಗತಿಕ ಸಮುದಾಯಕ್ಕೆ ಖಗೋಳ ವಿಜ್ಞಾನ, ವಿಜ್ಞಾನ ಮತ್ತು ಗಣಿತದ ಜೊತೆಗೆ ನೀಡಿದ ಮಹತ್ತರ ಕೊಡುಗೆ ಯೋಗಾಸನ, ಮನುಷ್ಯನ ಮಾನಸಿಕ ಮತ್ತು ದೈಹಿಕ ರೋಗ ದೂರಾಗಿಸುವ ಜೊತೆಗೆ ಜೀವನ ಕೌಶಲ್ಯಗಳನ್ನು ಕಲಿಸಿಕೊಡುವ ಅಪ್ರತಿಮ ಸಾಧನವಾಗಿದೆ ಎಂದು ವಿಧಾನಸಭಾಧ್ಯಕ್ಷರು ಬಣ್ಣಿಸಿದರು. ಕಾರ್ಯಕ್ರಮದಲ್ಲಿ ಯೋಗ ತಜ್ಞ ಮಂಜುನಾಥ್ ದರ್ಬೆ ಪಾಲ್ಗೊಂಡು ಪ್ರಾಣಾಯಾಮದ ಲಾಭಗಳನ್ನು ಸಚಿವಾಲಯದ ಅಧಿಕಾರಿ ಮತ್ತು ನೌಕರರಿಗೆ ತಿಳಿಸಿದರು. ವೇದಿಕೆಯಲ್ಲಿ ವಿಧಾನಸಭಾ ಕಾರ್ಯದರ್ಶಿ ಎಂ.ಕೆ.ವಿಶಾಲಾಕ್ಷಿ ಹಾಜರಿದ್ದರು.

ಆಧಾರ:ಸಂಯುಕ್ತ ಕರ್ನಾಟಕ, ದಿನಾಂಕ:22.06.2021






**ದಿನಾಂಕ: 21.06.2021ರಂದು ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ “ವಿಶ್ವ ಯೋಗ ದಿನಾಚರಣೆ” ಪ್ರಯುಕ್ತ ಏರ್ಪಡಿಸಿದ್ದ ಉಪನ್ಯಾಸ ಕಾರ್ಯಕ್ರಮವನ್ನು ಸನ್ಮಾನ್ಯ ಸಭಾಧ್ಯಕ್ಷರು ಉದ್ಘಾಟಿಸಿ ಮಾತನಾಡುತ್ತಿರುವ ಸಂದರ್ಭ:**


## 12. ಲೋಕಸಭಾಧ್ಯಕ್ಷ ಓಂ ಬಿರ್ಲಾ ಸಭೆ ಇಂದು

ಸಂಸದೀಯ ಕಾರ್ಯವಿಧಾನದ ಕುರಿತು ಲೋಕಸಭಾಧ್ಯಕ್ಷ ಓಂ ಬಿರ್ಲಾ ಅವರು ಎಲ್ಲ ರಾಜ್ಯಗಳ ವಿಧಾನಮಂಡಲಗಳ ಸಭಾಪತಿ ಮತ್ತು ಸಭಾಧ್ಯಕ್ಷರೊಂದಿಗೆ ವರ್ಚುವಲ್ ಸಭೆ ನಡೆಸಲಿದ್ದಾರೆ. ಈ ಸಭೆಯಲ್ಲಿ ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಭಾಗವಹಿಸಲಿದ್ದಾರೆ. ಓಂ ಬಿರ್ಲಾ ಅವರು ಲೋಕಸಭಾಧ್ಯಕ್ಷರಾಗಿ ಎರಡು ವರ್ಷ ತುಂಬಿದ ಕಾರಣ ತಮ್ಮ ಅನುಭವ ಹಂಚಿಕೊಳ್ಳಲು ಈ ಸಭೆ ಕರೆದಿದ್ದಾರೆ.


ಈ ಸಭೆಯಲ್ಲಿ ಹೊರಟ್ಟಿಯವರು ಸಭಾಪತಿಯಾಗಿ ಸದನ ನಿರ್ವಹಿಸಿದ ಅನುಭವ ಹಾಗೂ ಸಂಸದೀಯ ಕಾರ್ಯ ವಿಧಾನಗಳ ಕುರಿತು ವಿಚಾರ ಮಂಡಿಸಲಿದ್ದಾರೆ. ಕೋವಿಡ್ ಸಂದರ್ಭದಲ್ಲಿ ಸರ್ಕಾರದ ಎಲ್ಲ ನಿಯಮಗಳನ್ನು ಪಾಲಿಸಿ ಸದನ ನಡೆಸಿದ ಕುರಿತು ಅಭಿಪ್ರಾಯ ಹಂಚಿಕೊಳ್ಳಲಿದ್ದಾರೆ.

ಆಧಾರ: ಪ್ರಜಾವಾಣಿ, ದಿನಾಂಕ:22.06.2021



**ದಿನಾಂಕ: 22–6–2021ರಂದು "ಸಂಸದೀಯ ಕಾರ್ಯ ವಿಧಾನ ಕುರಿತು" ಲೋಕಸಭಾಧ್ಯಕ್ಷ ಶ್ರೀ ಓಂಪ್ರಕಾಶ ಬಿರ್ಲಾ ರವರು ದೇಶದ ಎಲ್ಲಾ ರಾಜ್ಯಗಳ ವಿಧಾನಮಂಡಲಗಳ ಸಭಾಪತಿ ಮತ್ತು ಸಭಾಧ್ಯಕ್ಷರ ಜೊತೆಗೆ ನಡೆಸಿದ ವರ್ಚುಯಲ್ ಸಭೆಯಲ್ಲಿ, ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿ ಶ್ರೀ ಬಸವರಾಜ ಹೊರಟ್ಟಿಯವರು ಭಾಗವಹಿಸಿ, ಸಭಾಪತಿಯಾಗಿ ಸದನ ನಿರ್ವಹಿಸಿದ ಅನುಭವ ಹಾಗೂ ಸಂಸದೀಯ ಕಾರ್ಯವಿಧಾನಗಳ ಕುರಿತು, ಸಂವಾದದಲ್ಲಿ ವಿಚಾರ ಮಂಡಿಸಿ, ಕೋವಿಡ್ ಸಂದರ್ಭದಲ್ಲಿಯೂ ಸರ್ಕಾರದ ಎಲ್ಲಾ ನಿಯಮಗಳನ್ನು ಪಾಲಿಸಿ, ಸದನ ನಡೆಸಿದ ಕುರಿತು ತಮ್ಮ ಅಭಿಪ್ರಾಯವನ್ನು ಹಂಚಿಕೊಂಡರು.**





**ದಿನಾಂಕ: 22.06.2021ರಂದು ಲೋಕಸಭೆಯ ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ಓಂ ಬಿರ್ಲಾರವರು ಅಖಿಲ ಭಾರತ ಪೀಠಾಸೀನಾಧಿಕಾರಿಗಳೊಂದಿಗೆ ಚರ್ಚಿಸಲು ಏರ್ಪಡಿಸಿದ್ದ ವರ್ಚುವಲ್ ಸಭೆಯಲ್ಲಿ ಸನ್ಮಾನ್ಯ ಸಭಾಧ್ಯಕ್ಷರು ಭಾಗವಸಿದ ಸಂದರ್ಭ:**

## 13.ಕಾಗದರಹಿತ ವಿಧಾನ ಪರಿಷತ್

ನೂರಾಹದಿನಾಲ್ಕು ವರ್ಷಗಳ ಇತಿಹಾಸ ಹೊಂದಿರುವ ಕರ್ನಾಟಕ ರಾಜ್ಯ ವಿಧಾನ ಪರಿಷತ್‌ನಲ್ಲಿ ಆಮೂಲಾಗ್ರ ಬದಲಾವಣೆಗೆ ಒತ್ತು ನೀಡಿದ್ದು, ಪರಿಷತ್ತಿನ ಕಾರ್ಯಚಟುವಟಿಕೆ ಹಾಗೂ ಸದನದ ಕಾರ್ಯಕಲಾಪಗಳನ್ನು ಕಾಗದರಹಿತವನ್ನಾಗಿ ಮಾಡುವ ಕುರಿತು ಶೀಘ್ರ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ವಿಧಾನ ಪರಿಷತ್ತಿನ ಸಭಾಪತಿಯವರು ಹೇಳಿದರು.

ಸಂಸದೀಯ ಕಾರ್ಯವಿಧಾನ ಕುರಿತು ಲೋಕಸಭಾಧ್ಯಕ್ಷ ಓಂ ಬಿರ್ಲಾರವರು ದೇಶದ ಎಲ್ಲ ರಾಜ್ಯಗಳ ವಿಧಾನ ಮಂಡಲಗಳ ಸಭಾಪತಿಗಳು ಹಾಗೂ ಸಭಾಧ್ಯಕ್ಷರೊಂದಿಗೆ ನಡೆಸಿದ ವರ್ಚುವಲ್ ಸಂವಾದದಲ್ಲಿ ಮಾತನಾಡಿದ ಅವರು ರಾಜ್ಯ ವಿಧಾನ ಪರಿಷತ್ತನ್ನು ಮಾದರಿ ವಿಧಾನ ಪರಿಷತ್ತನ್ನಾಗಿ ಮಾಡುವ ಸಂಕಲ್ಪದೊಂದಿಗೆ ಹಲವು ವಿನೂತನ ಕ್ರಮ ಕೈಗೊಳ್ಳಲಾಗುತ್ತಿದೆ. ಇ–ವಿಧಾನ್ ಕಾರ್ಯಕ್ರಮದಡಿ ವಿಧಾನ ಪರಿಷತ್ತನ್ನು ಕಾಗದರಹಿತವನ್ನಾಗಿ ಮಾಡುವ ನಿಟ್ಟಿನಲ್ಲಿ ಈಗಾಗಲೇ ಕ್ರಮ ಜರುಗಿಸಲಾಗುತ್ತಿದೆ. ಸದನದ ಕಲಾಪ, ಪ್ರಶ್ನೋತ್ತರ ಕಾರ್ಯಚಟುವಟಿಕೆಗಳನ್ನು ಡಿಜಿಟಲೀಕರಣ ಗೊಳಿಸಲಾಗುತ್ತಿದೆ ಎಂದರು.

ಕಳೆದ ವಿಧಾನ ಮಂಡಲದ ಬಜೆಟ್ ಅಧಿವೇಶನದಿಂದಲೇ ವಿಧಾನ ಪರಿಷತ್ತಿನ ಕಾರ್ಯಕಲಾಪಗಳನ್ನು ರಾಜ್ಯ ಸಭೆಯ ಮಾದರಿಯಲ್ಲಿ ಮಾಡಲಾಗುತ್ತಿದ್ದು, ನಿಗದಿತ ವೇಳೆ ಹಾಗೂ ಅವಧಿಯಲ್ಲಿಯೇ ಪ್ರಶ್ನೋತ್ತರ, ಶೂನ್ಯ ವೇಳೆ ಸೇರಿದಂತೆ ವಿವಿಧ ಕಾರ್ಯಕಲಾಪಗಳನ್ನು ನಡೆಸುವ ಮೂಲಕ ದೇಶದಲ್ಲಿಯೇ ಮಾದರಿಯಾಗಿದೆ. ಕೋವಿಡ್ ಸಂದರ್ಭದಲ್ಲಿಯೂ ಸರ್ಕಾರದ ಸೂಕ್ತ ನಿರ್ದೇಶನಗಳನ್ನು ಪಾಲಿಸಿ ಯಶಸ್ವಿಯಾಗಿ ಸದನದ ಕಲಾಪಗಳನ್ನು ನಡೆಸಲಾಗಿದೆ. ಕೋವಿಡ್ ಕುರಿತು ನಾಗರಿಕರಲ್ಲಿ ಜನಜಾಗೃತಿ ಹಾಗೂ ಮುಂಜಾಗ್ರತೆ ವಹಿಸುವಲ್ಲಿ ರಾಜ್ಯದ ವಿಧಾನ ಪರಿಷತ್ ಸದಸ್ಯರ ಪಾತ್ರ ಅನುಕರಣೀಯವಾಗಿದೆ ಎಂದು ಸಭಾಪತಿಯವರು ಸಭೆಗೆ ತಿಳಿಸಿದರು.

ಲೋಕಸಭಾಧ್ಯಕ್ಷ ಓಂ ಬಿರ್ಲಾ ಕಳೆದ ಎರಡು ವರ್ಷಗಳ ಅವಧಿಯಲ್ಲಿ ಲೋಕಸಭಾಧ್ಯಕ್ಷರಾಗಿ ತಾವು ಸದನದ ಕಲಾಪ ನಡೆಸಿದ ರೀತಿ ಹಾಗೂ ಅನುಭವಗಳನ್ನು ಹಂಚಿಕೊಂಡರು. ವಿಧಾನ ಸಭಾಧ್ಯಕ್ಷರು ಹಾಗೂ ವಿಧಾನ ಪರಿಷತ್ತಿನ ಸಭಾಪತಿಗಳು ಪಾಲ್ಗೊಂಡು ವಿಚಾರ ಮಂಡಿಸಿದರು.

ಆಧಾರ:ಪ್ರಜಾವಾಣಿ, ದಿನಾಂಕ:23.06.2021

## 14. ವಿಧಾನ ಮಂಡಲದಲ್ಲಿ ವಕ್ಫ್ ವರದಿ ಮಂಡನೆ ವಿವರ ಕೊಡಿ

ರಾಜ್ಯದಲ್ಲಿ ವಕ್ಫ್ ಆಸ್ತಿಗಳ ಒತ್ತುವರಿ ಹಾಗೂ ದುರ್ಬಳಕೆಗೆ ಸಂಬಂಧಿಸಿದಂತೆ ರಾಜ್ಯ ಅಲ್ಪ ಸಂಖ್ಯಾತರ ಆಯೋಗ ಸಲ್ಲಿಸಿರುವ ವಿಶೇಷ ವರದಿಯ ಶಿಫಾರಸ್ಸುಗಳನ್ನು ವಿಧಾನಮಂಡಲದ ಉಭಯ ಸದನಗಳಲ್ಲಿ ಮಂಡಿಸಿರುವ ಬಗ್ಗೆ ವಿವರ ನೀಡುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಸೂಚನೆ ನೀಡಿದೆ. ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗ ವಕ್ಫ್ ಆಸ್ತಿ ದುರ್ಬಳಕೆಗೆ ಸಂಬಂಧಿಸಿದಂತೆ 2012ರಲ್ಲಿ ಸಲ್ಲಿಸಿರುವ ವಿಶೇಷ ವರದಿ ಆಧರಿಸಿ ಬೀದರ್ ಸೇರಿದಂತೆ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿನ ವಕ್ಫ್ ಆಸ್ತಿಗಳ ಒತ್ತುವರಿ ಹಾಗೂ ದುರ್ಬಳಕೆಯನ್ನು ಸಿಬಿಐ ತನಿಖೆಗೆ ವಹಿಸುವಂತೆ ಸರ್ಕಾರಕ್ಕೆ ನಿರ್ದೇಶನ ನೀಡುವಂತೆ ಕೋರಿ ಮಾಜಿ ಸಚಿವ ಎಸ್.ಕೆ.ಕಾಂತ ಹೈಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದರು. ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ಅವರ ನೇತೃತ್ವದ ವಿಭಾಗೀಯ ನ್ಯಾಯಪೀಠ, ಕೈಗೊಂಡ ಕ್ರಮಗಳ ಮಾಹಿತಿ ಒದಗಿಸುವಂತೆ ಸರ್ಕಾರಕ್ಕೆ ನಿರ್ದೇಶನ ನೀಡಿ ವಿಚಾರಣೆಯನ್ನು ಮುಂದೂಡಿತ್ತು.

ಆಧಾರ:ಕನ್ನಡಪ್ರಭ, ದಿನಾಂಕ:23.06.2021

## 15. ಸಭೆಗೆ ಷರತ್ತುಬದ್ದ ಅನುಮತಿ

ಕೋವಿಡ್–19 ಮಾರ್ಗಸೂಚಿಯನ್ನು ಕಡ್ಡಾಯವಾಗಿ ಪಾಲಿಸುವುದು ಜೊತೆಗೆ ವಿಧಾನಸಭೆಯ ಎಲ್ಲ ಸಮಿತಿಗಳ ಸಭೆಯನ್ನು ಜೂನ್ 28 ರಿಂದ ಅನ್ವಯವಾಗುವಂತೆ ಪುನಃ ಪ್ರಾರಂಭಿಸಲು ಅನುಮತಿ ನೀಡಲಾಗಿದೆ. ಆದರೆ, ಮುಂದಿನ ಅದೇಶದವರೆಗೂ ರಾಜ್ಯ ಮತ್ತು ಹೊರ ರಾಜ್ಯದಲ್ಲಿ ಅಧ್ಯಯನ ಪ್ರವಾಸ ಕೈಗೊಳ್ಳುವಂತಿಲ್ಲ. ಜೊತೆಗೆ ಯಾವುದೇ ಸ್ಥಳ ಪರಿಶೀಲನೆಗೆ ಅವಕಾಶವಿಲ್ಲ ಎಂದು ವಿಧಾನಸಭೆ ಕಾರ್ಯದರ್ಶಿ ಎಂ.ಕೆ.ವಿಶಾಲಾಕ್ಷಿ ತಿಳಿಸಿದ್ದಾರೆ.

**ವರ್ಚುವಲ್ ಸಭೆ:** 2 ವರ್ಷಗಳಲ್ಲಿ ಸಂಸತ್ತಿನ ಕಾರ್ಯನಿರ್ವಹಣೆ ಬಗ್ಗೆ ಲೋಕಸಭೆ ಸ್ಪೀಕರ್ ಓಂ ಬಿರ್ಲಾ ನೇತೃತ್ವದಲ್ಲಿ ನಡೆದ ಪೀಠಾಸೀನಾಧಿಕಾರಿಗಳ ವರ್ಚುವಲ್ ಸಭೆಯಲ್ಲಿ ವಿಧಾನಸಭಾಧ್ಯಕ್ಷರು ಭಾಗಿಯಾದರು. ವಿಧಾನಸಭೆ ಕಲಾಪದಲ್ಲಿ ಸುಧಾರಣೆ ತರುತ್ತಿರುವುದರ ಬಗ್ಗೆಯೂ ಪ್ರಸ್ತಾಪಿಸಿದರು.

ಆಧಾರ:ವಿಜಯ ಕರ್ನಾಟಕ, ದಿನಾಂಕ:23.06.2021

## 16. ಮೇಲ್ಮನೆಯಲ್ಲಿ ಕಾಗದರಹಿತ ಕಲಾಪಕ್ಕೆ ಕ್ರಮ: ಹೊರಟ್ಟಿ

ವಿಧಾನ ಪರಿಷತ್ತನ್ನು ಮಾದರಿ ಮಾಡುವ ಸಂಕಲ್ಪ ತೊಡಲಾಗಿದೆ. ಸದನದ ಕಲಾಪ, ಪ್ರಶ್ನೋತ್ತರವನ್ನು ಡಿಜಿಟಲೀಕರಣ ಮಾಡಲಾಗುತ್ತಿದೆ. ಇ–ವಿಧಾನ ಕಾರ್ಯಕ್ರಮದಡಿ ಕಾಗದರಹಿತ ಕಲಾಪಕ್ಕೆ ಶೀಘ್ರ ಕ್ರಮ ಕೈಗೊಳ್ಳಲಾಗುವುದು ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದ್ದಾರೆ.

ಸಂಸದೀಯ ಕಾರ್ಯ ವಿಧಾನ ಕುರಿತು ಲೋಕಸಭಾಧ್ಯಕ್ಷರಾದ ಓಂ ಬಿರ್ಲಾರವರು ಎಲ್ಲಾ ರಾಜ್ಯಗಳ ವಿಧಾನಮಂಡಲ ಸಭಾಪತಿಗಳು, ಸಭಾಧ್ಯಕ್ಷರೊಂದಿಗೆ ನಡೆಸಿದ ವರ್ಚುವಲ್ ಸಂವಾದದಲ್ಲಿ ಅವರು ಮಾತನಾಡಿದರು. 114 ವರ್ಷಗಳ ಇತಿಹಾಸವಿರುವ ರಾಜ್ಯ ವಿಧಾನ ಪರಿಷತ್‌ನಲ್ಲಿ ಅಮೂಲಾಗ್ರ ಬದಲಾವಣೆಗೆ ಒತ್ತು ನೀಡಲಾಗಿದೆ. ಕಾರ್ಯಕಲಾಪ ಡಿಜಿಟಲೀಕರಣಗೊಳಿಸಲಾಗುತ್ತಿದೆ. ಬಜೆಟ್ ಅಧಿವೇಶನದಿಂದಲೇ ಕಲಾಪಗಳನ್ನು ರಾಜ್ಯಸಭೆ ಮಾದರಿಯಲ್ಲಿ ಮಾಡಲಾಗುತ್ತಿದೆ. ನಿಗದಿತ ಅವಧಿಯಲ್ಲೇ ಪ್ರಶ್ನೋತ್ತರ, ಶೂನ್ಯ ವೇಳೆ ಸೇರಿ ವಿವಿಧ ಕಾರ್ಯಕಲಾಪ ನಡೆಸಿ ದೇಶದಲ್ಲೇ ಮಾದರಿಯಾಗಿದೆ ಎಂದರು.

**ಕೋವಿಡ್ ನಡುವೆ 31 ದಿನಗಳ ಕಲಾಪ:** ಕೋವಿಡ್ ನಡುವೆಯೂ ಕಳೆದ ವರ್ಷ 31 ದಿವಸ ವಿಧಾನಸಭೆ ಕಲಾಪ ನಡೆಸಲಾಗಿದೆ. ಬೇರೆ ಯಾವ ರಾಜ್ಯದಲ್ಲೂ ಇಷ್ಟು ದಿವಸ ಕಲಾಪ ನಡೆಸಿಲ್ಲ ಎಂದು ವಿಧಾನ ಸಭಾಧ್ಯಕ್ಷರು ಲೋಕಸಭಾಧ್ಯಕ್ಷ ಓಂ ಬಿರ್ಲಾ ಅವರಿಗೆ ಮಾಹಿತಿ ನೀಡಿದರು. ಸಂವಿಧಾನದ ಬಗ್ಗೆ 8 ದಿವಸ ಚರ್ಚೆಯಾಗಿದ್ದು, ಸುಮಾರು 50 ಸದಸ್ಯರು ಭಾಗವಹಿಸಿದ್ದರು. ಹಲವು ಅಮೂಲ್ಯ ಸಲಹೆಗಳನ್ನು ಸದಸ್ಯರು ನೀಡಿದರು.

ಆಧಾರ:ಕನ್ನಡ ಪ್ರಭ, ದಿನಾಂಕ:23.06.2021

## 17. ಜನರ ರೋಗ ನಿರೋಧಕ ಶಕ್ತಿ ಹೆಚ್ಚಿಸಿ

ಕೊರೋನಾ 3ನೇ ಅಲೆಯ ಆತಂಕ ಎದುರಾಗಿರುವ ಹಿನ್ನೆಲೆಯಲ್ಲಿ ತಮ್ಮ ಕ್ಷೇತ್ರಗಳ ಜನರಲ್ಲಿ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳುವಂತೆ ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನ ಸದಸ್ಯರಿಗೆ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ, ಕಾಗೇರಿ ಪತ್ರ ಬರೆದು ಮನವಿ ಮಾಡಿದ್ದಾರೆ.

ರಾಜ್ಯದ ಜನರ ಆರೋಗ್ಯ ರಕ್ಷಣೆ ನಮ್ಮೆಲ್ಲರ ಹೊಣೆಯಾಗಿದೆ. ಹಾಗಾಗಿ ಸಾರ್ವಜನಿಕರು ಹೆಚ್ಚಾಗಿ ರೋಗ ನಿರೋಧಕ ಶಕ್ತಿ ಹೆಚ್ಚಿಸುವ ಆಹಾರ ಸೇವಿಸುವಂತೆ ಆಗ್ರಹಿಸಬೇಕು. ಧ್ಯಾನ, ಯೋಗ ಮತ್ತು ವ್ಯಾಯಾಮದತ್ತ ಜನರನ್ನು ಪ್ರೇರೇಪಿಸಬೇಕಿದೆ. ಸರ್ಕಾರದ ವಿವಿಧ ಇಲಾಖೆಗಳ ಮುಖೇನ ಜನರಲ್ಲಿ ಕೋವಿಡ್ ಬಗ್ಗೆ ಜಾಗೃತಿ ಮೂಡಿಸಲು ಕ್ರಮ ಕೈಗೊಳ್ಳಿ ಎಂದು ಸಭಾಧ್ಯಕ್ಷರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಆಧಾರ:ಸಂಯುಕ್ತ ಕರ್ನಾಟಕ, ದಿನಾಂಕ:26.06.2021

## 18. ಕೋವಿಡ್ ಸೇರಿ ಹಲವು ವಿಷಯಗಳ ಚರ್ಚೆಗೆ ವಿಶೇಷ ಅಧಿವೇಶನ ಕರೆಯಿರಿ

ರಾಜ್ಯದಲ್ಲಿ ಕೋವಿಡ್ ಪರಿಸ್ಥಿತಿ, ಸರ್ಕಾರದ ಮೇಲಿನ ಭ್ರಷ್ಟಾಚಾರ ಆರೋಪ, ಆಡಳಿತದಲ್ಲಿ ಅನ್ಯರ ಹಸ್ತಕ್ಷೇಪ, ಕನ್ನಡ, ಕನ್ನಡಿಗ ಹಾಗೂ ಕರ್ನಾಟಕ ವಿಚಾರದಲ್ಲಿ ಆಗುತ್ತಿರುವ ಹಿನ್ನೆಡೆ ಕುರಿತು ಚರ್ಚಿಸುವ ಸಂಬಂಧ ತಕ್ಷಣವೇ ವಿಶೇಷ ಅಧಿವೇಶನ ಕರೆಯುವಂತೆ ಒತ್ತಾಯಿಸಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ರಾಜ್ಯಪಾಲರು, ಮುಖ್ಯಮಂತ್ರಿ ಮತ್ತು ಸಭಾಧ್ಯಕ್ಷರಿಗೆ ಪತ್ರ ಬರೆದಿದ್ದಾರೆ. ಸರ್ಕಾರ ಲಾಕ್‌ಡೌನ್ ಪ್ಯಾಕೇಜ್ ಘೋಷಿಸುವ ಮೊದಲು ಸರ್ವಪಕ್ಷಗಳ ಅಭಿಪ್ರಾಯವನ್ನು ಒಮ್ಮೆ ಕೇಳಬೇಕಿತ್ತು. ಸರ್ಕಾರದ ಮೇಲೆ ಭಾರಿ ಪ್ರಮಾಣದ, ಗಂಭೀರವಾದ ಭ್ರಷ್ಟಾಚಾರದ ಆರೋಪಗಳು ಕೇಳಿ ಬಂದಿವೆ. ಇತ್ತೀಚಿನ ದಿನಗಳಲ್ಲಿ ಕನ್ನಡ, ಕರ್ನಾಟಕ, ಕನ್ನಡಿಗರಿಗೆ ಹಿನ್ನೆಡೆಗಳಾಗುತ್ತಿವೆ. ಈ ಬಗ್ಗೆ ಚರ್ಚೆಯಾಗಬೇಕು ಎಂದು ಹೇಳಿದ್ದಾರೆ.

ಆಧಾರ:ಕನ್ನಡ ಪ್ರಭ, ದಿನಾಂಕ:26.06.2021

## 19. ಅಧಿವೇಶನ ಬೇಡ ಎಂದು ವಿಷಯ ಸಮಿತಿಯ ವರದಿ

ಪ್ರಸಕ್ತ ಕೋವಿಡ್ ಸನ್ನಿವೇಶ ಇರುವುದರಿಂದ ವಿಧಾನಮಂಡಲದ ಅಧಿವೇಶನ ಕರೆಯುವುದು ಬೇಡ ಎಂದು ವಿಷಯ ಸಮಿತಿ ಸಭಾಧ್ಯಕ್ಷರಿಗೆ ವರದಿ ಸಲ್ಲಿಸಿದೆ. ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಸುದ್ದಿಗಾರರ ಜೊತೆ ಮಾತನಾಡಿದ ಅವರು ಕೋವಿಡ್ ವೇಳೆಯಲ್ಲಿ ಅಧಿವೇಶನ ಕರೆಯುವ ಬಗ್ಗೆ ಯಾವುದೇ ಚರ್ಚೆ ನಡೆದಿಲ್ಲ. ಅಧಿವೇಶನ ಬೇಡ ಎಂದು ವಿಷಯ ಸಮಿತಿಯು ಸಭಾಧ್ಯಕ್ಷರಿಗೆ ವರದಿ ಸಲ್ಲಿಸಿದೆ. ಈಗ ಡೆಲ್ಟಾ, ಡೆಲ್ಟಾಪ್ಲಸ್ ಕೊರೋನಾ ಸೋಂಕು ಪತ್ತೆಯಾಗಿದೆ. ಈಗಿನ ಕೋವಿಡ್ ಪರಿಸ್ಥಿತಿ ನೋಡಿಕೊಂಡು ಸಚಿವ ಸಂಪುಟ ಸಹೋದ್ಯೋಗಿಗಳ ಜೊತೆ ಚರ್ಚಿಸಿ ಮುಖ್ಯಮಂತ್ರಿಗಳು ಅಂತಿಮ ತೀರ್ಮಾನ ಕೈಗೊಳ್ಳಲಿದ್ದಾರೆ ಎಂದರು.

ಆಧಾರ:ಕನ್ನಡ ಪ್ರಭ, ದಿನಾಂಕ:26.06.2021

## 20. ವಿಶೇಷ ಅಧಿವೇಶನಕ್ಕೆ ಹೆಚ್‌ಡಿಕೆ ಆಗ್ರಹ

ಕೋವಿಡ್ ನಿಯಂತ್ರಣದಲ್ಲಿನ ವೈಫಲ್ಯ ಸರ್ಕಾರದ ವಿರುದ್ಧದ ಭಷ್ಟಾಚಾರದ ಆರೋಪಗಳು ಮತ್ತು ಕನ್ನಡ, ಕನ್ನಡಿಗರು ಕರ್ನಾಟಕಕ್ಕೆ ಆಗುತ್ತಿರುವ ಹಿನ್ನಡೆಗಳ ಕುರಿತು ಚರ್ಚಿಸಲು ವಿಧಾನಮಂಡಲದ ವಿಶೇಷ ಅಧಿವೇಶನ ಕರೆಯಬೇಕು ಎಂದು ಆಗ್ರಹಿಸಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಹೆಚ್.ಡಿ.ಕುಮಾರಸ್ವಾಮಿ ಅವರು ರಾಜ್ಯಪಾಲ ವಜುಭಾಯಿ ವಾಲಾ ಅವರಿಗೆ ಪತ್ರ ಬರೆದಿದ್ದಾರೆ.

ಕೋವಿಡ್ ಸಂಕಷ್ಟದಲ್ಲಿ ರಾಜ್ಯ ಸರ್ಕಾರ ಜನರಿಗೆ ಸರಿಯಾದ ಆರ್ಥಿಕ ನೆರವಿನ ಪ್ಯಾಕೇಜ್ ನೀಡಿಲ್ಲ. ಪರಿಹಾರ ವಿತರಣೆಯಲ್ಲೂ ತಾರತಮ್ಯ, ಜಿಪುಣತನ ಪ್ರದರ್ಶಿಸಿದೆ. ಈಗ ಕೋವಿಡ್ ಮೂರನೇ ಅಲೆ ಬರುತ್ತಿದೆ. ಈ ಕುರಿತು ಚರ್ಚಿಸಲು ವಿಶೇಷ ಅಧಿವೇಶನ ಕರೆಯಬೇಕು ಎಂದು ಆಗ್ರಹಿಸಿದ್ದಾರೆ.

ಜಲ ಸಂಪನ್ಮೂಲ ಇಲಾಖೆಯಲ್ಲಿ ರೂ.20,000 ಕೋಟಿ ಮೊತ್ತದ ಕಾಮಗಾರಿಗಳ ಟೆಂಡರ್‌ನಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಆಡಳಿತ ಪಕ್ಷ ಶಾಸಕರೊಬ್ಬರು ಆರೋಪಿಸಿದ್ದಾರೆ. ಶೇಕಡ 10ರಷ್ಟು ಲಂಚ ಪಡೆದ ಆರೋಪ ಮಾಡಿದ್ದಾರೆ. ಅಬಕಾರಿ ಇಲಾಖೆಯ ಅಧಿಕಾರಿಗಳು ಸಚಿವರಿಗಾಗಿ ಪ್ರತಿ ಜಿಲ್ಲೆಯಿಂದ ಹಣ ಸಂಗ್ರಹಿಸುತ್ತಿರುವ ಕುರಿತ ದೂರವಾಣಿ ಕರೆಯ ರೆಕಾರ್ಡಿಂಗ್ ಬಹಿರಂಗವಾಗಿದೆ. ಈ ಬಗ್ಗೆಯೂ ಅಧಿವೇಶನದಲ್ಲಿ ಚರ್ಚೆಗೆ ಅವಕಾಶ ಕಲ್ಪಿಸಬೇಕು ಎಂದು ಒತ್ತಾಯಿಸಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಕನ್ನಡ ಭಾಷೆ ಕನ್ನಡಿಗರು ಮತ್ತು ಕರ್ನಾಟಕವನ್ನು ಕಡೆಗಣಿಸಲಾಗುತ್ತಿದೆ. ಭಾಷಾ ಕಲಿಕೆ ಉದ್ಯೋಗ ಶಿಕ್ಷಣ ಅನುದಾನ ಹಂಚಿಕೆಯಲ್ಲಿ ತಾರತಮ್ಯ ಮಾಡಲಾಗುತ್ತಿದೆ. ಈ ಕುರಿತು ಅಧಿವೇಶನದಲ್ಲಿ ವಿಶೇಷ ಚರ್ಚೆ ನಡೆಯಬೇಕು ಎಂದು ಕುಮಾರಸ್ವಾಮಿ ಬೇಡಿಕೆ ಇಟ್ಟಿದ್ದಾರೆ.

ಆಧಾರ:ಪ್ರಜಾವಾಣಿ, ದಿನಾಂಕ:26.06.2021

## 21. ಮಾನವೀಯತೆ ಮೆರೆದ ಬಸವರಾಜ್ ಹೊರಟ್ಟಿ





ಅಪಘಾತವಾಗಿ ರಸ್ತೆಯಲ್ಲಿ ನರಳುತ್ತಿದ್ದ ಅಪರಿಚಿತರನ್ನು ಆಸ್ಪತ್ರೆಗೆ ಶಿಫ್ಟ್ ಮಾಡಿಸಿ ವಿಧಾನ ಪರಿಷತ್ ಸಭಾಪತಿ ಬಸವರಾಜ್ ಹೊರಟ್ಟಿ ಮಾನವೀಯತೆ ಮೆರೆದಿದ್ದಾರೆ. ಚಿತ್ರದುರ್ಗ ಜಿಲ್ಲೆಯ ಸಿರಿಗೆರೆ ಗ್ರಾಮದ ಬಳಿ ರಾಷ್ಟ್ರೀಯ ಹೆದ್ದಾರಿ 4ರಲ್ಲಿ ಕಾರು ಹಾಗೂ ಬೈಕ್ ನಡುವೆ ಡಿಕ್ಕಿ ಸಂಭವಿಸಿ, ಬೈಕಿನಲ್ಲಿದ್ದ ಮೂವರಿಗೆ ಗಂಭೀರ ಗಾಯಗಳಾಗಿ ರಸ್ತೆ ಮಧ್ಯೆ ನರಳಾಡುತ್ತಿದ್ದರು. ಈ ವೇಳೆ ಬೆಂಗಳೂರಿನಿಂದ ಹುಬ್ಬಳ್ಳಿಗೆ ತೆರಳುತ್ತಿದ್ದ ಬಸವರಾಜ ಹೊರಟ್ಟಿಯವರು ರಸ್ತೆಯಲ್ಲಿ ನಡೆದ ಅಪಘಾತ ಗಮನಿಸಿ ತಕ್ಷಣವೇ ಕಾರು ನಿಲ್ಲಿಸಿ, ಗಂಭೀರವಾಗಿ ಗಾಯಗೊಂಡಿದ್ದ ಗಾಯಾಳುಗಳ ಬಳಿಗೆ ಧಾವಿಸಿದ್ದಾರೆ.

ಗಾಯಗೊಂಡಿದ್ದ ದಂಪತಿ ಹಾಗೂ ಪುತ್ರನಿಗೆ ಪ್ರಥಮ ಚಿಕಿತ್ಸೆ ಮಾಡಿಸಿ ಕೆಲ ಕಾಲ ಸ್ಥಳದಲ್ಲೇ ಇದ್ದು ಗಾಯಾಳುಗಳಿಗೆ ಆತ್ಮಸ್ಥೈರ್ಯ ತುಂಬಿದ್ದಾರೆ. ನಂತರ ಆಸ್ಪತ್ರೆಗೆ ಸಾಗಿಸಿ ಮಾನವೀಯತೆ ಮೆರೆದಿದ್ದಾರೆ. ಅತಿ ವೇಗ ಹಾಗೂ ಅಜಾಗರೂಕತೆಯಿಂದ ವಾಹನ ಚಾಲನೆ ಮಾಡಿದರೆ ಇಂತಹ ಅವಘಡ ಸಂಭವಿಸುತ್ತದೆ. ಅದೇ ರೀತಿ ಈಗ ಹೆದ್ದಾರಿಯಲ್ಲಿ ಅಪಘಾತ ಸಂಭವಿಸಿದ್ದು, ಅದೃಷ್ಟವಶಾತ್ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ ಎಂದರು. ಗಾಯಾಳುಗಳಿಗೆ ಸಾಂತ್ವನ ಹೇಳಿ, ಅವರ ಪ್ರಯಾಣ ಮುಂದುವರೆಸಿದ್ದಾರೆ. ಭರಮಸಾಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ಆಧಾರ:ವಿಶ್ವವಾಣಿ, ದಿನಾಂಕ:27.06.2021

## 22. ಬೆಳಗಾವಿಯಲ್ಲಿ ಅಧಿವೇಶನ ಮುಖ್ಯಮಂತ್ರಿಗೆ ಸಭಾಪತಿ ಪತ್ರ

ಈ ಸಲ ಮುಂಗಾರು ಅಧಿವೇಶನವನ್ನು ಜುಲೈ ತಿಂಗಳಿನಲ್ಲಿ ಬೆಳಗಾವಿಯಲ್ಲೆ ನಡೆಸಬೇಕು ಎಂದು ಮುಖ್ಯಮಂತ್ರಿಯವರಿಗೆ ಪತ್ರ ಬರೆದಿದ್ದೇನೆ ಎಂದು ವಿಧಾನ ಪರಿಷತ್ತಿನ ಸಭಾಪತಿಯವರು ಹೇಳಿದ್ದಾರೆ.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು 2018ರ ಬಳಿಕ ಬೆಳಗಾವಿಯಲ್ಲಿ ಅಧಿವೇಶನ ನಡೆದಿಲ್ಲ. ಅಲ್ಲೇ ನಡೆಸುವಂತೆ ಬರೆದ ಪತ್ರಕ್ಕೆ ಮುಖ್ಯಮಂತ್ರಿಯಿಂದ ಯಾವುದೇ ಪ್ರತಿಕ್ರಿಯೆ ಬಂದಿಲ್ಲ. ಸಂಪುಟದಲ್ಲಿ ಈ ವಿಷಯ ಚರ್ಚೆಯಾಗಿಲ್ಲ. ಪರಿಷತ್ ಮುಖ್ಯ ಸಚೇತಕ ಮಹಾಂತೇಶ್ ಕವಟಗಿಮಠ ಅವರು ಬೆಳಗಾವಿಯಲ್ಲೇ ಅಧಿವೇಶನ ಕರೆಯಲು ವ್ಯವಸ್ಥೆ ಮಾಡಿ ಎಂದಿದ್ದಾರೆ ಎಂದರು.

ಆಧಾರ:ಪ್ರಜಾವಾಣಿ, ದಿನಾಂಕ:30.06.2021

## 23. ಶಾಲಾ ಶುಲ್ಕ ನಿರ್ಧಾರವಾಗಲಿ ಸಭಾಪತಿಗಳ ಸೂಚನೆ

ಶಿಕ್ಷಣ ಇಲಾಖೆ ಪ್ರಸಕ್ತ ಶೈಕ್ಷಣಿಕ ವರ್ಷದ ಶಾಲಾ ಶುಲ್ಕದ ಬಗ್ಗೆ ಸಮಗ್ರವಾಗಿ ಪರಿಶೀಲಿಸಿ ತ್ವರಿತವಾಗಿ ನಿರ್ಧಾರ ಕೈಗೊಳ್ಳಬೇಕು ಎಂದು ವಿಧಾನ ಪರಿಷತ್ ಸಭಾಪತಿಯವರು ಹೇಳಿದರು. ನಗರ ಪ್ರದೇಶ ಮತ್ತು ತಾಲ್ಲೂಕು ಮಟ್ಟದ ಹಾಗೂ ಗ್ರಾಮದ ಖಾಸಗಿ ಶಾಲೆಗಳ ಸ್ಥಿತಿಗತಿಯನ್ನು ಪರಿಶೀಲಿಸಿ ಕ್ರಮ ಕೈಗೊಳ್ಳುವುದು ಅವಶ್ಯಕವಾಗಿದೆ ಎಂದರು. ಪಾಲಕರು ಶುಲ್ಕ ತುಂಬದಿದ್ದರೆ ಶಿಕ್ಷಕರಿಗೆ ಸಂಬಳ ಹೇಗೆ ನೀಡುವುದು ಎಂದು ಖಾಸಗಿ ಶಾಲೆಗಳ ಆಡಳಿತ ಮಂಡಳಿಯವರು ಕೇಳುತ್ತಿದ್ದಾರೆ. ಮತ್ತೊಂದೆಡೆ

ಸಂಬಳ ನೀಡುತ್ತಿಲ್ಲ ಎಂದು ಈ ಖಾಸಗಿ ಶಾಲೆಗಳ ಶಿಕ್ಷಕರು ಅಳಲು ತೋಡಿಕೊಳ್ಳುತ್ತಿದ್ದಾರೆ. ಶಾಲೆಗಳನ್ನು ನಡೆಸದೇ ನಾವು ಹೇಗೆ ಮಕ್ಕಳ ಶಾಲೆ ಶುಲ್ಕ ಭರಿಸಬೇಕು ಎಂಬುದು ಪಾಲಕರು ಪ್ರಶ್ನೆ ಮಾಡುತ್ತಿದ್ದಾರೆ. ಮೂರು ವರ್ಗದ್ದು ಒಂದೊಂದು ರೀತಿ ಸಮಸ್ಯೆ ಇದೆ ಎಂದು ವಿಶ್ಲೇಷಿಸಿದರು. ಸಮಸ್ಯೆ ಕ್ಲಿಷ್ಟವಾಗಲು ಶಿಕ್ಷಣ ಇಲಾಖೆ ಅಧಿಕಾರಿಗಳೇ ಕಾರಣವಾಗಿದ್ದಾರೆ. ಅವರ ಬೇಜವಾಬ್ದಾರಿ ವರ್ತನೆಯಿಂದಾಗಿ ಸಮಸ್ಯೆ ಬಗೆಹರಿಯುತ್ತಿಲ್ಲ ಶಾಲಾ ಶುಲ್ಕ ಸಮಸ್ಯೆ ಬಗೆಹರಿಸುವಂತೆ ಶಿಕ್ಷಣ ಸಚಿವರಿಗೆ ಪತ್ರ ಬರೆದಿದ್ದೇನೆ ಸರ್ಕಾರ ಆದಷ್ಟು ಬೇಗ ಇದಕ್ಕೆ ಪರಿಹಾರ ಕಂಡುಕೊಳ್ಳಬೇಕು ಎಂದು ಸಲಹೆ ನೀಡಿದರು.

ಆಧಾರ:ಸಂಯುಕ್ತ ಕರ್ನಾಟಕ, ದಿನಾಂಕ:30.06.2021

## 24. ಕೊರೋನಾ ಖರ್ಚಿನ ವಿವರಕ್ಕೆ ಪಿಎಸಿ ಗರಂ

ಕೊರೋನಾ ಎರಡನೇ ಅಲೆಯ ಸಂದರ್ಭದಲ್ಲಿ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ಪಡೆದಿರುವ ಖರೀದಿಗಳ ಬಗ್ಗೆ ವಿಧಾನಮಂಡಲದ ಸಾರ್ವಜನಿಕ ಲೆಕ್ಕಪತ್ರ ಸಮಿತಿ (ಪಿಎಸಿ) ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದು, 21 ಪ್ರಶ್ನೆಗಳಿಗೆ ಉತ್ತರ ನೀಡಲು 15 ದಿನಗಳ ಗಡುವು ನೀಡಿದೆ.

ಸಮಿತಿಯ ಆಧ್ಯಕ್ಷ ರಾಮಲಿಂಗಾರೆಡ್ಡಿ ಸಭೆ ನಡೆಸಿ ಖರೀದಿಗೆ ಸಂಬಂಧಿಸಿದಂತೆ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಪ್ರಶ್ನೆಗಳನ್ನು ಕೇಳಿದಾಗ ಉತ್ತರ ನೀಡದೇ ತಡಬಡಾಯಿಸಿದರು. ಆಗ ಸಮಿತಿಯ ಸದಸ್ಯರು ಮುಂದಿನ ಸಭೆಗೆ ಸಂಪೂರ್ಣ ವಿವರಗಳೊಂದಿಗೆ ಬರುವಂತೆ ಸೂಚನೆ ನೀಡಿದರು. ಕಪ್ಪುಪಟ್ಟಿಗೆ ಸೇರಿದ್ದ ಕಂಪನಿಗಳಿಂದಲೂ ಔಷಧ ಖರೀದಿ ಮಾಡಲಾಗಿದೆ. ಇದರಲ್ಲಿ ಯಾರ ಹಿತಾಸಕ್ತಿ ಇತ್ತು ಎಂಬುದು ಹೊರಬರಬೇಕು ಎಂದು ಸಮಿತಿ ಸದಸ್ಯರು ಒತ್ತಾಯಿಸಿದ್ದಾರೆ.

ಆಧಾರ:ವಿಜಯವಾಣಿ, ದಿನಾಂಕ:30.06.2021

## 25. ಸಾವಿನ ನಿಖರ ಮಾಹಿತಿ ಕೊಡಿ

ರಾಜ್ಯದಲ್ಲಿ ಕೋವಿಡ್ ಸಾವಿನ ಬಗ್ಗೆ ನಿಖರ ಮಾಹಿತಿ (ಡೆತ್ ಆಡಿಟ್ ವರದಿ) ನೀಡಬೇಕು. ಹಾಗೆಯೇ ಬೆಡ್ ಹಂಚಿಕೆ ಕುರಿತಂತೆ ನಡೆದಿದೆ ಎನ್ನಲಾದ ಅಕ್ರಮದ ಬಗ್ಗೆ ಇಲಾಖೆ ಕೈಗೊಂಡ ಕ್ರಮದ ಬಗ್ಗೆ ಮಾಹಿತಿ ನೀಡುವಂತೆ ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ಆರೋಗ್ಯ ಇಲಾಖೆಗೆ ಸೂಚನೆ ನೀಡಿದೆ.

ಸಾರ್ವಜನಿಕ ಲೆಕ್ಕಪತ್ರ ಸಮಿತಿ ಅಧ್ಯಕ್ಷ ರಾಮಲಿಂಗಾರೆಡ್ಡಿ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಕೋವಿಡ್ ನಿಯಂತ್ರಣ ಸಾಧನಗಳ ಖರೀದಿಯಲ್ಲಿನ ಅವ್ಯವಹಾರ ಹಾಗೂ ನಿರ್ವಹಣೆ ಪ್ರಕ್ರಿಯೆಯಲ್ಲಿನ ಲೋಪಗಳ ಬಗ್ಗೆ ಸಮಿತಿಯಲ್ಲಿ ವಿಸ್ತೃತ ಚರ್ಚೆಯಾಯಿತು ಎನ್ನಲಾಗಿದೆ.

ರಾಜ್ಯ ಸರ್ಕಾರ 3–ವಾರ್ಟ್ ಹೆಮಟಾಲಜಿ ಸೆಲ್ ಕೌಂಟ್ಸ್ ಪ್ರತಿ ಯೂನಿಟ್‌ಗೆ ರೂ.2.96 ಲಕ್ಷದಂತೆ 1.195 ಯೂನಿಟ್‌ಗಳನ್ನು ಖರೀದಿಸಿದೆ. ಆದರೆ ಅದೇ ಯೂನಿಟ್‌ಗೆ ಹಿಮಾಚಲ ಪ್ರದೇಶದಲ್ಲಿ ಕೇವಲ ರೂ.1.30 ಕೋಟಿಗಿಂತ ಹೆಚ್ಚಾಗಿದೆ. 5–ಟಾಪ್ ಹೆಮಟಾಲಜಿ ಸೆಲ್ ಕೌಂಟ್ಸ್ ಖರೀದಿ ವೆಚ್ಚವನ್ನು ಕೇರಳದ ಖರೀದಿಗೆ ವೆಚ್ಚಕ್ಕೆ ಹೋಲಿಸಿದರೆ ರೂ.6.18 ಕೋಟಿ ಹೆಚ್ಚುವರಿ ವೆಚ್ಚ ಭರಿಸಿದಂತಾಗಿದೆ ಎಂದು ಸಮಿತಿ ಪ್ರಶ್ನೆ ಮಾಡಿದೆ ಎಂದು ತಿಳಿದುಬಂದಿದೆ.

2021ರಲ್ಲಿ ರ್‍ಯಾಪಿಡ್ ಆ್ಯಂಟಿಜನ್ ಪರೀಕ್ಷಾ ಕಿಟ್ ಖರೀದಿಯಲ್ಲೂ ಲೋಪಗಳಾಗಿರುವ ಬಗ್ಗೆ ಪ್ರಶ್ನಿಸಲಾಯಿತು. ಮೊದಲ ಬಾರಿ ಕಿಟ್ ಖರೀದಿಸಲು ಆಹ್ವಾನಿಸಿದ್ದ ದರಪಟ್ಟಿ ಅಂತಿಮಗೊಳಿಸದಿರಲು ಕಾರಣವೇನು ಮೊದಲ ಬಾರಿ ದರಪಟ್ಟಿ ಸಲ್ಲಿಸಿದ್ದ ಕಂಪನಿಗಳೇ ಎರಡನೇ ಬಾರಿ ದರಪಟ್ಟಿಯನ್ನು ಆಹ್ವಾನ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದರೂ ಟೆಂಡರ್ ಅಂತಿಮಗೊಳಿಸುವುದಕ್ಕೆ ವಿಳಂಬ ಏಕೆ. ಉತ್ತರ ಪ್ರದೇಶ ರಾಜ್ಯದ ದರಪಟ್ಟಿಯಂತೆ ಯಾವ ಕಾರಣದಿಂದ ದರವನ್ನು ನಿಗದಿಪಡಿಸಲು ಕ್ರಮ ತೆಗೆದುಕೊಳ್ಳಲಾಯಿತು ಎಂಬ ಬಗ್ಗೆ ವಿವರಣೆ ನೀಡಬೇಕು. ಪಿಎಂ ಕೇರ್ಸ್ ನಿಧಿಯಿಂದ ರಾಜ್ಯಕ್ಕೆ ಬಂದ 165 ವೆಂಟಿಲೇಟರ್‌ಗಳನ್ನು ಖಾಸಗಿ ಆಸ್ಪತ್ರೆಗೆ ನೀಡಿರುವ ಬಗ್ಗೆ ಸ್ಪಷ್ಟನೆ ನೀಡಬೇಕು ಎಂದು ಆರೋಗ್ಯ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಾವೇದ್ ಅಖ್ತರ್ ಅವರಿಗೆ ಸೂಚಿಸಲಾಯಿತು ಎಂದು ಗೊತ್ತಾಗಿದೆ.

ಕಪ್ಪು ಶಿಲೀಂಧ್ರ ರೋಗದ ಚಿಕಿತ್ಸೆಗೆ ಸಂಬಂಧಪಟ್ಟ ಮೈಲಾನ್ ಫಾರ್ಮಾಸ್ಯುಟಿಕಲ್ ಸಂಸ್ಥೆ ಎರಡನೇ ಕನಿಷ್ಠ ಬಿಡ್‌ದಾರರಾಗಿದ್ದರೂ ಆ ಸಂಸ್ಥೆಯಿಂದಲೇ ಆ್ಯಪೋಟೇರಿಸಿನ್ ಔಷಧ ಖರೀದಿಸಿದ್ದರಿಂದ ರಾಜ್ಯದ ಬೊಕ್ಕಸಕ್ಕೆ ಹೆಚ್ಚುವರಿ ಉಂಟಾಗಿರುವ ಖರ್ಚಿನ ಬಗ್ಗೆ ಮಾಹಿತಿ ನೀಡಬೇಕು. ಸರ್ಕಾರದ ಬೊಕ್ಕಸದ ನಷ್ಟ ಎಂಬ ಬಗ್ಗೆ ವಿವರ ನೀಡುವಂತೆಯೂ ಸಮಿತಿ ಕೋರಿದೆ ಎಂದು ತಿಳಿದುಬಂದಿದೆ.

ಬೆಡ್ ಹಂಚಿಕೆ ಕುರಿತಂತೆ ನಡೆದಿದೆ ಎನ್ನಲಾದ ಅಕ್ರಮದ ಬಗ್ಗೆ ಇಲಾಖೆ ಕೈಗೊಂಡ ಕ್ರಮಗಳೇನು ಹಾಗೆಯೇ 2020ಕ್ಕೆ ಹೋಲಿಸಿದರೆ 2021ರಲ್ಲಿ ರಾಜ್ಯದಲ್ಲಿ ಕೋವಿಡ್‌ನಿಂದ ಸಾವನ್ನಪ್ಪಿದವರ ಸಂಖ್ಯೆ ಹೆಚ್ಚಾಗಿದೆ. ಪರೀಕ್ಷಾ ಸಾಮರ್ಥ್ಯ ಪರೀಕ್ಷಾ ವರದಿ ನೀಡುವಲ್ಲಿನ ವಿಳಂಬ, ಔಷಧ ಕೊರತೆ, ಆಕ್ಸಿಜನ್ ಅಭಾವ ಇತರೆ ದೋಷಗಳನ್ನು ತೋರಿಸುತ್ತದೆ. ಈ ಬಗ್ಗೆ ಸ್ಪಷ್ಟ ಮಾಹಿತಿಯನ್ನು ಆರೋಗ್ಯ ಇಲಾಖೆ ನೀಡಬೇಕು ಎಂದು ತಿಳಿಸಲಾಗಿದೆ ಎನ್ನಲಾಗಿದೆ.

ಸಭೆ ಬಳಿಕ ಪ್ರತಿಕ್ರಿಯಿಸಿದ ರಾಮಲಿಂಗಾ ರೆಡ್ಡಿ, ಸಭೆಯಲ್ಲಿ ಡೆತ್ ಆಡಿಟ್ ಬಗ್ಗೆ ಪ್ರಸ್ತಾಪವಾಯಿತು. ಕೋವಿಡ್ 3ನೇ ಅಲೆ ಬಗ್ಗೆಯೂ ಚರ್ಚೆಯಾಗಿದ್ದು, ವಾರ ಇಲ್ಲವೇ 15 ದಿನದಲ್ಲಿ ಮತ್ತೊಮ್ಮೆ ಸಭೆ ಸೇರಲಾಗುವುದು. ಅದಕ್ಕೆ ಅಗತ್ಯವಿರುವ ಎಲ್ಲ ಮಾಹಿತಿ ನೀಡುವಂತೆ ಆರೋಗ್ಯ ಇಲಾಖೆಗೆ ಸೂಚಿಸಲಾಗಿದೆ ಎಂದು ತಿಳಿಸಿದರು.

ಸಮಿತಿ ಸದಸ್ಯ ಈಶ್ವರ ಖಂಡ್ರೆ ಮಾತನಾಡಿ, ಡೆತ್ ಆಡಿಟ್ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಿದ್ದೇನೆ. ಕೋವಿಡ್‌ನಿಂದ ಮನೆ ಹಾಗೂ ತಾಲ್ಲೂಕು ಆಸ್ಪತ್ರೆಯಲ್ಲಿ ಮೃತಪಟ್ಟವರ ಮಾಹಿತಿ ಇಲ್ಲ. ಈ ಬಗ್ಗೆ ಮಾಹಿತಿ ನೀಡುವಂತೆ ಕೋರಲಾಗಿದೆ. ಆಮ್ಲಜನಕ ಸಿಗದೆ ಮೃತಪಟ್ಟವರ ವಿವರವನ್ನು ಕೇಳಲಾಗಿದೆ ಎಂದು ಹೇಳಿದರು.

ಆಧಾರ:ವಿಜಯವಾಣಿ, ದಿನಾಂಕ:30.06.2021

**ದಿನಾಂಕ: 04.04.2021ರಂದು ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಗಳಾದ ಶ್ರೀ ಬಸವರಾಜ ಹೊರಟ್ಟಿಯವರು ಹುಬ್ಬಳ್ಳಿ–ಧಾರವಾಡ ಬಂಟರ ಸಂಘ ಆಯೋಜಿಸಿದ್ದ ವಾರ್ಷಿಕ ಸಭಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಬಂಟರ ಸಂಘವು ಹೊರತಂದಿರುವ ಸಂಚಿಕೆಯನ್ನು ಬಿಡುಗಡೆ ಮಾಡಿದರು.**



**ದಿನಾಂಕ: 04.04.2021ರಂದು ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಗಳಾದ ಶ್ರೀ ಬಸವರಾಜ ಹೊರಟ್ಟಿಯವರು ಹುಬ್ಬಳ್ಳಿ–ಧಾರವಾಡ ಬಂಟರ ಸಂಘ ಆಯೋಜಿಸಿದ್ದ ವಾರ್ಷಿಕ ಸಭಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಬಂಟರ ಸಂಘದಿಂದ ಸನ್ಮಾನ ಸ್ವೀಕರಿಸುತ್ತಿರುವುದು.**



**ದಿನಾಂಕ: 06.04.2021ರಂದು ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಗಳಾದ ಶ್ರೀ ಬಸವರಾಜ ಹೊರಟ್ಟಿಯವರನ್ನು ವಿಧಾನಸೌಧದ ಕಚೇರಿಯಲ್ಲಿ ಮಧ್ಯಾಹ್ನದ ಬಿಸಿಯೂಟ ಕಾರ್ಯಕ್ರಮದ ಡಾಟಾ ಎಂಟ್ರಿ ಆಪರೇಟರ್‌ಗಳು ಭೇಟಿಮಾಡಿ ತಮ್ಮ ಬೇಡಿಕೆ ಹಾಗೂ ಸಮಸ್ಯೆಗಳನ್ನು ಪರಿಹರಿಸುವಂತೆ ಅಧಿಕಾರಿಗಳಿಗೆ ಸೂಚಿಸಲು ಮನವಿ ಸಲ್ಲಿಸಿದರು.**



**ದಿನಾಂಕ: 06.04.2021ರಂದು ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಗಳಾದ ಶ್ರೀ ಬಸವರಾಜ ಹೊರಟ್ಟಿಯವರನ್ನು ವಿಧಾನಸೌಧದ ಕಚೇರಿಯಲ್ಲಿ ಶ್ರೀ ಮಲಪ್ರಭಾ ಸಕ್ಕರೆ ಕಾರ್ಖಾನೆ ಲಿಮಿಟೆಡ್, ಚೇರ್ಮನ್ ಮತ್ತು ನಿರ್ದೇಶಕರು ಸನ್ಮಾನಿಸಿದರು.**



**ದಿನಾಂಕ: 08.04.2021ರಂದು ಸನ್ಮಾನ್ಯ ಸಭಾಧ್ಯಕ್ಷರು ಮಾಹಿತಿ ತಂತ್ರಜ್ಞಾನ ಹಾಗೂ ಜೈವಿಕ ತಂತ್ರಜ್ಞಾನ ಇಲಾಖೆಯ ವ್ಯವಸ್ಥಾಪಕ ನಿರ್ದೇಶಕರೊಂದಿಗೆ ಚರ್ಚಿಸಿದ ಸಂದರ್ಭ:**



**ದಿನಾಂಕ: 08.04.2021ರಂದು ಸನ್ಮಾನ್ಯ ಸಭಾಧ್ಯಕ್ಷರು ಕಾವೇರಿ ಎಂಪೋರಿಯಂ ನಿಗಮದ ವ್ಯವಸ್ಥಾಪಕ ನಿರ್ದೇಶಕರೊಂದಿಗೆ ಚರ್ಚಿಸುತ್ತಿರುವ ಸಂದರ್ಭ:**



**ದಿನಾಂಕ: 08.04.2021ರಂದು ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಗಳಾದ ಶ್ರೀ ಬಸವರಾಜ ಹೊರಟ್ಟಿಯವರು ವಿಧಾನ ಪರಿಷತ್ತಿನ ಸಚಿವಾಲಯದ ಪ್ರಗತಿ ಪರಿಶೀಲನಾ ಸಭೆಯನ್ನು ನಡೆಸಿದರು. ಸಭೆಯಲ್ಲಿ ಸಚಿವಾಲಯದ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಇದ್ದರು.**



**ದಿನಾಂಕ: 09.04.2021ರಂದು ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಗಳಾದ ಶ್ರೀ ಬಸವರಾಜ ಹೊರಟ್ಟಿಯವರು ಹಾವೇರಿ ಜಿಲ್ಲೆ, ರಾಣೆ ಬೆನ್ನೂರಿನಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ಶಿಕ್ಷಣ ನೀತಿ–2020ರ ಕಾರ್ಯಾಗಾರವನ್ನು ಉದ್ಘಾಟಿಸಿ ನಂತರ ಕಾರ್ಯಾಗಾರವನ್ನು ಕುರಿತು ಮಾತನಾಡುತ್ತಿರುವುದು.**






ದಿನಾಂಕ: 09.04.2021ರಂದು ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿ ಶ್ರೀ ಬಸವರಾಜ ಹೊರಟ್ಟಿಯವರನ್ನು ಹಾವೇರಿ ಜಿಲ್ಲೆ, ರಾಣೆಬೆನ್ನೂರು ತಾಲ್ಲೂಕಿನ ಆರ್.ಟಿ.ಇ.ಎಸ್ ಸಮೂಹ ಸಂಸ್ಥೆಗಳ ಅಧ್ಯಕ್ಷರು ಹಾಗೂ ಸಿಬ್ಬಂದಿ ವರ್ಗದವರು ಅಭಿನಂದಿಸಿದರು.



ದಿನಾಂಕ: 10.04.2021ರಂದು ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಗಳಾದ ಶ್ರೀ ಬಸವರಾಜ ಹೊರಟ್ಟಿಯವರನ್ನು ಅಮರ ಜ್ಯೋತಿ ಶಿಕ್ಷಣ ಸಂಸ್ಥೆ, ಹುಬ್ಬಳ್ಳಿ. ಇವರ ಆಡಳಿತ ಮಂಡಳಿ ಹಾಗೂ ಶಿಕ್ಷಕರ ವತಿಯಿಂದ ಸನ್ಮಾನಿಸಲಾಯಿತು.



**ದಿನಾಂಕ: 10.04.2021ರಂದು ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿ ಶ್ರೀ ಬಸವರಾಜ ಹೊರಟ್ಟಿಯವರು, ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ಶ್ರೀ ಹೆಚ್.ಎಸ್ ದೊರೆಸ್ವಾಮಿಯವರನ್ನು ಭೇಟಿ ಮಾಡಿ, ಹುಟ್ಟು ಹಬ್ಬದ ಶುಭಾಶಯಗಳನ್ನು ಕೋರಿ ಸನ್ಮಾನಿಸಿದರು. ಈ ಸಂದರ್ಭದಲ್ಲಿ ಸಭಾಪತಿಗಳ ವಿಶೇಷ ಕರ್ತವ್ಯಾಧಿಕಾರಿಗಳಾದ ಶ್ರೀ ಡಾ. ಮಹೇಶ್ ವಾಳ್ವೇಕರ್ ರವರು ಉಪಸ್ಥಿತರಿದ್ದರು.**



**ದಿನಾಂಕ: 12.04.2021ರಂದು ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಗಳಾದ ಶ್ರೀ ಬಸವರಾಜ ಹೊರಟ್ಟಿಯವರು ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರ ಹಾಗೂ ಹನುಮಂತಪ್ಪ ಮಾವಳೇರ ಪ್ರೌಢಶಾಲೆ ಮುಗದ ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಗ್ರಾಮೀಣ ಶಿಕ್ಷಕರ ಕೌಶಲ್ಯ, ಸೃಜನಶೀಲತೆ ಕಾರ್ಯಾಗಾರದಲ್ಲಿ ಭಾಗವಹಿಸಿ, ಕಾರ್ಯಗಾರವನ್ನು ಉದ್ದೇಶಿಸಿ ಮಾತನಾಡುತ್ತಿರುವುದು ಮತ್ತು ಆಯೋಜಕರಿಂದ ಸನ್ಮಾನ ಸ್ವೀಕರಿಸುತ್ತಿರುವುದು.**





ದಿನಾಂಕ: **14.04.2021**ರಂದು ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿ ಶ್ರೀ ಬಸವರಾಜ ಹೊರಟ್ಟಿಯವರು ಡಾ.ಬಿ.ಆರ್. ಅಂಬೇಡ್ಕರ್ ದಲಿತ ಸಂಘರ್ಷ ಸಮಿತಿ ಹುಬ್ಬಳ್ಳಿ ಹಾಗೂ ಗೃಹ ರಕ್ಷಕ ದಳ ಹುಬ್ಬಳ್ಳಿ, ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಅಂಬೇಡ್ಕರ್ ಜಯಂತಿಯಲ್ಲಿ ಪಾಲ್ಗೊಂಡು ಡಾ. ಬಿ.ಆರ್ ಅಂಬೇಡ್ಕರ್ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಿ ನಮಸ್ಕರಿಸಿದರು.



ದಿನಾಂಕ: **14.04.2021**ರಂದು ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿ ಶ್ರೀ ಬಸವರಾಜ ಹೊರಟ್ಟಿಯವರು ಡಾ. ಬಿ.ಆರ್ ಅಂಬೇಡ್ಕರ್ ದಲಿತ ಸಂಘರ್ಷ ಸಮಿತಿ ಹುಬ್ಬಳ್ಳಿ ಹಾಗೂ ಗೃಹ ರಕ್ಷಕ ದಳ ಹುಬ್ಬಳ್ಳಿ, ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ, ಅಂಬೇಡ್ಕರ್ ಜಯಂತಿಯಲ್ಲಿ ಭಾಗವಹಿಸಿ ಗೃಹ ರಕ್ಷಕ ದಳದ ಸಿಬ್ಬಂದಿಗೆ ಅಭಿನಂದಿಸುತ್ತಿರುವುದು, ಮತ್ತು ಕಾರ್ಯಕ್ರಮಕರ ಆಯೋಜಕರಿಂದ ಸನ್ಮಾನ ಸ್ವೀಕರಿಸುತ್ತಿರುವುದು.





**ದಿನಾಂಕ: 14.04.2021ರಂದು ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿ ಶ್ರೀ ಬಸವರಾಜ ಹೊರಟ್ಟಿಯವರು ಹುಬ್ಬಳ್ಳಿ ನಗರದಲ್ಲಿರುವ ಕಿವುಡ, ಮೂಕ ಮತ್ತು ಅಂಧ ಹಾಗೂ ವಿಶೇಷಚೇತನ ಮಕ್ಕಳ ಶಾಲೆಯಲ್ಲಿ ಸರಳವಾಗಿ ತಮ್ಮ ನೆಚ್ಚಿನ ವಿದ್ಯಾರ್ಥಿಗಳ ಸಮ್ಮುಖದಲ್ಲಿ ತಮ್ಮ ಹುಟ್ಟುಹಬ್ಬವನ್ನು ಆಚರಿಸಿಕೊಂಡು ಮಕ್ಕಳಿಗೆ ಪುಸ್ತಕಗಳನ್ನು ಉಡುಗೊರೆಯಾಗಿ ನೀಡಿದರು.**



**ದಿನಾಂಕ: 15.04.2021ರಂದು ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿ ಶ್ರೀ ಬಸವರಾಜ ಹೊರಟ್ಟಿಯವರು ಎಸ್.ಎಸ್.ಎಲ್.ಸಿ ಪರೀಕ್ಷೆಯನ್ನು ಕೊರೋನಾ ತಡೆ ಹಾಗೂ ಮುಂಜಾಗ್ರತಾ ಕ್ರಮಗಳೊಂದಿಗೆ ನಡೆಸುವುದು ಸೂಕ್ತ ಎಂದು ತಮ್ಮ ವಿಧಾನಸೌಧದ ಕಚೇರಿಯಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಸಂದರ್ಶನದಲ್ಲಿ ಭಾಗಿಯಾಗಿರುವುದು.**



ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿ ಶ್ರೀ ಬಸವರಾಜ ಹೊರಟ್ಟಿಯವರನ್ನು ಸರ್ವೋದಯ ಶಿಕ್ಷಣ ಟ್ರಸ್ಟ್, ಧಾರವಾಡ ಇವರ ಆಡಳಿತ ಮಂಡಳಿಯವರು ಮತ್ತು ಸಿಬ್ಬಂದಿ ವರ್ಗದವರು ಸನ್ಮಾನಿಸಿದರು.



ದಿನಾಂಕ: 17.04.2021ರಂದು ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿ ಶ್ರೀ ಬಸವರಾಜ ಹೊರಟ್ಟಿಯವರು ಹುಬ್ಬಳ್ಳಿ ನಗರದ ಗೋಕುಲ ರಸ್ತೆಯಲ್ಲಿ ನೂತನವಾಗಿ ನಿರ್ಮಿಸಿರುವ ಪೋರ್ಚುನ್ ಹೋಟೆಲ್ ಅನ್ನು ಉದ್ಘಾಟಿಸುತ್ತಿರುವುದು. ಕಾರ್ಯಕ್ರಮದಲ್ಲಿ ಕೇಂದ್ರ ಸಚಿವರಾದ ಶ್ರೀ ಪ್ರಹ್ಲಾದ ಜೋಶಿಯವರು ಹಾಗೂ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರಾದ ಶ್ರೀ ಜಗದೀಶ್ ಶೆಟ್ಟರ್‌ರವರು ಉಪಸ್ಥಿತರಿದ್ದರು.



**ದಿನಾಂಕ: 17.04.2021ರಂದು ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿ ಶ್ರೀ ಬಸವರಾಜ ಹೊರಟ್ಟಿಯವರು ಕರ್ನಾಟಕ ಮಾಧ್ಯಮಿಕ ಶಾಲಾ ನೌಕರರ ಸಂಘ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ, ಹಾನಗಲ್ ಇವರು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದು, ಆಯೋಜಕರಿಂದ ಸನ್ಮಾನ ಸ್ವೀಕರಿಸುತ್ತಿರುವುದು.**



**ದಿನಾಂಕ: 19.04.2021ರಂದು ಸನ್ಮಾನ್ಯ ಲೋಕಸಭಾಧ್ಯಕ್ಷರಾದ ಶ್ರೀ ಓಂ ಬಿರ್ಲಾರವರು "ಕೋವಿಡ್–19 ಪರಿಸ್ಥಿತಿಯನ್ನು ತಡೆಗಟ್ಟುವುದು ಹಾಗೂ ಸಾರ್ವಜನಿಕ ಪ್ರತಿನಿಧಿಗಳ ಪಾತ್ರ ಮತ್ತು ಜವಾಬ್ದಾರಿ" ಎಂಬ ವಿಷಯದ ಕುರಿತು ವಿಡಿಯೋ ಕಾನ್ಫರೆನ್ಸ್ ಮೂಲಕ ಆಯೋಜಿಸಿದ್ದ ಸಭೆಗೆ, ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿ ಶ್ರೀ ಬಸವರಾಜ ಹೊರಟ್ಟಿಯವರು ಭಾಗಿಯಾಗಿದ್ದು, ರಾಜ್ಯ ಸರ್ಕಾರವು ಕೈಗೊಂಡಿರುವ ಕ್ರಮಗಳ ಬಗ್ಗೆ ಸಮಗ್ರ ಚಿತ್ರಣವನ್ನು ನೀಡಿದರು.**




**ದಿನಾಂಕ: 19.04.2021ರಂದು ಕೊರೋನಾ ತಡೆಗಟ್ಟುವ ನಿಟ್ಟಿನಲ್ಲಿ ಕೈಗೊಂಡ ಕ್ರಮದ ಬಗ್ಗೆ ಲೋಕಸಭಾ ಸಭಾಧ್ಯಕ್ಷರಾದ ಶ್ರೀ ಓಂ ಬಿರ್ಲಾ ರವರು ಎಲ್ಲಾ ರಾಜ್ಯಗಳ ಸಭಾಧ್ಯಕ್ಷರುಗಳೊಂದಿಗೆ ನಡೆಸಿದ್ದ ವರ್ಚ್ಯುವಲ್ ಸಭೆಯಲ್ಲಿ ಸನ್ಮಾನ್ಯ ಸಭಾಧ್ಯಕ್ಷರು ಹಾಗೂ ಮಾನ್ಯ ಗೃಹ ಸಚಿವರಾದ ಶ್ರೀ ಬಸವರಾಜ್ ಬೊಮ್ಮಾಯಿರವರು ಭಾಗವಹಿಸಿದ ಸಂದರ್ಭ:**



**ದಿನಾಂಕ: 20.04.2021ರಂದು ಸನ್ಮಾನ್ಯ ರಾಜ್ಯಪಾಲರು ರಾಜ್ಯದಲ್ಲಿ ಕೋವಿಡ್-19 ಸಾಂಕ್ರಾಮಿಕ ರೋಗವು ವ್ಯಾಪಕವಾಗಿ ಹರಡುತ್ತಿರುವ ಹಿನ್ನೆಲೆಯಲ್ಲಿ ಇದನ್ನು ನಿಯಂತ್ರಿಸಲು ಮುಂಜಾಗ್ರತೆ ಕ್ರಮವನ್ನು ಕೈಗೊಳ್ಳಲು ಸನ್ಮಾನ್ಯ ಸಭಾಧ್ಯಕ್ಷರು ಹಾಗೂ ಸರ್ವ ಪಕ್ಷದ ನಾಯಕರೊಂದಿಗೆ ಏರ್ಪಡಿಸಿದ ವರ್ಚುವಲ್ ಸಭೆಯಲ್ಲಿ ಸನ್ಮಾನ್ಯ ಸಭಾಧ್ಯಕ್ಷರು ಭಾಗವಹಿಸಿದ ಸಂದರ್ಭ:**




**ದಿನಾಂಕ: 20.04.2021ರಂದು ಕರ್ನಾಟಕ ಸರ್ಕಾರವು ಕೋವಿಡ್–19ರ ನಿಮಿತ್ತ, ಏರ್ಪಡಿಸಿದ್ದ ಸರ್ವಪಕ್ಷಗಳ ವಿಡಿಯೋ–ಸಂವಾದ ಸಭೆಯಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿ ಶ್ರೀ ಬಸವರಾಜ ಹೊರಟ್ಟಿಯವರು, ಭಾಗವಹಿಸಿ ಸರ್ಕಾರಕ್ಕೆ ಸಲಹೆ ಸೂಚನೆಗಳನ್ನು ನೀಡಿದರು.**




**ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿ ಶ್ರೀ ಬಸವರಾಜ ಹೊರಟ್ಟಿಯವರು, ಧಾರವಾಡದಲ್ಲಿರುವ ಕರ್ನಾಟಕ ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡಿ, ಸಿಬ್ಬಂದಿ ವರ್ಗದವರಿಂದ ಅಭಿನಂದನೆ ಸ್ವೀಕರಿಸಿದರು.**



**ದಿನಾಂಕ: 20.4.2021ರಂದು ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿ ಶ್ರೀ ಬಸವರಾಜ ಹೊರಟ್ಟಿಯವರು, ಹುಬ್ಬಳ್ಳಿ ನಗರದಲ್ಲಿರುವ ಪಿರಮಿಡ್ ವ್ಯಾಲಿ ಶಿಕ್ಷಣ ಸಂಸ್ಥೆಯ, ಶಿಕ್ಷಕ ವರ್ಗದವರೊಂದಿಗೆ ವಿಡಿಯೋ ಸಂವಾದ ಸಭೆಯಲ್ಲಿ ಭಾಗವಹಿಸಿ, ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ದಿ ವಿಷಯವಾಗಿ ಸೂಕ್ತ ಸಲಹೆ, ಹಾಗೂ ಮಾರ್ಗದರ್ಶನ ನೀಡಿದರು.**



**ದಿನಾಂಕ: 22.04.2021ರಂದು ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿ ಶ್ರೀ ಬಸವರಾಜ ಹೊರಟ್ಟಿಯವರು, ಹುಬ್ಬಳ್ಳಿ ನಗರದಲ್ಲಿರುವ ಲ್ಯಾಮಿಂಗ್ಟನ್ ಶಾಲೆಯ, ಆಡಳಿತ ಮಂಡಳಿ ಹಾಗೂ ಶಿಕ್ಷಕ ವರ್ಗದವರೊಂದಿಗೆ ಭಾಗವಹಿಸಿ, ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಯ ಸಲುವಾಗಿ ಕೈಗೊಳ್ಳಬೇಕಾದ ವಿಷಯವಾಗಿ ಚರ್ಚಿಸಿದರು.**



ದಿನಾಂಕ: 25.05.2021ರಂದು ಯುವ ಬ್ರಿಗೇಡ್ ತಂಡ, ಹುಬ್ಬಳ್ಳಿಯ ಕನಕದಾಸ ಶಿಕ್ಷಣ ಸಮಿತಿಯ ವಿಜಯನಗರ ಪಿ.ಯು ಕಾಲೇಜಿನಲ್ಲಿ ಕೋವಿಡ್ ಸಂಕಷ್ಟದಲ್ಲಿರುವ ಖಾಸಗಿ ಶಾಲಾ ಶಿಕ್ಷಕರಿಗೆ "ಆಹಾರ ಕಿಟ್" ಮನೆಗೆ ತಲುಪಿಸುವ ಕಾರ್ಯದಲ್ಲಿ ಮಗ್ನವಾಗಿರುವ ಚಕ್ರವರ್ತಿಸೂಲಿಬೆಲೆ ಮತ್ತು ಅವರ ತಂಡವನ್ನು ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿ ಶ್ರೀ ಬಸವರಾಜ ಹೊರಟ್ಟಿಯವರು ಪ್ರೋತ್ಸಾಹಿಸಿದರು.



ದಿನಾಂಕ: 03.06.2021ರಂದು ಸನ್ಮಾನ್ಯ ಸಭಾಧ್ಯಕ್ಷರು ಮಾನ್ಯ ಉಪ ಮುಖ್ಯಮಂತ್ರಿಗಳಾದ ಡಾ: ಅಶ್ವತ್ಥನಾರಾಯಣ ರವರನ್ನು ಭೇಟಿಯಾಗಿ ಕೊರೋನಾ ನಿಯಂತ್ರಣ ಮತ್ತು ಉನ್ನತ ಶಿಕ್ಷಣ ಇಲಾಖೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚಿಸುತ್ತಿರುವ ಸಂದರ್ಭ:



**ದಿನಾಂಕ: 05.06.2021ರಂದು ವಿಶ್ವಪರಿಸರ ದಿನಾಚರಣೆಯ ನಿಮಿತ್ತ, ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿ ಶ್ರೀ ಬಸವರಾಜ ಹೊರಟ್ಟಿಯವರು, ತಮ್ಮ ನಿಸರ್ಗ ಫಾರ್ಮ್ ಹೌಸ್ನಲ್ಲಿ, ಮಾಜಿ ವಿಧಾನಪರಿಷತ್ತಿನ ಸಭಾಪತಿಗಳಾದ ಶ್ರೀ ವೀರಣ್ಣ ಮತ್ತಿಕಟ್ಟಿಯವರಿಂದ ಸಸಿ ಹಾಕಿಸುವ ಮೂಲಕ ಸಾಂಕೇತಿಕವಾಗಿ ವಿಶ್ವಪರಿಸರ ದಿನವನ್ನು ಆಚರಿಸಿದರು.**



**ದಿನಾಂಕ: 06.06.2021ರಂದು ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿ ಶ್ರೀ ಬಸವರಾಜ ಹೊರಟ್ಟಿಯವರು, ಛಬ್ಬಿಯಲ್ಲಿರುವ ತಮ್ಮ ನಿಸರ್ಗ ಫಾರ್ಮ್ ಹೌಸ್ನಲ್ಲಿ ಶಿಕ್ಷಕರ ಹಾಗೂ ಕಾರ್ಮಿಕರ ಆರೋಗ್ಯದ ದೃಷ್ಟಿಯಿಂದ ಸ್ವಯಂ ಕಾಳಜಿ ವಹಿಸಿ, ಶಿಕ್ಷಕ ಬಂಧುಗಳಿಗೆ ಮತ್ತು ರೈತ ಕಾರ್ಮಿಕರಿಗಾಗಿ ಆರೋಗ್ಯ ಶಿಬಿರವನ್ನು ಏರ್ಪಡಿಸಿರುವುದು.**





**ದಿನಾಂಕ: 07.06.2021ರಂದು ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿ ಶ್ರೀ ಬಸವರಾಜ ಹೊರಟ್ಟಿಯವರು, ಜನಮುಖಿ ಸ್ವಯಂ ಸೇವಾ ಸಂಸ್ಥೆ, ಧಾರವಾಡ, ಇವರ ವತಿಯಿಂದ ಕೋವಿಡ್ ಸಂಕಷ್ಟಕ್ಕೊಳಗಾಗಿರುವ ವಿಕಲಚೇತನ ಬಂಧುಗಳಿಗೆ ಆಹಾರ ಕಿಟ್ ವಿತರಣೆಯಲ್ಲಿ ಭಾಗಿಯಾಗಿದ್ದು, ಕಿಟ್ ವಿತರಿಸುತ್ತಿರುವುದು.**



**ದಿನಾಂಕ: 08.06.2021ರಂದು ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಸನ್ಮಾನ್ಯ ಸಭಾಧ್ಯಕ್ಷರ ಸಮ್ಮುಖದಲ್ಲಿ ಬಸವಕಲ್ಯಾಣ ಹಾಗೂ ಮಸ್ಕಿ ವಿಧಾನಸಭಾ ಕ್ಷೇತ್ರಗಳಿಗೆ ನಡೆದ ಉಪ ಚುನಾವಣೆಯಲ್ಲಿ ಆಯ್ಕೆಯಾದ ನೂತನ ಶಾಸಕರು ಪ್ರಮಾಣವಚನ ಸ್ವೀಕರಿಸುತ್ತಿರುವ ಸಂದರ್ಭ:**






**ದಿನಾಂಕ 12–06–2021ರಂದು ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿ ಶ್ರೀ ಬಸವರಾಜ ಹೊರಟ್ಟಿಯವರು, ಹುಬ್ಬಳ್ಳಿಯ ಲ್ಯಾಮಿಂಗ್ಟನ್ ಶಾಲೆಯ ಆಡಳಿತ ಮಂಡಳಿ ವತಿಯಿಂದ ಕೋವಿಡ್ ಸಂಕಷ್ಟಕ್ಕೊಳಗಾಗಿರುವ ಶಿಕ್ಷಕ ಬಂಧುಗಳಿಗೆ ಆಹಾರ ಕಿಟ್ ವಿತರಣೆಯಲ್ಲಿ ಭಾಗಿಯಾಗಿದ್ದು, ಕಿಟ್ ವಿತರಿಸುತ್ತಿರುವುದು.**



ದಿನಾಂಕ: 12.06.2021ರಂದು ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿ ಶ್ರೀ ಬಸವರಾಜ ಹೊರಟ್ಟಿಯವರು, ಅತ್ಯಾಧುನಿಕ ಸೌಕರ್ಯಗಳೊಂದಿಗೆ ಹುಬ್ಬಳ್ಳಿ ನಗರದಲ್ಲಿ ನೂತನವಾಗಿ ಆರಂಭಗೊಂಡಿರುವ ವೇದಾಂತ್ ಕೋವಿಡ್ ಆಸ್ಪತ್ರೆಯ ಉಧ್ಘಾಟನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ಆಸ್ಪತ್ರೆಯ ಸೌಲಭ್ಯಗಳ ಕುರಿತು ಮಾತನಾಡುತ್ತಿರುವುದು. ಸಮಾರಂಭದಲ್ಲಿ ಕೇಂದ್ರ ಸಚಿವರಾದ ಶ್ರೀ ಪ್ರಹ್ಲಾದ್ ಜೋಶಿಯವರು ಮತ್ತು ಕರ್ನಾಟಕ ಸರ್ಕಾರದ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರಾದ ಶ್ರೀ ಜಗದೀಶ್‌ಶೆಟ್ಟರ್ ರವರು ಉಪಸ್ಥಿತರಿರುವುದು.



**ದಿನಾಂಕ: 12.06.2021ರಂದು ಹಿರಿಯ ಪ್ರಾಥಮಿಕ ಶಾಲೆಗಳ ಶಿಕ್ಷಕ ವೃಂದದವರು ವೇತನ ಸಮಸ್ಯೆಯನ್ನು ಸರಿಪಡಿಸಲು ಕೋರಿ, ಮಾನ್ಯ ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಗಳಾದ ಶ್ರೀ ಬಸವರಾಜ ಹೊರಟ್ಟಿಯವರನ್ನು ಅವರ ನಿಸರ್ಗ ಫಾರ್ಮ್ ಹೌಸ್‌ನಲ್ಲಿ ಭೇಟಿಯಾಗಿ ಮನವಿ ಸಲ್ಲಿಸಿದರು.**



**ದಿನಾಂಕ: 15.06.2021ರಂದು ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಗಳಾದ ಶ್ರೀ ಬಸವರಾಜ ಹೊರಟ್ಟಿಯವರು, ಬೈಲೂರಿನ ನಿಷ್ಕಲ ಮಂಟಪಕ್ಕೆ ಆಗಮಿಸಿ ಶ್ರೀ ನಿಜಗುಣಾನಂದ ಸ್ವಾಮೀಜಿಯವರನ್ನು ಭೇಟಿಯಾಗಿ ಆಶೀರ್ವಾದ ಪಡೆದರು.**



ದಿನಾಂಕ: 18.06.2021ರಂದು ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಗಳಾದ ಶ್ರೀ ಬಸವರಾಜ ಹೊರಟ್ಟಿಯವರು, ತಮ್ಮ ಕಚೇರಿಯಲ್ಲಿ ಸರ್ಕಾರಿ ಮತ್ತು ಖಾಸಗೀ ಶಿಕ್ಷಣ ಸಂಸ್ಥೆಗಳ ಹಾಗೂ ನೌಕರರ ಸಮಸ್ಯೆ ಬಗೆಹರಿಸಲು, ಶಿಕ್ಷಣ ಇಲಾಖೆಯ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿದರು. ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಎಸ್.ಆರ್ ಉಮಾಶಂಕರ್‌ರವರು ಹಾಗೂ ಇಲಾಖಾಧಿಕಾರಿಗಳು ಭಾಗವಹಿಸಿದ್ದರು.



**ದಿನಾಂಕ:24.06.2021ರಂದು ವಿಧಾನಮಂಡಲಗಳಿಗೆ ಸಂಬಂಧಿಸಿದ ಹಾಗೂ ಶಾಸಕರ ಭವನದಲ್ಲಿ ಕೈಗೊಳ್ಳಬಹುದಾದ ಸುಧಾರಣಾ ಕ್ರಮಗಳ ಕುರಿತು ಸನ್ಮಾನ್ಯ ಸಭಾಪತಿಗಳು, ವಿಧಾನ ಪರಿಷತ್ತು ಹಾಗೂ ಸನ್ಮಾನ್ಯ ಸಭಾಧ್ಯಕ್ಷರು, ವಿಧಾನ ಸಭೆ ಇವರುಗಳು ನಡೆಸಿದ ಸಭೆ ಹಾಗೂ ಸ್ಥಳ ಪರಿಶೀಲನಾ ಸಂದರ್ಭ:**








**ದಿನಾಂಕ: 29.06.2021ರಂದು ಹುಬ್ಬಳ್ಳಿಯ ಲ್ಯಾಮಿಂಗ್ಟನ್ ಶಾಲೆಯಲ್ಲಿ, ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಆಹಾರ ಸಾಮಗ್ರಿ ಹಾಗೂ ಸುರಕ್ಷತಾ ಕಿಟ್‌ಗಳನ್ನು ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿ ಶ್ರೀ ಬಸವರಾಜ ಹೊರಟ್ಟಿಯವರು ವಿತರಿಸಿದರು. ಕಾರ್ಯಕ್ರಮದಲ್ಲಿ ಧಾರವಾಡ ಜಿಲ್ಲಾ ಕಾರ್ಮಿಕ ಇಲಾಖೆಯ ಎಲ್ಲಾ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.**



# ಭಾಗ-2

# ಕೇಂದ್ರ ಸರ್ಕಾರದ ಸುದ್ದಿಗಳು

## 1. ಆಹಾರ ಸಂಸ್ಕರಣೆಗೆ ರೂ.10,000 ಕೋಟಿ

ಆಹಾರ ಸಂಸ್ಕರಣಾ ಕ್ಷೇತ್ರಕ್ಕೆ ಉತ್ಪಾದನೆ ಆಧಾರಿತ ಪ್ರೋತ್ಸಾಹ ಧನ (ಪಿಎಲ್‌ಐ) ಯೋಜನೆ ಜಾರಿ ಮಾಡಲು ರೂ. 10,900 ಕೋಟಿಗಳನ್ನು ಪ್ರಧಾನ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸಂಪುಟ ಸಭೆ ಮಂಜೂರು ಮಾಡಿದೆ. ಈ ಯೋಜನೆಯಿಂದಾಗಿ 2026-27ರ ವೇಳೆಗೆ ದೇಶದಲ್ಲಿ 2.5 ಲಕ್ಷ ಉದ್ಯೋಗಗಳು ಸೃಷ್ಟಿಯಾಗುವುದು ಮಾತ್ರವಲ್ಲದೇ, ಆಹಾರ ವಸ್ತುಗಳ ರಫ್ತಿಗೆ ಉತ್ತೇಜನ ಸಿಗಲಿದೆ. ಜೊತೆಗೆ, ಆಹಾರ ಸಂಸ್ಕರಣಾ ಸಾಮರ್ಥ್ಯವನ್ನೂ ಹೆಚ್ಚಿಸಿ, ರೂ.33,494 ಕೋಟಿ ಮೌಲ್ಯದ ಸಂಸ್ಕರಿತ ಆಹಾರ ಉತ್ಪಾದನೆಯಾಗುವಂತೆ ಮಾಡಲಿದೆ.

ಈ ಯೋಜನೆಯಡಿ ಪ್ರೋತ್ಸಾಹಧನವನ್ನು 6 ವರ್ಷಗಳ ಕಾಲ ಅಂದರೆ 2026-27ರವರೆಗೆ ಒದಗಿಸಲಾಗುತ್ತದೆ. ಈ ಕುರಿತು ಮಾಹಿತಿ ನೀಡಿರುವ ಆಹಾರ ಸಚಿವ ಪೀಯೂಷ್ ಗೋಯಲ್, ಕೇಂದ್ರ ಸರ್ಕಾರವು ರೂ. 10,900 ಕೋಟಿ ಪ್ರೋತ್ಸಾಹಧನವನ್ನು ಮಂಜೂರು ಮಾಡಿರುವುದು ನಮ್ಮ ರೈತರಿಗೆ ನೀಡಿರುವ ಕೊಡುಗೆಯಾಗಿದೆ ಎಂದು ತಿಳಿಸಿದ್ದಾರೆ. ಕೇಂದ್ರ ಸರ್ಕಾರವು 12-13 ಕ್ಷೇತ್ರಗಳಿಗೆ ಉತ್ಪಾದನೆ ಆಧಾರಿತ ಪ್ರೋತ್ಸಾಹಧನವನ್ನು ನೀಡುವುದಾಗಿ ಬಜೆಟ್‌ನಲ್ಲೇ ಘೋಷಿಸಿದೆ. ಈಗಾಗಲೇ 6 ಕ್ಷೇತ್ರಗಳಿಗೆ ಪಿಎಲ್‌ಐ ಘೋಷಿಸಲಾಗಿದೆ ಎಂದು ಸಚಿವ ಪ್ರಕಾಶ್ ಜಾವಡೇಕರ್ ಮಾಹಿತಿ ನೀಡಿದ್ದಾರೆ.

ಆಧಾರ: ಉದಯವಾಣಿ, ದಿನಾಂಕ:01.04.2021

## 2. ದೇಶಾದ್ಯಂತ ಮತ್ತೆ ಲಕ್ಷ ದಾಟಿದ ಕೊರೋನಾ ಪ್ರಕರಣ

ದೇಶಾದ್ಯಂತ ಮತ್ತೆ ನಿತ್ಯದ ಕೊರೋನಾ ಪ್ರಕರಣಗಳ ಸಂಖ್ಯೆ ಒಂದು ಲಕ್ಷ ದಾಟಿದೆ. ಒಂದೇ ದಿನ 1,03,558 ಹೊಸ ಪ್ರಕರಣಗಳು ದಾಖಲಾಗಿದ್ದು, ಸೋಂಕಿನಿಂದ 478 ಮಂದಿ ಮೃತಪಟ್ಟಿದ್ದಾರೆ. ಕಳೆದ ವರ್ಷ ಕೊರೋನಾ ಆರ್ಭಟ ಆರಂಭವಾದ ನಂತರ ಇದೇ ಮೊದಲ ಬಾರಿಗೆ ಹೆಚ್ಚಿನ ಸಂಖ್ಯೆಯಲ್ಲಿ ದಾಖಲಾದ ನಿತ್ಯದ ಕೊರೋನಾ ಪ್ರಕರಣ ಇದಾಗಿದೆ. ಕಳೆದ ಸೆಪ್ಟೆಂಬರ್ 16ರಂದು 97,894 ಪ್ರಕರಣಗಳು ದಾಖಲಾಗಿತ್ತು. ದೇಶದಲ್ಲಿನ ಒಟ್ಟು ಪ್ರಕರಣಗಳ ಸಂಖ್ಯೆ 1,25,067ಕ್ಕೆ ಏರಿಕೆಯಾಗಿದೆ. ಸದ್ಯಕ್ಕೆ ದೇಶದಲ್ಲಿನ ಸಕ್ರಿಯ ಪ್ರಕರಣಗಳ ಸಂಖ್ಯೆ 7,41,830 ಆಗಿದೆ. ಒಂದೇ ದಿನ 478 ಮಂದಿ ಮೃತಪಟ್ಟಿದ್ದು, ಈವರೆಗೂ ಒಟ್ಟು 1,65,101 ಮಂದಿ ಸೋಂಕಿನಿಂದ ಮೃತಪಟ್ಟಿದ್ದಾರೆ.

**ರಾಜ್ಯದಲ್ಲಿ 5 ಸಾವಿರ ಗಡಿ ದಾಟಿದ ಕೊರೋನಾ**: ರಾಜ್ಯದಲ್ಲಿ ಹೊಸದಾಗಿ 5,279 ಜನರಿಗೆ ಕೋವಿಡ್-19 ಸೋಂಕು ತಗುಲಿರುವುದು ಪತ್ತೆಯಾಗಿದ್ದು 32 ಮಂದಿ ಮೃತಪಟ್ಟಿದ್ದಾರೆ. ಈ ಮೂಲಕ ಒಟ್ಟಾರೆ ಸೋಂಕಿತರ ಸಂಖ್ಯೆ 10,20,434ಕ್ಕೆ ಏರಿಕೆಯಾಗಿದೆ. ಒಟ್ಟಾರೆ 12,657 ಜನರು ಮೃತಪಟ್ಟಿದ್ದಾರೆ.

**ಇನ್ನೆರಡು ತಿಂಗಳು ಕೊರೋನಾರ್ಭಟ**: ರಾಜ್ಯದಲ್ಲಿ ಇನ್ನೆರಡು ತಿಂಗಳು ಕೊರೋನಾ ಅಟ್ಟಹಾಸ ಜೋರಾಗಿರಲಿದೆ. ಮೇ ಅಂತ್ಯದವರೆಗೆ ಕೋವಿಡ್ ಸ್ಫೋಟವಾಗಲಿದ್ದು, ಜನರು ಗಂಭೀರವಾಗಿ ತೆಗೆದುಕೊಳ್ಳಬೇಕು ಎಂದು ಸಚಿವ ಡಾ:ಕೆ.ಸುಧಾಕರ್ ಮನವಿ ಮಾಡಿದರು.

ಕೇಂದ್ರದಿಂದ 15 ಲಕ್ಷಕ್ಕೂ ಹೆಚ್ಚು ಲಸಿಕೆ ಕಳುಹಿಸಿದ್ದಾರೆ. 10 ಲಕ್ಷ ಬೆಂಗಳೂರಿಗೆ, 5 ಲಕ್ಷ ಬೆಳಗಾವಿಗೆ ಕಳುಹಿಸಿದ್ದಾರೆ. ಬೆಂಗಳೂರಿನಲ್ಲಿ ಸ್ವಲ್ಪ ಸೋಂಕು ಕಡಿಮೆಯಾಗಿದೆ. ಪ್ರಧಾನಿ ಕೂಡ ಎಂಟು ರಾಜ್ಯಗಳ ಜೊತೆ ಸಮಾಲೋಚನೆ ಮಾಡಿದ್ದು, ಆಯಾ ರಾಜ್ಯ ಸರ್ಕಾರಗಳಿಗೆ ನಿರ್ಧಾರ ತೆಗೆದುಕೊಳ್ಳುವ ಜವಾಬ್ದಾರಿ ನೀಡಿದ್ದಾರೆ. ಸೋಂಕು ಜಾಸ್ತಿಯಾದರೆ ಕಠಿಣ ಕ್ರಮ ತೆಗೆದುಕೊಳ್ಳಬೇಕು ಅಂತ ಸೂಚಿಸಿದ್ದಾರೆ.

ಆಧಾರ: ವಿಶ್ವವಾಣಿ, ದಿನಾಂಕ:06.04.2021

## 3. ಕಛೇರಿಯಲ್ಲೇ ಸಿಗಲಿದೆ ಲಸಿಕೆ

ಇನ್ನು ಮುಂದೆ ನೀವು ಲಸಿಕೆ ಹಾಕಿಸಿಕೊಳ್ಳಲು ಲಸಿಕಾ ಕೇಂದ್ರವನ್ನು ಹುಡುಕಿಕೊಂಡು ಹೋಗಬೇಕಾಗಿಲ್ಲ. ನೀವು ಕುಳಿತಿರುವ ಜಾಗದಲ್ಲೇ ಅಂದರೆ ನಿಮ್ಮ ಕಛೇರಿಗಳಲ್ಲೇ ಲಸಿಕೆ ಸ್ವೀಕರಿಸಬಹುದು.

ಏಪ್ರಿಲ್ 11 ರಿಂದ ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಕೆಲಸದ ಸ್ಥಳ (ಸರ್ಕಾರಿ ಹಾಗೂ ಖಾಸಗಿ)ಗಳಲ್ಲೇ ಕೋವಿಡ್–19 ಲಸಿಕೆ ವಿತರಣೆ ಮಾಡಲು ಕೇಂದ್ರ ಸರ್ಕಾರ ಅನುಮತಿ ನೀಡಿದೆ. ಸುಮಾರು 100 ರಷ್ಟು ಅರ್ಹ ಫಲಾನುಭವಿಗಳು ಇರುವ ಕಛೇರಿಗಳಿಗೆ ಇದು ಅನ್ವಯವಾಗುತ್ತದೆ. ಕೇಂದ್ರ ಆರೋಗ್ಯ ಕಾರ್ಯದರ್ಶಿ ರಾಜೇಶ್ ಭೂಷಣ್ ಅವರು ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳಿಗೆ ಪತ್ರ ಬರೆದು ಈ ವಿಚಾರ ತಿಳಿಸಿದ್ದಾರೆ.

45 ವರ್ಷ ದಾಟಿರುವ ಬಹುತೇಕ ಮಂದಿ ಆರ್ಥಿಕತೆಯ ಸಂಘಟಿತ ವಲಯದಲ್ಲಿದ್ದಾರೆ. ಈ ಜನಸಂಖ್ಯೆಗೆ ಕ್ಷಿಪ್ರವಾಗಿ ಲಸಿಕೆ ದೊರೆಯುವಂತೆ ಮಾಡುವುದು ನಮ್ಮ ಉದ್ದೇಶವಾಗಿದೆ. ಸುಮಾರು 100 ಮಂದಿ ಅರ್ಹ ಫಲಾನುಭವಿಗಳು (45 ವರ್ಷ ಮೇಲ್ಪಟ್ಟವರು) ಇರುವಂತಹ ಕಛೇರಿಗಳಿಗೆ ಕೋವಿಡ್ ಲಸಿಕಾ ಕೇಂದ್ರವನ್ನು ಟ್ಯಾಗ್ ಮಾಡುವ ಮೂಲಕ ಕಛೇರಿಗಳಲ್ಲೇ ಲಸಿಕೆ ವಿತರಣೆ ಸೆಷನ್ ಆಯೋಜಿಸಲು ಒಪ್ಪಿಗೆ ನೀಡಲಾಗಿದೆ ಎಂದು ಪತ್ರದಲ್ಲಿ ಉಲ್ಲೇಖಿಸಲಾಗಿದೆ.

**ರಾಜ್ಯದಲ್ಲಿ ಅರ್ಧಕೋಟಿ ಡೋಸ್ ಲಸಿಕೆ ವಿತರಣೆ:** ರಾಜ್ಯದಲ್ಲಿ ಲಸಿಕೆ ಅಭಿಯಾನ ವೇಗವಾಗಿ ನಡೆಯುತ್ತಿದ್ದು, ಈವರೆಗೆ ಅರ್ಧ ಕೋಟಿ ಡೋಸ್ ಲಸಿಕೆ ನೀಡಲಾಗಿದೆ. ಆರೋಗ್ಯ ಕಾರ್ಯಕರ್ತರು 5.7 ಲಕ್ಷ, ಮುಂಚೂಣಿ ಕಾರ್ಯಕರ್ತರು 2.52 ಲಕ್ಷ, 60 ವರ್ಷ ಮೇಲ್ಪಟ್ಟವರು 24.5 ಲಕ್ಷ, 45–55 ವರ್ಷದವರು 12.5 ಲಕ್ಷ ಮಂದಿಗೆ ಮೊದಲ ಡೋಸ್ ನೀಡಿದೆ. ಈ ಪೈಕಿ 5 ಲಕ್ಷ ಮಂದಿ 2ನೇ ಡೋಸ್ ಪಡೆದಿದ್ದಾರೆ. ಒಟ್ಟಾರೆ 50 ಲಕ್ಷ ಡೋಸ್ ಪೂರ್ಣಗೊಂಡಿದೆ.

ಆಧಾರ: ಉದಯವಾಣಿ, ದಿನಾಂಕ:08.04.2021

## 4. ಕೊರೋನಾ: ಸಿಬಿಎಸ್‌ಇ 10ನೇ ಕ್ಲಾಸ್ ಪರೀಕ್ಷೆ ರದ್ದು

ದೇಶದಲ್ಲಿ ಕೊರೋನಾ 2ನೇ ಅಲೆ ಭಾರೀ ಅನಾಹುತ ಸೃಷ್ಟಿಸಿರುವ ಹಿನ್ನೆಲೆಯಲ್ಲಿ ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ (ಸಿಬಿಎಸ್‌ಇ)ಯ 10ನೇ ತರಗತಿಯ ಪರೀಕ್ಷೆ ರದ್ದುಪಡಿಸುವ ಮತ್ತು 12ನೇ ತರಗತಿ ಪರೀಕ್ಷೆ ಮುಂದೂಡುವ ನಿರ್ಧಾರ ಕೈಗೊಳ್ಳಲಾಗಿದೆ. ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ಮಹತ್ವದ ನಿರ್ಧಾರ ಕೈಗೊಳ್ಳಲಾಗಿದೆ.

ರಾಜ್ಯಗಳ ಶಿಕ್ಷಣ ಮಂಡಳಿಗೆ ಹೋಲಿಸಿದರೆ ಸಿಬಿಎಸ್‌ಇ ಶಿಕ್ಷಣ ಮಂಡಳಿ ರಾಷ್ಟ್ರೀಯ ವ್ಯಾಪ್ತಿ ಹೊಂದಿದೆ. ಎಲ್ಲ ರಾಜ್ಯಗಳಲ್ಲಿ ಏಕಕಾಲಕ್ಕೆ ಪರೀಕ್ಷೆ ನಡೆಸುವುದು ಅನಿವಾರ್ಯ. ದೇಶದಲ್ಲಿನ ಕೊರೋನಾ ಸಾಂಕ್ರಾಮಿಕ, ಮುಚ್ಚಲ್ಪಟ್ಟ ಶಾಲೆಗಳು ಹಾಗೂ ಮಕ್ಕಳ ಯೋಗಕ್ಷೇಮ ಗಮನದಲ್ಲಿಟ್ಟುಕೊಂಡು ಮೇಲ್ಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಕೇಂದ್ರ ಶಿಕ್ಷಣ ಸಚಿವಾಲಯ ತಿಳಿಸಿದೆ.

ಈ ಕುರಿತು ಪ್ರಕಟಣೆ ಹೊರಡಿಸಿರುವ ಕೇಂದ್ರ ಶಿಕ್ಷಣ ಸಚಿವಾಲಯ ಮೇ 4 ರಿಂದ ಜೂನ್ 14ರರೆಗೆ ನಡೆಯಬೇಕಿದ್ದ ಸಿಬಿಎಸ್‌ಇ 12ನೇ ತರಗತಿ ಪರೀಕ್ಷೆಗಳನ್ನು ಮುಂದೂಡಲಾಗಿದೆ. ಮುಂದಿನ ಪರಿಸ್ಥಿತಿಯನ್ನು ಅವಲೋಕಿಸಲು ಶಿಕ್ಷಣ ಮಂಡಳಿಯು ಜೂನ್ 1 ರಂದು ಮತ್ತೊಮ್ಮೆ ಸಭೆ ಸೇರಿ ನಿರ್ಧಾರ ಕೈಗೊಳ್ಳಲಿದೆ. ಪರೀಕ್ಷೆ ನಡೆಸುವುದಾದಲ್ಲಿ ಕನಿಷ್ಟ ಪಕ್ಷ 15 ದಿನಗಳ ಮೊದಲೇ ಆ ಕುರಿತು ಮಾಹಿತಿ ನೀಡಲಾಗುವುದು. 10ನೇ ತರಗತಿ ಪರೀಕ್ಷೆಗಳನ್ನು ರದ್ದುಪಡಿಸಲಾಗಿದೆ. ಶಿಕ್ಷಣ ಮಂಡಳಿಯು ಅಭಿವೃದ್ಧಿ ಪಡಿಸಿರುವ ಮಾನದಂಡಗಳನ್ನು (ಆಂತರಿಕ ಪರೀಕ್ಷೆಗಳ ಮೌಲ್ಯಮಾಪನ) ಆಧರಿಸಿ ವಿದ್ಯಾರ್ಥಿಗಳ ಫಲಿತಾಂಶವನ್ನು ಪ್ರಕಟಿಸಲಾಗುವುದು. ಒಂದು ವೇಳೆ ಯಾವುದೇ ವಿದ್ಯಾರ್ಥಿಗೆ ಅಂಕಗಳು ತೃಪ್ತಿಕೊಡದೇ ಹೋದಲ್ಲಿ ಮುಂದೆ ಪರೀಕ್ಷೆ ನಡೆಸಲು ಸೂಕ್ತ ವಾತಾವರಣ ನಿರ್ಮಾಣವಾದ

ಬಳಿಕ ಶಿಕ್ಷಣ ಮಂಡಳಿಯು ನಡೆಸುವ ಪರೀಕ್ಷೆಯಲ್ಲಿ ಅವರು ಭಾಗವಹಿಸಬಹುದು ಎಂದು ಮಾಹಿತಿ ನೀಡಿದೆ.

ಸೋಂಕು ಹೆಚ್ಚಳವಾಗುತ್ತಿರುವ ಹಿನ್ನೆಲೆಯಲ್ಲಿ ಪರೀಕ್ಷೆಗಳನ್ನೇ ರದ್ದು ಮಾಡುವಂತೆ ಹಲವು ಮುಖ್ಯಮಂತ್ರಿಗಳು, ಶಿಕ್ಷಣ ತಜ್ಞರು, ವಿಪಕ್ಷ ನಾಯಕರು ಕೇಂದ್ರ ಸರ್ಕಾರವನ್ನು ಅಗ್ರಹಿಸಿದರು. ಜೊತೆಗೆ 2 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಆನ್‌ಲೈನ್ ಅಭಿಯಾನ ಮೂಲಕ ಕೇಂದ್ರದ ಮೇಲೆ ಒತ್ತಡ ಹೇರಿದ್ದರು.

**ಐಸಿಎಸ್‌ಇ ಪರೀಕ್ಷೆ ಬಗ್ಗೆ ಶೀಘ್ರ ನಿರ್ಧಾರ:** ಕೊರೋನಾ ಸ್ಥಿತಿಗತಿ ವಿಮರ್ಶಿಸಿ 10 ಮತ್ತು 12ನೇ ತರಗತಿಯ ಅಂತಿಮ ಪರೀಕ್ಷೆ ನಡೆಸಬೇಕೇ ಅಥವಾ ರದ್ದು ಮಾಡಬೇಕೇ ಎಂಬ ಬಗ್ಗೆ ಶೀಘ್ರ ನಿರ್ಧಾರ ಪ್ರಕಟಿಸಲಾಗುವುದು ಎಂದು ಕೌನ್ಸಿಲ್ ಫಾರ್ ಇಂಡಿಯನ್ ಸ್ಕೂಲ್ ಸರ್ಟಿಫಿಕೇಟ್ ಎಕ್ಸಾಮಿನೇಶನ್ (ಐಸಿಎಸ್‌ಇ) ತಿಳಿಸಿದೆ. ಐಸಿಎಸ್‌ಇ 10ನೇ ತರಗತಿ ಪರೀಕ್ಷೆಗೆ ಮೇ 5 ರಿಂದ ದಿನಾಂಕ ನಿಗದಿಪಡಿಸಲಾಗಿದೆ. 12ನೇ ತರಗತಿ ಪರೀಕ್ಷೆಗಳು ಈಗಾಗಲೇ ನಡೆಯುತ್ತಿವೆ.

ಆಧಾರ: ಕನ್ನಡ ಪ್ರಭ, ದಿನಾಂಕ:15.04.2021

## 5. 3.32 ಲಕ್ಷ ಕೇಸ್: ಭಾರತ ವಿಶ್ವದಾಖಲೆ

ಕೊರೋನಾ ವೈರಸ್ ಮಹಾಮಾರಿ ಭಾರತದಲ್ಲಿ ಮತ್ತೊಂದು ಜಾಗತಿಕ ದಾಖಲೆ ಸೃಷ್ಟಿಸಿದೆ. ಏಕದಿನದಲ್ಲಿ ಬರೋಬ್ಬರಿ 3.32 ಲಕ್ಷ ಕೊರೋನಾ ಪ್ರಕರಣಗಳು ದೃಢಪಟ್ಟಿವೆ. ಕೇವಲ 24 ತಾಸುಗಳ ಅವಧಿಯಲ್ಲಿ ಹೆಚ್ಚಿನ ಪ್ರಮಾಣದ ಕೇಸುಗಳು ಒಂದು ದೇಶದಲ್ಲಿ ಪತ್ತೆಯಾಗಿರುವುದು ವಿಶ್ವದಲ್ಲಿಯೇ ಮೊದಲು ಜನವರಿ 8ರಂದು ಅಮೆರಿಕದಲ್ಲಿ 3.07 ಲಕ್ಷ ಕೇಸುಗಳು ದೃಢಪಟ್ಟಿದ್ದವು. ಆ ದಾಖಲೆಯನ್ನು ಬುಧವಾರ 3.14 ಲಕ್ಷ ಕೇಸುಗಳ ಮೂಲಕ ಅಳಿಸಿ ಹಾಕಿತ್ತು. ಗುರುವಾರ ಕೂಡ ಸೋಂಕಿನ ಓಟ ಇದೇ ವೇಗ ಭಾರತದಲ್ಲಿ ಮುಂದುವರಿದಿದ್ದು, ಇನ್ನೂ 18 ಸಾವಿರ ಹೆಚ್ಚು ಕೇಸುಗಳೊಂದಿಗೆ 3.32 ಲಕ್ಷ ಹೊಸ ಪ್ರಕರಣಗಳು ದೃಢಪಟ್ಟಿವೆ.

ಇನ್ನು ದೇಶದಲ್ಲಿ 2,365 ಮಂದಿ ಸೋಂಕಿಗೆ ಬಲಿಯಾಗಿದ್ದಾರೆ. ಭಾರತದ ಮಟ್ಟಿಗೆ ಇದು ಈವರೆಗಿನ ದಾಖಲೆಯಾಗಿದೆ. ಸಾವಿಗೆ ಹೋಲಿಸಿದರೆ ಈವರೆಗೆ ಅತಿ ಹೆಚ್ಚು ಏಕದಿನದ ಸಾವು ಸಂಭವಿಸಿದ್ದು ಅಮೆರಿಕದಲ್ಲಿ ಜ.12ರಂದು ಅಲ್ಲಿ 4493 ಜನ ಅಸುನೀಗಿದ್ದರು.

**10 ರಾಜ್ಯಗಳಲ್ಲಿ 75% ಕೇಸ್:** ಹೊಸ ಪ್ರಕರಣಗಳ ಪೈಕಿ ಶೇ.75%ರಷ್ಟು ಕರ್ನಾಟಕ ಸೇರಿದಂತೆ ಕೇವಲ 10 ರಾಜ್ಯಗಳಲ್ಲಿ ಪತ್ತೆಯಾಗಿವೆ. ಮಹಾರಾಷ್ಟ್ರ, ಉತ್ತರ ಪ್ರದೇಶ, ದೆಹಲಿ, ಗುಜರಾತ್, ಕೇರಳ, ಛತ್ತಿಸ್‌ಗಢ, ಮಧ್ಯಪ್ರದೇಶ, ಬಿಹಾರ ಮತ್ತು ರಾಜಾಸ್ಥಾನ ಆ ರಾಜ್ಯಗಳು.

**ವಾರದ ಸರಾಸರಿಯಲ್ಲೂ ಅಮೇರಿಕ ಹಿಂದಿಕ್ಕಿದ ಭಾರತ:** ಒಂದೇ ದಿನ ಭಾರತದಲ್ಲಿ 3.32ಲಕ್ಷ ಪ್ರಕರಣಗಳು ದೃಢಪಟ್ಟಿವೆ. ಈ ಮೂಲಕ ಈವರೆಗೆ, ವಿಶ್ವದಲ್ಲೇ ದೈನಂದಿನ ಕೇಸಿನಲ್ಲಷ್ಟೇ ಅಲ್ಲ ವಾರದ ಸರಾಸರಿಯಲ್ಲೂ ಅಮೆರಿಕ ಹೊಂದಿದ್ದ ಗರಿಷ್ಠ ಪ್ರಕರಣಗಳ ದಾಖಲೆ ಮುರಿದಿದೆ. ಭಾರತದಲ್ಲಿ ಕಳೆದ 1 ವಾರದಿಂದ ಪತ್ತೆಯಾಗುತ್ತಿರುವ ಏಕದಿನದ ಕೇಸುಗಳ ಸರಾಸರಿ 2.64 ಲಕ್ಷ ಇದು ಅಮೆರಿಕದಲ್ಲಿ 3ನೇ ಅಲೆ ಆರಂಭವಾಗಿ, ಅದು ಗರಿಷ್ಠಮಟ್ಟಕ್ಕೆ ತಲುಪಿದಾಗಿನ ಅಂಕಿಗಿಂತಲೂ ಅಧಿಕ. ಅಂದರೆ ಜುಲೈ 11ರ ಸುಮಾರಿಗೆ ಅಮೇರಿಕದ ಏಕದಿನದ ಕೇಸುಗಳ ಸರಾಸರಿ 2.55 ಲಕ್ಷ ಇತ್ತು.

**25795 ಕೋವಿಡ್ ಕೇಸ್:** ರಾಜ್ಯದಲ್ಲಿ ಸಾರ್ವಕಾಲಿಕ ದಾಖಲೆಯ 23795 ಕೋವಿಡ್ ಪ್ರಕರಣ ವರದಿಯಾಗಿವೆ. 123 ಜನ ಮೃತರಾಗಿದ್ದಾರೆ. 5,624 ಜನ ಗುಣಮುಖರಾಗಿದ್ದಾರೆ.

ಏಪ್ರಿಲ್ 14 ರಂದು 11,265 ಪ್ರಕರಣ ವರದಿಯಾಗಿ ಹಳೆಯ ದಾಖಲೆಗಳನ್ನು ಮುರಿದಿತ್ತು. ಇದಾದ ಎಂಟನೇ ದಿನಕ್ಕೆ ಎರಡು ಪಟ್ಟಿಗಿಂತ ಹೆಚ್ಚು ಪ್ರಕರಣ ವರದಿಯಾಗಿವೆ. ಪ್ರತಿ ನಿಮಿಷಕ್ಕೆ 18 ಮಂದಿಗೆ ಕೋವಿಡ್ ಹರಡುತ್ತಿದೆ. ಹಾವೇರಿ ಜಿಲ್ಲೆ ಹೊರತುಪಡಿಸಿ ಉಳಿದೆಲ್ಲ ಜಿಲ್ಲೆಗಳಲ್ಲೂ ನೂರಕ್ಕಿಂತ

ಹೆಚ್ಚು ಪ್ರಕರಣ ವರದಿಯಾಗಿದ್ದು, ತುಮಕೂರಿನಲ್ಲಿ ಸತತ ಮೂರನೇ ದಿನಕ್ಕೆ ಸಾವಿರಕ್ಕೂ ಹೆಚ್ಚು 1,231 ಪ್ರಕರಣ ದೃಢಪಟ್ಟಿವೆ.

ಉಳಿದಂತೆ 500ಕ್ಕೂ ಹೆಚ್ಚು ಪ್ರಕರಣಗಳು ಬಳ್ಳಾರಿ(940), ಮೈಸೂರು(818), ಹಾಸನ(689), ಕಲಬುರಗಿ(659) ಯಲ್ಲಿ ವರದಿಯಾಗಿವೆ. ಬೆಂಗಳೂರಿನಲ್ಲಿ 17 ವರ್ಷದ ಬಾಲಕನೊಬ್ಬ ಮೃತಪಟ್ಟಿದ್ದು, ರಾಜ್ಯದಲ್ಲಿ ಒಟ್ಟು 30 ಮಂದಿ 50ರ ಹರೆಯದೊಳಗಿನವರು ಕೋವಿಡ್ ಕಾರಣದಿಂದ ಸಾವನ್ನಪ್ಪಿದ್ದಾರೆ. ಅಂದರೆ ಗುರುವಾರ ಮೃತಪಟ್ಟವರಲ್ಲಿ ಶೇ.24.39% ರಷ್ಟು ಮಂದಿ 50 ವರ್ಷದೊಳಗಿನವರಾಗಿದ್ದಾರೆ.

ಇದೇ ವೇಳೆ ಸಕ್ರಿಯ ಪ್ರಕರಣಗಳ ಸಂಖ್ಯೆ 1.96 ಲಕ್ಷ ದಾಟಿದ್ದು ಶುಕ್ರವಾರದ ಹೊತ್ತಿಗೆ 2 ಲಕ್ಷದ ಗಡಿ ದಾಟುವ ಸಾಧ್ಯತೆಯಿದೆ. ಬೆಂಗಳೂರಲ್ಲಿ 1.37ಲಕ್ಷ ಸಕ್ರಿಯ ಪ್ರಕರಣಗಳಿವೆ. ಗದಗ, ಹಾವೇರಿಯನ್ನು ಹೊರತುಪಡಿಸಿ ಉಳಿದ ಜಿಲ್ಲೆಗಳಲ್ಲಿ 500ಕ್ಕೂ ಹೆಚ್ಚು ಸಕ್ರಿಯ ಪ್ರಕರಣಗಳಿವೆ. ರಾಜ್ಯದಲ್ಲಿ ಒಟ್ಟು 985 ಮಂದಿ ತೀವ್ರ ನಿಗಾ ವಿಭಾಗದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಒಟ್ಟು 12.47 ಲಕ್ಷ ಮಂದಿಗೆ ಕೊರೋನಾ ಸೋಂಕು ಬಂದಿದ್ದು, ಈ ಪೈಕಿ 10.37 ಲಕ್ಷ ಜನ ಗುಣವಾಗಿದ್ದಾರೆ. 13,985 ಮಂದಿ ಮರಣವನ್ನಪ್ಪಿದ್ದಾರೆ.

**ಲಸಿಕೆ ಅಭಿಯಾನ:** ರಾಜ್ಯದಲ್ಲಿ 4,332 ಲಸಿಕಾ ಕೇಂದ್ರಗಳಲ್ಲಿ ಒಟ್ಟು 88,363 ಮಂದಿಗೆ ಲಸಿಕೆ ನೀಡಲಾಗಿದೆ. ಈವರೆಗೆ ಒಟ್ಟು 76.41 ಲಕ್ಷ ಡೋಸ್ ಲಸಿಕೆ ವಿತರಿಸಲಾಗಿದೆ. ಮೊದಲ ಡೋಸ್ ಲಸಿಕೆಯನ್ನು ಹಿರಿಯರು 24,588, 44–59 ವರ್ಷದೊಳಗಿನವರು 36,278, ಮುಂಚೂಣಿ ಕಾರ್ಯಕರ್ತರು 895, ಆರೋಗ್ಯ 419 ಮಂದಿ ಪಡೆದುಕೊಂಡಿದ್ದಾರೆ.

**15244 ಜನಕ್ಕೆ ಸೋಂಕು:** ಮಾರಕ ಕೊರೋನಾ ರಾಜಧಾನಿ ಬೆಂಗಳೂರು ನಗರವನ್ನು ತಲ್ಲಣಗೊಳಿಸಿದ್ದು, ನಿತ್ಯ ಪ್ರಕರಣಗಳ ಸಂಖ್ಯೆ ದಿನೇ ದಿನೇ ದಾಖಲೆ ಮಟ್ಟದಲ್ಲಿ ಹೆಚ್ಚಳವಾಗುತ್ತಿದೆ. ಒಂದೇ ದಿನ 15,244 ಮಂದಿಗೆ ಸೋಂಕು ತಗಲುವ ಮೂಲಕ ಸಾರ್ವಕಾಲಿಕ ದಾಖಲೆ ಸೃಷ್ಟಿಯಾಗಿದೆ. ಇದೇ ವೇಳೆ 68 ಮಂದಿ ಸೋಂಕಿತರು ಮೃತಪಟ್ಟಿದ್ದಾರೆ. ಸೋಂಕು ಯಾವಮಟ್ಟದಲ್ಲಿ ಏರಿಕೆಯಾಗುತ್ತಿದೆ ಎಂದರೆ, ಬೆಂಗಳೂರು ನಿವಾಸಿಗಳಲ್ಲಿ ಪ್ರತಿ 70 ಮಂದಿಗೆ ಸರಾಸರಿ ಒಬ್ಬರು ಸೋಂಕಿತರಾಗುತ್ತಿದ್ದಾರೆ ಮತ್ತು ಪ್ರತಿ ನಿಮಿಷಕ್ಕೆ 10.58 ಮಂದಿ ಸೋಂಕಿತರಾಗುತ್ತಿದ್ದಾರೆ ಎಂದು ಆರೋಗ್ಯ ಇಲಾಖೆ ಮಾಹಿತಿ ನೀಡಿದೆ. 2011ರ ಜನಗಣತಿ ಪ್ರಕಾರ ಬೆಂಗಳೂರಲ್ಲಿ 87,49,944 ಮಂದಿ ವಾಸವಿದ್ದಾರೆ.

ಬೆಂಗಳೂರು ಸುತ್ತಮುತ್ತಲ ಹಳ್ಳಿಗಳೂ ಸೇರಿ ಒಟ್ಟು ಜನಸಂಖ್ಯೆ 96,27,551 ಆಗುತ್ತದೆ. ಪ್ರಸ್ತುತ ಆರೋಗ್ಯ ಇಲಾಖೆ ಮಾಹಿತಿಯಂತೆ ನಗರದಲ್ಲಿ 1,37,813 ಸಕ್ರಿಯ ಸೋಂಕಿತರು ಇದ್ದು, ಇದರ ಆಧಾರದ ಮೇಲೆ ಪ್ರತಿ 70 ಜನರಲ್ಲಿ ಸರಾಸರಿ ಒಬ್ಬರು ಸೋಂಕು ಹೊಂದಿರುವುದು ವೇದ್ಯವಾಗುತ್ತದೆ. 15,244 ಹೊಸ ಪ್ರಕರಣಗಳ ಅಂಕಿ–ಅಂಶದ ಪ್ರಕಾರ ಪ್ರತಿ ನಿಮಿಷಕ್ಕೆ 10.58 ಮಂದಿ ಸೋಂಕಿತರಾಗುತ್ತಿದ್ದಾರೆ. ಸಕ್ರಿಯ ಕೇಸ್ 1,37,813ಕ್ಕೆ ಏರಿಕೆಯಾಗಿದ್ದು ಒಟ್ಟು ಸೋಂಕಿತರ ಸಂಖ್ಯೆ 5,98,919ಕ್ಕೆ ಹೆಚ್ಚಳವಾಗಿದೆ. ಆ 2257 ಮಂದಿ ಬಿಡುಗಡೆಯಾಗಿದ್ದು 4,55,655 ಮಂದಿ ಈವರೆಗೂ ಗುಣಮುಖರಾಗಿದ್ದಾರೆ. 68 ಮಂದಿ ಸೋಂಕಿತರು ಮೃತಪಟ್ಟಿದ್ದು, ಸಾವನ್ನಪ್ಪಿದವರ ಸಂಖ್ಯೆ 5450ಕ್ಕೆ ಏರಿಕೆಯಾಗಿದೆ. ಬೆಂಗಳೂರು ನಗರವೊಂದರಲ್ಲೇ 243 ಮಂದಿ ತೀವ್ರ ನಿಗಾ ಘಟಕದಲ್ಲಿ (ಐಸಿಯು) ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಆಧಾರ: ಕನ್ನಡಪ್ರಭ ದಿನಾಂಕ:23.04.2021

## 6.80 ಕೋಟಿ ಜನರಿಗೆ ಅನ್ನಭಾಗ್ಯ

ದೇಶದಲ್ಲಿ ಕೊರೋನಾ ಸೋಂಕಿನ ಎರಡನೇ ಅಲೆ ವ್ಯಾಪಕಗೊಳ್ಳುತ್ತಿರುವ ಬೆನ್ನಲ್ಲೇ ಅನೇಕ ರಾಜ್ಯಗಳಲ್ಲಿ ಲಾಕ್‌ಡೌನ್, ಕರ್ಫ್ಯೂನಂತಹ ಕಠಿಣ ನಿರ್ಬಂಧಗಳಿಂದ ಕೆಲಸ ದೊರೆಯದೆ ಸಂಕಷ್ಟಕ್ಕೆ ಗುರಿಯಾಗಿದ್ದ ಕೋಟ್ಯಂತರ ಮಂದಿ ಕಡುಬಡವರಿಗೆ ಕೇಂದ್ರದ ಮೋದಿ ಸರ್ಕಾರ ಸಿಹಿ ಸುದ್ದಿ ಕೊಟ್ಟಿದೆ.

ಮೇ ಮತ್ತು ಜೂನ್ ತಿಂಗಳುಗಳಲ್ಲಿ ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ ಅನ್ನ ಯೋಜನೆಯಡಿ ಕಡುಬಡವರು, ಕಾರ್ಮಿಕರು ಸೇರಿದಂತೆ 80 ಕೋಟಿ ಜನರಿಗೆ 5 ಕೆಜಿ ಉಚಿತ ಆಹಾರ ಧಾನ್ಯ ವಿತರಿಸುವುದಾಗಿ ಕೇಂದ್ರ ಪ್ರಕಟಿಸಿದೆ. ಪ್ರತಿ ವ್ಯಕ್ತಿಗೆ ಎರಡು ತಿಂಗಳು ಐದು ಕೆಜಿ ಧಾನ್ಯ ದೊರೆಯಲಿದೆ ಎಂದು ಕೇಂದ್ರ ತಿಳಿಸಿದೆ. ಕಳೆದ ವರ್ಷವೂ ಇದೆ ರೀತಿ ಕೊರೋನಾ ಸಂಕಷ್ಟದ ವೇಳೆ ಪ್ರಧಾನಿ ಜನರಿಗೆ ಉಚಿತ ಆಹಾರ ಧಾನ್ಯ ಘೋಷಿಷಿದ್ದರು. ಆಗ ಪ್ರತಿ ಕುಟುಂಬಕ್ಕೆ ಮೂರು ತಿಂಗಳ ಕಾಲ ಐದು ಕೆಜಿ ಗೋಧಿ ಮತ್ತು ಅಕ್ಕಿ ಜೊತೆಗೆ ಒಂದು ಕೆಜಿ ಬೇಳೆ ಒದಗಿಸಲಾಗಿತ್ತು. ನಂತರ ಬಡವರ ಮೇಲಿನ ಆರ್ಥಿಕ ಹೊರೆ ತಗ್ಗಿಸಲು ಈ ಯೋಜನೆಯನ್ನು ನವೆಂಬರ್‌ವರೆಗೆ ವಿಸ್ತರಿಸಲಾಗಿತ್ತು. ಆದರೆ ಈ ಬಾರಿ ಕೇವಲ ಆಹಾರಧಾನ್ಯಗಳನ್ನು ಮಾತ್ರ ನೀಡಲಾಗುತ್ತದೆ. ಇದಕ್ಕಾಗಿ ಕೇಂದ್ರಕ್ಕೆ 80 ಲಕ್ಷ ಟನ್ ಆಹಾರ ಧಾನ್ಯ ಅಗತ್ಯವಿದ್ದು ರೂ.26,000 ಕೋಟಿಗಳನ್ನು ವೆಚ್ಚಮಾಡಲಿದೆ ಎಂದು ತಿಳಿಸಲಾಗಿದೆ.

ಎಲ್ಲೆಡೆ ಸೋಂಕಿನ ಹಾವಳಿ ಹೆಚ್ಚಾಗಿದ್ದು, ಜನಸಾಮಾನ್ಯರು ಹೊರಗೆ ಬರುವುದೇ ಕಷ್ಟವಾಗಿದೆ. ಜೊತೆಗೆ ಈ ದುರ್ಬರ ಪರಿಸ್ಥಿತಿಯಲ್ಲಿ ದಿನಗೂಲಿ ಹಾಗೂ ಸಣ್ಣಪುಟ್ಟ ಕೆಲಸಗಳಿಂದ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದ ಜನರ ಸ್ಥಿತಿ ದಯನೀಯವಾಗಿದೆ. ಜನರಿಗೆ ತುರ್ತು ನೆರವು ನೀಡಲು ಕೇಂದ್ರ ಈ ಘೋಷಣೆ ಮಾಡಿದೆ. 5 ಆಹಾರ ಧಾನ್ಯಗಳನ್ನು ಸಾರ್ವಜನಿಕ ವಿತರಣಾ ವ್ಯವಸ್ಥೆ ಮೂಲಕ ಒದಗಿಸಲಾಗುವುದು ಎಂದು ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ ಕಾರ್ಯದರ್ಶಿ ಸುಧಾಂಶು ಪಾಂಡೆ ತಿಳಿಸಿದ್ದಾರೆ. ಸೋಂಕಿನ ಎರಡನೇ ಅಲೆ ಬಲವಾಗಿರುವುದರಿಂದ ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ ಯೋಜನೆಯನ್ನು ಮತ್ತೆ ಅರಂಭಿಸಬೇಕೆಂದು ಕೇರಳ, ರಾಜಸ್ಥಾನ, ಉತ್ತರಾಖಂಡ ಸರ್ಕಾರಗಳು ಕೇಂದ್ರದ ಮೇಲೆ ಒತ್ತಡ ಹೇರಿತು.

ಆಧಾರ: ವಿಜಯಕರ್ನಾಟಕ, ದಿನಾಂಕ:24.04.2021.

## 7. ದಾಖಲೆಯ 2760 ಜನ ಸಾವು

ಕೊರೋನಾ ಸೋಂಕು ಭಾರತದಲ್ಲಿ ಮತ್ತಷ್ಟು ತನ್ನ ಭೀಕರತೆಯನ್ನು ಪ್ರದರ್ಶಿಸಿದ್ದು ಶನಿವಾರ 3,48,831 ಜನರಲ್ಲಿ ಹೊಸದಾಗಿ ಪತ್ತೆಯಾಗಿದೆ. ಜೊತೆಗೆ ಸೋಂಕಿಗೆ ಮತ್ತೆ 2760 ಜನರು ಸಾವನ್ನಪ್ಪಿದ್ದಾರೆ. ದೇಶದಲ್ಲಿ ಸಾವಿನ ಸಂಖ್ಯೆ 2500 ಗಡಿ ದಾಟಿದ್ದು ಇದೇ ಮೊದಲು. ಇನ್ನು ಸಾವು ಸೋಂಕು ಎರಡೂ ಇದುವರೆಗಿನ ದಾಖಲೆಯಾಗಿದೆ. ಇದರೊಂದಿಗೆ ದೇಶದಲ್ಲಿ ಒಟ್ಟು ಸೋಂಕಿರತ ಸಂಖ್ಯೆ 1.66 ಕೋಟಿಗೆ ಮತ್ತು ಸಾವಿನ 1,89,680ಕ್ಕೆ ಏರಿದೆ. ಇನ್ನು ಸತತ 4ನೇ ದಿನವೂ 3 ಲಕ್ಷಕ್ಕಿಂತ ಹೆಚ್ಚು ಪ್ರಕರಣಗಳು ದಾಖಲಾಗುವುದರೊಂದಿಗೆ ಸಕ್ರಿಯ ಕೇಸುಗಳ ಸಂಖ್ಯೆ 25.52 ಲಕ್ಷ ತಲುಪಿದೆ. ಜೊತೆಗೆ ಚೇತರಿಕೆ ಪ್ರಮಾಣ ಶೇ.84.49%ಕ್ಕೆ ಕುಸಿದಿದೆ.

ಒಟ್ಟು ಸೋಂಕಿತರ ಪೈಕಿ 1.38 ಕೋಟಿ ಮಂದಿ ಗುಣಮುಖರಾಗಿದ್ದಾರೆ. ಇನ್ನು ವಿಶ್ವದೆಲ್ಲೆಡೆ ದಾಖಲಾದ ಒಟ್ಟು ಕೇಸಿನ ಪೈಕಿ ಭಾರತದ ಪಾಲು ಶೇ.39ರಷ್ಟಿದ್ದರೆ, ಸಾವಿನ ಪಾಲು ಶೇ.15 ರಷ್ಟಿತ್ತು.

**74% ಸೋಂಕು 10 ರಾಜ್ಯಗಳಲ್ಲಿ:** ಹೊಸ ಸೋಂಕಿತರ ಪೈಕಿ ಶೇ.74.15 ರಷ್ಟು ಪ್ರಕರಣಗಳು ಮಹಾರಾಷ್ಟ್ರ, ಉತ್ತರ ಪ್ರದೇಶ, ದೆಹಲಿ, ಮಧ್ಯಪ್ರದೇಶ, ಕರ್ನಾಟಕ, ಕೇರಳ, ಛತ್ತಿಸ್‌ಗಢ, ತಮಿಳುನಾಡು, ಗುಜರಾತ್ ಮತ್ತು ರಾಜಸ್ಥಾನ ಈ 10 ರಾಜ್ಯಗಳಲ್ಲಿ ಪತ್ತೆಯಾಗಿವೆ.

**ಆಮ್ಲಜನಕ ಕೊರತೆಗೆ ಮತ್ತು 26 ಜನರ ಬಲಿ:–** ಆಸ್ಪತ್ರೆಗಳಲ್ಲಿ ಆಮ್ಲಜನಕದ ತೀವ್ರ ಅಭಾವ ಮುಂದುವರೆದಿದ್ದು, ದೆಹಲಿಯಲ್ಲಿ 20 ಮಂದಿ ಹಾಗೂ ಪಂಜಾಬಿನ ಅಮೃತಸರದಲ್ಲಿ 6 ಮಂದಿ ಸಾವಿಗೀಡಾಗಿದ್ದಾರೆ. ನೈಋತ್ಯ ದೆಹಲಿಯ ರೋಹಿಣಿ ಪ್ರದೇಶದಲ್ಲಿರುವ ಜೈಪುರ್ ಗೋಲ್ಡನ್ ಆಸ್ಪತ್ರೆಯಲ್ಲಿ ಆಮ್ಲಜನಕ ಸಿಲಿಂಡರ್‌ಗಳು ಖಾಲಿಯಾಗಿದ್ದರಿಂದ ರೋಗಿಗಳು ಮೃತಪಟ್ಟಿದ್ದಾರೆ ಎಂದು ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಡಾ:ಕೆ.ಬಲುಜಾ ತಿಳಿಸಿದ್ದಾರೆ. ಈ ಆಸ್ಪತ್ರೆಯಲ್ಲಿ 200 ರೋಗಿಗಳು ಚಿಕಿತ್ಸೆ ನೀಡಲಾಗುತ್ತಿತ್ತು. ಅದೇ ರೀತಿ ಅಮೃತಸರದ ನೀಲಕಂಠ ಖಾಸಗಿ ಆಸ್ಪತ್ರೆಯಲ್ಲಿ ಆಮ್ಲಜನಕದ ಕೊರತೆಯಿಂದಾಗಿ 6 ಮಂದಿ ರೋಗಿಗಳು ಮೃತಪಟ್ಟಿದ್ದಾರೆ. ಅವರಲ್ಲಿ 5 ಮಂದಿ ಕೊರೋನಾ ಸೋಂಕಿತರಾಗಿದ್ದಾರೆ.

ಆಧಾರ: ಕನ್ನಡಪ್ರಭ, ದಿನಾಂಕ:25.04.2021

## 8. ಕೋವಿಡ್: ಕೇಂದ್ರದಿಂದ ಎಸ್‌ಡಿಆರ್‌ಎಫ್ ಮಂಜೂರು

ಕೇಂದ್ರ ಸರ್ಕಾರವು 2021–22ನೇ ಸಾಲಿನ ರಾಜ್ಯ ವಿಪತ್ತು ಪ್ರತಿಕ್ರಿಯೆ ನಿಧಿಯ (ಎಸ್‌ಡಿಆರ್‌ಎಫ್) ಮೊದಲ ಕಂತಿನ ಭಾಗವಾಗಿ ರೂ. 8,873.60 ಕೋಟಿ ಮಂಜೂರು ಮಾಡಿದೆ.

ಕೋವಿಡ್–19 ನಿವಾರಣೆ ಮತ್ತು ನಿರ್ವಹಣೆ ನಿಟ್ಟಿನಲ್ಲಿ ಆಸ್ಪತ್ರೆಗಳ ಸ್ಥಾಪನೆ ಆಮ್ಲಜನಕ ಉತ್ಪಾದನೆ, ವೆಂಟಿಲೇಟರ್, ಏರ್ ಪ್ಯೂರಿಫೈಯರ್, ಆಂಬುಲೆನ್ಸ್, ಸ್ಕ್ಯಾನರ್‌ಗಳು, ಪಿಪಿಇ ಕಿಟ್, ಪರೀಕ್ಷಾ ಕಿಟ್ ಖರೀದಿ, ಆಕ್ಸಿಜನ್ ಉತ್ಪಾದನೆ ಮತ್ತು ಶೇಖರಣಾ ಘಟಕಗಳ ಸ್ಥಾಪನೆ, ಕೋವಿಡ್–19 ಆರೈಕೆ ಕೇಂದ್ರ ಹಾಗೂ ಪರೀಕ್ಷಾ ಪ್ರಯೋಗಾಲಯ ಸ್ಥಾಪನೆಗಾಗಿ ಈ ಹಣದಲ್ಲಿ ಶೇ.50 ರಷ್ಟನ್ನು ಬಳಸಲು ಅನುಮತಿ ನೀಡಲಾಗಿದೆ.

ಕರ್ನಾಟಕ್ಕೆ ರೂ.316.40 ಕೋಟಿ ಒದಗಿಸಲಾಗಿದ್ದು, ಕೋವಿಡ್‌ನಿಂದ ತತ್ತರಿಸಿರುವ ಮಹಾರಾಷ್ಟ್ರಕ್ಕೆ ಅತಿ ಹೆಚ್ಚಿನ ಪ್ರಮಾಣದಲ್ಲಿ ರೂ. 1,288.80 ಕೋಟಿ ನೀಡಲಾಗಿದೆ.

ಸಾಮಾನ್ಯವಾಗಿ ಜೂನ್‌ನಲ್ಲಿ ಬಿಡುಗಡೆಯಾಗುತ್ತಿದ್ದ ಎಸ್‌ಡಿಆರ್‌ಎಫ್‌ನ ಮೊದಲ ಕಂತನ್ನು ಹಣಕಾಸು ಆಯೋಗದ ಶಿಫಾರಸ್ಸಿನ ಮೇರೆಗೆ ನಿಗದಿತ ಅವಧಿಗಿಂತ ಮೊದಲೇ ಬಿಡುಗಡೆ ಮಾಡುತ್ತಿರುವುದಾಗಿ ಕೇಂದ್ರ ಗೃಹ ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಆಯಾ ರಾಜ್ಯಗಳು ಸಾಮಾನ್ಯವಾಗಿ ಈ ಮೊತ್ತವನ್ನು ಬಳಸುವ ಕಾರ್ಯವಿಧಾನದಲ್ಲೂ ರಿಯಾಯಿತಿ ನೀಡಲಾಗಿದೆ. ಕಳೆದ ವರ್ಷ ಒದಗಿಸಲಾದ ಮೊತ್ತವನ್ನು ಬಳಸಿರುವ ಪ್ರಮಾಣ ಪತ್ರ ಸಲ್ಲಿಸುವವರೆಗೆ ಕಾಯದೆ ಈ ನಿಧಿಯನ್ನು ಬಿಡುಗಡೆ ಮಾಡಲು ನಿರ್ಧರಿಸಲಾಗಿದೆ.

ಆಧಾರ: ಪ್ರಜಾವಾಣಿ, ದಿನಾಂಕ:02.05.2021

## 9. 3 ರಾಜ್ಯಕ್ಕೆ 1000 ಕೋಟಿ

ಯಾಸ್ ಚಂಡಮಾರುತದಿಂದ ಹಾನಿಗೆ ಒಳಗಾದ ಒಡಿಶಾ ಮತ್ತು ಪಶ್ಚಿಮ ಬಂಗಾಳದಲ್ಲಿ ಪ್ರಧಾನಿ ನರೇಂದ್ರ ಮೋದಿ ವೈಮಾನಿಕ ಸಮೀಕ್ಷೆ ನಡೆಸಿದರು. ಬಳಿಕ ಎರಡೂ ರಾಜ್ಯಗಳಲ್ಲಿ ಸಿಎಂ ಮತ್ತು ಅಧಿಕಾರಿಗಳ ಜೊತೆಗೆ ಪ್ರತ್ಯೇಕ ಸಭೆ ನಡೆಸಿ, ಒಟ್ಟು ರೂ. 1000 ಕೋಟಿ ಪರಿಹಾರ ಘೋಷಿಸಿದರು. ಈ ಪೈಕಿ ಹೆಚ್ಚಿನ ಹಾನಿಗೆ ತುತ್ತಾದ ಒಡಿಶಾಕ್ಕೆ ರೂ. 500 ಕೋಟಿ ಪಶ್ಚಿಮ ಬಂಗಾಳ ಮತ್ತು ಜಾರ್ಖಂಡ್‌ಗೆ ಒಟ್ಟು ರೂ. 500 ಕೋಟಿ ತುರ್ತು ನೆರವು ಪ್ರಕಟಿಸಿದರು.

ಕೇಂದ್ರ ಸರ್ಕಾರ ಚಂಡಮಾರುತದಿಂದ ಮೃತಪಟ್ಟವರ ಕುಟುಂಬ ಸದಸ್ಯರಿಗೆ ರೂ. 2 ಲಕ್ಷ ಹಾಗೂ ಗಾಯಗೊಂಡವರಿಗೆ 50 ಸಾವಿರ ಪರಿಹಾರ ಘೋಷಿಸಿದೆ.

**ನೆರವಿನ ಅಗತ್ಯವಿಲ್ಲ ಪಟ್ನಾಯಕ್**: ಯಾಸ್ ಚಂಡಮಾರುತದಿಂದ ಉಂಟಾದ ಹಾನಿಗೆ ಕೇಂದ್ರ ಸರ್ಕಾರದಿಂದ ತಕ್ಷಣಕ್ಕೆ ಹಣಕಾಸಿನ ನೆರವಿಗೆ ಬೇಡಿಕೆ ಇಡುವುದಿಲ್ಲ. ರಾಜ್ಯದ ಸಂಪನ್ಮೂಲದಲ್ಲಿಯೇ ಪರಿಹಾರ ಕಾರ್ಯಗಳನ್ನು ಕೈಗೊಳ್ಳಲಾಗುವುದು ಎಂದು ಒಡಿಶಾ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಪ್ರಕಟಿಸಿದ್ದಾರೆ.

ಆಧಾರ: ಕನ್ನಡ ಪ್ರಭ ದಿನಾಂಕ:29.05.2021

## 10.ದೇಶಕ್ಕೆ ಈಗ ಡೆಲ್ಟಾ ಪ್ಲಸ್ ತಳಿ ತಲೆಬಿಸಿ

ಭಾರತದಲ್ಲಿ 2ನೇ ಅಲೆ ತೀವ್ರಗೊಳ್ಳಲು ಕಾರಣವಾಯಿತು ಎನ್ನಲಾದ ಡೆಲ್ಟಾ ಮಾದರಿಯ ಕೊರೋನಾ ಮತ್ತಷ್ಟು ರೂಪಾಂತರಗೊಂಡಿದ್ದು, ಡೆಲ್ಟಾ ಪ್ಲಸ್ ಅಥವಾ ಎ.ವೈ–1 ಎಂದು ಹೆಸರಿಸಲಾಗಿರುವ ತಳಿ ಪತ್ತೆಯಾಗಿದೆ. ಈ ಮಾದರಿಯ ವೈರಸ್ ಅಷ್ಟಾಗಿ ಕಂಡು ಬರದ ಕಾರಣ ತಕ್ಷಣಕ್ಕೆ ಆತಂಕ ಅಗತ್ಯವಿಲ್ಲ ಎಂದು ತಜ್ಞರು ತಿಳಿಸಿದ್ದಾರೆ.

ಆಧಾರ: ಕನ್ನಡ ಪ್ರಭ, ದಿನಾಂಕ:15.06.2021

## 11. ಭಾರತದ ಲಸಿಕೆ ಸಂಪೂರ್ಣ ಸುರಕ್ಷಿತ

ದೇಶದಲ್ಲಿ ಕೊರೋನಾ ನಿರೋಧಕ ಲಸಿಕೆ ಪಡೆದವರ ಪೈಕಿ ಅತ್ಯಲ್ಪ ಪ್ರಮಾಣದ ಜನರಲ್ಲಿ ಅಡ್ಡಪರಿಣಾಮಗಳು ಕಂಡುಬಂದಿದ್ದು, ದೇಸಿ ಲಸಿಕೆಗಳು ಸಂಪೂರ್ಣ ಸುರಕ್ಷಿತ ಎನ್ನುವುದು ಸಾಬೀತಾಗಿದೆ.

ಕೇಂದ್ರ ಆರೋಗ್ಯ ಸಚಿವಾಲಯದ ಅಂಕಿ–ಅಂಶಗಳ ಪ್ರಕಾರ, ಜನವರಿ 16 ರಿಂದ ಜೂನ್ 7 ರವರೆಗೆ ದೇಶದಲ್ಲಿ 25.05 ಕೋಟಿ ಡೋಸ್ ಕೊರೋನಾ ನಿರೋಧಕ ಲಸಿಕೆ ನೀಡಲಾಗಿದೆ. ಆ ಪೈಕಿ 26,200 ಜನರಲ್ಲಿ ಅಡ್ಡಪರಿಣಾಮ ಕಾಣಿಸಿಕೊಂಡಿದ್ದು (ಶೇ.0.01) ಲಸಿಕೆ ನಂತರದ ಅಡ್ಡಪರಿಣಾಮಗಳಿಂದ 488 ಮಂದಿ (ಶೇ.0.000020) ಮೃತಪಟ್ಟಿದ್ದಾರೆ. ಈ ಪ್ರಮಾಣ ನಗಣ್ಯ ಎನ್ನುವುದು ತಜ್ಞರ ಅಭಿಪ್ರಾಯವಾಗಿದೆ.

ಲಸಿಕೆ ಅಡ್ಡಪರಿಣಾಮಗಳಿಂದ ಮೃತಪಟ್ಟವರಲ್ಲಿ ಜಮ್ಮು–ಕಾಶ್ಮೀರದ ಕಠೂವಾದಲ್ಲಿನ 27 ವರ್ಷದ ಯುವಕ ಅತ್ಯಂತ ಕಿರಿಯನಾಗಿದ್ದರೆ, ಕರ್ನಾಟಕದ ಕೋಲಾರದ 97 ವರ್ಷದ ವೃದ್ಧ ಅತ್ಯಂತ ಹಿರಿಯರಾಗಿದ್ದಾರೆ. ಮೃತರಲ್ಲಿ 301 ಪುರುಷರು ಹಾಗೂ 178 ಮಹಿಳೆಯರಿದ್ದಾರೆ. ಲಸಿಕೆ ಪಡೆದ ಬಳಿಕ ನೋವು, ವಾಂತಿ, ಜ್ವರ ಸಾಮಾನ್ಯವಾಗಿದೆ. ಅಡ್ಡಪರಿಣಾಮದ ಅತ್ಯಂತ ಗಂಭೀರ ಪ್ರಕರಣಗಳಲ್ಲಿ ರಕ್ತವಾಂತಿ, ಏಕಾಏಕಿ ಪ್ರಜ್ಞೆತಪ್ಪುವುದು, ಎದೆ ನೋವು, ಉಸಿರಾಟದ ತೊಂದರೆಗಳು ಕಾಣಿಸಿಕೊಂಡಿವೆ.

ವರದಿಯಾಗಿರುವ ಅಡ್ಡಪರಿಣಾಮಗಳ ಪ್ರಮಾಣ ಅತ್ಯಲ್ಪವಾದದ್ದು. ಭಾರತದಲ್ಲಿ ಅಭಿವೃದ್ಧಿ ಪಡಿಸಲಾದ ಕೊರೋನಾ ನಿರೋಧಕ ಲಸಿಕೆಗಳು ಸಂಪೂರ್ಣ ಸುರಕ್ಷಿತ ಎನ್ನುವುದು ಇದರಿಂದ ಸಾಬೀತಾಗಿದೆ.

ಆಧಾರ: ವಿಜಯ ಕರ್ನಾಟಕ, ದಿನಾಂಕ:15.06.2021

## 12. Large study finds Novavax about 90% effective

Vaccine maker Novavax said its shot was highly effective against Covid-19 and also protected against variants in a large, late-stage study in the US and Mexico. The vaccine was about 90% effective overall and preliminary data showed it was safe, the company said. While demand for Covid-19 shots in the US has dropped off dramatically, the need for more vaccines around the world remains critical.

The Novavax vaccine, which is easy to store and transport, is expected to play an important role in boosting vaccine supplies in the developing world.

That held is still months away, however. The company says it plans to seek authorization for the shots in the US, Europe and elsewhere by the end of September and be able to produce up to 100 million doses a month by then. Many of our first doses will go to low and middle income countries and that was the goal, to begin with. Novavax Chief Executive Stanley Erck told the AP.

While more than half of the US population has had at least one vaccine does, less than 1% of the people in the developing world have had one shot, according to Our World In Data.

Novavax's study involved nearly 30,000 people ages 18 and up in the US and Mexico. Two-thirds received two doses of the vaccine, three weeks apart and the rest got dummy shots.

There were 77 cases of Covid-19-14 in the group that got the vaccine and the rest were in volunteers who received dummy shots. None in the vaccine group had moderate or serve disease, compared to 14 in the placebo group.

**COVID-19 Tracker**

| COUNTRIES | INFECTED | ACTIVE | DEATHS |
|---|---|---|---|
| United States | 3,34,64,566 | 53,06,053 | 5,99,813 |
| India | 2,95,69,857 | 9,09,470 | 3,77,025 |
| Brazil | 1,74,12,766 | 11,31,972 | 4,87,401 |
| France | 58,02,314 | 1,34,770 | 1,10,553 |
| Turkey | 53,30,447 | 79,475 | 48,721 |
| Russia | 51,62,049 | 2,85,960 | 1,24,681 |
| United Kingdom | 45,89,385 | 1,50,039 | 1,28,171 |
| Italy | 42,44,872 | 1,57,790 | 1,27,002 |
| Spain | 37,33,600 | 1,43,369 | 80,501 |
| Germany | 37,23,311 | 52,494 | 89,864 |

Courtesy: Deccan Herald, Date:15.06.2021

## 13. 2.6 ಕೋಟಿ ಹೆಕ್ಟೇರ್ ಬಂಜರು ಭೂಮಿ ಅಭಿವೃದ್ಧಿ ಗುರಿ: ಮೋದಿ

2030ರ ಒಳಗಾಗಿ ಫಲವತ್ತತೆ ಕಳೆದುಕೊಂಡಿರುವ 2.6 ಕೋಟಿ ಹೆಕ್ಟೇರ್ ಬಂಜರು ಪ್ರದೇಶವನ್ನು ಪುನಃ ಫಲವತ್ತತೆಯ ಭೂಮಿಯನ್ನಾಗಿ ಪರಿವರ್ತಿಸುವ ನಿಟ್ಟಿನಲ್ಲಿ ಭಾರತ ಕಾರ್ಯನಿರ್ವಹಿಸಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದ್ದಾರೆ. ಜೊತೆಗೆ ಕಳೆದ 10 ವರ್ಷಗಳಲ್ಲಿ 30 ಲಕ್ಷ ಹೆಕ್ಟೇರ್ ಅರಣ್ಯ ಪ್ರದೇಶವನ್ನು ವೃದ್ಧಿಸಲಾಗಿದೆ ಎಂದರು.

ಮರುಭೂಮಿ, ಭೂಮಿಯ ಉತ್ಕೃಷ್ಟತೆ ವಿನಾಶ ಮತ್ತು ಬರದ ಕುರಿತಾಗಿ ವಿಶ್ವ ಸಂಸ್ಥೆಯ ಉನ್ನತ ಹಂತದ ಸಭೆಯನ್ನುದ್ದೇಶಿಸಿ ಮಾತನಾಡಿದ ಮೋದಿ ಅವರು ಅಭಿವೃದ್ಧಿಪಥದಲ್ಲಿರುವ ರಾಷ್ಟ್ರಗಳಿಗೆ ಭೂಮಿಯ ಫಲವತ್ತತೆ ಪುನಃಸ್ಥಾಪಿಸಲು ನೆರವು ನೀಡಲಾಗುತ್ತದೆ ಎಂದರು.

ವಿಶ್ವದಲ್ಲಿ ಇಂದು ಒಟ್ಟಾರೆ 3ನೇ ಎರಡರಷ್ಟು ಭೂಮಿ ಫಲವತ್ತತೆ ಕುಂದಿದೆ. ಭೂಮಿಯ ಸವಕಳಿ ನಿಯಂತ್ರಿಸದಿದ್ದಲ್ಲಿ ನಮ್ಮ ಸಮಾಜಗಳು, ಆರ್ಥಿಕತೆ, ಆಹಾರ ಭದ್ರತೆ, ಆರೋಗ್ಯ, ಸುರಕ್ಷತೆ ಮತ್ತು ಜೀವನದ ಉತ್ಕೃಷ್ಟತೆಯನ್ನು ನಾಶಪಡಿಸಲಿದೆ. ಭೂಮಿ ಮತ್ತು ಅದರ ಸಂಪನ್ಮೂಲಗಳ ಮೇಲಿನ ಒತ್ತಡ ಮತ್ತು ಅವಲಂಬನೆ ತಗ್ಗಿಸಬೇಕು. ನಾವೆಲ್ಲಾ ಒಂದಾದರೆ ಭೂಮಿಯ ಉತ್ಕೃಷ್ಟತೆಯನ್ನು ಕಾಪಾಡಬಹುದು ಎಂದು ಅವರು ಪ್ರತಿಪಾದಿಸಿದರು.

ಆಧಾರ: ಕನ್ನಡಪ್ರಭ, ದಿನಾಂಕ:15.06.2021

## 14. ದೇಶದ ಮೊದಲ ಮಕ್ಕಳ ಲಸಿಕೆಗೆ ಇನ್ನೊಂದು ವಾರದಲ್ಲಿ ಅನುಮತಿ

3ನೇ ಅಲೆಯಿಂದ ಮಕ್ಕಳನ್ನು ಕಾಪಾಡಲು ಕೇಂದ್ರ ಸರ್ಕಾರ ನಾನಾ ರೀತಿಯ ಕ್ರಮಗಳನ್ನು ಕೈಗೊಳ್ಳುತ್ತಿರುವ ಹೊತ್ತಿನಲ್ಲೇ ಮಕ್ಕಳಿಗೆ ನೀಡಬಹುದಾದಂಥ ದೇಶದ ಮೊದಲ ಕೋವಿಡ್ ಲಸಿಕೆಗೆ

ಇನ್ನೊಂದು ವಾರದಲ್ಲಿ ತುರ್ತು ಬಳಕೆಗೆ ಅನುಮೋದನೆ ಸಿಗುವ ಸಾಧ್ಯತೆ ಇದೆ. ಅಹಮದಾಬಾದ್ ಮೂಲದ ದೇಶಿಯ ಕಂಪನಿ ಝೈಡಸ್ ಕ್ಯಾಡಿಲಾ ಈಗಾಗಲೇ ಝೈಕೋವಿಡ್–ಡಿ ಎಂಬ ಲಸಿಕೆ ಅಭಿವೃದ್ಧಿಪಡಿಸಿದ್ದು, ಅದನ್ನು ಹಿರಿಯರು ಮತ್ತು ಮಕ್ಕಳ (12–18 ವಯೋಮಾನ) ಮೇಲೆ ಯಶಸ್ವಿಯಾಗಿ ಪ್ರಯೋಗಿಸಿದೆ. ಇದು ಎಷ್ಟು ಪರಿಣಾಮಕಾರಿ ಎಂಬುದು ಇನ್ನೂ ಬಹಿರಂಗವಾಗಿಲ್ಲ. ಈ ಅಂಕಿ ಸಂಖ್ಯೆಗಳ ಆಧಾರದಲ್ಲೇ ಝೈಡಸ್ ಕ್ಯಾಡಿಲಾ ಕಂಪನಿ ತನ್ನ ಮೂರನೇ ಹಂತದ ಪರೀಕ್ಷೆಯ ಮಧ್ಯಂತರ ವರದಿಯನ್ನು ಆಧರಿಸಿ, ತುರ್ತು ಬಳಕೆಗೆ ಅನುಮತಿ ಕೋರಿ ಭಾರತೀಯ ಔಷಧ ನಿಯಂತ್ರಣ ಸಂಸ್ಥೆ (ಡಿಜಿಸಿಐ)ಗೆ ಅರ್ಜಿ ಸಲ್ಲಿಸಿದೆ. ಅದು ಈಗಾಗಲೇ ದತ್ತಾಂಶಗಳ ಪರಿಶೀಲನೆ ಆರಂಭಿಸಿದ್ದು, ಇನ್ನು 8–10 ದಿನಗಳಲ್ಲಿ ಅನುಮೋದನೆ ನೀಡುವ ಸಾಧ್ಯತೆ ಇದೆ.

**ಇದು 3 ಡೋಸ್‌ನ ಲಸಿಕೆ:** ಕೋವಿಶೀಲ್ಡ್, ಕೋವ್ಯಾಕ್ಸಿನ್ ಮತ್ತು ಸ್ಪುಟ್ನಿಕ್ 2 ಡೋಸ್‌ನ ಲಸಿಕೆಗಳಾಗಿವೆ. ಅದರ ಝೈಕೊವೀಡ್–ಡಿ 3 ಡೋಸ್‌ನದ್ದಾಗಿದೆ. ಮೊದಲ ಡೋಸ್ ಪಡೆದ 28 ದಿನೇ 2ನೇ ಡೋಸ್ ಮತ್ತು ಮೊದಲ ಡೋಸ್ ಪಡೆದ 56ನೇ ದಿನ 3ನೇ ಡೋಸ್ ಪಡೆದುಕೊಳ್ಳಬೇಕು.

ಆಧಾರ: ಕನ್ನಡಪ್ರಭ, ದಿನಾಂಕ:21.06.2021

## 15. House panel for study on malnutrition

A parliamentary panel asked the Ministry of Women and Child Development to conduct a survey on the impact of the pandemic on anganwadi services and malnutrition levels among children.

The Parliamentary Standing Committee on Education, Women, Children, Youth and Sports chaired by Rajya Sabha MP Vinay Sahasrabuddhe is learnt to have grilled the officials of the Ministry on the need for data to understand how anganwadi services were delivered on the ground during the pandemic and to assess the impact of COVID-19 on stunting and wasting levels, according to a member.

While the government has launched an app called Poshan Tracker to monitor delivery of services at 14 lakh anganwadis, the officials told the panel that the data is beginning to be uploaded only from June 1.

The Ministry has not been able to satisfy the committee. It said they have collected feedback from States, but there is no sanction for a survey, another member told the Hindu.

The Ministry also made a presentation on children orphaned during COVID-19 and apprised the panel of various measures being taken to help measures being taken to help them, including funds for family and institutional care, revising norms for Child Care Institutions as well as maintaining monthly reports on foster care for such children.

The panel is learnt to have expressed its disbelief on the NCPCR submission before the Supreme Court that there were 3,500 children orphaned during the pandemic. This number is not justified when we know that lakhs of people have died due to COVID-19. The figure is too low.

Though the government has announced a corpus of Rs. 10 lakhs from PM CARES for such children, there has been no spending from PM CARES yet, and the responses from the Ministry were very ambiguous the member said.

Courtesy: The Hindu, Date: 23.06.2021

## 16. ದೇಶದಲ್ಲಿ 22 ಡೆಲ್ಟಾ ಪ್ಲಸ್ ಪ್ರಕರಣ ಪತ್ತೆ

ಎರಡನೇ ಅಲೆಯು ತಗ್ಗುತ್ತಿದ್ದಂತೆ ಕೊರೋನಾ ಸೋಂಕಿನ ಡೆಲ್ಟಾ ಪ್ಲಸ್ ರೂಪಾಂತರಿಯು ಈಗ ದೇಶವನ್ನು ಆತಂಕಕ್ಕೆ ನೂಕಿದೆ. ಈವರೆಗೆ ದೇಶದಲ್ಲಿ ಡೆಲ್ಟಾ ಪ್ಲಸ್‌ನ 22 ಪ್ರಕರಣಗಳು ಪತ್ತೆಯಾಗಿದ್ದು, ಈ ಪೈಕಿ 16 ಕೇಸುಗಳು ಮಹಾರಾಷ್ಟ್ರದಲ್ಲಿ ಹಾಗೂ ಉಳಿದವುಗಳು ಮಧ್ಯಪ್ರದೇಶ ಮತ್ತು ಕೇರಳದಲ್ಲಿ ಪತ್ತೆಯಾಗಿವೆ ಎಂದು ಕೇಂದ್ರ ಸರ್ಕಾರ ಮಾಹಿತಿ ನೀಡಿದೆ.

ಭಾರತ ಸೇರಿ 9 ದೇಶಗಳಲ್ಲಿ ಡೆಲ್ಟಾ ಪ್ಲಸ್ ರೂಪಾಂತರಿ ಕಂಡುಬಂದಿದೆ. ಅಮೆರಿಕ, ಯುಕೆ, ಪೋರ್ಚುಗಲ್, ಸ್ವಿಜರ್‌ಲ್ಯಾಂಡ್, ಜಪಾನ್, ನೇಪಾಳ, ಚೀನಾ, ರಷ್ಯಾದಲ್ಲೂ ಡೆಲ್ಟಾ ಪ್ಲಸ್ ಕಾಡ್ಗಿಚ್ಚಿನಂತೆ ಹರಡುತ್ತಿದೆ. ಸದ್ಯಕ್ಕೆ ಇದನ್ನು ಅಪಾಯಕಾರಿ ರೂಪಾಂತರಿ ಎಂದು ವರ್ಗೀಕರಿಸಿಲ್ಲ ಎಂದು ಕೇಂದ್ರ ಆರೋಗ್ಯ ಕಾರ್ಯದರ್ಶಿ ರಾಜೇಶ್ ಭೂಷಣ್ ಸ್ಪಷ್ಟಪಡಿಸಿದ್ದಾರೆ.

**ರಾಜ್ಯದಲ್ಲಿ ಪತ್ತೆಯಾಗಿಲ್ಲ:** ಬೆಂಗಳೂರು ರಾಜ್ಯದಲ್ಲಿ ಡೆಲ್ಟಾ ಪ್ಲಸ್ ಪ್ರಕರಣ ಪತ್ತೆಯಾಗಿಲ್ಲ. ಮೈಸೂರಿನಲ್ಲಿ ಪತ್ತೆಯಾಗಿದೆ ಎಂಬ ವದಂತಿ ಹಬ್ಬಿದ ಹಿನ್ನೆಲೆಯಲ್ಲಿ ಸರ್ಕಾರ ಈ ಸ್ಪಷ್ಟನೆ ನೀಡಿದೆ. ಮೈಸೂರಿನಿಂದ ಬೆಂಗಳೂರಿನ ನಿಮ್ಹಾನ್ಸ್‌ಗೆ 40 ಸ್ಯಾಂಪಲ್ ಕಳುಹಿಸಲಾಗಿದೆ. ಅದರಲ್ಲಿ ಡೆಲ್ಟಾ ಪ್ಲಸ್‌ನ ಪ್ರಕರಣ ಕಂಡುಬಂದಿಲ್ಲ ಎಂದು ಡಿ.ಸಿ. ಡಾ:ಬಗಾದಿ ಗೌತಮ್ ತಿಳಿಸಿದ್ದಾರೆ. ಬೆಂಗಳೂರು ಸೇರಿ ರಾಜ್ಯದಲ್ಲಿ ಎಲ್ಲೂ ಹೊಸ ರೂಪಾಂತರಿ ಪತ್ತೆ ಆಗಿಲ್ಲ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಮಾಹಿತಿ ನೀಡಿದ್ದಾರೆ.

ಆಧಾರ: ಉದಯವಾಣಿ, ದಿನಾಂಕ:23.06.2021

## 17. Speaker or Lokpal to allow MP's prosecution : LS seeks legal view

In what may change the established system of sanctioning prosecution of caused parliamentarians the Lok Sabha has sought legal opinion on who the Speaker or Lokpal should be the competent authority to green-signal charge sheeting of MP's in a corruption case.

Approached by TOI, Lok Sabha Speaker Om Birla confirmed the development, adding that the issue is tricky. The subject of sanction for prosecution" hit the headlines recently over pending CBI pleas of charge sheeting Bengal in the Narada-Sarada cases. While three of them belong to the Trinomial, one is a former TMC MP- Suvendu Adhikari who is now BJP's leader of opposition in West Bengal

The CBI had earlier sent reminders on its pending requests. As per the norm set tied by the Supreme Court, the Speaker is treated as the appointing authority whose nod is must for an investigating agency to prosecute an MP. The chairman of Rajya Sabha occupies the same position in the Upper House. The jurisdiction pertains to corruption cases which fall under the ambit of Prevention of Corruption Act where sanction for prosecution from the appointing authority is considered a must for public servants.

However, the situation appears to have changed in the minds of parliamentary authorities following the appointment of the anti-corruption Ombudsman, Lokpal.

Birla told TOI that the issue is contentious and keeps surfacing at regular intervals. We have already taken legal opinion from two prominent luminaries. However, both had varied views, due to which the matter has been referred to experts, Birla said.

Lok Sabha sources said the authorities were exercising utmost caution since the decision will have far-reaching consequences. It may take time a source said.

Former Lok Sabha Secretary General PDT Achary said the issue was settled by the SC that the Speaker would be the appointing authority for Lok Sabha MP's and such sanction was only necessary in corruption cases. He said the Lokpal Act did not change the situation. In March 2019, after years of vacancy over procedural issues, former SC judge Justice Pinaki Chandra Ghose was appointed the country's first Lokpal.

Courtesy: Times of India, Date: 26.06.2021

## 18. ಹುಟ್ಟೂರಿಗೆ ಭೇಟಿ, ಭಾವಪರವಶರಾದ ರಾಷ್ಟ್ರಪತಿ

ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರು ತಮ್ಮ ಹುಟ್ಟೂರಾದ ಉತ್ತರಪ್ರದೇಶದ ಕಾನ್ಪುರ ದೇಹತ್ ಜಿಲ್ಲೆಯ ಪರೌಂಖ್ ಗ್ರಾಮಕ್ಕೆ ಭೇಟಿ ನೀಡಿ ಭಾವಪೂರ್ಣ ಕ್ಷಣಗಳನ್ನು ಕಳೆದರು. ಗ್ರಾಮ ಸಮೀಪದ ಹೆಲಿಪ್ಯಾಡ್‌ಗೆ ಬಂದಿಳಿದ ತಕ್ಷಣ ಅವರು, ಜನ್ಮ ನೀಡಿದ ಮಾತೃಭೂಮಿಗೆ ಬಗ್ಗಿ ನಮಸ್ಕರಿಸಿ, ಭಾವಪರವಶಗೊಂಡರು.

ಮೂರು ದಿನಗಳ ರಾಜ್ಯ ಪ್ರವಾಸ ಆರಂಭಿಸಿರುವ ರಾಷ್ಟ್ರಪತಿ ಕೋವಿಂದ್, ಮೊದಲ ಭೇಟಿ ನೀಡಿದ್ದು ತಮ್ಮ ಹುಟ್ಟೂರಿಗೆ, ಅಲ್ಲಿನ ಪತ್ರಿಮಾತಾ ದೇವಸ್ಥಾನಕ್ಕೆ ತೆರಳಿ ದರ್ಶನ ಪಡೆದರು. ಬಳಿಕ ಗ್ರಾಮಸ್ಥರನ್ನು ಉದ್ದೇಶಿಸಿ ಮಾತನಾಡಿದ ಅವರು ತಮ್ಮ ಹಳೆ ದಿನಗಳ ಮೆಲುಕು ಹಾಕಿದರು. ಈ ಹಳ್ಳಿಯಲ್ಲಿ ಹುಟ್ಟಿದ ನಾನು ದೇಶದ ಮನ್ನಣೆಗೆ ಪಾತ್ರನಾದದ್ದು ಒಂದು ಪವಾಡ. ನನ್ನಂಥ ಸಾಮಾನ್ಯ ಹಳ್ಳಿ ಹುಡುಗ ಇಷ್ಟೊಂದು ದೊಡ್ಡ ಸ್ಥಾನಕ್ಕೆ ಏರುವುದೆಂದರೆ ಸಾಮಾನ್ಯ ಸಂಗತಿಯಲ್ಲ. ಅಂದು ನಾನು ಕನಸಿನಲ್ಲೂ ಇದನ್ನು ಕಂಡಿರಲಿಲ್ಲ. ಆದರೆ ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆ ಇದನ್ನು ಸಾಧ್ಯವಾಗಿಸಿದೆ. ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ, ಸಂವಿಧಾನದ ಕರಡು ರೂಪಿಸಿದ ಆ ಮಹಾನೀಯರಿಗೆ ನಾನು ಋಣಿಯಾಗಿದ್ದೇನೆ. ಅವರ ಅಂದಿನ ತ್ಯಾಗದ ಫಲವಾಗಿ ನಾನಿಂದು ಈ ಸ್ಥಾನದಲ್ಲಿದ್ದೇನೆ ಎಂದು ಸ್ಮರಿಸಿದರು.

ಆಧಾರ:ವಿಜಯ ಕರ್ನಾಟಕ, ದಿನಾಂಕ:28.06.2021

## 19. ಜುಲೈ 19 ರಿಂದ ಸಂಸತ್ತಿನ ಮುಂಗಾರು ಅಧಿವೇಶನ

ಸಂಸತ್ತಿನ ಮುಂಗಾರು ಅಧಿವೇಶನ ಜುಲೈ 19ರಂದು ಆರಂಭವಾಗುವ ಸಾಧ್ಯತೆ ಇದ್ದು, ಆಗಸ್ಟ್ 13ಕ್ಕೆ ಅಂತ್ಯಗೊಳ್ಳಲಿದೆ ಎಂದು ಮೂಲಗಳು ತಿಳಿಸಿವೆ. ಸುಮಾರು ಒಂದು ತಿಂಗಳ ಕಾಲ ನಡೆಯಲಿರುವ ಅಧಿವೇಶನದಲ್ಲಿ 20 ದಿನಗಳ ಕಾಲ ಕಲಾಪ ನಡೆಯಲಿದೆ. ಸಾಮಾನ್ಯವಾಗಿ ಮುಂಗಾರು ಅಧಿವೇಶನ ಜುಲೈ ಮೂರನೇ ವಾರದಲ್ಲಿ ಆರಂಭವಾಗಿ ಸ್ವಾತಂತ್ರ್ಯ ದಿನಾಚರಣೆಗೆ ಮುನ್ನ ಕೊನೆಗೊಳ್ಳುವುದು ವಾಡಿಕೆ, ಆದರೆ, ಈ ಬಾರಿ ಸಂಸದೀಯ ವ್ಯವಹಾರಗಳ ಸಂಪುಟ ಸಮಿತಿಯ ಶಿಫಾರಸ್ಸಿನ ಮೇಲೆ ಅಧಿವೇಶನ ಅವಧಿಯನ್ನು ನಿಗದಿಪಡಿಸಲಾಗಿದೆ. ಅಧಿವೇಶನದ ಅವಧಿಯಲ್ಲಿ ಸಂಸತ್ ಭವನದ ಆವರಣ ಪ್ರವೇಶಿಸುವವರು ಕೋವಿಡ್ ಲಸಿಕೆಯ ಕನಿಷ್ಠ ಒಂದು ಡೋಸ್ ತೆಗೆದುಕೊಂಡಿರಬೇಕು.

ಆಧಾರ:ವಿಶ್ವವಾಣಿ, ದಿನಾಂಕ:30.06.2021

# ಭಾಗ–3

# ರಾಜ್ಯ ಸರ್ಕಾರದ ಸುದ್ದಿಗಳು

## 1. ಕೋವಿಡ್: 6–9 ತರಗತಿ ಬಂದ್

ಕೋವಿಡ್ ಹರಡುವುದನ್ನು ತಡೆಯಲು ಮುಂದಾಗಿರುವ ರಾಜ್ಯ ಸರ್ಕಾರ, 'ವಿದ್ಯಾಗಮ' ಸೇರಿದಂತೆ 6 ರಿಂದ 9 ರವರೆಗಿನ ಭೌತಿಕ ತರಗತಿಗಳನ್ನು ಸ್ಥಗಿತಗೊಳಿಸುವ ಕ್ರಮವೂ ಸೇರಿದಂತೆ ಮತ್ತಷ್ಟು ನಿರ್ಬಂಧಗಳನ್ನು ವಿಧಿಸಿ ಪರಿಷ್ಕೃತ ಮಾರ್ಗಸೂಚಿ ಪ್ರಕಟಿಸಿದೆ. ತಕ್ಷಣದಿಂದ ಜಾರಿಗೆ ಬರುವಂತೆ ಎಲ್ಲ ಜಿಮ್‌ಗಳು, ಈಜುಕೊಳಗಳನ್ನು ಸಂಪೂರ್ಣ ಮುಚ್ಚಲಾಗುವುದು. ರ್‍ಯಾಲಿ, ಮುಷ್ಕರಗಳನ್ನು ನಿಷೇಧಿಸಲಾಗಿದೆ ಎಂದು ಮಾರ್ಗಸೂಚಿ ಹೇಳಿದೆ.

ಬಿಬಿಎಂಪಿ, ಬೆಂಗಳೂರು ನಗರ ಮತ್ತು ಗ್ರಾಮಾಂತರ, ಮೈಸೂರು, ಕಲಬುರ್ಗಿ, ದಕ್ಷಿಣಕನ್ನಡ, ಉಡುಪಿ, ಬೀದರ್ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಸಿನಿಮಾ ಹಾಲ್‌ಗಳಲ್ಲಿ ಶೇ.50ರಷ್ಟು ಪ್ರೇಕ್ಷಕರಿಗೆ ಮಾತ್ರ ಅವಕಾಶ ಕಲ್ಪಿಸಬೇಕು ಎಂದು ತಿಳಿಸಿದೆ.

ಹೊಸ ಮಾರ್ಗಸೂಚಿಗಳನ್ನು ಉಲ್ಲಂಘಿಸಿದರೆ ವಿಪತ್ತು ನಿರ್ವಹಣಾ ಕಾಯ್ದೆ 2005 ಮತ್ತು ಕರ್ನಾಟಕ ಸಾಂಕ್ರಾಮಿಕ ರೋಗಗಳ ಕಾಯ್ದೆ 2020ರ ಅಡಿ ಕ್ರಮ ಜರುಗಿಸಲಾಗುವುದು. ನಿರ್ಬಂಧಗಳು ಇದೆ 20 ರವರೆಗೆ ಚಾಲ್ತಿಯಲ್ಲಿರುತ್ತದೆ ಎಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್ ಆದೇಶದಲ್ಲಿ ತಿಳಿಸಿದ್ದಾರೆ.

ಕಳೆದ ಒಂದು ತಿಂಗಳ ಅವಧಿಯಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಏರಿಕೆಯಾಗುತ್ತಿದೆ. ಸಾಮಾಜಿಕ, ಧಾರ್ಮಿಕ ಮತ್ತು ಸಾರ್ವಜನಿಕ ಸಭೆ, ಸಮಾರಂಭಗಳಾದ ಮದುವೆ, ರಾಜಕೀಯ ರ್‍ಯಾಲಿಗಳ ಸಂದರ್ಭದಲ್ಲಿ ಕೋವಿಡ್ ಮುನ್ನೆಚ್ಚರಿಕೆ ಕ್ರಮಗಳು ಪಾಲನೆಯಾಗದ ಕಾರಣ, ಸೋಂಕಿನ ಪ್ರಸರಣ ನಿಗ್ರಹಿಸುವಲ್ಲಿ ರಾಜ್ಯ ಸಾಧಿಸಿದ ಗಮನಾರ್ಹ ಸಾಧನೆಯನ್ನು ಉಳಿಸಿಕೊಳ್ಳಲು ಸಾಧ್ಯವಾಗುವುದಿಲ್ಲ ಎಂದು ಅವರು ಹೇಳಿದ್ದಾರೆ.

ಆಧಾರ: ಪ್ರಜಾವಾಣಿ, ದಿನಾಂಕ:03.04.2021

## 2. ಎಚ್ಚೆತ್ತುಕೊಳ್ಳದಿದ್ದರೆ ಸಂಕಷ್ಟ

ಕೋವಿಡ್ ಸೋಂಕು ನಿಯಂತ್ರಣಕ್ಕೆ ಕೆಲವು ಕಠಿಣ ಕ್ರಮಗಳನ್ನು ಕೈಗೊಳ್ಳುವುದು ಅನಿವಾರ್ಯವಾಗಿದೆ, ಈ ಸಂಬಂಧ ಆರೋಗ್ಯ ಇಲಾಖೆ ಹಾಗೂ ಕೋವಿಡ್ ನಿಯಂತ್ರಣ ತಾಂತ್ರಿಕ ಸಲಹಾ ಸಮಿತಿಯ ಶಿಫಾರಸ್ಸುಗಳನ್ನು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ ಕಳುಹಿಸಲಾಗಿದೆ ಎಂದು ಆರೋಗ್ಯ ಸಚಿವ ಡಾ. ಕೆ. ಸುಧಾಕರ್ ತಿಳಿಸಿದರು.

ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಿದ ಅವರು, 'ರಾಜ್ಯದ ಕೆಲವು ಕಡೆಗಳಲ್ಲಿ ಕೋವಿಡ್ ಸೋಂಕಿನ ಪ್ರಕರಣಗಳು ಏರುತ್ತಿವೆ. ಆರೋಗ್ಯ ಇಲಾಖೆ ಮತ್ತು ತಾಂತ್ರಿಕ ಸಲಹಾ ಸಮಿತಿಯ ಶಿಫಾರಸ್ಸುಗಳನ್ನು ಆಧರಿಸಿ ನಾವು ಈಗಲೇ ಕೆಲವು ಕಠಿಣ ಕ್ರಮಗಳನ್ನು ಕೈಗೊಳ್ಳದಿದ್ದರೆ ಮುಂದಿನ ದಿನಗಳು ಕಷ್ಟಕರವಾಗಿರಲಿವೆ' ಎಂದರು.

'ಈ ವಿಚಾರದಲ್ಲಿ ಯಾರನ್ನೋ ಮೆಚ್ಚಿಸುವುದಕ್ಕಾಗಿ ತೀರ್ಮಾನ ಕೈಗೊಳ್ಳುವುದು ಸಾಧ್ಯವಿಲ್ಲ. ಕೆಲವು ಕಠಿಣವಾದ ನಿರ್ಧಾರಗಳನ್ನು ತೆಗೆದುಕೊಂಡು ಅನುಷ್ಠಾನಕ್ಕೆ ತರಲೇಬೇಕಿದೆ. ಕೆಲವರು ನನ್ನನ್ನು ಟೀಕಿಸುತ್ತಿದ್ದಾರೆ. ಅಂತಹ ಟೀಕೆಗಳಿಗೆ ಅಂಜುವುದಿಲ್ಲ. ಆರೋಗ್ಯ ಸಚಿವನಾಗಿ ರಾಜ್ಯದ ಜನರ ಆರೋಗ್ಯವನ್ನು ಕಾಪಾಡುವುದು ನನ್ನ ಮೊದಲ ಕರ್ತವ್ಯ' ಎಂದು ಪ್ರತಿಕ್ರಿಯಿಸಿದರು.

ಜೀವನ ಮತ್ತು ಜೀವನೋಪಾಯ ಎರಡನ್ನೂ ಸರಿದೂಗಿಸಿಕೊಂಡು ಹೋಗಬೇಕಾದ ಕಠಿಣ ಸವಾಲು ರಾಜ್ಯ ಸರ್ಕಾರದ ಮುಂದಿದೆ. ಅದನ್ನು ಅರಿತು ಮುಖ್ಯಮಂತ್ರಿಯವರು ಕೆಲವರಿಗೆ ವಿನಾಯಿತಿಗಳನ್ನು ನೀಡಿದ್ದಾರೆ. ಆ ಬಗ್ಗೆ ವ್ಯಾಖ್ಯಾನ ಮಾಡಲು ತಾವು ಬಯಸುವುದಿಲ್ಲ ಎಂದರು.

ಜನರ ಆರೋಗ್ಯದ ಹಿತದೃಷ್ಟಿಯಿಂದ ಕಳುಹಿಸಬೇಕಾದ ಎಲ್ಲ ವರದಿಗಳನ್ನು ಮುಖ್ಯಮಂತ್ರಿಯವರಿಗೆ ಕಳುಹಿಸಲಾಗಿದೆ. ಮಾಸ್ಕ್ ವಿಚಾರದಲ್ಲಿ ಮತ್ತಷ್ಟು ಒತ್ತು ನೀಡಬೇಕಿದೆ. ಮಾಸ್ಕ ಧರಿಸದೇ ಇರುವವರಿಗೆ ದಂಡ ವಿಧಿಸುವ ಹಾಗೂ ಜಾಗೃತಿ ಮೂಡಿಸುವ ಕೆಲಸವನ್ನು ಮಾಡಬೇಕಿದೆ ಎಂದರು.

ಆರೋಗ್ಯ ಸಚಿವನಾಗಿ ಇತಿಮಿತಿಯಲ್ಲಿ ಕೆಲಸ ಮಾಡಬೇಕಿದೆ. ಸರ್ಕಾರ ಎಂಬುದು ಒಂದು ದೊಡ್ಡ ವ್ಯವಸ್ಥೆ. ಮಾರ್ಗಸೂಚಿ ವಿಚಾರದಲ್ಲಿ ತಮಗೂ ಹಲವು ರೀತಿಯ ಒತ್ತಡಗಳು ಬಂದಿದ್ದವು. ಶಿಕ್ಷಣ ಸಂಸ್ಥೆಗಳು, ಚಿತ್ರನಟರ ಅಭಿಮಾನಿಗಳು, ಜಿಮ್ ಮಾಲೀಕರು, ಮದುವೆ ಸಮಾರಂಭಗಳ ಆಯೋಜಕರಿಂದಲೂ ಒತ್ತಡ ಬಂದಿದೆ. ಅವರು ಹೇಳುವುದರಲ್ಲಿ ತಪ್ಪಿಲ್ಲ. ರಾಜ್ಯದ ಜನರ ಜೀವ ಉಳಿಸುವುದಕ್ಕೆ ಪ್ರಥಮ ಆದ್ಯತೆ ಎಂದರು.

'ಕಠಿಣ ನಿಯಮಗಳಿಂದ ಕೆಲವರಿಗೆ ಬೇಸರ ಆಗಬಹುದು ನನ್ನ ವಿರುದ್ಧ ಮಾತನಾಡಬಹುದು. ತಜ್ಞರನ್ನು ಒಳಗೊಂಡ ತಾಂತ್ರಿಕ ಸಲಹಾ ಸಮಿತಿಯ ವರದಿಗಳನ್ನು ಮುಖ್ಯಮಂತ್ರಿಯವರ ಗಮನಕ್ಕೆ ತರುವುದು ನನ್ನ ಕೆಲಸ. ಯಾರು ಏನಾದರೂ ಟೀಕೆ ಮಾಡಿಕೊಳ್ಳಲಿ. ನನ್ನ ಕೆಲಸವನ್ನು ನಾನು ಮಾಡುತ್ತೇನೆ' ಎಂದು ಹೇಳಿದರು.

ಬಸ್‌ಗಳಲ್ಲಿ ನಿಯಮ ಪಾಲನೆ ಆಗದಿರುವುದು ಗಮನಕ್ಕೆ ಬಂದಿದೆ, ಈ ವಿಚಾರ ಆರೋಗ್ಯ ಇಲಾಖೆಯ ವ್ಯಾಪ್ತಿಗೆ ಸೇರಿಲ್ಲ. ಮಾರ್ಗಸೂಚಿಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಆಯಾ ಇಲಾಖೆಗಳ ಮುಖ್ಯಸ್ಥರಿಗೆ ಸೂಚನೆ ನೀಡುವಂತೆ ಮುಖ್ಯ ಕಾರ್ಯದರ್ಶಿಗೆ ಮನವಿ ಮಾಡಲಾಗಿದೆ ಎಂದರು.

ಆಧಾರ: ಪ್ರಜಾವಾಣಿ, ದಿನಾಂಕ:05.04.2021.

## 3. 30 ಲಕ್ಷ ರೈತರಿಗೆ ಸಾಲಭಾಗ್ಯ

ರೈತಾಪಿ ಸಮುದಾಯಕ್ಕೆ ಕೊರೋನಾ ಆರ್ಥಿಕ ಸಂಕಷ್ಟ ತಟ್ಟದಂತೆ ನೋಡಿಕೊಳ್ಳಲು ರಾಜ್ಯ ಸರ್ಕಾರ ಮುಂದಾಗಿದ್ದು, ಪ್ರಸಕ್ತ ವರ್ಷ 30 ಲಕ್ಷ ರೈತರಿಗೆ ರೂ.20 ಸಾವಿರ ಕೋಟಿ ಬೆಳೆ ಸಾಲ ವಿತರಿಸಲು ಸಜ್ಜಾಗಿದೆ.

ಕೃಷಿ ಸಾಲಕ್ಕಾಗಿ ನಬಾರ್ಡ್‌ನಿಂದ ದೊರೆಯುವ ಮರು ಹಣಕಾಸು ನೆರವು ಪ್ರಮಾಣ ಈಗಿರುವ ಶೇ.35 ರಿಂದ ಶೇ.50ಕ್ಕೆ ಹೆಚ್ಚಿಸುವಂತೆ ಕೇಂದ್ರ ಸರ್ಕಾರದ ಮೊರೆ ಹೋಗಲು 4 ರಾಜ್ಯ ತೀರ್ಮಾನಿಸಿದೆ. ಕೊರೋನಾ ಆರ್ಥಿಕ ಸಂಕಷ್ಟ ಹಿನ್ನೆಲೆಯಲ್ಲಿ ರೈತರಲ್ಲಿ ಬೆಲೆ ಸಾಲ ವಿಷಯದಲ್ಲಿ ಆತಂಕ ಮೂಡದಂತೆ ನೋಡಿಕೊಳ್ಳಲು ಡಿಸಿಸಿ ಬ್ಯಾಂಕ್‌ಗಳ ಅಧ್ಯಕ್ಷರುಗಳ ಸಭೆಯಲ್ಲೂ ನಿರ್ಧರಿಸಲಾಗಿದೆ ಎಂದು ಹೇಳಲಾಗಿದೆ.

ಹಿಂದಿನ ವರ್ಷಗಳ ಮಾಸಿಕವಾರು ಬೆಳೆ ಸಾಲ ಬೇಡಿಕೆಯ ಮಾಹಿತಿ ಆಧಾರದ ಮೇಲೆ ಯಾವ್ಯಾವ ತಿಂಗಳಿಗೆ ಎಷ್ಟೆಷ್ಟು ಸಾಲದ ಅವಶ್ಯಕತೆ ಬೀಳಬಹುದು ಎಂಬ ಲೆಕ್ಕಾಚಾರ ಮಾಡಿ ಪಟ್ಟಿ ಸಿದ್ಧಪಡಿಸಲಾಗಿದೆ. ಡಿಸಿಸಿ ಬ್ಯಾಂಕ್, ಅಪೆಕ್ಸ್ ಬ್ಯಾಂಕ್‌ನಿಂದ ಸಾಲ ಮನ್ನಾ ಕುರಿತು ಬರುವ ಕ್ಲೈಮ್‌ಗಳಿಗೆ ತಕ್ಷಣ ಹಣಕಾಸು ಬಿಡುಗಡೆಗೂ ಆರ್ಥಿಕ ಇಲಾಖೆಗೆ ನಿರ್ದೇಶನ ನೀಡಲು ಮುಖ್ಯಮಂತ್ರಿಗೆ ಪ್ರಸ್ತಾವನೆ ಸಲ್ಲಿಸಲು ತೀರ್ಮಾನಿಸಲಾಗಿದೆ ಎಂದು ಹೇಳಲಾಗಿದೆ.

**3 ಲಕ್ಷ ರೈತರಿಗೆ ಸಾಲ:** ಈ ಮಧ್ಯೆ ಬೆಳೆ ಸಾಲ ವಿತರಣೆಯಲ್ಲಿ ಸಹಕಾರ ಇಲಾಖೆಯು 2020–21ನೇ ಸಾಲಿನಲ್ಲಿ ನಿಗದಿತ ಗುರಿಗಿಂತ 1.31 ಲಕ್ಷ ರೈತರಿಗೆ ರೂ.1,960 ಕೋಟಿ ಸಾಲ ವಿತರಿಸಿದೆ. 24.36 ಲಕ್ಷ ರೈತರಿಗೆ ರೂ.15,300 ಕೋಟಿ ಸಾಲ ನೀಡಿದೆ. 2021–22 ಸಾಲಿನಲ್ಲಿ 30 ಲಕ್ಷ ರೈತರಿಗೆ ರೂ.20 ಸಾವಿರ ಕೋಟಿ ಸಾಲ ನೀಡುವ ಗುರಿ ಹಾಕಿಕೊಂಡಿದ್ದು, ನವೀಕರಣ ಜೊತೆಗೆ ಹೊಸದಾಗಿ 3 ಲಕ್ಷ ಹೆಚ್ಚುವರಿ ರೈತರಿಗೂ ಸಾಲ ನೀಡುವ ಉದ್ದೇಶವಿದೆ ಎಂದು ಇಲಾಖೆ ಮೂಲಗಳು ತಿಳಿಸಿವೆ. ಈ

ಹಿಂದೆ ಘೋಷಿಸಲಾಗಿದ್ದ ಬೆಳೆ ಸಾಲ ಮನ್ನಾದಡಿ ತಾಂತ್ರಿಕ ಕಾರಣಗಳಿಗಾಗಿ ತಡೆಹಿಡಿದಿದ್ದ ಸುಮಾರು 1 ಲಕ್ಷ ರೈತರ ಸಾಲ ಮನ್ನಾ ಚುಕ್ತಾ ಸಹ ಮಾಡಲಾಗಿದೆ.

ಕೃಷಿ ಸಾಲಕ್ಕೆ ನಬಾರ್ಡ್‌ನಿಂದ ನೀಡುವ ಮರು ಹೊಂದಾಣಿಕೆ ಸಾಲದ ಪ್ರಮಾಣವನ್ನು ಶೇ.50ರವರೆಗೂ ಹೆಚ್ಚಿಸಲು ಕೇಂದ್ರ ಕೃಷಿ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಸಹಕಾರ ಸಂಘಗಳ ಮೂಲಕ ಶೂನ್ಯ ಬಡ್ಡಿ ದರದಲ್ಲಿ ರೂ.3 ಲಕ್ಷ ವರೆಗೆ ಬೆಳೆ ಸಾಲ, ಶೇ.3ರ ಬಡ್ಡಿ ದರದಲ್ಲಿ ರೂ.10 ಲಕ್ಷವರಗೆ ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲ ನೀಡಲಾಗುತ್ತಿದೆ. ಕಳೆದ ವರ್ಷ ಗ್ರಾಮೀಣ ಭಾಗದಲ್ಲಿ ಸಹಕಾರ ಇಲಾಖೆ ದೊರಕಿಸಿಕೊಟ್ಟ ಬೆಳೆಸಾಲದಿಂದ ರೈತರು ಆರ್ಥಿಕ ಸಂಕಷ್ಟದಿಂದ ಪಾರಾಗಿದ್ದರು.

**ದುಪ್ಪಟ್ಟು ಬೆಳೆ ಸಾಲ ವಿತರಣೆ:** ಆರ್ಥಿಕ ಸಂಕಷ್ಟದ ನಡುವೆಯೂ ಪ್ರಸಕ್ತ ವರ್ಷ ಬೆಳೆ ಸಾಲ ವಿತರಣೆಗೆ ಯಾವುದೇ ತೊಂದರೆ ಇಲ್ಲದಂತೆ ನೋಡಿಕೊಳ್ಳಲಾಗುವುದು. ಡಿಸಿಸಿ ಬ್ಯಾಂಕ್ ಹಾಗೂ ಅಪೆಕ್ಸ್ ಬ್ಯಾಂಕ್ ಜೊತೆ ನಿತ್ಯ ಸಮನ್ವಯ ಸಾಧಿಸಿದ್ದರಿಂದ ಕಳೆದ ವರ್ಷ ನಿಗದಿತ ಗುರಿಗಿಂತ ಹೆಚ್ಚಿನ ಸಾಧನೆ ಮಾಡಲಾಗಿದ್ದು, ಈ ವರ್ಷ ಪ್ರಮಾಣ ದುಪ್ಪಟ್ಟು ಮಾಡಲಾಗುವುದು. ರೂ.20 ಸಾವಿರ ಕೋಟಿವರೆಗೂ ಸಾಲ ವಿತರಿಸುವ ಗುರಿ ಹೊಂದಲಾಗಿದೆ. ಪ್ರಧಾನಿ ನರೇಂದ್ರ ಮೋದಿಯವರು ಘೋಷಿಸಿದ ಆತ್ಮ ನಿರ್ಭರ ಯೋಜನೆ ಅನುಷ್ಠಾನದಲ್ಲೂ ಕರ್ನಾಟಕ ದೇಶದಲ್ಲೇ ಮುಂದಿದೆ ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಹೇಳಿದ್ದಾರೆ.

ಆಧಾರ: ಉದಯವಾಣಿ, ದಿನಾಂಕ:07.04.2021.

## 4. ಸೋಂಕಿತರಿಗೆ ಶೇ.50 ಹಾಸಿಗೆ ಮೀಸಲಿಡಿ

ರಾಜ್ಯದಲ್ಲಿ ಕೊರೋನಾ ಸೋಂಕಿತ ಚಿಕಿತ್ಸೆಗೆ ಸರ್ಕಾರಿ ಆಸ್ಪತ್ರೆಗಳಲ್ಲಿಯೇ 33 ಸಾವಿರ ಹಾಸಿಗೆ ಮೀಸಲಿಟ್ಟಿದ್ದು ಇವುಗಳ ಜೊತೆಗೆ ಖಾಸಗಿ ಆಸ್ಪತ್ರೆಗಳು ಶೇ.50ರಷ್ಟು ಕೊರೋನಾ ಹಾಸಿಗೆಗಳನ್ನು ಸರ್ಕಾರದಿಂದ ಶಿಫಾರಸ್ಸಾಗುವ ಕೊರೋನಾ ಸೋಂಕಿತರಿಗೆ ಮೀಸಲಿಡುವಂತೆ ಸೂಚಿಸಿದೆ.

ಹಾಸಿಗೆ ಲಭ್ಯತೆ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್, ಕೊರೋನಾ ಹೆಚ್ಚಳವಾಗುತ್ತಿದ್ದು ಸೋಂಕಿತರ ಚಿಕಿತ್ಸೆಗಾಗಿ ರಾಜ್ಯದಲ್ಲಿ ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿದೆ. ಸದ್ಯ 33,697 ಹಾಸಿಗೆಗಳನ್ನು ಸರ್ಕಾರಿ ಆಸ್ಪತ್ರೆಗಳಲ್ಲಿ ಮೀಸಲಿಡಲಾಗಿದೆ. ಆಕ್ಸಿಜನ್ ಸಹಿತ ಹಾಸಿಗೆಗಳ ಸಂಖ್ಯೆ 15,733 ಇದ್ದು, ಈ ಪೈಕಿ 10,083 ಹಾಸಿಗೆಗಳನ್ನು ಕೊರೋನಾಗೆ ಮೀಸಲಿಡಲಾಗಿದೆ ಎಂದು ತಿಳಿಸಿದ್ದಾರೆ.

ರಾಜ್ಯದ ಖಾಸಗಿ ಆಸ್ಪತ್ರೆಗಳು ಶೇ.50 ಹಾಸಿಗೆ ಸೋಂಕಿತರಿಗೆ ಮೀಸಲಿಡಬೇಕು ಎಂದು ರಾಜ್ಯದ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್ ಆದೇಶ ಹೊರಡಿಸಿದ್ದಾರೆ.

ಖಾಸಗಿ ವೈದ್ಯಕೀಯ ಸಂಸ್ಥೆಗಳು ಹಾಸಿಗೆಗಳನ್ನು ಮೀಸಲಿರಿಸುವ ಕುರಿತು 2020 ಜೂನ್ ತಿಂಗಳ ಸುತ್ತೋಲೆಯ ನಿರ್ದೇಶನ ಕಡ್ಡಾಯವಾಗಿ ಪಾಲಿಸಬೇಕು. ಇದನ್ನು ನೋಡಲ್ ಅಧಿಕಾರಿಗಳು ಖಚಿತಪಡಿಸಿಕೊಳ್ಳಬೇಕು. ಕಳೆದ ಜೂನ್ 23ರಂದು ಹೊರಡಿಸಿದ್ದ ಆದೇಶದಲ್ಲಿ ಖಾಸಗಿ ಆಸ್ಪತ್ರೆಗಳು ತಮ್ಮ ಸಾಮರ್ಥ್ಯದ ಶೇ.50ರಷ್ಟು ಹಾಸಿಗೆಗಳನ್ನು ಕೊರೋನಾ ರೋಗಿಗಳಿಗೆ ಮೀಸಲಿಡಬೇಕು ಎಂದು ತಿಳಿಸಲಾಗಿತ್ತು. ಖಾಸಗಿ ಆಸ್ಪತ್ರೆಗಳಲ್ಲಿ ರೋಗಿಗಳ ಚಿಕಿತ್ಸಾ ವೆಚ್ಚ ಮರುಪಾವತಿಯನ್ನು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ನೋಡಿಕೊಳ್ಳುತ್ತದೆ. ಜೊತೆಗೆ ಆಸ್ಪತ್ರೆಗಳಲ್ಲಿ ವಿಧಿಸುವ ದರ ಪಟ್ಟಿ ಬಗ್ಗೆಯೂ ಉಲ್ಲೇಖಿಸಲಾಗಿದೆ. ಇದೇ ವೇಳೆ, ಕಳೆದ 1 ತಿಂಗಳಲ್ಲಿ 0–14 ವರ್ಷದ 4,172 ಮಕ್ಕಳಿಗೆ ಕೊರೋನಾ ಸೋಂಕು ದೃಢಪಟ್ಟಿರುವ ಮಾಹಿತಿ ಲಭ್ಯವಾಗಿದೆ.

**ಯುವಜನರು, ಮಧ್ಯವಯಸ್ಕರ ಸಾವು–ಆತಂಕ:** ದೇಶದಲ್ಲಿ ಲಕ್ಷಕ್ಕೂ ಹೆಚ್ಚು ಸೋಂಕಿತರು ಒಂದೇ ದಿನ ಪತ್ತೆಯಾಗಿದ್ದಾರೆ. ರಾಜ್ಯದಲ್ಲಿ ಒಂದೇ ದಿನ 32 ಸಾವಾಗಿದೆ. ಮಧ್ಯವಯಸ್ಕರು, 25 ವರ್ಷದ ಯುವಜನರು ಸಾವಿಗೀಡಾಗಿರುವುದು ಆತಂಕ ಉಂಟುಮಾಡಿದೆ. ಈ ಹಿನ್ನೆಲೆಯಲ್ಲಿ ಸಾವಿನ ಆಡಿಟ್ ಮಾಡಬೇಕೆಂದು ತಾಂತ್ರಿಕ ಸಲಹಾ ಸಮಿತಿಗೆ ಸೂಚಿಸಲಾಗಿದೆ. ಎರಡನೇ ಅಲೆ ಬೇಗ ಹರಡುತ್ತಿದೆ. ಇದರ ತೀವ್ರತೆ ಕಡಿಮೆ ಇದೆಯೋ, ಹೆಚ್ಚಿದೆಯೋ ಎಂದು ಹೇಳಲೂ ಈಗಲೇ ಸಾಧ್ಯವಿಲ್ಲ, ಅದನ್ನು ಎದುರಿಸಲು ಬೇಕಾದ ಸಿದ್ಧತೆಗಳನ್ನು ಮಾಡಲಾಗಿದೆ ಎಂದು ಆರೋಗ್ಯ ಸಚಿವರು ತಿಳಿಸಿದರು.

ಆಧಾರ: ಉದಯವಾಣಿ, ದಿನಾಂಕ:07.04.2021.

## 5. ನಾಳೆಯಿಂದ ರಾತ್ರಿ ಕರ್ಫ್ಯೂ: ರಾಜ್ಯದ 8 ಕಡೆ ಜಾರಿ

ವ್ಯಾಪಕವಾಗುತ್ತಿರುವ ಕೊರೋನಾ ಸೋಂಕನ್ನು ಕಟ್ಟಿಹಾಕುವ ಉದ್ದೇಶದಿಂದ ರಾಜಧಾನಿ ಬೆಂಗಳೂರು, ಮೈಸೂರು, ಮಂಗಳೂರು ಸೇರಿದಂತೆ ರಾಜ್ಯದ 8 ಕಡೆ ಏಪ್ರಿಲ್ 10 ರಿಂದ 20 ರವರೆಗೆ ರಾತ್ರಿ ಕರ್ಫ್ಯೂ ಜಾರಿಗೊಳಿಸಲು ಸರ್ಕಾರ ನಿರ್ಧರಿಸಿದೆ. ಕೊರೋನಾ ನಿಯಂತ್ರಣ ಸಂಬಂಧ ಪ್ರಧಾನಿ ನರೇಂದ್ರ ಮೋದಿ ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳ ಜೊತೆ ನಡೆಸಿದ ವಿಡಿಯೋ ಸಂವಾದದ ಬಳಿಕ ಸಿಎಂ ಯಡಿಯೂರಪ್ಪ ಸುದ್ದಿಗೋಷ್ಠಿ ನಡೆಸಿ ಈ ತೀರ್ಮಾನ ಪ್ರಕಟಿಸಿದರು.

ಕೊರೋನಾ ಕರ್ಫ್ಯೂ ಅವಧಿ ರಾತ್ರಿ 10 ಗಂಟೆಯಿಂದ ಬೆಳಿಗ್ಗೆ 5 ಗಂಟೆಯವರೆಗೆ ಜಾರಿಯಲ್ಲಿರಲಿದೆ. ಪ್ರಧಾನಿ ನರೇಂದ್ರ ಮೋದಿ ಜೊತೆಗಿನ ಸಂವಾದ ಬಳಿಕ ಈ ನಿರ್ಧಾರ ಕೈಗೊಳ್ಳಲಾಗಿದೆ. ತೀರ್ಮಾನ ಪ್ರಾಯೋಗಿಕ ಮಾತ್ರ. ಅಗತ್ಯ ಬಿದ್ದರೆ ರಾಜ್ಯದ ಇತರ ಕಡೆಗೂ ರಾತ್ರಿ ಕರ್ಫ್ಯೂ ವಿಸ್ತರಿಸುವುದಾಗಿ ಸಿಎಂ ಎಚ್ಚರಿಸಿದರು. ಬೆಂಗಳೂರು ಮತ್ತು ಇತರ 6 ಜಿಲ್ಲೆಗಳಲ್ಲಿ ಹೆಚ್ಚು ಕೋವಿಡ್ ಪ್ರಕರಣ ವರದಿಯಾಗುತ್ತಿವೆ. ಮರಣ ಪ್ರಮಾಣ ರಾಜ್ಯದಲ್ಲಿ ಶೇ.0.50ರಷ್ಟು ಇರುವುದು ಸಮಾಧಾನದ ಸಂಗತಿ. ಈ ಕುರಿತು ಕೇಂದ್ರ ಸರ್ಕಾರವು ತೃಪ್ತಿ ವ್ಯಕ್ತಪಡಿಸಿದೆ, ಪ್ರಧಾನಿ ಕರೆ ನೀಡಿರುವಂತೆ ರಾಜ್ಯದಲ್ಲೂ ಏಪ್ರಿಲ್ 11 ರಿಂದ 14 ವರೆಗೆ ಲಸಿಕಾ ಆಂದೋಲನಾ ಹಮ್ಮಿಕೊಳ್ಳಲಾಗುವುದು ಎಂದು ಮುಖ್ಯಮಂತ್ರಿ ತಿಳಿಸಿದರು.

ಯುವಜನರು ಮುನ್ನೆಚ್ಚರಿಕೆಯ ಕ್ರಮಗಳನ್ನು ತಪ್ಪದೆ ಪಾಲಿಸುವ ಕುರಿತು ಆದ್ಯತೆ ನೀಡುವಂತೆ ಸಭೆಯಲ್ಲಿ ಪ್ರಧಾನಿ ಸಲಹೆ ನೀಡಿದರು. ಕೋವಿಡ್ ಪರೀಕ್ಷೆಗಳ ಸಂಖ್ಯೆ ಹೆಚ್ಚಿಸುವಂತೆ ಹಾಗೂ ನಿಖರತೆಗೆ ಆದ್ಯತೆ ನೀಡುವಂತೆ ಸಲಹೆ ನೀಡಿದ್ದಾರೆ, ನಾವು ಈ ಬಗ್ಗೆ ಕ್ರಮಕೈಗೊಳ್ಳುತ್ತೇವೆ ಎಂದು ಬಿಎಸ್‌ವೈ ಹೇಳಿದರು.

ಹೆಚ್ಚಿನ ಸಂಖ್ಯೆಯಲ್ಲಿ ಜನ ಸೇರುವ ಜಾತ್ರೆ, ಹಬ್ಬಗಳು ಮತ್ತಿತರ ಧಾರ್ಮಿಕ ಮತ್ತು ಸಾಮಾಜಿಕ ಸಮಾವೇಶಗಳನ್ನು ನಿಷೇಧಿಸಲಾಗಿದೆ. ಈ ಮಾರ್ಗಸೂಚಿಗಳ ಕಟ್ಟುನಿಟ್ಟಿನ ಅನುಷ್ಠಾನ ಮಾಡುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಸಾರ್ವಜನಿಕ ಸ್ಥಳಗಳಲ್ಲಿ ಮಾಸ್ಕ್ ಧಾರಣೆ ಮಾಡದ, ವ್ಯಕ್ತಿಗತ ಅಂತರ ಕಾಯ್ದುಕೊಳ್ಳದವರಿಗೆ ದಂಡ ವಿಧಿಸಲಾಗುತ್ತಿದೆ ಎಂದು ತಿಳಿಸಿದರು.

ಆಧಾರ: ವಿಜಯವಾಣಿ, ದಿನಾಂಕ:09.04.2021.

## 6. ವಿವಾಹಿತ ಪುತ್ರಿಗೂ ಅನುಕಂಪದ ನೌಕರಿ: ಸರ್ಕಾರ ಮಹತ್ವದ ಆದೇಶ

ಸರ್ಕಾರಿ ನೌಕರರು ಅಕಾಲಿಕ ಮರಣಕ್ಕೀಡಾದ ಸಂದರ್ಭದಲ್ಲಿ ಅನುಕಂಪ ಆಧಾರಿತ ಹುದ್ದೆಗಳನ್ನು ಮೃತರ ಮಗಳಿಗೂ ನೀಡಬಹುದು. ಮೃತರ ಪತಿ ಅಥವಾ ಪತ್ನಿ ಸೂಚಿಸುವ ಅವಿವಾಹಿತ, ವಿವಾಹಿತ ಅಥವಾ ವಿಚ್ಛೇದಿತ ಮಗಳಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡಬಹುದು ಎಂಬ ಮಹತ್ವದ ಆದೇಶವನ್ನು ರಾಜ್ಯ ಸರ್ಕಾರ ಹೊರಡಿಸಿದೆ. ಅವಿವಾಹಿತರಾಗಿದ್ದರೆ ಅವರ ತಂದೆ–ತಾಯಿ ಸೂಚಿಸಿದ ಸಹೋದರ/ಸಹೋದರಿಯನ್ನು ನೇಮಕ ಮಾಡಬಹುದು. ಪೋಷಕರು ಮೃತರಾಗಿದ್ದರೆ ವಯಸ್ಸಿನ ಆಧಾರದಲ್ಲಿ ಹಿರಿಯ ಸೋದರ/ಸೋದರಿಗೆ ನೀಡಬಹುದು ಎಂದು ಆದೇಶಿಸಲಾಗಿದೆ.

ಮೃತ ಪುರುಷ ವಿವಾಹಿತ ನೌಕರನಾಗಿದ್ದರೆ ಆತನ ಮೇಲೆ ಅವಲಂಬಿತರಾಗಿದ್ದ ಆತನ ವಿಧವಾ ಪತ್ನಿ, ಮಗ ಮತ್ತು ಮಗಳು ಅರ್ಹರಾಗಿರುತ್ತಾರೆ. ಮೃತನ ಪತ್ನಿಯು ನೇಮಕಾತಿಗೆ ಅರ್ಹಳಲ್ಲದಿದ್ದರೆ ಅವರು ಸೂಚಿಸಿದ ಮಗ ಅಥವಾ ಮಗಳನ್ನು ನೇಮಕಾತಿ ಮಾಡಬಹುದು. ಮಹಿಳಾ ಉದ್ಯೋಗಿ ವಿವಾಹಿತೆಯಾಗಿದ್ದು ಮೃತಪಟ್ಟರೆ ಆಕೆಯ ಮೇಲೆ ಅವಲಂಬಿತರಾಗಿದ್ದ ಆಕೆಯ ಮಗ, ಮಗಳು ಅಥವಾ ಪತಿಯು ಅರ್ಹರಾಗಿರುತ್ತಾರೆ. ಅವಿವಾಹಿತೆಯಾಗಿದ್ದರೆ ಆಕೆಯೊಂದಿಗೆ ವಾಸವಿದ್ದ ಸಹೋದರ ಅಥವಾ ಸಹೋದರಿ ಅರ್ಹರಾಗುತ್ತಾರೆ. ಮೃತ ನೌಕರರ ಪತಿ ಅಥವಾ ಪತ್ನಿ ಈಗಾಗಲೇ ನಿಧನರಾಗಿದ್ದು ಮಕ್ಕಳು ಅಪ್ರಾಪ್ತರಾಗಿದ್ದರೆ 2 ವರ್ಷದೊಳಗೆ 18 ವರ್ಷ ಪೂರೈಸುವವರಿಗೆ ಅವಕಾಶ ನೀಡಬಹುದು. 18 ವರ್ಷ ತುಂಬಿದ ಬಳಿಕ ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರಿಗೆ ಅರ್ಜಿ ಸಲ್ಲಿಸಲು ಎರಡು ವರ್ಷ ಕಾಲಾವಕಾಶ ನೀಡಬೇಕು. ಅಪ್ರಾಪ್ತ ಮಕ್ಕಳ ವಯಸ್ಸು ಸೂಕ್ತವಾಗಿಲ್ಲದಿದ್ದರೆ ಅವರೊಂದಿಗೆ ವಾಸಿಸುವ ಹಾಗೂ ಅವರನ್ನು ಪೋಷಿಸುವ ಕಾನೂನಿನ ಪ್ರಕಾರ ಪ್ರಮಾಣೀಕೃತ ಪೋಷಕರು ಅರ್ಹರಾಗುತ್ತಾರೆ ಎಂದು ಆದೇಶಿಸಲಾಗಿದೆ.

ಆಧಾರ: ಕನ್ನಡಪ್ರಭ, ದಿನಾಂಕ:10.04.2021.

## 7. 8 ನಗರಗಳಲ್ಲಿ ರಾತ್ರಿ ಕರ್ಫ್ಯೂ ಜಾರಿ

ರಾಜ್ಯದಲ್ಲಿ ಕೊರೋನಾ ಪ್ರಕರಣಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ರಾಜ್ಯದ ಎಂಟು ನಗರಗಳಲ್ಲಿ ರಾತ್ರಿ ಕರ್ಫ್ಯೂ ಹೇರಲಾಗಿದೆ. ಬೆಂಗಳೂರು ನಗರ, ಮೈಸೂರು ನಗರ, ತುಮಕೂರು ನಗರ, ಉಡುಪಿ, ಮಣಿಪಾಲ, ಮಂಗಳೂರು ನಗರ, ಕಲಬುರಗಿ ನಗರ, ಬೀದರ್ ನಗರದಲ್ಲಿ ರಾತ್ರಿ ಕರ್ಫ್ಯೂ ಜಾರಿಯಾಗಿದ್ದು, ಸಾರ್ವಜನಿಕರು ರಾತ್ರಿ 10 ಗಂಟೆ ನಂತರ ರಸ್ತೆಯಲ್ಲಿ ಓಡಾಡುವಂತಿಲ್ಲ ತುರ್ತು ಪರಿಸ್ಥಿತಿ ಹಾಗೂ ಅಗತ್ಯ ಸೇವೆಗಳಿಗೆ ಹೊರತು ಪಡಿಸಿ ಬೇರೆ ಯಾವುದೇ ಕಾರಣಗಳಿಗೂ ವಿನಾಯಿತಿ ಇರುವುದಿಲ್ಲ.

ಹೋಟೆಲ್‌ಗಳು ಸೇರಿ ಎಲ್ಲ ಖಾಸಗಿ ಸಂಸ್ಥೆಗಳ ಮಾಲೀಕರು ರಾತ್ರಿ ಒಂಭತ್ತು ಗಂಟೆಗೆ ತಮ್ಮ ಕಾರ್ಯಚಟುವಟಿಕೆಗಳನ್ನು ಸ್ಥಗಿತಗೊಳಿಸಿ ಹತ್ತು ಗಂಟೆಯೊಳಗೆ ತಾವು ಸೇರಿ ತಮ್ಮ ಸಿಬ್ಬಂದಿ ಮನೆ ಸೇರಿಕೊಳ್ಳಬೇಕು. ಅನಂತರ ಅನಗತ್ಯವಾಗಿ ಇಲ್ಲದ ಸಬೂಬು ಹೇಳಿದರೆ ಒಪ್ಪಿಕೊಳ್ಳುವುದಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

**ಎಲ್ಲೆಡೆ ಪೊಲೀಸ್ ಸರ್ಪಗಾವಲು:** ಕಳೆದ ವರ್ಷ ಕೊರೋನಾ ಸಂದರ್ಭದಲ್ಲಿ ಯಾವ ರೀತಿಯ ಕಟ್ಟುನಿಟ್ಟಿನ ಕ್ರಮಕೈಗೊಳ್ಳಲಾಗಿತ್ತೋ ಅದೇ ಮಾದರಿಯಲ್ಲಿ ಈ ಬಾರಿಯ ರಾತ್ರಿ ಕರ್ಫ್ಯೂ ಅನ್ನು ಜಾರಿಗೆ ತರಲಾಗಿದೆ. ರಾತ್ರಿ ಕರ್ಫ್ಯೂ ಜಾರಿಯಲ್ಲಿರುವ ನಗರದ ಪ್ರತಿಯೊಂದು ಹಂತದಲ್ಲೂ ಪೋಲಿಸ್ ಚೆಕ್ ಪೋಸ್ಟ್‌ಗಳನ್ನು ಹಾಕಲಾಗಿದೆ. ಪ್ರತಿ ಚೆಕ್ ಪೋಸ್ಟ್‌ನಲ್ಲಿ ಇಬ್ಬರು ಸಿಬ್ಬಂದಿ ಕರ್ತವ್ಯ ನಿರ್ವಹಿಸಲಿದ್ದು ವಾಹನ ಸವಾರರು ಹಾಗೂ ಅನಗತ್ಯವಾಗಿ ಓಡಾಡುವ ಸಾರ್ವಜನಿಕರನ್ನು ತಡೆದು ತಪಾಸಣೆ ನಡೆಸಲಿದ್ದಾರೆ. ದ್ವಿಮುಖ ರಸ್ತೆಗಳನ್ನು ಏಕಮುಖ ರಸ್ತೆಗಳನ್ನಾಗಿ ಮಾರ್ಪಾಡು ಮಾಡಲಾಗಿದೆ. ಪ್ರಮುಖ ರಸ್ತೆಗಳಲ್ಲಿ ಬ್ಯಾರಿಕೇಡ್‌ಗಳನ್ನು ಹಾಕಿ ತಪಾಸಣೆ ನಡೆಸಲಾಯಿತು ಈ ಮಧ್ಯೆ ಮುಂಗಡ ಟಿಕೆಟ್ ಪಡೆದುಕೊಂಡು ಪ್ರಯಾಣಿಕರು ತಮ್ಮ ಟಿಕೆಟ್‌ಗಳನ್ನು ತೋರಿಸಿ ರೈಲು, ಬಸ್ ನಿಲ್ದಾಣಗಳಿಗೆ ತೆರಳಬಹುದು ಎಂದು ಪೋಲಿಸ್ ಇಲಾಖೆ ತಿಳಿಸಿದೆ.

ಆಧಾರ: ಉದಯವಾಣಿ, ದಿನಾಂಕ:11.04.2021.

## 8. ಮೇನಲ್ಲಿ ಕೊರೋನಾ ತಾರಕಕ್ಕೆ

ಕೊರೋನಾ ವೈರಾಣು ಸೋಂಕಿನ ವಿಚಾರದಲ್ಲಿ ಕಳೆದ ವರ್ಷಕ್ಕೆ ಹೋಲಿಸಿದ್ದಲ್ಲಿ, ಈ ಬಾರಿ ಜನರ ಆತಂಕ ಕಡಿಮೆಯಾಗಿದ್ದರೂ ಸಂಭಾವ್ಯ ಅನಾಹುತ ಕುರಿತಂತೆ ತಜ್ಞರು ನೀಡಿರುವ ಗಂಭೀರ ಎಚ್ಚರಿಕೆ ಸರ್ಕಾರವನ್ನು ಆತಂಕಕ್ಕೆ ತಳ್ಳಿದೆ. ಎರಡನೇ ಅಲೆ ಸೋಂಕು ಹರಡುವಿಕೆಯ ವೇಗ ತೀವ್ರವಾಗಿದ್ದು, ಮುಂದಿನ 2 ತಿಂಗಳು ನಿರ್ಣಾಯಕವೆಂಬ ತಜ್ಞರ ಎಚ್ಚರಿಕೆ ಹಿನ್ನೆಲೆಯಲ್ಲಿ ಜನರ ಜೀವ, ಜೀವನೋಪಾಯ ರಕ್ಷಣೆ ಜೊತೆಗೆ ವೈರಸ್ ನಿಯಂತ್ರಣ ಕ್ರಮಗಳಿಗೆ ಸರ್ಕಾರ ಆದ್ಯತೆ ನೀಡಿದೆ.

ಮತ್ತೊಂದೆಡೆ ಬಿಡುವಿಲ್ಲದ ಚುನಾವಣೆ ಪ್ರಚಾರ ಕಾರ್ಯದ ನಡುವೆಯೂ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ದೂರವಾಣಿ ಮುಖೇನಾ ಚರ್ಚೆ ನಡೆಸಿ, ಕೊರೋನಾ ನಿಯಂತ್ರಣಕ್ಕೆ ಕೈಗೊಂಡಿರುವ ಕ್ರಮಗಳನ್ನು ವಿವರಿಸಿದ್ದಾರೆ. ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ತಾಂತ್ರಿಕ ಸಲಹಾ ಸಮಿತಿಯ ತುರ್ತು ಸಭೆ ಕರೆದಿದ್ದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಡಾ.ಕೆ.ಸುಧಾಕರ್ ಮುಂದಿನ ನಡೆ ಬಗ್ಗೆ ಚರ್ಚಿಸಿದರು. ಮೇ 3ನೇ ವಾರದವರೆಗೆ ತಾರಕಕ್ಕೇರಲಿದೆ ಎನ್ನಲಾದ ಕೊರೋನಾ ಪ್ರಕರಣಗಳ ನಿಯಂತ್ರಣಕ್ಕೆ ಕೈಗೊಳ್ಳಬೇಕಾದ ಕ್ರಮಗಳು ಕುರಿತು ವಿಚಾರ ವಿನಿಮಯ ನಡೆಸಿ ಸಿಎಂಗೆ ವಿಸ್ತೃತ ವರದಿ ನೀಡಲು ಭೂಮಿಕೆ ಸಿದ್ಧಪಡಿಸಿದರು.

ಆಧಾರ: ವಿಜಯವಾಣಿ, ದಿನಾಂಕ:12.04.2021

## 9. ರಾಜ್ಯಪಾಲರಿಂದ ಇಂದು ಮೊದಲ ಸರ್ವಪಕ್ಷ ಸಭೆ

ರಾಜ್ಯದಲ್ಲಿ ಕೋವಿಡ್ 2ನೇ ಅಲೆ ವ್ಯಾಪಕವಾಗಿ ಹಬ್ಬುತ್ತಿರುವ ಹಿನ್ನೆಲೆಯಲ್ಲಿ ಕೊರೋನಾ ನಿಯಂತ್ರಣಕ್ಕೆ ಕಟ್ಟುನಿಟ್ಟಿನ ಮಾರ್ಗೋಪಾಯ ಕುರಿತು ಚರ್ಚಿಸಲು ಮಹತ್ವದ ಸರ್ವ ಪಕ್ಷಗಳ ಸಭೆ ಕರೆಯಲಾಗಿದ್ದು, ಇದೇ ಮೊದಲ ಬಾರಿಗೆ ರಾಜ್ಯಪಾಲ ವಜುಭಾಯ್ ವಾಲಾ ಅವರು ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯಮಂತ್ರಿ ಅವರು ಕೊರೋನಾ ಸೋಂಕಿಗೊಳಗಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಕಾರಣ ರಾಜ್ಯಪಾಲರ ಅಧ್ಯಕ್ಷತೆಯಲ್ಲಿ ಸಭೆ ನಡೆಯಲಿದೆ. ಸಿಎಂ ಸಹ ಸಭೆಯಲ್ಲಿ ಭಾಗವಹಿಸಲಿದ್ದಾರೆ. ವರ್ಚುವಲ್ ಮೂಲಕ ಸಂಜೆ 4.30ಕ್ಕೆ ಸರ್ವಪಕ್ಷ ಸಭೆ ನಡೆಯಲಿದೆ. ಗೃಹ ಸಚಿವ ಬಸವರಾಜ್ ಬೊಮ್ಮಾಯಿ, ಕಂದಾಯ ಸಚಿವ ಅಶೋಕ್, ಆರೋಗ್ಯ ಸಚಿವ ಡಾ.ಕೆ.ಸುಧಾಕರ್, ಪ್ರತಿಪಕ್ಷ ನಾಯಕರಾದ ಸಿದ್ದರಾಮಯ್ಯ, ಎಸ್.ಆರ್.ಪಾಟೀಲ್, ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ರಾಜ್ಯಾಧ್ಯಕ್ಷ ಹೆಚ್.ಕೆ.ಕುಮಾರಸ್ವಾಮಿ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಇತರರು ಪಾಲ್ಗೊಳ್ಳಲಿದ್ದಾರೆ.

ಆಧಾರ: ಕನ್ನಡಪ್ರಭ, ದಿನಾಂಕ:20.04.2021.

## 10. ಅಂತ್ಯಕ್ರಿಯೆಗೆ ಗೋಮಾಳದಲ್ಲಿ ತಾತ್ಕಾಲಿಕ ಸ್ಮಶಾನ

ಕೋವಿಡ್ ಸೋಂಕಿತರ ಅಂತ್ಯಕ್ರಿಯೆಗೆ ನಿಗದಿಯಾಗಿರುವ ಚಿತಾಗಾರಗಳಲ್ಲಿ ನಾನಾ ತೊಂದರೆಗಳು ಸೃಷ್ಟಿಯಾಗಿರುವ ಹಿನ್ನೆಲೆಯಲ್ಲಿ ತಾವರೆಕೆರೆ ಬಳಿ ಕುರುಬರಹಳ್ಳಿ ಮತ್ತು ಕಿತ್ತನಹಳ್ಳಿಯಲ್ಲಿ ತಾತ್ಕಾಲಿಕ ಸ್ಮಶಾನ ನಿರ್ಮಿಸಲು ಕಂದಾಯ ಸಚಿವ ಆರ್.ಅಶೋಕ್ ಸೂಚನೆ ನೀಡಿದ್ದಾರೆ

ಸ್ಥಳಕ್ಕೆ ಭೇಟಿ ನೀಡಿದ ಆರ್.ಅಶೋಕ್, ಗೋಮಾಳಕ್ಕೆಂದು ಕಾದಿರಿಸಲಾಗಿದ್ದು, ಈ ಜಾಗದಲ್ಲಿ ಮುಂದಿನ 2 ತಿಂಗಳುಗಳ ಕೋವಿಡ್‌ನಿಂದ ಪ್ರಾಣ ಕಳೆದುಕೊಂಡವರ ಅಂತ್ಯ ಸಂಸ್ಕಾರ ನಡೆಸಲಾಗುವುದು. ತಕ್ಷಣವೇ ಅಗತ್ಯ ಸೌಕರ್ಯ ಕಲ್ಪಿಸಲಾಗುವುದು. ಶವ ಸಂಸ್ಕಾರವನ್ನು ಉಚಿತವಾಗಿ ನಡೆಸಲಾಗುತ್ತದೆ. ಚಿತಾಗಾರದ ಮುಂದೆ ಕಾಯಲು ಸಮಸ್ಯೆ ಆಗುವವರು ಇಲ್ಲಿಗೆ ಬಂದು ಬಯಲಿನಲ್ಲಿ ಅಂತ್ಯ ಸಂಸ್ಕಾರ ನಡೆಸಬಹುದು. ನಗರದ ಹೆಚ್ಚುವರಿ ಶವಗಳನ್ನು ಸಂಸ್ಕಾರ ನಡೆಸಲಾಗುತ್ತದೆ ಎಂದು ತಿಳಿಸಿದರು.

ಅಂತ್ಯಕ್ರಿಯೆಗೆ ಅಗತ್ಯವಾದ ಎಲ್ಲ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ. ಮಾಸ್ಕ್ ಪಿಪಿಇ ಕಿಟ್ ಒದಗಿಸಲಾಗುತ್ತದೆ. ಶವ ಸುಡಲು ಬೇಕಾದ ಸೌದೆ, ಸಾಮಗ್ರಿಗಳು, ಜನ ವ್ಯವಸ್ಥೆ ಮಾಡುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಿದ್ದೇನೆ. ಒಬ್ಬರು ನೋಡಲ್ ಆಫೀಸರ್ ನೇಮಕ ಮಾಡಲಾಗುವುದು ಎಂದು ಅಶೋಕ್ ತಿಳಿಸಿದ್ದಾರೆ.

ಶವಸಂಸ್ಕಾರಕ್ಕೆ ಸ್ಥಳೀಯರು ವಿರೋಧ ವ್ಯಕ್ತಪಡಿಸಿದಾಗ, ಸೋಂಕಿತರರನ್ನು ಸುಟ್ಟ ಮೇಲೆ ವೈರಸ್ ಅಥವಾ ಫಂಗಸ್ ಏನೂ ಇರುವುದಿಲ್ಲ. ಸ್ಥಳೀಯರಿಗೆ ಯಾವುದೇ ತೊಂದರೆ ಆಗುವುದಿಲ್ಲ. ಸರ್ಕಾರವೇ

ಎಲ್ಲ ವ್ಯವಸ್ಥೆ ಮಾಡುತ್ತದೆ. ಇದೊಂದು ತಾತ್ಕಾಲಿಕ ವ್ಯವಸ್ಥೆಯಾಗಿದ್ದು, ಹೆಚ್ಚುವರಿ ಶವ ಇದ್ದರೆ ಮಾತ್ರ ಇಲ್ಲಿಗೆ ತರಲಾಗುವುದು ಎಂದು ಹೇಳಿ ಮನವೊಲಿಸುವಲ್ಲಿ ಸಫಲರಾದರು.

**ಮಾರ್ಗಸೂಚಿ ಪಾಲಿಸದಿದ್ದರೆ ಕಠಿಣ ಕ್ರಮ:** ಕೋವಿಡ್ ಮಾರ್ಗಸೂಚಿಯನ್ನು ಕಟ್ಟುನಿಟ್ಟಾಗಿ ಪಾಲಿಸದೇ ಇದ್ದರೆ ಇನ್ನಷ್ಟು ಕಠಿಣ ಕ್ರಮಗಳನ್ನು ಜಾರಿಗೊಳಿಸುತ್ತೇವೆ. ಮುಂದಿನ 14 ದಿನದಲ್ಲಿ ಸೋಂಕು ಸರಪಳಿ ತುಂಡರಿಸಿದರೆ ಮುಂದೆ ಕಠಿಣ ಕ್ರಮ ಕೈಗೊಳ್ಳುವುದು ತಪ್ಪಲಿದೆ. ಆದ್ದರಿಂದ ಮುಂದಿನ ದಿನಗಳಲ್ಲಿ ಅತ್ಯಗತ್ಯವಿದ್ದರೆ ಮಾತ್ರ ಮನೆಯಿಂದ ಹೊರಗೆ ಬರಬೇಕು ಎಂದು ಅಶೋಕ್ ಜನರಲ್ಲಿ ಮನವಿ ಮಾಡಿದ್ದಾರೆ. ಕೋವಿಡ್‌ನಿಂದ ಮೃತಪಟ್ಟವರ ಅಂತ್ಯ ಸಂಸ್ಕಾರಕ್ಕಾಗಿ ಬೆಂಗಳೂರಿನಲ್ಲಿ ನಾಲ್ಕೈದು ಕಡೆ ಜಾಗ ಗುರುತಿಸಿದ್ದೇವೆ. ಎಲ್ಲ ಜಿಲ್ಲೆಗಳಲ್ಲಿಯೂ ಅನಿವಾರ್ಯವಾದರೆ ಶವ ಸಂಸ್ಕಾರಕ್ಕೆ ಜಾಗ ಗುರುತಿಸಿಡಲು ಸೂಚಿಸಲಾಗಿದೆ. ಕೆಲವರು ತಮ್ಮ ಹೊಲದಲ್ಲೇ ಅಂತ್ಯ ಸಂಸ್ಕಾರಕ್ಕೆ ಅವಕಾಶ ಕೇಳುತ್ತಿದ್ದು ಈ ಬಗ್ಗೆ ಪರಿಶೀಲಿಸುತ್ತಿದ್ದೇವೆ ಎಂದು ಅವರು ಹೇಳಿದರು. ಮಹಾರಾಷ್ಟ್ರ, ದೆಹಲಿಯ ಸ್ಥಿತಿ ನಮ್ಮಲ್ಲಿ ಬರಬಾರದು. ಈ ನಿಟ್ಟಿನಲ್ಲಿ ನಮ್ಮ ಸರ್ಕಾರ ಇಂದು ತಂಡವಾಗಿ ಕೆಲಸ ಮಾಡುತ್ತಿದೆ. ಎರಡೇ ದಿನದಲ್ಲಿ ಆಮ್ಲಜನಕ ಮತ್ತು ರೆಮ್‌ಡೆಸಿವಿರ್ ಕೊರತೆ ನೀಗಿಸಿದ್ದೇವೆ ಎಂದರು.

ಆಧಾರ: ಕನ್ನಡಪ್ರಭ, ದಿನಾಂಕ:22.04.2021.

## 11. ವೈದ್ಯಾಧಿಕಾರಿಗಳಿಂದ ಮರಣ ಪ್ರಮಾಣ ಪತ್ರ ಕಡ್ಡಾಯ

ಕೋವಿಡ್ ಮೃತ ದೇಹವನ್ನು ನಿರ್ವಹಿಸುವ ಸಿಬ್ಬಂದಿ ಮುನ್ನೆಚ್ಚರಿಕೆ ಕ್ರಮಗಳಾದ ಸರ್ಜಿಕಲ್ ಮಾಸ್ಕ್, ಕೈಗವಸು, ಪಿಪಿಇ ಕಿಟ್ ಧರಿಸಿಕೊಳ್ಳುವುದು ಕಡ್ಡಾಯವಾಗಿದೆ. ಮೃತದೇಹ ವರ್ಗಾವಣೆ ಮಾಡಿದ ನಂತರ ಆ ವಾಹನವನ್ನು ಶವಸಂಸ್ಕಾರ ಸಿಬ್ಬಂದಿ ಶೇ.1. ಸೋಡಿಯಂನೊಂದಿಗೆ ಹೈಫಕ್ಲೋರೈಟ್ ದ್ರಾವಣದಿಂದ ಶುದ್ಧ ಮಾಡಬೇಕು. ಶವಸಂಸ್ಕಾರಕ್ಕೂ ಮುನ್ನ ವೈದ್ಯಾಧಿಕಾರಿಗಳಿಂದ ಮರಣ ಪ್ರಮಾಣ ಪತ್ರ ಪಡೆಯುವುದು ಕಡ್ಡಾಯವಾಗಿದೆ.

ಪೂರ್ಣ ಪಿಪಿಇ ಕಿಟ್ ಧರಿಸಿದ ವ್ಯಕ್ತಿ ಅಂತ್ಯಕ್ರಿಯೆ ನಡೆಸಬೇಕು. ದಹನ ಪೂರ್ಣಗೊಂಡ ನಂತರ, ಕೈಗವಸುಗಳನ್ನು ತೆಗೆದು, ಸೋಪ್ ಮತ್ತು ನೀರಿನಿಂದ ಕೈಗಳನ್ನು ತೊಳೆಯಬೇಕು. ದೇಹದ ಚೀಲದ ಮುಖದ ತುದಿಯನ್ನು ಅನ್ ಜಿಪ್ ಮಾಡುವ ಮೂಲಕ ಮೃತ ದೇಹವನ್ನು ಸಂಬಂಧಿಕರು, ಸ್ನೇಹಿತರು, ಹಿತೈಷಿಗಳು ನೋಡಬಹುದು. ಈ ಸಮಯದಲ್ಲೂ ಕೋವಿಡ್ ಮುನ್ನೆಚ್ಚರಿಕೆ ಕಾಪಾಡುವುದು ಕಡ್ಡಾಯವಾಗಿದೆ.

ದೇಹದ ಸ್ಪರ್ಶದ ಅಗತ್ಯವಿಲ್ಲದ ಯಾವುದೇ ಕೊನೆಯ ವಿಧಿಗಳನ್ನು ಮಾಡಬಹುದು. ಸ್ನಾನ ಮಾಡುವುದು, ತಬ್ಬಿಕೊಳ್ಳುವುದು, ಅಪ್ಪಿಕೊಳ್ಳುವುದು ಇತ್ಯಾದಿ ಭಾರತೀಯ ಸಂಪ್ರದಾಯದ ಪದ್ಧತಿಯಂತೆ ಮಾಡುವಂತಿಲ್ಲ. ಶವ ಸಂಸ್ಕಾರದ ಬೂದಿ ಯಾವುದೇ ಅಪಾಯವನ್ನುಂಟು ಮಾಡುವುದಿಲ್ಲ ಮತ್ತು ಅದನ್ನು ಸಂಗ್ರಹಿಸಬಹುದು. ಕೋವಿಡ್‌ನಿಂದ ಮೃತಪಟ್ಟ ವ್ಯಕ್ತಿಯ ಅಂತ್ಯಕ್ರಿಯೆಯಲ್ಲಿ ಸರ್ಕಾರ ಹೊರಡಿಸಿದ ಮಾರ್ಗಸೂಚಿಯಂತೆ ಕೇವಲ 20 ಜನರಿಗೆ ಮಾತ್ರ ಅವಕಾಶ ನೀಡಬೇಕು. ಮಕ್ಕಳು ಮತ್ತು 60 ವರ್ಷಕ್ಕಿಂತ ಹೆಚ್ಚು ವಯಸ್ಸಿನ ವೃದ್ಧರು ಮತ್ತು ಉಸಿರಾಟ ತೊಂದರೆ ಇರುವವರು ಕಡ್ಡಾಯವಾಗಿ ವೈದ್ಯಕೀಯ ಮಾಸ್ಕ್ ಧರಿಸಬೇಕು ಮತ್ತು ಕಟ್ಟುನಿಟ್ಟಾದ ಸಾಮಾಜಿಕ ಅಂತರ ಕಾಯ್ದುಕೊಳ್ಳಬೇಕು ಎಂದು ಸೂಚಿಸಲಾಗಿದೆ.

ಆಧಾರ: ವಿಜಯಕರ್ನಾಟಕ, ದಿನಾಂಕ:22.04.2021.

## 12. 18 ಇಲಾಖೆ ಸಿಬ್ಬಂದಿಗೆ ಹಾಜರಿ ಕಡ್ಡಾಯ

ಕೊರೋನಾ ವ್ಯಾಪಿಸುತ್ತಿರುವ ಹಿನ್ನೆಲೆಯಲ್ಲಿ 18 ಅಗತ್ಯ ಸೇವೆಗಳ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಕರ್ತವ್ಯಕ್ಕೆ ಕಡ್ಡಾಯವಾಗಿ ಹಾಜರಿರಬೇಕು ಹಾಗೂ ಕೇಂದ್ರ ಸ್ಥಾನ ಬಿಡಬಾರದೆಂದು ಸರ್ಕಾರ ಸೂಚನೆ ನೀಡಿದೆ. ಆರೋಗ್ಯ, ವೈದ್ಯಕೀಯ ಶಿಕ್ಷಣ, ಒಳಾಡಳಿತ, ಕಂದಾಯ, ಗ್ರಾಮೀಣಾಭಿವೃದ್ಧಿ, ನಗರಾಭಿವೃದ್ಧಿ, ಆಹಾರ, ವಾರ್ತಾ, ಸಾರಿಗೆ, ಇಂಧನ, ಖಜಾನೆ, ಡಿಪಿಎಆರ್, ಪಶುಸಂಗೋಪನೆ,

ಕಾರ್ಮಿಕ, ಅರಣ್ಯ, ಕೃಷಿ, ಕೃಷಿ ಮಾರುಕಟ್ಟೆ ಹಾಗೂ ತೋಟಗಾರಿಕೆ ಅಗತ್ಯ ಸೇವೆಯ ಇಲಾಖೆಗಳಾಗಿವೆ ಎಂದು ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಅದೇಶದಲ್ಲಿ ತಿಳಿಸಿದ್ದಾರೆ. ಈ 18 ಇಲಾಖೆಗಳ ಸಚಿವಾಲಯ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿ ಮತ್ತು ನೌಕರರು ಕಡ್ಡಾಯವಾಗಿ ಹಾಜರಿರಬೇಕು. ಕೋವಿಡ್ ನಿರ್ವಹಣೆ ಹಾಗೂ ನಿಯಂತ್ರಣಕ್ಕೆ ನಿಯೋಜನೆ ಅಗಿರುವ ಸಿಬ್ಬಂದಿ ಕಡ್ಡಾಯವಾಗಿ ಕರ್ತವ್ಯದಲ್ಲಿರಬೇಕು ಎಂದು ಸೂಚಿಸಿದ್ದಾರೆ. ಉಳಿದ ಕಚೇರಿ, ಅರೆ ಸರ್ಕಾರಿ, ಸ್ವಾಯತ್ತ ಸಂಸ್ಥೆ, ನಿಗಮ, ಮಂಡಳಿ, ಪ್ರಾಧಿಕಾರಗಳಲ್ಲಿ ಶೇ.50 ಸಿಬ್ಬಂದಿ ಇರಬೇಕು, ಇನ್ನುಳಿದ ಶೇ.50 ಸಿಬ್ಬಂದಿಯನ್ನು ಕೋವಿಡ್ ಕರ್ತವ್ಯಕ್ಕೆ ನಿಯೋಜನೆ ಮಾಡಬೇಕು ಎಂದು ಆದೇಶದಲ್ಲಿ ಸಿಎಸ್ ತಿಳಿಸಿದ್ದಾರೆ ದೃಷ್ಟಿ ದೋಷ ಇರುವವರು, ಅಂಗವೈಕಲ್ಯಕ್ಕೆ ಒಳಗಾದವರು ಹಾಗೂ ಗರ್ಭಿಣಿಯರಿಗೆ ವಿನಾಯಿತಿ ನೀಡಲಾಗಿದೆ. ಈ ಆದೇಶ ಮೇ4 ರ ತನಕ ಜಾರಿಯಲ್ಲಿರುತ್ತದೆ.

**ಸರ್ಕಾರಿ ನೌಕರರಿಗೆ ಚಿಕಿತ್ಸಾ ಪ್ಯಾಕೇಜ್:**

ಸರ್ಕಾರಿ ನೌಕರರು ಹಾಗೂ ಅವರ ಕುಟುಂಬ ಸದಸ್ಯರು ಕೋವಿಡ್ ಸೋಂಕಿತರಾಗಿ ಖಾಸಗಿ ಆಸ್ಪತ್ರೆಯಲ್ಲಿ ಪಡೆದ ವೈದ್ಯಕೀಯ ಚಿಕಿತ್ಸಾ ವೆಚ್ಚದ ಮರುಪಾವತಿಗೆ ಸಂಬಂಧಿಸಿಂತೆ ಇದ್ದ ಗೊಂದಲಕ್ಕೆ ಸರ್ಕಾರ ತೆರೆ ಎಳೆದಿದ್ದು, ಸ್ಪಷ್ಟ ಆದೇಶ ಪ್ರಕಟಿಸಿದೆ. ಜನರಲ್ ವಾರ್ಡ್– ರೂ.10 ಸಾವಿರ, ಹೈಡಿಪೆನ್ಡೆನ್ಸಿ ಯೂನಿಟ್–ರೂ.12 ಸಾವಿರ, ವೆಂಟಿಲೇಟರ್ ಸಹಿತ ಐಸೋಲೇಶನ್ ವಾರ್ಡ್ ಗೆ ರೂ.25 ಸಾವಿರ ನಂತೆ ದರ ನಿಗದಿಪಡಿಸಲಾಗಿದೆ. ಆಸ್ಪತ್ರೆ ನೀಡಿರುವ ಚಿಕಿತ್ಸಾ ದರವು ಈ ಪ್ಯಾಕೇಜ್ ದರಕ್ಕಿಂತ ಕಡಿಮೆ ಇದ್ದಲ್ಲಿ ಆ ಕಡಿಮೆ ಮೊತ್ತವನ್ನೇ ಮರುಪಾವತಿ ಮಾಡಲಾಗುತ್ತದೆ. ಕೊರೋನಾ ಚಿಕಿತ್ಸೆಗಾಗಿ ವೈದ್ಯಕೀಯ ಮುಂಗಡ ಪಾವತಿಗೆ ಅವಕಾಶ ನೀಡಿಲ್ಲ. ಕೋವಿಡ್ ಎಂದು ಖಾಸಗಿ ಆಸ್ಪತ್ರೆಗೆ ದಾಖಲಾಗಿ ಅಥವಾ ಇತರ ಕಾಯಿಲೆಯ ಚಿಕಿತ್ಸೆಗೆಂದು ದಾಖಲಾದ ಬಳಿಕ ಕೋವಿಡ್ ಕಾಣಿಸಿಕೊಂಡು ಸಂದರ್ಭ ಅನಿರೀಕ್ಷಿತ ಕ್ಲಿಷ್ಟಕರ ಚಿಕಿತ್ಸಾ ಸಂದರ್ಭಗಳು, ಶಸ್ತ್ರ ಚಿಕಿತ್ಸೆಗಳು, ಗರ್ಭಿಣಿಯರಿಗೆ ಸಂಬಂಧಿತ ಹಾಗೂ ಇನ್ನಿತರ ಅಸ್ವಸ್ಥ ಪರಿಸ್ಥಿತಿಗಳು ಎದುರಾದಲ್ಲಿ ಸರ್ಕಾರಿ ನೌಕರರಿಗೆ ಅನ್ವಯವಾಗುವ ನಿಯಮಗಳಂತೆ ಮರುಪಾವತಿಸಬಹುದಾದ ವೆಚ್ಚದ ಅರ್ಹತಾ ದಾಯಕ ಮೊತ್ತವನ್ನು ಎಸ್ಎಎಸ್ಟಿ ಸಂಸ್ಥೆಯಿಂದ ಪಡೆದು ಮರು ಪಾವತಿಸಲು ಅವಕಾಶ ಮಾಡಿಕೊಡಲಾಗಿದೆ.

ಆಧಾರ: ವಿಜಯವಾಣಿ, ದಿನಾಂಕ:22.04.2021.

## 13. ಶವಸಂಸ್ಕಾರಕ್ಕೆ ರಾಜಧಾನಿಯಲ್ಲಿ ತಪ್ಪದ ಸಮಸ್ಯೆ

ಕೋವಿಡ್ ಸೋಂಕಿತರ ಮೃತದೇಹಗಳನ್ನು ದಹನ ಮಾಡಲು ಸರ್ಕಾರ ಕೆಲ ಕ್ರಮ ಕೈಗೊಂಡಿದ್ದರೂ ಸಮಸ್ಯೆ ಮಾತ್ರ ತಪ್ಪಿಲ್ಲ. ಪತ್ರಿನಿತ್ಯವೂ ಒಂದಲ್ಲ ಒಂದು ಕಿರಿಕಿರಿ ಅನುಭವಿಸುತ್ತಿರುವ ಮೃತರ ಕುಟುಂಬದವರು ಇನ್ನಾದರೂ, ಎಲ್ಲರಿಗೂ ಅನುಕೂಲವಾಗುವ ಕಟ್ಟುನಿಟ್ಟಿನ ನಿಯಮಾವಳಿಗಳನ್ನು ಜಾರಿಗೆ ತರುವಂತೆ ಆಗ್ರಹಿಸಿದ್ದಾರೆ.

ಎಲ್ಲ ರುದ್ರಭೂಮಿಗಳಲ್ಲಿ ಅಂತ್ಯಕ್ರಿಯೆಗೆ ಅವಕಾಶವಿದ್ದಿದ್ದರೆ ಈ ಸಮಸ್ಯೆ ಇರುತ್ತಿರಲಿಲ್ಲ. ಕೋವಿಡ್ ಸೋಂಕಿನಿಂದ ಮೃತಪಟ್ಟವರ ಶವಗಳನ್ನು ನಿಯಮಾವಳಿ ಪ್ರಕಾರವೇ ಅಂತ್ಯ ಸಂಸ್ಕಾರ ಮಾಡಬೇಕಾಗಿರುವ ಹಾಗೂ ನಿರ್ದಿಷ್ಟ ಕಡೆಗಳಲ್ಲಿ ಬಿಬಿಎಂಪಿ ಉಸ್ತುವಾರಿಯಲ್ಲಿಯೇ ದಹನ ಮಾಡಬೇಕಾಗಿರುವುದರಿಂದ ಸಮಸ್ಯೆಗಳು ಹೆಚ್ಚಾಗಿವೆ.

**ಬೆಂಗಳೂರು ನಗರದಲ್ಲಿ ಆರೋಗ್ಯ ತುರ್ತು ಪರಿಸ್ಥಿತಿ:**

ಕೊರೋನಾ 2ನೇ ಅಲೆಯು ಸೋಂಕು ಹರಡುವಿಕೆ ವೇಗವನ್ನು ಹೆಚ್ಚಿಸಿದ್ದು, ಬೆಂಗಳೂರು ಮಹಾನಗರದಲ್ಲಿ 'ಆರೋಗ್ಯ ತುರ್ತು ಪರಿಸ್ಥಿತಿ' ಇದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಡಾ.ಕೆ.ಸುಧಾಕರ್ ಕಳವಳ ವ್ಯಕ್ತಪಡಿಸಿದ್ದಾರೆ.

ಕಠಿಣ ಪರಿಸ್ಥಿತಿಯನ್ನು ನಿಭಾಯಿಸುವ ಉದ್ದೇಶದಿಂದ ಕೆಲವು ಪ್ರಮುಖ ತೀರ್ಮಾನಗಳನ್ನು ತೆಗೆದುಕೊಂಡಿದ್ದು, ಸಿಎಂ ಬಿಎಸ್‌ವೈ ಒಪ್ಪಿಗೆ ನೀಡಿದ ಬಳಿಕ ಅಧಿಕೃತ ಆದೇಶ ಹೊರಬೀಳಲಿದೆ ಎಂದು

ಸುದ್ದಿಗಾರರಿಗೆ ತಿಳಿಸಿದ್ದರು. ಸಾಂಕ್ರಾಮಿಕ ರೋಗಗಳ ನಿಯಂತ್ರಣ ಹಾಗೂ ವಿಪತ್ತು ನಿರ್ವಹಣಾ ಕಾಯ್ದೆಗಳಡಿ ಮಹತ್ವದ ನಿರ್ಧಾರಗಳನ್ನು ಕೈಗೊಳ್ಳಲಾಗಿದೆ. 3–4 ದಿನಗಳೊಳಗೆ ಅನುಷ್ಠಾನಕ್ಕೆ ಬರಲಿದ್ದು, ಸಂಬಂಧಿಸಿದ ಸಂಸ್ಥೆಗಳು ಹಾಗೂ ಮುಖ್ಯಸ್ಥರು ಸಹಕರಿಸಬೇಕು ಎಂದು ಮನವಿ ಮಾಡಿದರು.

**ಪಾಲನೆ ಕಡ್ಡಾಯ:** ರಾಜಧಾನಿಯಲ್ಲಿ 30 ಹಾಗೂ ಅದಕ್ಕಿಂತ ಕಡಿಮೆ ಹಾಸಿಗೆಗಳ ನರ್ಸಿಂಗ್ ಹೋಮ್ ಮತ್ತು ಆಸ್ಪತ್ರೆಗಳನ್ನು ಸಂಪೂರ್ಣವಾಗಿ ಕೊರೋನೇತರ ರೋಗಿಗಳ ಚಿಕಿತ್ಸೆಗೆ ಮೀಸಲಿರಿಸುವುದು ಕಡ್ಡಾಯ. 30 ಹಾಸಿಗೆಗಳು ಮೇಲ್ಪಟ್ಟ ಎಲ್ಲ ಖಾಸಗಿ ಆಸ್ಪತ್ರೆಗಳಲ್ಲಿ ಒಟ್ಟು ಹಾಸಿಗೆಗಳ ಸಾಮರ್ಥ್ಯದ ಶೇ.80 ಮೀಸಲಿರಿಸಬೇಕಿದ್ದು, ಈ ಹಿಂದೆ ಶೇ.50 ಇದ್ದದನ್ನು ಇದೀಗ ಶೇ.80 ಕ್ಕೆ ಏರಿಸಲಾಗುತ್ತದೆ. ಸಾಮಾನ್ಯ ವಾರ್ಡ್‌ನ ಹಾಸಿಗೆಗಳು ಮಾತ್ರವಲ್ಲ, ಐಸಿಯು, ವೆಂಟಿಲೇಟರ್, ಆಕ್ಸಿಜನೇಟೇಡ್ ಒಳಗೊಂಡ ಎಲ್ಲ ವಿಧದ ಹಾಸಿಗೆಗಳು ಶೇ.80ರ ಅನುಪಾತದಲ್ಲಿ ಸೋಂಕಿತರ ಚಿಕಿತ್ಸೆಗೆ ಕಾದಿರಿಸಬೇಕಿದ್ದು, ಚಿಕಿತ್ಸಾ ವೆಚ್ಚವನ್ನು ಸರ್ಕಾರವೇ ಭರಿಸಲಿದೆ ಎಂದು ಸಚಿವರು ಸ್ಪಷ್ಟಪಡಿಸಿದರು.

ಆಧಾರ: ವಿಜಯವಾಣಿ, ದಿನಾಂಕ:23.04.2021.

## 14. ಬಿಬಿಎಂಪಿ, ಪೊಲೀಸ್ ಅಧಿಕಾರಿಗಳ 8 ತಂಡ ರಚನೆ

ಕೊರೋನಾ ಸೋಂಕಿತರಿಗೆ ಖಾಸಗಿ ಆಸ್ಪತ್ರೆಗಳಲ್ಲಿ ಲಭ್ಯವಿರುವ ಶೇ.50 ಹಾಸಿಗೆಗಳ ಸ್ವಾಧೀನಕ್ಕೆ ಪೊಲೀಸ್ ಹಾಗೂ ಬಿಬಿಎಂಪಿ ಅಧಿಕಾರಿಗಳ ಜಂಟಿ ತಂಡ ರಚನೆ ಮಾಡಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಮುಖ್ಯಮಂತ್ರಿಯವರ ಸೂಚನೆ ಮೇರೆಗೆ ಗೃಹಸಚಿವ ಬಸವರಾಜ ಬೊಮ್ಮಾಯಿ, ಕಂದಾಯ ಸಚಿವ ಆರ್.ಅಶೋಕ್, ಬಿಬಿಎಂಪಿ ಆಯುಕ್ತ ಗೌರವ್ ಗುಪ್ತ, ಪೊಲೀಸ್ ಆಯುಕ್ತ ಕಮಲ್ ಪಂತ್, ನಗರದ ಉಪ ಪೊಲೀಸ್ ಆಯುಕ್ತರ ಜೊತೆ ವಿಡಿಯೋ ಸಂವಾದ ನಡೆಸಿದರು.

ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಬಸವರಾಜ್ ಬೊಮ್ಮಾಯಿ, ಬೆಂಗಳೂರು ನಗರವನ್ನು 8 ವಲಯಗಳನ್ನಾಗಿ ವಿಂಗಡಣೆ ಮಾಡಲಾಗಿದೆ. ಒಂದೊಂದು ವಲಯಕ್ಕೆ ಒಬ್ಬ ಉಪ ಪೊಲೀಸ್ ಆಯುಕ್ತ ಹಾಗೂ ಬಿಬಿಎಂಪಿ ಜಂಟಿ ಆಯುಕ್ತರ ನೇತೃತ್ವದಲ್ಲಿ ತಂಡಗಳನ್ನು ರಚಿಸಲಾಗಿದೆ. ಆಸ್ಪತ್ರೆಯಲ್ಲಿರುವ ವಾಸ್ತವ ಸ್ಥಿತಿಯನ್ನು ತಿಳಿದುಕೊಳ್ಳಲು ತಪಾಸಣೆ ಮಾಡಬೇಕು. ಅಲ್ಲಿ ಖಾಲಿ ಇರುವ ಬೆಡ್‌ಗಳ ಬಗ್ಗೆ ಮಾಹಿತಿ ಪಡೆಯಬೇಕು ಎಂಬ ಸೂಚನೆ ನೀಡಲಾಗಿದೆ ಎಂದರು.

ಪ್ರತಿಯೊಂದು ಆಸ್ಪತ್ರೆ ಸರ್ಕಾರಕ್ಕೆ ಶೇ.50 ಹಾಸಿಗೆಗಳನ್ನು ಬಿಟ್ಟುಕೊಡುವಂತೆ ನೋಡಿಕೊಳ್ಳಬೇಕು. ಇದುವರೆಗೆ ಖಾಸಗಿ ಆಸ್ಪತ್ರೆಗಳು 7 ಸಾವಿರ ಬೆಡ್‌ಗಳನ್ನು ಸರ್ಕಾರಕ್ಕೆ ನೀಡಿವೆ. ಆದರೆ ಇನ್ನೂ 4 ಸಾವಿರ ಹಾಸಿಗೆಗಳನ್ನು ಸರ್ಕಾರದ ಸುಪರ್ದಿಗೆ ಪಡೆದುಕೊಳ್ಳಬೇಕಾಗಿದೆ. ಅದರಲ್ಲಿಯೂ ಆಕ್ಸಿಜನ್ ಬೆಡ್ ಹೆಚ್ಚಾಗಿ ಪಡೆಯಬೇಕಾಗಿದೆ ಎಂದರು.

ಆಧಾರ: ವಿಜಯವಾಣಿ, ದಿನಾಂಕ:23.04.2021

## 15. ಅಘೋಷಿತ ಲಾಕ್‌ಡೌನ್

ಕೊರೋನಾ ಸೋಂಕು ಕೈಮೀರುತ್ತಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಅಘೋಷಿತ ಲಾಕ್‌ಡೌನ್ ಮಾಡಿದೆ. ರಾಜಧಾನಿ ಬೆಂಗಳೂರು, ಮೈಸೂರು, ಹುಬ್ಬಳ್ಳಿ–ಧಾರವಾಡ, ಬೆಂಗಳೂರು, ಕಲಬುರಗಿ ಸೇರಿ ರಾಜ್ಯದ ಹಲವೆಡೆ ಅಂಗಡಿ–ಮುಂಗಟ್ಟುಗಳನ್ನು ಬಂದ್ ಮಾಡಿಸಿದ ಪೊಲೀಸರು, ಅಗತ್ಯ ಸೇವೆಗಳಿಗೆ ಮಾತ್ರ ಅವಕಾಶ ಕಲ್ಪಿಸಿದ್ದಾರೆ. ಈ ಮೊದಲು, ಮೇ 4 ರವರಗೆ ನಿಷೇಧಾಜ್ಞೆ ಮತ್ತು ರಾತ್ರಿ 9 ರಿಂದ ಬೆಳಗ್ಗೆ 6 ಗಂಟೆವರೆಗೆ ಕರ್ಫ್ಯೂ ಜಾರಿ ಬಗ್ಗೆ ಆದೇಶ ಹೊರಡಿಸಲಾಗಿತ್ತು. ಇದರಲ್ಲಿ ಅಗತ್ಯ ಸೇವೆಗಳಿಗೆ ಮತ್ತು ರಾತ್ರಿ ಪಾಳಿ ಕರ್ತವ್ಯ ನಿರ್ವಹಿಸುವವರಿಗೆ ಅವಕಾಶ ಕಲ್ಪಿಸಿ, ಅನಗತ್ಯ ಓಡಾಟಕ್ಕೆ ನಿರ್ಬಂಧ ವಿಧಿಸಲಾಗಿತ್ತು. ಆ ಪ್ರಕಾರ, ಮೊದಲ ದಿನ ಆದೇಶ ಜಾರಿಯಲ್ಲಿತ್ತು. ಬೆಳಿಗ್ಗೆ ಎಂದಿನಂತೆ ಅಂಗಡಿ, ಹೋಟೆಲ್ ತೆರೆದಿದ್ದವು. ಜನರ ಸಂಚಾರ ಮಾಮೂಲಾಗಿತ್ತು. ಸೆಕ್ಷನ್ 144 ರನ್ವಯ ನಿರ್ಬಂಧ ಇದ್ದರೂ ಜನರು ಗುಂಪು ಗುಂಪಾಗಿ ಇರುವುದನ್ನು ಗಮನಿಸಿದ ಪೊಲೀಸರು, ರಸ್ತೆಗೆ ಇಳಿದು ಬಂದ್

ಮಾಡಿಸಿದರು. ಕೆಲವು ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿ, ಜಿಲ್ಲಾವರಿಷ್ಠಾಧಿಕಾರಿ ಲಾಠಿ ಹಿಡಿದು ಮೆಕಾನಿಕ್ ಶಾಪ್, ಎಲೆಕ್ಟ್ರಾನಿಕ್ಸ್ ಅಂಗಡಿ, ಬಟ್ಟೆ ಅಂಗಡಿ, ಶಾಪಿಂಗ್ ಮಾಲ್, ಮೊಬೈಲ್ ಅಂಗಡಿಗಳನ್ನು ಬಂದ್ ಮಾಡಿಸಿದರು.

ಬೆಂಗಳೂರಿನಲ್ಲಿ ಮಧ್ಯಾಹ್ನದ ವೇಳೆಗೆ ಲಾಟಿ ಹಿಡಿದ ಪೊಲೀಸರು ಏಕಾಏಕಿ ಎಲ್ಲ ವಾಣಿಜ್ಯ ವಹಿವಾಟು ಬಂದ್ ಮಾಡಿಸಿದರು. ಅವೆನ್ಯೂ ರಸ್ತೆ, ಕೆ.ಆರ್.ಮಾರ್ಕೆಟ್, ಜೆ.ಸಿ. ರಸ್ತೆ, ಗಾಂಧಿನಗರದ ವಾಣಿಜ್ಯ ಕಟ್ಟಡಗಳು ಸೇರಿ ಹಲವಾರು ಕಡೆಗಳಲ್ಲಿ ಪೊಲೀಸರು ಬಲವಂತವಾಗಿ ಅಂಗಡಿಗಳನ್ನು ಮುಚ್ಚಿಸುತ್ತಿದ್ದ ದೃಶ್ಯ ಕಂಡುಬಂತು. ವರ್ತಕರು ಪೊಲೀಸರ ಜೊತೆಗೆ ವಾದಕ್ಕಿಳಿದ ಘಟನೆಯೂ ನಡೆದಿದೆ. ಈ ಅಘೋಷಿತ ಸೆಮಿ ಲಾಕ್‌ಡೌನ್‌ನ್ನು ಮೇ 4 ವರೆಗೂ ಕಟ್ಟುನಿಟ್ಟಾಗಿ ಜಾರಿಗೆ ತರಲು ಪೊಲೀಸರು ತಯಾರಿ ನಡೆಸಿದ್ದಾರೆ. ಮಾರ್ಗಸೂಚಿ ಉಲ್ಲಂಘನೆ ಮಾಡಿದರೆ ಕಠಿಣ ಕ್ರಮಕ್ಕೂ ಪೊಲೀಸ್ ಇಲಾಖೆ ಮುಂದಾಗಿದೆ.

**ಪೊಲೀಸರ ವಿರುದ್ಧ ಸಿಎಂ ಗರಂ:** ಕೊರೋನಾ ಸೋಂಕಿನಿಂದ ಚೇತರಿಸಿಕೊಂಡ ಬಳಿಕ ಮಣಿಪಾಲ್ ಆಸ್ಪತ್ರೆಯಿಂದ ಮುಖ್ಯಮಂತ್ರಿಯವರು ಬಿಡುಗಡೆಗೊಂಡು, ಮನೆಗೆ ಮರಳುವಾಗ ದಾರಿಯುದ್ದಕ್ಕೂ ಅಂಗಡಿಗಳ ಮುಂದೆ ನೆರೆದಿದ್ದ ಜನಸಂದಣಿ ನೋಡಿದರು. ನಗರ ಪೊಲೀಸ್ ಆಯುಕ್ತ ಕಮಲ್ ಪಂತ್‌ಗೆ ಕರೆ ಮಾಡಿ, ಕೊರೋನಾ ನಿಯಂತ್ರಣಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ. ರಸ್ತೆಗಳಲ್ಲಿ ಜನರು ಮನಬಂದಂತೆ  ಓಡಾಡುತ್ತಿದ್ದರೆ. ನಿಷೇಧಾಜ್ಞೆ ಜಾರಿಗೊಳಿಸಿದ್ದರೂ ಜನಸಂಚಾರಕ್ಕೆ ಅವಕಾಶ ಕೊಟ್ಟಿದ್ದು ಏಕೆ ಎಂದು ತರಾಟೆಗೆ ತೆಗೆದುಕೊಂಡರು ಎನ್ನಲಾಗಿದೆ. ಎಚ್ಚೆತ್ತ ಕಮಲ್ ಪಂತ್, ಪೋಲಿಸರಿಗೆ ಸೂಚನೆ ಕೊಟ್ಟು ಅಂಗಡಿ ಬಾಗಿಲು ಬಂದ್ ಮಾಡಿಸಿದರು. ಸಿಎಂ ಭೇಟಿ ಮಾಡಿ ಕಮಲ್ ಪಂತ ಅವರು ವಿವರಣೆ ನೀಡಿದ್ದಾರೆ ಎಂದು ತಿಳಿದು ಬಂದಿದೆ.

**ನಿಯಮ ಪಾಲಿಸಿ:** ಕೊರೋನಾ ನಿಯಂತ್ರಣಕ್ಕೆ ಜಾರಿಯಾಗಿರುವ ಬಿಗಿ ಮಾರ್ಗಸೂಚಿಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರಲು ಜನರು ಸಹಕರಿಸಬೇಕು. ಅನಗತ್ಯವಾಗಿ ಓಡಾಡಬಾರದು ಎಂದು ಮುಖ್ಯಮಂತ್ರಿಯವರು ಮನವಿ ಮಾಡಿದರು. ಕೊರೋನಾ ಸೋಂಕು ಉಲ್ಬಣಿಸಿ, ಪ್ರತಿ ಮನೆಯಲ್ಲಿ 3–4 ಜನರು ಸೋಂಕಿತರಾಗುತ್ತಿದ್ದಾರೆ. ಪ್ರಧಾನಿ ಮೋದಿ ಸಲಹೆಯಂತೆ ಮುನ್ನೆಚ್ಚರಿಕೆ ನಿಯಮ ಪಾಲಿಸಿ ಸೋಂಕು ನಿಯಂತ್ರಣಕ್ಕೆ ನೆರವಾಗಬೇಕು ಎಂದು ಸಲಹೆ ನೀಡಿದರು.

ಆಧಾರ: ವಿಜಯವಾಣಿ, ದಿನಾಂಕ:23.04.2021.

## 16. 24 ಗಂಟೆ: 25 ಸಾವಿರ ದಾಟಿದ ಕೋವಿಡ್

ರಾಜ್ಯದಲ್ಲಿ ಕೋವಿಡ್ ಪೀಡಿತರ ಸಂಖ್ಯೆ ದಿನೇ ದಿನೆ ಏರುತ್ತಲೇ ಇದೆ. ಒಟ್ಟು 25,795 ಮಂದಿಯಲ್ಲಿ ಸೋಂಕು ದೃಢಪಟ್ಟಿದ್ದು, 123 ಮಂದಿ ಮೃತರಾಗಿದ್ದಾರೆ. ರಾಜ್ಯದಲ್ಲಿ ಕೋವಿಡ್ ಕಾಣಿಸಿಕೊಂಡ ನಂತರ 24 ಗಂಟೆಗಳ ಅವಧಿಯಲ್ಲಿ ವರದಿಯಾದ ಗರಿಷ್ಠ ಪ್ರಕರಣ ಇದಾಗಿದೆ. ರಾಜ್ಯದ ವಿವಿಧೆಡೆ ಕೋವಿಡ್ ತೀವ್ರಗತಿಯಲ್ಲಿ ಏರುತ್ತಿದೆ. ಹೀಗಾಗಿ ಪರೀಕ್ಷೆಗಳ ಸಂಖ್ಯೆಯನ್ನು ಹೆಚ್ಚಿಸಲಾಗಿದೆ. ಒಟ್ಟು 1.62 ಲಕ್ಷ ಮಾದರಿಗಳನ್ನು ಪರೀಕ್ಷಿಸಲಾಗಿದೆ. ಸೋಂಕು ದೃಢ ಪ್ರಮಾಣ ಶೇ.15.87ಕ್ಕೆ ಏರಿಕೆಯಾಗಿದೆ. ಮರಣ ಪ್ರಮಾಣ ದರ ಶೇ0.47 ಕ್ಕೆ ತಲುಪಿದೆ.

ಗದಗ (73) ಹಾಗೂ ಹಾವೇರಿ(46) ಬಿಟ್ಟು ಇತರ ಜಿಲ್ಲೆಗಳಲ್ಲಿ ಕೋವಿಡ್ ಪ್ರಕರಣಗಳು ಮೂರಂಕಿ ಮುಟ್ಟಿದೆ. ತುಮಕೂರಿನಲ್ಲಿ ಪ್ರಕರಣಗಳು ಹೆಚ್ಚುತಲೇ ಇವೆ. ಒಟ್ಟು  1,231 ಮಂದಿಗೆ ಸೋಂಕು ತಗುಲಿರುವುದು ಖಚಿತ ಪಟ್ಟಿದೆ. ಬೆಂಗಳೂರಿನಲ್ಲಿ 15,244 ಮಂದಿಯಲ್ಲಿ ಸೋಂಕು ದೃಢಪಟ್ಟಿದೆ.

ಬಳ್ಳಾರಿ(940), ಮೈಸೂರು(818), ಹಾಸನ(689), ಕಲಬುರ್ಗಿ(659), ಕೋಲಾರ(587) ಹಾಗೂ ಬೆಂಗಳೂರು ಗ್ರಾಮಾಂತರ (405)  ಜಿಲ್ಲೆಗಳಲ್ಲೂ ಅಧಿಕ ಪ್ರಕರಣಗಳು ದಾಖಲಾಗಿವೆ. ರಾಜ್ಯದಲ್ಲಿ ಈವರೆಗೆ ಸೋಂಕಿಗೊಳಗಾದವರ ಸಂಖ್ಯೆ 12.47 ಲಕ್ಷದ ಗಡಿ ದಾಟಿದೆ.

ಕೋವಿಡ್ ಪೀಡಿತರ ಪೈಕಿ ಬೆಂಗಳೂರಿನಲ್ಲಿ ಒಟ್ಟು 68 ಮಂದಿ ಮೃತರಾಗಿದ್ದಾರೆ. ಕಲಬುರ್ಗಿಯಲ್ಲೂ (11) ಮೃತರ ಸಂಖ್ಯೆ ಏರಿದೆ. ಬಳ್ಳಾರಿ, ಧಾರವಾಡ ಮತ್ತು ತುಮಕೂರಿನಲ್ಲಿ ತಲಾ ಐದು ಮಂದಿ, ಬೆಂಗಳೂರು ಗ್ರಾಮಾಂತರ, ಹಾಸನ, ಮಂಡ್ಯದಲ್ಲಿ ತಲಾ ನಾಲ್ವರು, ಬೀದರ್ ಹಾಗೂ ಮೈಸೂರಿನಲ್ಲಿ ತಲಾ ಮೂವರು, ಬಾಗಲಕೋಟೆ, ಚಿಕ್ಕಬಳ್ಳಾಪುರ, ಕೊಡಗು ಹಾಗೂ ಉತ್ತರ ಕನ್ನಡದಲ್ಲಿ ತಲಾ ಇಬ್ಬರು, ಬೆಳಗಾವಿ, ಶಿವಮೊಗ್ಗ ಮತ್ತು ವಿಜಯಪುರದಲ್ಲಿ ತಲಾ ಒಬ್ಬರು ಸಾವಿಗೀಡಾಗಿದ್ದರೆ. ಇದುವರೆಗೆ ಸತ್ತವರ ಸಂಖ್ಯೆ 13,885ಕ್ಕೆ ಹೆಚ್ಚಿದೆ.

ಸಕ್ರಿಯ ಪ್ರಕರಣಗಳ ಸಂಖ್ಯೆ ಎರಡು ಲಕ್ಷದ (1.96) ಸನಿಹದಲ್ಲಿದ್ದು, ಒಟ್ಟು 985 ಮಂದಿ ತೀವ್ರ ನಿಗಾ ಘಟಕದಲ್ಲಿ (ಐಸಿಯು) ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಕೋವಿಡ್ ಪೀಡಿತರ ಪೈಕಿ 5,624 ಜನ ಚೇತರಿಸಿಕೊಂಡಿದ್ದಾರೆ. ಇದರೊಂದಿಗೆ ಗುಣಮುಖರ ಸಂಖ್ಯೆ 10.37 ಲಕ್ಷಕ್ಕೆ ಏರಿಕೆಯಾಗಿದೆ

ಆಧಾರ: ಪ್ರಜಾವಾಣಿ, ದಿನಾಂಕ:24.04.2021.

## 17. ವಾರಾಂತ್ಯ ಕರ್ಫ್ಯೂ: ಯಾವುದಕ್ಕೆಲ್ಲ ವಿನಾಯ್ತಿ

ಶುಕ್ರವಾರ ರಾತ್ರಿಯಿಂದ ಸೋಮವಾರ ಬೆಳಿಗ್ಗೆಯವರೆಗಿನ ವಾರಾಂತ್ಯದ ಕರ್ಫ್ಯೂನಿಂದ ವಿನಾಯ್ತಿ ನೀಡಿರುವ ತುರ್ತು ಮತ್ತು ಅಗತ್ಯ ಸೇವೆಗಳ ವ್ಯಾಪ್ತಿಯಲ್ಲಿ ಉದ್ದಿಮೆಗಳು ಹಾಗೂ ಸೇವೆಗಳ ಪಟ್ಟಿಯನ್ನು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಬಿಡುಗಡೆ ಮಾಡಿದೆ.

ರಾತ್ರಿ ಕರ್ಫ್ಯೂ ಮತ್ತು ವಾರಾಂತ್ಯದ ಕರ್ಫ್ಯೂ ಜಾರಿಗೊಳಿಸಿ ಏಪ್ರಿಲ್ 20 ರಂದು ಹೊರಡಿಸಿದ್ದ ಆದೇಶದಲ್ಲಿ, 'ತುರ್ತು ಮತ್ತು ಅಗತ್ಯ ಸೇವೆಗಳ ವ್ಯಾಪ್ತಿಯಲ್ಲಿರುವ ಉದ್ದಿಮೆಗಳು, ಸೇವೆಗಳಿಗೆ ವಿನಾಯ್ತಿ ನೀಡಲಾಗಿದೆ' ಎಂದು ಹೇಳಲಾಗಿತ್ತು. ಸುತ್ತೋಲೆ ಹೊರಡಿಸಿರುವ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ.ರಾಜ್‌ಕುಮಾರ್ ಖತ್ರಿ, ವಿನಾಯ್ತಿಯ ವ್ಯಾಪ್ತಿಯಲ್ಲಿರುವ ಉದ್ದಿಮೆ ಹಾಗೂ ಸೇವೆಗಳ ಪಟ್ಟಿ ಪ್ರಕಟಿಸಿದ್ದಾರೆ.

**ಯಾವುದಕ್ಕೆಲ್ಲಾ ವಿನಾಯ್ತಿ:** ಔಷಧಿಗಳು, ಸ್ಯಾನಿಟೇಷನ್ ವಸ್ತುಗಳು, ಆಮ್ಲಜನಕ, ವೈದ್ಯಕೀಯ ಉಪಕರಣಗಳು, ವೈದ್ಯಕೀಯ ಬಳಕೆಯ ಬಟ್ಟೆಗಳು ಮತ್ತು ಈ ಎಲ್ಲವುಗಳ ಉತ್ಪಾದನೆಗೆ ಪೂರಕವಾದ ಕಚ್ಚಾ ವಸ್ತುಗಳ ಉತ್ಪಾದನಾ ಘಟಕಗಳು ಕರ್ಫ್ಯೂ ಅವಧಿಯಲ್ಲಿ ಕಾರ್ಯನಿರ್ವಹಿಸಬಹುದು.

**ಇತರ ವಿನಾಯ್ತಿ:** ಅಕ್ಕಿ ಗಿರಣಿ, ಎಣ್ಣೆ ಮಿಲ್, ಬೇಳೆಕಾಳು ಸಂಸ್ಕರಣಾ ಮಿಲ್‌ಗಳು, ಡೇರಿ ಉತ್ಪನ್ನಗಳು, ಆರ್.ಓ ಮತ್ತು ಡಿಸ್ಟಿಲ್ಡ್ ನೀರು ಘಟಕ, ಪ್ಯಾಕೇಜ್ಡ್ ನೀರು ಘಟಕ, ಹಿಟ್ಟಿನ ಗಿರಣಿಗಳು, ಆಹಾರ ಸಂಸ್ಕರಣಾ ಘಟಕಗಳು, ಬೇಕರಿ ಉತ್ಪನ್ನಗಳು, ಮೀನು, ಕೋಳಿ ಮತ್ತು ಪಶು ಆಹಾರ ತಯಾರಿಕೆ, ಮಂಜುಗಡ್ಡೆ ತಯಾರಿಕಾ ಘಟಕ, ಮೆಣಸಿನ ಪುಡಿ, ಅರಿಶಿನ ಪುಡಿ, ಉಪ್ಪು ತಯಾರಿಕೆ ಮತ್ತಿತರ ಕೃಷಿ ಸಂಬಂಧಿ ಉತ್ಪಾದನಾ ಘಟಕಗಳು.

ರಫ್ತು ಸಂಬಂಧಿ ವಸ್ತುಗಳ ಉತ್ಪಾದನಾ ಘಟಕಗಳು ಮತ್ತು ಅವುಗಳಿಗೆ ಪೂರಕ ಕಚ್ಚಾವಸ್ತು ಉತ್ಪಾದಿಸುವ ಘಟಕಗಳು, ಏರೋಸ್ಪೇಸ್ ಮತ್ತು ರಕ್ಷಣಾ ಇಲಾಖೆಗೆ ಉಪಕರಣ, ಬಿಡಿ ಭಾಗಗಳ ತಯಾರಿಸುವ ಘಟಕಗಳು, ರಕ್ಷಣೆ, ಕೃಷಿ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿ ಬಳಕೆಯಾಗುವ ವಾಹನಗಳ ತಯಾರಿಕೆ, ಪ್ಯಾಕೇಜಿಂಗ್ ಘಟಕಗಳು, ಕೈಗಾರಿಕಾ ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳು, ಆಹಾರ ವಸ್ತುಗಳ ತಯಾರಿಕೆ, ಇ–ಕಾಮರ್ಸ್ ಉದ್ದಿಮೆಗಳು, ಕೃಷಿ ಮತ್ತು ಆಹಾರ ವಲಯದ ಉಗ್ರಾಣಗಳು.

ಪೆಟ್ರೋಲಿಯಂ ರಿಫೈನರಿ, ಬೃಹತ್ ಉಕ್ಕು ತಯಾರಿಕಾ ಘಟಕಗಳು, ಬೃಹತ್ ಸಿಮೆಂಟ್ ಕೈಗಾರಿಕೆಗಳು, ಬಣ್ಣ ತಯಾರಿಕೆ, ಸಕ್ಕರೆ ಕಾರ್ಖಾನೆಗಳು, ರಸಗೊಬ್ಬರ ಕಾರ್ಖಾನೆಗಳು, ಗಾಜು ಉತ್ಪಾದನೆ, ಬೃಹತ್ ಫೌಂಡ್ರಿಗಳು, ಟಯರ್ ಉತ್ಪಾದನೆ, ಬೃಹತ್ ಪ್ರಮಾಣದ ವಾಹನ ತಯಾರಿಕಾ ಘಟಕಗಳು.

**ವಿವೇಚಿಸಿ ಅನುಮತಿಗೆ ಅವಕಾಶ:** ಟೆಲಿಕಾಂ ಮತ್ತು ಸಂಬಂಧಿತ ಸೇವೆಗಳು, ಐಟಿ ಕಂಪನಿಗಳು, ವೈದ್ಯಕೀಯ, ಹಣಕಾಸು, ಸಾರಿಗೆ ಮತ್ತಿತರ ಉದ್ದಿಮೆಗಳಿಗೆ ಸಂಬಂಧಿಸಿದ ಬ್ಯಾಂಕ್ ಅಂಡ್ ಐಟಿ

ಸೇವೆಗಳು, ಸರಕುಗಳ ಲೋಡಿಂಗ್, ಇಳಿಸುವುದು ಮತ್ತಿತರ ಚಟುವಟಿಕೆಗಳಿಗೆ ಅಗತ್ಯ ಕಂಡುಬಂದಲ್ಲಿ ಅನುಮತಿ ನೀಡಬಹುದು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಆಧಾರ: ಪ್ರಜಾವಾಣಿ, ದಿನಾಂಕ:24.04.2021.

## 18. ವಿಧಾನ ಸಭಾ ಕ್ಷೇತ್ರಕ್ಕೆ ತಲಾ ಲಕ್ಷ ರೂ.25 ಅನುದಾನ ಬಿಡುಗಡೆ

ಬಿಬಿಎಂಪಿ ವ್ಯಾಪ್ತಿಯಲ್ಲಿ ಕೋವಿಡ್ ಮಹಾಮಾರಿಯ ನಿಯಂತ್ರಣಕ್ಕಾಗಿ ಪ್ರತಿಯೊಂದು ವಿಧಾನಸಭಾ ಕ್ಷೇತ್ರಕ್ಕೆ ತಲಾ ರೂ.25 ಲಕ್ಷ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಕೊರೋನಾ ಸೋಂಕಿತರಿಗೆ ಅಗತ್ಯ ಔಷಧ ಹಾಗೂ ಇತರೆ ಪರಿಕರಗಳನ್ನು ಖರೀದಿ ಮಾಡಲು ಅನುದಾನ ಬಳಸುವಂತೆ ಆರೋಗ್ಯಾಧಿಕಾರಿಗಳಿಗೆ ಆದೇಶಿಸಲಾಗಿದೆ.

ಪಾಲಿಕೆಯ ವಲಯಗಳಿಗೆ ಅಗತ್ಯವಿರುವ ಸೋಡಿಯಂ ಹೈಪೋಕ್ಲೋರೈಡ್ ದ್ರಾವಣ, ಪಿಪಿಇ ಕಿಟ್‌ಗಳು, ಎನ್–95 ಮಾಸ್ಕ್, ಟ್ರಿಪಲ್ ಲೇಯರ್ ಸರ್ಜಿಕಲ್ ಮಾಸ್ಕ್, ಸ್ಯಾನಿಟೈಸರ್ ಖರೀದಿಸಲು ಹಾಗೂ ಹೋಂ ಐಸೋಲೇಷನ್‌ನಲ್ಲಿರುವವರಿಗೆ ಔಷಧಗಳ ಕಿಟ್ ಖರೀದಿಸಿ ಸರಬರಾಜು ಮಾಡಲು ಅನುದಾನ ಬಳಸಿಕೊಳ್ಳಬಹುದು ಎಂದು ಪಾಲಿಕೆಯ ಆರೋಗ್ಯ ವಿಭಾಗದ ವಿಶೇಷ ಆಯುಕ್ತ ರಾಜೇಂದ್ರ ಚೋಳನ್ ಸೂಚಿಸಿದ್ದಾರೆ.

ಆಧಾರ: ವಿಜಯಕರ್ನಾಟಕ, ದಿನಾಂಕ:24.04.2021.

## 19. ರಾಜ್ಯಕ್ಕೆ ರೆಮ್‌ಡಿಸಿವಿರ್ 1.22 ಲಕ್ಷ, ಆಕ್ಸಿಜನ್ 800 ಟನ್

ಕೇಂದ್ರ ಸರ್ಕಾರ ವಿವಿಧ ರಾಜ್ಯಗಳ ಬೇಡಿಕೆಗೆ ಅನುಗುಣವಾಗಿ ಏಪ್ರಿಲ್ 21 ರಿಂದ 30ರವರೆಗಿನ ರೆಮ್‌ಡಿಸಿವಿರ್ ಚುಚ್ಚುಮದ್ದು ಪೂರೈಕೆಯನ್ನು ಮರುಹಂಚಿಕೆ ಮಾಡಿದ್ದು, ಕರ್ನಾಟಕದ ಪಾಲು 55 ಸಾವಿರ ವೈಯಲ್ಸ್‌ನಿಂದ 1.22 ಲಕ್ಷ ವೈಯಲ್ಸ್‌ಗೆ ಏರಿಕೆಯಾಗಿದೆ.

ಪ್ರತಿನಿತ್ಯದ ಹಂಚಿಕೆ ಮಾಡುವ ಆಕ್ಸಿಜನ್ ಪ್ರಮಾಣವನ್ನು 300 ಟನ್‌ನಿಂದ 800 ಟನ್‌ಗೆ ಹೆಚ್ಚಿಸಿದೆ. ರೆಮ್‌ಡಿಸಿವಿರ್ ಮರುಹಂಚಿಕೆ ಬಗ್ಗೆ ಟ್ವೀಟ್ ಮಾಡಿರುವ ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಸಚಿವ ಡಿ.ವಿ.ಸದಾನಂದ ಗೌಡ ಅವರು, 'ನಾನು ನಿರ್ವಹಿಸುವ ಔಷಧ ಇಲಾಖೆ ಮತ್ತು ಆರೋಗ್ಯ ಇಲಾಖೆ ಮತ್ತು ಉನ್ನತಾಧಿಕಾರದ ಸಮಿತಿ ಈ ನಿರ್ಣಯ ಕೈಗೊಂಡಿದೆ. ಕೊರೋನಾ ವಿರುದ್ಧದ ಹೋರಾಟದಲ್ಲಿ ರಾಜ್ಯಕ್ಕೆ ನಾವು ಸಂಪೂರ್ಣ ಸಹಕಾರ, ನೆರವು ನೀಡುತ್ತೇವೆ' ಎಂದಿದ್ದಾರೆ.

ಮುಖ್ಯಮಂತ್ರಿಯವರು, 'ಕೇಂದ್ರದ ಈ ನಡೆ ಕೋವಿಡ್ ವಿರುದ್ಧದ ಹೋರಾಟಕ್ಕೆ ಬಲ ತುಂಬಲಿದೆ' ಎಂದು ಪ್ರತಿಕ್ರಿಯಿಸಿದ್ದಾರೆ.

ಆಧಾರ: ಪ್ರಜಾವಾಣಿ, ದಿನಾಂಕ:25.04.2021

## 20. ರಾಜ್ಯದಲ್ಲಿ ದಾಖಲೆ 208 ಸಾವು

ಕೊರೋನಾ ವೈರಸ್‌ನ 2ನೇ ಅಲೆ ತನ್ನ ರುದ್ರ ನರ್ತನ ಮುಂದುವರಿಸಿದ್ದು, ರಾಜ್ಯದಲ್ಲಿ ಮೊದಲ ಬಾರಿ ಸೋಂಕಿಗೆ 200ಕ್ಕೂ ಹೆಚ್ಚು ಜನ ಬಲಿಯಾಗಿದ್ದಾರೆ. ದಾಖಲೆಯ 208 ಮಂದಿ ಮೃತಪಟ್ಟಿದ್ದು, ಇನ್ನೊಂದೆಡೆ ದಾಖಲೆಯ 29,438 ಮಂದಿಯಲ್ಲಿ ಸೋಂಕು ದೃಢವಾಗಿದೆ.

190 ಮಂದಿ ಮೃತರಾಗಿದ್ದು, ಈವರೆಗಿನ ಅತಿ ಹೆಚ್ಚು ಸಂಖ್ಯೆಯಾಗಿತ್ತು. ಈ ದಾಖಲೆಯು ಒಂದೇ ದಿನದಲ್ಲಿ ಪುಡಿ ಪುಡಿಯಾಗಿದೆ. ಏಪ್ರಿಲ್ 18 ರಿಂದ ಇಲ್ಲಿಯವರೆಗೆ 1,013 ಮಂದಿ ಕೋವಿಡ್ ಕಾರಣದಿಂದ ಅಸುನೀಗಿದ್ದಾರೆ.

ಕೇವಲ ಏಳು ದಿನದಲ್ಲಿ ಕೊರೋನಾದಿಂದಾಗಿ ಇಷ್ಟೊಂದು ಸಾವಿನ ಪ್ರಕರಣ ರಾಜ್ಯದಲ್ಲಿ ಯಾವತ್ತೂ ವರದಿಯಾಗಿರಲಿಲ್ಲ. ಪ್ರತಿ 7 ನಿಮಿಷಕ್ಕೆ ಒಬ್ಬರು ಕೊರೋನಾ ಸೋಂಕಿನಿಂದ ಪ್ರಾಣ ಕಳೆದುಕೊಂಡಿದ್ದಾರೆ. ಸರ್ಕಾರ ರಾಜ್ಯದ ಮರಣದ ಶೇ.0.50ರ ಒಳಗೆ ಇದೆ ಎಂದು ಹೇಳಿಕೊಳ್ಳುತ್ತಿದ್ದರೂ

ಕೂಡ ಕಳೆದೆರಡು ದಿನಗಳಿಂದ ಶೇ0.70 ಮರಣ ದರ ದಾಖಲಾಗಿದೆ. ರಾಜ್ಯದಲ್ಲಿ ಈವರೆಗೆ ಒಟ್ಟು 13,762 ಮಂದಿ ಸೋಂಕಿನಿಂದ ಮೃತರಾಗಿದ್ದಾರೆ. ಪ್ರತಿ ನಿಮಿಷಕ್ಕೆ 20 ಮಂದಿಯಲ್ಲಿ ಸೋಂಕು ಪತ್ತೆಯಾಗಿದೆ. ಏಪ್ರಿಲ್ 20ರಿಂದ ಈವರೆಗೆ ಒಟ್ಟು 1.27 ಲಕ್ಷ ಮಂದಿಯಲ್ಲಿ ಸೋಂಕು ದೃಢಪಟ್ಟಿದೆ. ಈವರೆಗೆ ಒಟ್ಟು 13.04 ಲಕ್ಷ ಮಂದಿ ಕೋವಿಡ್‌ನಿಂದ ಬಾಧಿತರಾಗಿದ್ದಾರೆ. ಇನ್ನೊಂದೆಡೆ ಅಲ್ಪ ಪ್ರಮಾಣದ ಶುಭ ಸುದ್ದಿಯೂ ಇದ್ದು, 9,058 ಮಂದಿ ಗುಣಮುಖರಾಗಿದ್ದಾರೆ.

**ಐಸಿಯು– ಬೆಂಗಳೂರು ಮೀರಿಸಿದ ಕಲಬುರಗಿ:** ರಾಜ್ಯದಲ್ಲಿ ಸದ್ಯ 2.34 ಲಕ್ಷ ಸಕ್ರಿಯ ಪ್ರಕರಣಗಳಿದ್ದು, ಈ ಪೈಕಿ 1,280 ಮಂದಿ ತೀವ್ರ ನಿಗಾ ವಿಭಾಗದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ, 1,62 ಲಕ್ಷ ಸಕ್ರಿಯ ಪ್ರಕರಣಗಳಿರುವ ಬೆಂಗಳೂರಿನಲ್ಲಿ 259 ಮಂದಿ ಐಸಿಯುನಲ್ಲಿದ್ದಾರೆ. ಕೇವಲ 6,760 ಸಕ್ರಿಯ ಪ್ರಕರಣವಿರುವ ಕಲಬುರಗಿಯಲ್ಲಿ 265 ಮಂದಿ ಐಸಿಯುನಲ್ಲಿ ಚಿಕಿತ್ಸೆ ಪಡೆಯುತ್ತಿದ್ದರೆ. ಕಲಬುರಗಿಯಲ್ಲಿ 175 ಮಂದಿ ಐಸಿಯುನಲ್ಲಿದ್ದರು.

**ಪರೀಕ್ಷಾ ದಾಖಲೆ:** ಕೋವಿಡ್ ಪರೀಕ್ಷೆಯ ಪ್ರಮಾಣ ಹೆಚ್ಚು ಮಾಡುತ್ತಿದ್ದು, 1,89 ಲಕ್ಷ ಪರೀಕ್ಷೆ ನಡೆದು ದಾಖಲೆ ಸೃಷ್ಟಿಯಾಗಿದೆ, ರಾಜ್ಯದ ಪಾಸಿಟಿವಿಟಿ ದರ ಶೇ. 15.52 ವರದಿಯಾಗಿದೆ.

**ಸಾವು, ಸೋಂಕಿತರಲ್ಲಿ ಬೆಂಗಳೂರು ನಂ.1:** ಬೆಂಗಳೂರು ನಗರದಲ್ಲಿ 149 ಮಂದಿ ಕೋವಿಡ್‌ನಿಂದ ಮರಣವನ್ನಪ್ಪಿದ್ದಾರೆ. ಕಲಬುರಗಿ 8, ಕೋಲಾರ 6, ಧಾರವಾಡ 5, ಮೈಸೂರು 4, ಬಳ್ಳಾರಿ, ಬೆಂಗಳೂರು ಗ್ರಾಮಾಂತರ, ಹಾವೇರಿ, ಮಂಡ್ಯ, ಶಿವಮೊಗ್ಗ, ತುಮಕೂರು ತಲಾ 3, ಉತ್ತರ ಕನ್ನಡ, ವಿಜಯಪುರ, ರಾಯಚೂರು, ಕೊಡಗು, ಹಾಸನ, ದಕ್ಷಿಣ ಕನ್ನಡ, ದಾವಣಗೆರೆ ತಲಾ 2, ಬೆಳಗಾವಿ, ಚಾಮರಾಜನಗರ, ಚಿಕ್ಕಮಗಳೂರು, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ತಲಾ ಒಬ್ಬರು ಸೋಂಕಿನಿಂದ ಮೃತರಾಗಿದ್ದಾರೆ. ಬೆಂಗಳೂರಿನಲ್ಲಿ 17,342, ತುಮಕೂರು 1,559, ಹಾಸನ 823, ಕಲಬುರಗಿ 791, ಬಳ್ಳಾರಿ 731, ಮಂಡ್ಯ 688, ಬೆಂಗಳೂರು ಗ್ರಾಮಾಂತರ 684, ಮೈಸೂರು 536, ದಕ್ಷಿಣ ಕನ್ನಡ 517, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 506 ಪ್ರಕರಣ ದಾಖಲಾಗಿದೆ.

ಆಧಾರ: ಕನ್ನಡಪ್ರಭ, ದಿನಾಂಕ:25.04.2021.

## 21. 1.5 ಲಕ್ಷ ಸಕ್ರಿಯ ಕೇಸ್: ಬೆಂಗಳೂರು ದೇಶಕ್ಕೆ ನಂ.1

ಕೊರೋನಾ 2ನೇ ಅಲೆಯಿಂದ ಹೆಚ್ಚು ನಲುಗಿರುವ ಜಿಲ್ಲೆ ದೇಶದಲ್ಲಿ ಯಾವುದಾದರೂ ಇದ್ದರೆ ಅದು ಮುಂಬೈ ಹಾಗೂ ದೆಹಲಿಯಲ್ಲಿ. ಬೆಂಗಳೂರು ಎಂಬ ಆತಂಕಕಾರಿ ಸಂಗತಿ ಬೆಳಕಿಗೆ ಬಂದಿದೆ. ಕರ್ನಾಟಕದಲ್ಲಿ ಪ್ರತಿ ದಿನ ಪತ್ತೆಯಾಗುವ ಸೋಂಕಿಗೆ ಶೇ.70 ರಷ್ಟು ಕೊಡುಗೆ ನೀಡುತ್ತಾ ಬಂದಿರುವ ಬೆಂಗಳೂರಿನಲ್ಲಿ ಸದ್ಯ 1.5 ಲಕ್ಷ ಸಕ್ರಿಯ ಪ್ರಕರಣಗಳು ಇವೆ. ಅತಿ ಹೆಚ್ಚು ಸಕ್ರಿಯ ಪ್ರಕರಣಗಳನ್ನು ಹೊಂದಿರುವ ದೇಶದ 10 ಜಿಲ್ಲೆಗಳಲ್ಲಿ ಬೆಂಗಳೂರು ಪ್ರಥಮ ಸ್ಥಾನದಲ್ಲಿದೆ. ಮಹಾರಾಷ್ಟ್ರದಲ್ಲಿ ಅತಿ ಹೆಚ್ಚು ಕೊರೋನಾ ಪತ್ತೆಯಾಗುತ್ತಿದ್ದರೂ, ಆ ರಾಜ್ಯದಲ್ಲಿ ಅಧಿಕ ಸಕ್ರಿಯ ಪ್ರಕರಣಗಳಿರುವುದು ಪುಣೆಯಲ್ಲಿ 1.20 ಲಕ್ಷ ಸಕ್ರಿಯ ಪ್ರಕರಣಗಳಿದ್ದು, ಬೆಂಗಳೂರು ನಂತರದ 2ನೇ ಸ್ಥಾನದಲ್ಲಿದೆ. ದೇಶದಲ್ಲಿ ಬೆಂಗಳೂರು, ಪುಣೆ ಹೊರತುಪಡಿಸಿದರೆ ಬೇರಾವ ರಾಜ್ಯದ ಜಿಲ್ಲೆಯಲ್ಲೂ 1 ಲಕ್ಷ ಮೇಲ್ಪಟ್ಟ ಸಕ್ರಿಯ ಕೇಸು ಇಲ್ಲ.

ಹೈದರಾಬಾದ್ 94 ಸಾವಿರ ಪ್ರಕರಣಗಳೊಂದಿಗೆ 3ನೇ ಸ್ಥಾನದಲ್ಲಿದೆ. ಮಿಕ್ಕಂತೆ ಟಾಪ್ 10ರ ಪಟ್ಟಿಯಲ್ಲಿ ಮಹಾರಾಷ್ಟ್ರದ 5 ಜಿಲ್ಲೆಗಳು ಇವೆ. ಅವೆಂದರೆ ಪುಣೆ, ಮುಂಬೈ, ನಾಗಪುರ, ಥಾಣೆ, ನಾಸಿಕ್, ಲಖನೌ, ಗುವಾಹಟಿ, ಅಹಮದಾಬಾದ್ ಜಿಲ್ಲೆಗಳು 10ರ ಪಟ್ಟಿಯಲ್ಲಿರುವ ಇತರೆ ಜಿಲ್ಲೆಗಳಾಗಿದೆ. ದೆಹಲಿಯಲ್ಲಿ 11 ಜಿಲ್ಲೆಗಳು ಇವೆ. ಅಷ್ಟೂ ಜಿಲ್ಲೆಗಳಲ್ಲಿ ಒಟ್ಟು 1 ಲಕ್ಷ ಸಕ್ರಿಯ ಪ್ರಕರಣಗಳು ಇವೆ. ದೆಹಲಿಯನ್ನು 1 ಜಿಲ್ಲೆಯಾಗಿ ಪರಿಗಣಿಸಿಲ್ಲ. ಅದರೆ ದಿಲ್ಲಿಗಿಂತ ಚಿಕ್ಕದಿರುವ ಬೆಂಗಳೂರಿನಲ್ಲಿ ಅಧಿಕ ಕೇಸು ಇರುವುದು ಆತಂಕಕಾರಿ.

ಆಧಾರ: ಕನ್ನಡಪ್ರಭ, ದಿನಾಂಕ:25.04.2021.

## 22. ರಾಜ್ಯದಲ್ಲಿ 34508 ಕೇಸ್

ರಾಜ್ಯದಲ್ಲಿ ಕೊರೋನಾ ಇನ್ನಷ್ಟು ವ್ಯಾಪಕವಾಗಿ ಹರಡುತ್ತಿದ್ದು, ಮೊದಲ ಬಾರಿಗೆ ದಾಖಲೆಯ 34,804 ಜನರಲ್ಲಿ ಸೋಂಕು ಕಾಣಿಸಿಕೊಂಡಿದೆ. ಇದೇ ದಿನ 143 ಜನರು ಮೃತಪಟ್ಟಿದ್ದಾರೆ. ಪ್ರತಿ ನೂರು ಪರೀಕ್ಷೆಯಲ್ಲಿ 20 ಮಂದಿಯಲ್ಲಿ ಸೋಂಕು ಕಾಣಿಸಿಕೊಂಡಿದೆ.

ದೇಶದಲ್ಲೇ ಮಹಾರಾಷ್ಟ್ರ ಮತ್ತು ಉತ್ತರ ಪ್ರದೇಶದ ಬಳಿಕ ಒಂದೇ ದಿನದಲ್ಲಿ 30 ಸಾವಿರಕ್ಕಿಂತ ಹೆಚ್ಚು ಪ್ರಕರಣ ಪತ್ತೆಯಾಗಿರುವ ಮೂರನೇ ರಾಜ್ಯ ಕರ್ನಾಟಕ. ನಿಮಿಷವೊಂದಕ್ಕೆ 24 ಮಂದಿ ಸೋಂಕಿತರಾಗುತ್ತಿದ್ದರೆ. ಕಳೆದ 6 ದಿನಗಳಿಂದ ಸೋಂಕಿನ ಪ್ರಕರಣಗಳು ಪ್ರತಿ ದಿನ ಹೆಚ್ಚಾಗುತ್ತಿವೆ. 1.76 ಲಕ್ಷ ಪರೀಕ್ಷೆ ನಡೆದಿದ್ದು ಪಾಸಿಟಿವಿಟಿ ದರ ಶೇ.19.70 ರಷ್ಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 2.62 ಲಕ್ಷಕ್ಕೆ ತಲುಪಿದೆ. ಈ ಪೈಕಿ 1,492 ಮಂದಿ ತೀವ್ರ ನಿಗಾ ವಿಭಾಗದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಹಾವೇರಿ ಮತ್ತು ಚಿತ್ರದುರ್ಗವನ್ನು ಹೊರತುಪಡಿಸಿ ಉಳಿದೆಲ್ಲ ಜಿಲ್ಲೆಗಳಲ್ಲಿ ಸಾವಿರಕ್ಕಿಂತ ಹೆಚ್ಚು ಸಕ್ರಿಯ ಪ್ರಕರಣಗಳಿವೆ.

**ಬೆಂಗಳೂರಿನಲ್ಲಿ 77 ಸಾವು :** 208 ಮಂದಿ ಮರಣವನ್ನಪ್ಪಿದ್ದು ಅತಿ ಹೆಚ್ಚಿನ ಸಂಖ್ಯೆಯಾಗಿತ್ತು. ಭಾನುವಾರ ಸಾವಿನ ಅಬ್ಬರ ತುಸು ಕಡಿಮೆಯಾಗಿದೆ. ಆದರೆ 20 ರಿಂದ 30 ವಯಸ್ಸಿನೊಳಗಿನ ನಾಲ್ವರು ಪ್ರಾಣಕಳೆದುಕೊಂಡಿದಾರೆ. ಬೆಂಗಳೂರು ನಗರದ 77, ಬಳ್ಳಾರಿ 16, ಮೈಸೂರ 9, ಕಲಬುರಗಿ 7, ಧಾರವಾಡ ಮತ್ತು ತುಮಕುರು 6, ಹಾಸನ 4, ಮಂಡ್ಯ 3, ವಿಜಯಪುರ, ಕೋಲಾರ, ಹಾವೇರಿ, ಮತ್ತು ಬೀದರ್ ತಲಾ 2, ಚಾಮರಾಜನಗರ, ಚಿತ್ರದುರ್ಗ, ದಕ್ಷಿಣ ಕನ್ನಡ ದಾವಣಗೆರೆ, ರಾಯಚೂರು, ಶಿವಮೊಗ್ಗ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ತಲಾ ಒಬ್ಬರು ಮರಣವನ್ನಪ್ಪಿದ್ದಾರೆ.

ಕೊಡಗಿನಲ್ಲಿ 1,077 ಪ್ರಕರಣ ಪತ್ತೆಯಾಗಿದೆ. ಈ ಜಿಲ್ಲೆಯಲ್ಲಿ ಸದ್ಯ 2,089 ಸಕ್ರಿಯ ಪ್ರಕರಣಗಳಿದ್ದು. ಇದರ ಅರ್ಧದಷ್ಟು ಪ್ರಕರಣ ಭಾನುವಾರವೇ ಪತ್ತೆಯಾಗಿದೆ. ಬೆಂಗಳೂರಿನಲ್ಲಿ 20,733 ತುಮಕೂರು 1,153 ಪ್ರಕರಣ ಬೆಳಕಿಗೆ ಬಂದಿದೆ. ಹಾವೇರಿಯಲ್ಲಿ 99, ಪ್ರಕರಣ ವರದಿಯಾಗಿದೆ. ಉಳಿದಂತೆ ಬೆಂಗಳೂರು ಗ್ರಾಮಾಂತರ 864, ಮಂಡ್ಯ 814, ಕೋಲಾರ 782, ಹಾಸನ 768, ಬಳ್ಳಾರಿ 732, ಮೈಸೂರು 700, ರಾಯಚೂರು 643, ಕಲಬುರಗಿ 626, ಪ್ರಕರಣ ಪತ್ತೆಯಾಗಿದೆ.

ಆಧಾರ: ಕನ್ನಡಪ್ರಭ, ದಿನಾಂಕ:26.04.2021.

## 23. ಒಂದೇ ತಿಂಗಳಲ್ಲಿ 3 ಲಕ್ಷ ಮಂದಿಗೆ ಸೋಂಕು

ಕೋವಿಡ್–19 ಎರಡನೇ ಅಲೆಗೆ ರಾಜ್ಯದ ರಾಜಧಾನಿ ತತ್ತರಿಸಿದ್ದು, ಕೇವಲ ಒಂದು ತಿಂಗಳಲ್ಲಿ ಬರೋಬ್ಬರಿ 3,21,913 ಮಂದಿಯಲ್ಲಿ ಸೋಂಕು ದೃಢಪಟ್ಟಿದೆ. ಹಾಗೇಯೇ ಬರೋಬ್ಬರಿ 1,756 ಸೋಂಕಿತರು ಮೃತ ಪಟ್ಟಿದ್ದು, ಇಡೀ ನಗರವನ್ನೇ ಆತಂಕಕ್ಕೆ ದೂಡಿದೆ.

ಏಪ್ರಿಲ್ ಆರಂಭದಲ್ಲಿ ಎರಡ್ಮೂರು ಸಾವಿರ ದಾಖಲಾಗುತ್ತಿದ್ದ ಹೊಸ ಪ್ರಕರಣಗಳ ಸಂಖ್ಯೆ ಈಗ 20 ಸಾವಿರಕ್ಕೂ ಅಧಿಕಗೊಂಡಿದೆ. ಸಾವಿನ ಸಂಖ್ಯೆಯಲ್ಲೂ ಏರಿಕೆಯಾಗಿದೆ. ಆರೋಗ್ಯ ಇಲಾಖೆ ಮಾಹಿತಿಯಂತೆ ಮಾರ್ಚ್ ಅಂತ್ಯಕ್ಕೆ ಒಟ್ಟು ಸೋಂಕಿತರ ಸಂಖ್ಯೆ 4,34,827 ಇದ್ದರೆ ಸಕ್ರಿಯ ಪ್ರಕರಣಗಳ ಸಂಖ್ಯೆ 19,613 ಇತ್ತು. ಏಪ್ರಿಲ್ ಅಂತ್ಯಕ್ಕೆ ಒಟ್ಟು ಸೋಂಕಿತರ ಸಂಖ್ಯೆ 7,56,740ಕ್ಕೆ ಏರಿಕೆಯಾಗಿದ್ದರೆ ಸಕ್ರಿಯ ಪ್ರಕರಣಗಳ ಸಂಖ್ಯೆ 2,59,058 ಕ್ಕೆ ಹೆಚ್ಚಳವಾಗಿದೆ.

ಮಾರ್ಚ್ ತಿಂಗಳ ಅಂತ್ಯಕ್ಕೆ ಒಟ್ಟು ಬಿಡುಗಡೆಯಾದವರ ಸಂಖ್ಯೆ 4,10,594 ಇದ್ದರೆ, ಏಪ್ರಿಲ್ ಅಂತ್ಯಕ್ಕೆ 4,91,306ಕ್ಕೆ ತಲುಪಿದೆ. ಅಂದರೆ ಏಪ್ರಿಲ್ ತಿಂಗಳಲ್ಲಿ 80,712 ಮಂದಿ ಮಾತ್ರ ಕೋವಿಡ್‌ನಿಂದ ಗುಣಮುಖರಾಗಿರುತ್ತಾರೆ. ಆರೋಗ್ಯ ಇಲಾಖೆ ಮಾಹಿತಿಯಂತೆ ಮೇ ತಿಂಗಳಲ್ಲಿ ಎರಡನೇ ಅಲೆಯು ಮತ್ತಷ್ಟು ತೀವ್ರ ಸ್ವರೂಪ ಪಡೆದುಕೊಳ್ಳುವ ಸಾಧ್ಯತೆ ಇದೆ. ರಾಜ್ಯ ಸರ್ಕಾರ ಸೋಂಕು ಹರಡುವುದನ್ನು ತಡೆಯುವ ಉದ್ದೇಶದಿಂದ ರಾಜ್ಯದಲ್ಲಿ ಮೇ 10 ರವರೆಗೆ ಜನತಾ ಕರ್ಫ್ಯೂ ಜಾರಿಗೊಳಿಸಿದರೂ ಕೂಡ ಸೋಂಕು ಹರಡುವುದು ಕಡಿಮೆಯಾಗುತ್ತಿಲ್ಲ. ಇದಕ್ಕೆ ಜನರ ನಿರ್ಲಕ್ಷ್ಯ ಕಾರಣ. ಜೊತೆಗೆ ಸೋಂಕಿತರ

ನಿರ್ವಹಣೆಯಲ್ಲೂ ವಿಫಲವಾಗುತ್ತಿರುವುದೇ ಸೋಂಕು ಉಲ್ಬಣಕ್ಕೆ ಪ್ರಮುಖ ಕಾರಣ ಎಂದು ತಜ್ಞರು ಎಚ್ಚರಿಸಿದ್ದಾರೆ.

ಆಧಾರ: ಕನ್ನಡಪ್ರಭ, ದಿನಾಂಕ:02.05.2021.

## 24. ಐದು ಸಚಿವರಿಗೆ ಕೋವಿಡ್ ಹೊಣೆ

ಕೋವಿಡ್‌ನಿಂದಾಗಿ ರಾಜ್ಯದಲ್ಲಿ ಹದಗೆಡುತ್ತಿರುವ ಪರಿಸ್ಥಿತಿಯನ್ನು ಹತೋಟಿಗೆ ತರಲು ಸಚಿವ ಸಂಪುಟ ಮಹತ್ವದ ಕ್ರಮ ಕೈಗೊಂಡಿದೆ. ಆಮ್ಲಜನಕ ಪೂರೈಕೆ, ರೆಮಡೆಸಿವಿರ್, ಖಾಸಗಿ ಮತ್ತು ಸರ್ಕಾರಿ ಆಸ್ಪತ್ರೆಗಳಲ್ಲಿನ ಹಾಸಿಗೆ ಲಭ್ಯತೆ ಮತ್ತು ವಾರ್ ರೂಂಗಳೆಂಬ 4 ವಿಭಾಗ ರಚಿಸಲಾಗಿದ್ದು, ಇವುಗಳಿಗೆ 5 ಸಚಿವರನ್ನು ಉಸ್ತುವಾರಿಯನ್ನಾಗಿ ನೇಮಕ ಮಾಡಲಾಗಿದೆ.

ಹೊಣೆಗಾರಿಕೆ ನೀಡಿರುವ ಜಿಲ್ಲೆಗಳಿಗೆ ತೆರಳದೆ ಬೆಂಗಳೂರು ಅಥವಾ ತವರು ಜಿಲ್ಲೆಯಲ್ಲಿ ನೆಲೆಸಿರುವ ಜಿಲ್ಲಾ ಉಸ್ತುವಾರಿ ಸಚಿವರ ವಿರುದ್ಧ ಮುಖ್ಯಮಂತ್ರಿಯವರು ಗರಂ ಆಗಿದ್ದು, ತಮಗೆ ವಹಿಸಿರುವ ಉಸ್ತುವಾರಿ ಜಿಲ್ಲೆಗಳಿಗೆ ತೆರಳಿ ಕೋವಿಡ್ ಪರಿಸ್ಥಿತಿಯನ್ನು ಸರಿಯಾಗಿ ನಿರ್ವಹಣೆ ಮಾಡುವಂತೆ ಖಡಕ್ ಸೂಚನೆ ನೀಡಿದ್ದಾರೆ.

ಚಾಮರಾಜನಗರ ಜಿಲ್ಲೆಯಲ್ಲಿ ನಡೆದ ಆಕ್ಸಿಜನ್ ದುರಂತದ ಬಗ್ಗೆ ಸುದೀರ್ಘ ಚರ್ಚೆ ನಡೆದ ಬಳಿಕ ರಾಜ್ಯದಲ್ಲಿ ಕೋವಿಡ್ ನಿರ್ವಹಣೆ ಸಮರ್ಪಕವಾಗಿ ನಡೆಸುವ ಉದ್ದೇಶದಿಂದ ಸಚಿವರಿಗೆ ಉಸ್ತುವಾರಿ ನೀಡಲಾಗಿದೆ. ಆಮ್ಲಜನಕ ಪೂರೈಕೆ ನಿರ್ವಹಣೆ, ರೆಮ್‌ಡೆಸಿವಿರ್ ಸರಬರಾಜು, ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಯಲ್ಲಿನ ಹಾಸಿಗೆಗಳ ಲಭ್ಯ ಮತ್ತು ಕಾಲ್ ಸೆಂಟರ್ ಹಾಗೂ ವಾರ್ ರೂಂಗಳ ಉಸ್ತುವಾರಿಗಳನ್ನು ನಿಯೋಜನೆ ಮಾಡಲಾಗಿದೆ.

**ಹೊಣೆ ವಿವರ ಇಂತಿದೆ:**

***ಜಗದೀಶ್ ಶೆಟ್ಟರ್:*** ಆಕ್ಸಿಜನ್ ಸರಬರಾಜು ಮೇಲ್ವಿಚಾರಣೆ. ಕೇಂದ್ರದೊಂದಿಗೆ ಸತತ ಸಂಪರ್ಕ ಸಾಧಿಸಿ ರಾಜ್ಯಕ್ಕೆ ಅಗತ್ಯ ಇರುವ ಆಕ್ಸಿಜನ್ ಅನ್ನು ಹಂಚಿಕೆ ಪಡೆಯುವುದು. ರಾಜ್ಯದ ಆಕ್ಸಿಜನ್ ಬೇಡಿಕೆ ಇರುವ ಸರಬರಾಜು ಮಾಡಲು ಕ್ರಮ ಕೈಗೊಳ್ಳುವುದು.

***ಡಾ.ಸಿ.ಎನ್.ಅಶ್ವಥ್‌ನಾರಾಯಣ್:*** ರೆಮ್‌ಡೆಸಿವಿರ್ ಮತ್ತು ಇತರೆ ಔಷಧಿ ಅಗತ್ಯತೆಗಳ ನಿರ್ವಹಣೆ ಹಾಗೂ ಮಾನವ ಸಂಪನ್ಮೂಲ ನಿರ್ವಹಣೆ ಮೇಲ್ವಿಚಾರಣೆ. ಔಷಧ ಸರಬರಾಜು ಕಂಪನಿಗಳು, ಸಿ ಮತ್ತು ಎಫ್ ಏಜೆಂಟರು ಮತ್ತು ವಿತರಕರೊಂದಿಗೆ ಸತತ ಸಂಪರ್ಕದಲ್ಲಿದ್ದು, ರಾಜ್ಯದಲ್ಲಿ ಕೋವಿಡ್ ಸಂಬಂಧಿಸಿದ ಔಷಧಗಳ ಕೊರತೆಯಾಗದಂತೆ ಎಲ್ಲ ಕ್ರಮ ಕೈಗೊಳ್ಳುವುದು. ಸಮನ್ವಯ ಸಾಧಿಸಿ ರಾಜ್ಯದಲ್ಲಿ ಲಭ್ಯವಿರುವ ವೈದ್ಯಕೀಯ, ನರ್ಸಿಂಗ್, ಆಯುಷ್. ಇತರೆ ವೈದ್ಯ ವಿಜ್ಞಾನ ಕೋರ್ಸ್‌ಗಳ ಅಂತಿಮ ವರ್ಷದ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳನ್ನು ಕೋವಿಡ್ ನಿರ್ವಹಣೆ ಕಾರ್ಯಕ್ಕೆ ತೊಡಗಿಸಿಕೊಳ್ಳುವುದು.

***ಬಸವರಾಜ ಬೊಮ್ಮಾಯಿ, ಆರ್. ಅಶೋಕ್:*** ಖಾಸಗಿ ಮತ್ತು ಸರ್ಕಾರಿ ಆಸ್ಪತ್ರೆ, ವೈದ್ಯ ಕಾಲೇಜಿನಲ್ಲಿನ ಹಾಸಿಗೆ ವ್ಯವಸ್ಥೆ, ಸಮಸ್ಯೆ ನಿವಾರಣೆಯ ಮೇಲ್ವಿಚಾರಣೆ. ರಾಜ್ಯದಲ್ಲಿನ ಎಲ್ಲ ಖಾಸಗಿ ಮತ್ತು ಸರ್ಕಾರಿ ಆಸ್ಪತ್ರೆ, ವೈದ್ಯಕೀಯ ಕಾಲೇಜುಗಳಲ್ಲಿನ ಗರಿಷ್ಠ ಪ್ರಮಾಣದಲ್ಲಿ ರೋಗಿಗಳಿಗೆ ಹಾಸಿಗೆಗಳು ಲಭ್ಯವಾಗುವಂತೆ ಮಾಡಲು ಮತ್ತು ಹೆಚ್ಚು ಆಕ್ಸಿಜನೇಟೆಡ್ ಹಾಸಿಗೆಗಳನ್ನು ವ್ಯವಸ್ಥೆ ಮಾಡಲು ಕ್ರಮ.

***ಅರವಿಂದ್ ಲಿಂಬಾವಳಿ:*** ವಾರ್ ರೂಂ, ಕಾಲ್ ಸೆಂಟರ್‌ಗಳ ನಿರ್ವಹಣೆ. ವಾರ್ ರೂಂ, ಕಾಲ್ ಸೆಂಟರ್‌ಗಳ ಕಾರ್ಯನಿರ್ವಹಣೆ ಮೇಲೆ ನಿಗಾವಹಿಸಿ ಸೋಂಕಿತರಿಗೆ ಅಗತ್ಯ ಇರುವ ವೈದ್ಯಕೀಯ ನೆರವು ಒದಗಿಸಲು ಎಲ್ಲಾ ಅಗತ್ಯ ಕ್ರಮ ಕೈಗೊಳ್ಳುವುದು.

ಆಧಾರ: ಕನ್ನಡಪ್ರಭ, ದಿನಾಂಕ:05.05.2021.

## 25. 18 ವರ್ಷ ಮೇಲ್ಪಟ್ಟವರಿಗೆ ಇಂದಿನಿಂದ ಸರ್ಕಾರಿ ಆಸ್ಪತ್ರೆಗಳಲ್ಲಿ ಲಸಿಕೆ

ರಾಜ್ಯದಲ್ಲಿ ಮೇ 10 ರಿಂದ 18–45 ವರ್ಷದ ಒಳಗಿನ ವಯೋಮಾನದವರಿಗೆ ಕೋವಿಡ್ ಲಸಿಕೆ ಅಭಿಯಾನ ಅಧಿಕೃತವಾಗಿ ಆರಂಭವಾಗಲಿದೆ. ಸದ್ಯ ಸೀಮಿತ ಆಸ್ಪತ್ರೆಗಳಲ್ಲಿ ಮಾತ್ರ ಲಸಿಕೆ ಸಿಗಲಿದೆ.

ಈ ಬಗ್ಗೆ ಟ್ವೀಟ್ ಮೂಲಕ ಮಾಹಿತಿ ಹಂಚಿಕೊಂಡಿರುವ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಚಿವ ಡಾ.ಕೆ.ಸುಧಾಕರ್, ಮೇ 10 ರಿಂದ ಬೆಂಗಳೂರಿನ ಕೆ.ಸಿ.ಜನರಲ್, ಜಯನಗರ ಸರ್ಕಾರಿ ಆಸ್ಪತ್ರೆ, ಸರ್ ಸಿ.ವಿ. ರಾಮನ್ ಆಸ್ಪತ್ರೆ, ಇಎಸ್ಐ ಮತ್ತು ನಿಮ್ಹಾನ್ಸ್ ಆಸ್ಪತ್ರೆ ಹಾಗೂ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಕೋವಿಡ್ ಲಸಿಕೆ ನೀಡುತ್ತೇವೆ. ಉಳಿದಂತೆ ಜಿಲ್ಲೆಗಳಲ್ಲಿ ಜಿಲ್ಲಾಸ್ಪತ್ರೆ, ತಾಲ್ಲೂಕು ಸರ್ಕಾರಿ ಆಸ್ಪತ್ರೆ ಹಾಗೂ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಲಸಿಕೆ ನೀಡಲಾಗುವುದು ಎಂದು ಹೇಳಿದ್ದಾರೆ.

ವಯೋಮಾನದವರಿಗೆ ಲಸಿಕೆ ವಿತರಿಸುವ ಎಲ್ಲ ಕೇಂದ್ರಗಳಲ್ಲಿ ಪ್ರತ್ಯೇಕ ಸ್ಥಳ ಗುರುತಿಸಲಾಗುವುದು, ನೋಂದಣಿ ಇಲ್ಲದೆ ನೇರವಾಗಿ ಲಸಿಕೆ ಕೇಂದ್ರಕ್ಕೆ ಬರುವವರಿಗೆ ಅವಕಾಶವಿಲ್ಲ. ಕೋವಿನ್ ಪೋರ್ಟಲ್ ಅಥವಾ ಆರೋಗ್ಯ ಸೇತು ಆ್ಯಪ್ ಮೂಲಕ ಲಸಿಕೆ ನೀಡಲಾಗುವುದು. ಲಸಿಕೆ ಪೂರೈಕೆ ಹೆಚ್ಚಾಗುತ್ತಿದ್ದಂತೆ ಇನ್ನಷ್ಟು ಲಸಿಕೆ ಕೇಂದ್ರಗಳಲ್ಲಿ ಲಸಿಕೆ ವಿತರಣೆ ಆರಂಭಿಸಲಾಗುವುದು. ಎಲ್ಲರಿಗೂ ಲಸಿಕೆ ಸಿಗಲಿದ್ದು, ಯುವ ಮಿತ್ರರು ತಾಳ್ಮೆಯಿಂದ ಕಾಯಬೇಕು ಎಂದು ಅವರು ತಿಳಿಸಿರುತ್ತಾರೆ.

ರಾಜ್ಯದಲ್ಲಿ 18 ರಿಂದ 44 ವರ್ಷದೊಳಗಿನ 3.26 ಕೋಟಿ ಜನರಿದ್ದಾರೆ. ಇವರೆಲ್ಲರಿಗೂ ಲಸಿಕೆ ಕೊಡಲು ಒಟ್ಟು 6.52 ಕೋಟಿ ಡೋಸ್ ಬೇಕಾಗಬಹುದು ಎಂದು ಅಂದಾಜಿಸಲಾಗಿದೆ. ಇದಕ್ಕಾಗಿ ಸರ್ಕಾರದಿಂದ 2 ಕೊಟಿ ಕೋವಿಶೀಲ್ಡ್, 1 ಕೋಟಿ ಕೋವ್ಯಾಕ್ಸಿನ್ ಲಸಿಕೆ ಡೋಸ್ ಬೇಡಿಕೆ ಇಟ್ಟಿದ್ದೇವೆ. ಸೀರಂ ಸಂಸ್ಥೆಯಿಂದ ಈವರೆಗೆ 6.5 ಲಕ್ಷ ಡೋಸ್ ಕೋವಿಶೀಲ್ಡ್ ಲಸಿಕೆ ಪಡೆಯಲಾಗಿದೆ. ಇನ್ನಷ್ಟು ಲಸಿಕೆ ಮೇ 2 ಅಥವಾ 3ನೇ ವಾರ ರಾಜ್ಯಕ್ಕೆ ಬರಲಿದೆ ಎಂದು ಅವರು ಹೇಳಿರುತ್ತಾರೆ.

ಆಧಾರ: ಕನ್ನಡಪ್ರಭ, ದಿನಾಂಕ:10.05.2021.

## 26. 3ನೇ ಅಲೆ ತಡೆಗೆ ಟಾಸ್ಕ್ ಫೋರ್ಸ್: ಸಿಎಂ ಸೂಚನೆ

ಕೊರೋನಾ ಮೂರನೇ ಅಲೆ ತಡೆಗೆ ಈಗಿನಿಂದಲೇ ಟಾಸ್ಕ್ ಫೋರ್ಸ್ ಸಮಿತಿ ರಚನೆ ಮಾಡಲು ಕಾರ್ಯೋನ್ಮುಖವಾಗುವಂತೆ ಮುಖ್ಯಮಂತ್ರಿಯವರು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಮೂರನೇ ಅಲೆಯಲ್ಲಿ ಮಕ್ಕಳಿಗೆ ಹೆಚ್ಚು ತೊಂದರೆಯಾಗಲಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿರುವ ಹಿನ್ನೆಲೆಯಲ್ಲಿ ಕಾರ್ಯಪಡೆಯಲ್ಲಿ ಮಕ್ಕಳ ತಜ್ಞರನ್ನು ಸೇರ್ಪಡೆ ಮಾಡಿಕೊಳ್ಳುವಂತೆ ಸೂಚಿಸಿದ್ದಾರೆ. ಕೋವಿಡ್ ಪರಿಸ್ಥಿತಿ ಕುರಿತು ಅಧಿಕೃತ ನಿವಾಸ ಕಾವೇರಿಯಲ್ಲಿ ಸಚಿವರು ಮತ್ತು ಅಧಿಕಾರಿಗಳ ಜೊತೆ ಸಭೆ ನಡೆಸಿದ ಅವರು, ಹೆಚ್ಚುತ್ತಿರುವ ಕೋವಿಡ್ ಸೋಂಕನ್ನು ನಿಯಂತ್ರಿಸಲು ಸಚಿವರುಗಳಿಗೆ ನೀಡಿರುವ ಜವಾಬ್ದಾರಿಯಲ್ಲಿ ಎಲ್ಲಿಯೂ ಯಾವುದೇ ರೀತಿಯ ಕೊರತೆಯಾಗದಂತೆ ನೋಡಿಕೊಳ್ಳಬೇಕು ಎಂದು ಸೂಚನೆ ನೀಡಿದರು. ತುರ್ತು ಅಗತ್ಯವಿರುವ ರೋಗಿಗಳಿಗೆ ಹಾಸಿಗೆ ಹಂಚಿಕೆಗೆ ಕ್ರಮ ಕೈಗೊಳ್ಳಬೇಕು. ರೆಮ್‌ಡೆಸಿವಿರ್ ಪೂರೈಕೆಯನ್ನು ಅಗತ್ಯತೆಗನುಗುಣವಾಗಿ ಸರಬರಾಜು ಮಾಡಲು ಕ್ರಮ ತೆಗೆದುಕೊಳ್ಳಬೇಕು. ಖಾಸಗಿ ಆಸ್ಪತ್ರೆಗಳ ಹಾಸಿಗೆ ಬಗ್ಗೆ ನಿಗಾವಹಿಸಬೇಕು. ಆಮ್ಲಜನಕ, ರೆಮ್‌ಡೆಸಿವಿರ್, ಹಾಸಿಗೆ ಸೇರಿದಂತೆ ಇತರೆ ವಿಷಯದಲ್ಲಿ ಅಕ್ರಮ ಉಂಟಾದರೆ ಕೂಡಲೇ ಕ್ರಮ ಕೈಗೊಳ್ಳಬೇಕು. ವಾರ್ ರೂಂಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಂತೆ ಮಾಡಬೇಕು. ಹಂತ–ಹಂತವಾಗಿ ವೈದ್ಯಕೀಯ ಕಾಲೇಜು, ಆಸ್ಪತ್ರೆಗಳಿಗೆ ಆಮ್ಲಜನಕ ಜನರೇಟರ್ ಪ್ಲಾಂಟ್ ಹಾಕಲು ಈಗಿನಿಂದಲೇ ಕೆಲಸ ಪ್ರಾರಂಭಿಸಬೇಕು. ಶಾಸಕರು ಮತ್ತು ಸಚಿವರು ತಮ್ಮ ಕ್ಷೇತ್ರದಲ್ಲಿದ್ದು ಜಿಲ್ಲೆಗಳ ಕೊರೋನಾ ಪರಿಸ್ಥಿತಿ ಹತೋಟಿಗೆ ತರಲು ಶ್ರಮಿಸಬೇಕು ಎಂದು ಸೂಚಿಸಿದರು.

ಆಧಾರ: ಕನ್ನಡಪ್ರಭ, ದಿನಾಂಕ:11.05.2021.

## 27. ಮೇವಿನ ಕೊರತೆ ಇಲ್ಲ: ಪ್ರಭು ಚವ್ಹಾಣ್

ರಾಜ್ಯದಲ್ಲಿ ಮೇವಿನ ಕೊರತೆ ಎದುರಾಗದಂತೆ ಪಶುಸಂಗೋಪನೆ ಇಲಾಖೆಯ ಎಲ್ಲ ಉಪ ನಿರ್ದೇಶಕರಿಗೆ ಸೂಚಿಸಲಾಗಿದ್ದು ಯಾವುದೇ ಜಿಲ್ಲೆಯಲ್ಲಿ ಮೇವಿನ ಅಭಾವ ಎದುರಾದರೆ ಜಿಲ್ಲಾಧಿಕಾರಿಗಳೊಂದಿಗೆ ಸಭೆ ನಡೆಸಿ ರೈತರಿಗೆ ಮೇವಿನ ವ್ಯವಸ್ಥೆ ಮಾಡಲು ಸೂಚಿಸಲಾಗಿದೆ ಎಂದು ಪಶುಸಂಗೋಪನೆ ಸಚಿವ ಪ್ರಭು ಚವ್ಹಾಣ್ ತಿಳಿಸಿದ್ದಾರೆ.

ಸದ್ಯ ರಾಜ್ಯದಲ್ಲಿ 115 ಲಕ್ಷ ದನ ಮತ್ತು ಎಮ್ಮೆಗಳು, 172 ಲಕ್ಷ ಕುರಿ ಮೇಕೆಗಳಿದ್ದು ಸುಮಾರು 167 ಲಕ್ಷ ಮೆಟ್ರಿಕ್ ಟನ್ ಮೇವು 31 ವಾರಗಳಿಗೆ ಆಗುವಷ್ಟು ಲಭ್ಯವಿದೆ. ದಿನ ಒಂದಕ್ಕೆ ಮೇವು ಅವಲಂಬಿತ ದೊಡ್ಡ ಹಾಗೂ ಸಣ್ಣ ಗಾತ್ರದ ಜಾನುವಾರುಗಳು ಸರಾಸರಿ 0.5 ಕೆಜಿಯಿಂದ 6 ಕೆ.ಜಿ. ಆಹಾರ ಬಳಕೆಯ ಸಾಮರ್ಥ್ಯವಿದ್ದು, ಒಂದು ವಾರಕ್ಕೆ ಸುಮಾರು 5.41 ಲಕ್ಷ ಮೆಟ್ರಿಕ್ ಟನ್ ಮೇವು ಬಳಕೆ ಆಗುತ್ತದೆ. ರೈತರಿಗೆ ಮತ್ತು ಜಾನುವಾರು ಸಾಕಣೆದಾರರಿಗೆ ರಾಜ್ಯದಲ್ಲೇ ಒಟ್ಟು 1,33,971 ಮೇವಿನ ಬೀಜದ ಮಿನಿ ಕಿಟ್‌ಗಳನ್ನು ಸಹ 2020-21ನೇ ಸಾಲಿನಲ್ಲಿ ವಿತರಿಸಲಾಗಿದೆ ಎಂದು ಅವರು ಪ್ರಕಟಣೆಯಲ್ಲಿ ಮಾಹಿತಿ ನೀಡಿದ್ದಾರೆ.

**ಜಿಲ್ಲಾವಾರು ಮೇವಿನ ಲಭ್ಯತೆ:** ಬೆಂಗಳೂರು ನಗರದಲ್ಲಿ 25, ಬೆಂಗಳೂರು ಗ್ರಾಮಾಂತರ 21, ರಾಮನಗರ 24, ಕೋಲಾರ 33, ಚಿಕ್ಕಬಳ್ಳಾಪುರ 33, ತುಮಕೂರು 36, ಚಿತ್ರದುರ್ಗ 34, ದಾವಣಗೆರೆ 33, ಶಿವಮೊಗ್ಗ 16, ಮೈಸೂರು 18, ಚಾಮರಾಜನಗರ 23, ಮಂಡ್ಯ 33, ಕೊಡಗು 18, ದಕ್ಷಿಣ ಕನ್ನಡ 30, ಉಡುಪಿ 22, ಚಿಕ್ಕಮಗಳೂರು 32, ಹಾಸನ 27, ಬೆಳಗಾವಿ 31, ವಿಜಯಪುರ 29, ಧಾರವಾಡ 43, ಗದಗ 29, ಹಾವೇರಿ 63, ಉತ್ತರಕನ್ನಡ 13, ಬಾಗಲಕೋಟೆ 36, ಕಲಬುರಗಿ 54, ಯಾದಗಿರಿ 27, ಬೀದರ್ 28, ರಾಯಚೂರು 36, ಬಳ್ಳಾರಿ 48, ಮತ್ತು ಕೊಪ್ಪಳ 17 ಟನ್ ಹೀಗೆ ಕನಿಷ್ಟ ಪ್ರಮಾಣದಲ್ಲಿ ಎಲ್ಲ ಜಿಲ್ಲೆಗಳಲ್ಲಿ ಮಳೆ ಬಂದಿರುವುದರಿಂದ ಹಸಿ ಮೇವು ಸಹ ಲಭ್ಯವಿದೆ ಎಂದು ತಿಳಿದು ಬಂದಿದೆ. ಯಾವುದೇ ಜಿಲ್ಲೆಯಿಂದ ಮೇವಿನ ಕೊರತೆ ವರದಿಯಾಗಿಲ್ಲ. ಆದರೂ ಇಲಾಖೆಯ ಎಲ್ಲ ಅಧಿಕಾರಿಗಳಿಗೆ ಜಿಲ್ಲೆ ಹಾಗೂ ತಾಲ್ಲೂಕು ಮಟ್ಟದಲ್ಲಿ ಜಾನುವಾರು ಸಾಕಣೆದಾರರಿಗೆ ಹಾಗೂ ರೈತರಿಗೆ ಮೇವಿನ ಕೊರತೆ ಎದುರಾಗದಂತೆ ನೋಡಿಕೊಳ್ಳಲು ಸಚಿವರು ಸೂಚನೆ ನೀಡಿದ್ದಾರೆ.

ಆಧಾರ: ಕನ್ನಡಪ್ರಭ, ದಿನಾಂಕ:18.05.202

## 28. ಬ್ಲಾಕ್ ಫಂಗಸ್‌ಗೆ ಉಚಿತವಾಗಿ ಚಿಕಿತ್ಸೆ

ಕೊರೋನಾ ಸೋಂಕಿತರನ್ನು ಸದ್ದಿಲ್ಲದೆ ಬಲಿ ಪಡೆಯುತ್ತಿರುವ ಹಾಗೂ ದೃಷ್ಟಿಹೀನರನ್ನಾಗಿ ಮಾಡುತ್ತಿರುವ ಮಾರಕ 'ಬ್ಲಾಕ್ ಫಂಗಸ್' ಕಾಯಿಲೆಗೆ ಉಚಿತ ಚಿಕಿತ್ಸೆ ನೀಡುವುದಾಗಿ ರಾಜ್ಯ ಸರ್ಕಾರ ಮಹತ್ವದ ಘೋಷಣೆ ಮಾಡಿದೆ. ಬ್ಲಾಕ್ ಫಂಗಸ್‌ನ್ನು ಅಧಿಸೂಚಿತ ಕಾಯಿಲೆಯೆಂದು ಪರಿಗಣಿಸಿದೆ. ಯಾವುದೇ ವೈದ್ಯರು ಈ ಕಾಯಿಲೆಯನ್ನು ಮುಚ್ಚಿಡುವಂತಿಲ್ಲ. ಅತಿಯಾದ ಸ್ಟೆರಾಯ್ಡ್ ಬಳಕೆಯೂ ಬ್ಲಾಕ್ ಫಂಗಸ್‌ಗೆ ಕಾರಣವಾಗಿರುವ ಹಿನ್ನೆಲೆಯಲ್ಲಿ ವೈದ್ಯರ ಸಲಹೆ ಇಲ್ಲದೆ ಸ್ಟೆರಾಯ್ಡ್ ಬಳಸುವಂತಿಲ್ಲ ಎಂದು ಕಟ್ಟುನಿಟ್ಟಿನ ಸೂಚನೆಯನ್ನು ಸರ್ಕಾರ ನೀಡಿದೆ.

ಈ ಫಂಗಸ್ ಚಿಕಿತ್ಸೆಗೆ ಬೆಂಗಳೂರಿನ ಬೌರಿಂಗ್ ಆಸ್ಪತ್ರೆಯಲ್ಲಿ ಪ್ರಧಾನ ಚಿಕಿತ್ಸಾ ಘಟಕ ಹಾಗೂ ರಾಜ್ಯಾದ್ಯಾಂತ 6 ಕಡೆ ಪ್ರಾದೇಶಿಕ ಚಿಕಿತ್ಸಾ ಕೇಂದ್ರಗಳು ಆರಂಭವಾಗಿವೆ ಎಂದು ಪ್ರಕಟಿಸಿದೆ. ಬ್ಲಾಕ್ ಫಂಗಸ್ ಚಿಕಿತ್ಸೆ ಕುರಿತಂತೆ ವಿಕ್ಟೋರಿಯಾ ಆಸ್ಪತ್ರೆ ಇಎನ್‌ಟಿ ಮುಖ್ಯಸ್ಥ ಡಾ.ಎಚ್.ಎಸ್.ಸತೀಶ್ ನೇತೃತ್ವದಲ್ಲಿ ರಚಿಸಿರುವ ತಜ್ಞರ ಸಮಿತಿಯೊಂದಿಗೆ ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಸಭೆ ನಡೆಸಿದರು.

ಆಧಾರ: ಕನ್ನಡಪ್ರಭ, ದಿನಾಂಕ:18.05.2021.

## 29. ಕಡಿಮೆಯಾದರೂ ಕೊರೋನಾ ಏರಲಿದೆ ಮರಣ ಪ್ರಮಾಣ

ರಾಜ್ಯದಲ್ಲಿನ ಕೊರೋನಾ ಸೋಂಕಿತರಲ್ಲಿ ಸದ್ಯ ಮೂರು ಸಾವಿರಕ್ಕೂ ಅಧಿಕ ಮಂದಿ ತೀವ್ರ ನಿಗಾ ಘಟಕದಲ್ಲಿ (ಐಸಿಯು) ಸಾವು–ಬದುಕಿನ ನಡುವೆ ಹೋರಾಟ ನಡೆಸುತ್ತಿದ್ದಾರೆ. ಹತ್ತು ಸಾವಿರಕ್ಕೂ ಅಧಿಕ ಮಂದಿ ವೈದ್ಯಕೀಯ ಆಮ್ಲಜನಕದ ಸಂಪರ್ಕದಲ್ಲಿದ್ದಾರೆ. ಇನ್ನೂ ಎರಡು ವಾರ ಮರಣ ಪ್ರಮಾಣ ದರ ಏರುಗತಿಯಲ್ಲಿಯೇ ಇರಲಿದೆ ಎಂದು ತಜ್ಞರು ಕಳವಳ ವ್ಯಕ್ತಪಡಿಸಿದರು.

ಕಳೆದ ವರ್ಷಾಂತ್ಯಕ್ಕೆ ನಿಯಂತ್ರಣಕ್ಕೆ ಬಂದಿದ್ದ ಕೋವಿಡ್, ಎರಡನೇ ಅಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಾವು–ನೋವಿಗೆ ಕಾರಣವಾಗಿದೆ. 2020ರ ಮಾರ್ಚ್ 8ರಂದು ಕಾಣಿಸಿಕೊಂಡಿದ್ದ ಸೋಂಕು, ಜೂನ್ ಬಳಿಕ ವೇಗ ಪಡೆದು ಕೊಂಡಿತ್ತು. ಅಕ್ಟೋಬರ್ ಬಳಿಕ ಸೋಂಕು ದೃಢ ಪ್ರಮಾಣ ದರ ಹಾಗೂ ಮರಣ ಪ್ರಮಾಣ ದರ ಇಳಿಮುಖ ಕಂಡಿತ್ತು. ಡಿಸೆಂಬರ್ ಅಂತ್ಯಕ್ಕೆ ಸೋಂಕು ದೃಢ ಪ್ರಮಾಣ ಶೇ0.82 ಹಾಗೂ ಮರಣ ಪ್ರಮಾಣ ಶೇ0.94 ರಷ್ಟಿತ್ತು. ಆ ವೇಳೆಗೆ 12,090 ಮಂದಿ ಮೃತಪಟ್ಟಿದ್ದರು ಒಟ್ಟು ಸೋಂಕಿತರ ಸಂಖ್ಯೆ 9.19 ಲಕ್ಷದಷ್ಟಿತ್ತು.

ಮೊದಲ ಅಲೆಯಲ್ಲಿ 60 ವರ್ಷ ಮೇಲ್ಪಟ್ಟವರು ಹೆಚ್ಚಿನ ಸಂಖ್ಯೆಯಲ್ಲಿ ಸೋಂಕಿತರಾಗಿ, ಅಸ್ವಸ್ಥರಾಗಿದ್ದರು. ಎರಡನೇ ಅಲೆಯಲ್ಲಿ ಮಧ್ಯಮ ವಯಸ್ಕರು ಅಧಿಕ ಸಂಖ್ಯೆಯಲ್ಲಿದ್ದಾರೆ. ಈಗ ಮೃತಪಡುತ್ತಿರುವವರಲ್ಲಿ ಅರ್ಧದಷ್ಟು ಮಂದಿ 50 ವರ್ಷದೊಳಗಿನವರಾಗಿದ್ದಾರೆ. ತಡವಾಗಿ ಆಸ್ಪತ್ರೆ ಸೇರುವಿಕೆ, ಹಾಸಿಗೆ ಸಿಗದೆಯೇ ಆಸ್ಪತ್ರೆಯಿಂದ ಆಸ್ಪತ್ರಗೆ ಅಲೆದಾಟ, ಆಮ್ಲಜನಕ ಪೂರೈಕೆಯಲ್ಲಿನ ವ್ಯತ್ಯಯ ಸೇರಿದಂತೆ ವಿವಿಧ ಕಾರಣಗಳಿಂದ ಏಪ್ರಿಲ್ ಬಳಿಕ ಕೋವಿಡ್‌ಗೆ ಮರಣ ಹೊಂದುವವರ ಸಂಖ್ಯೆಯೇ ಗಣನೀಯ ಏರುಗತಿ ಪಡೆದಿದೆ.

ಈ ವರ್ಷ ಐದು ತಿಂಗಳೊಳಗೆ 14.309 ಮಂದಿ ಸಾವಿಗೀಡಾಗಿದ್ದಾರೆ. ಇವರಲ್ಲಿ ಬಹುತೇಕರು ತೀವ್ರ ಉಸಿರಾಟದ ಸಮಸ್ಯೆ ಎದುರಿಸಿ, ಆಮ್ಲಜನಕ ಪ್ರಮಾಣ ಕುಸಿತು ಕಂಡು ಮೃತಪಟ್ಟವರಾಗಿದ್ದಾರೆ. ಮೇ ತಿಂಗಳಲ್ಲಿಯೇ (ಮೇ 25ರವರೆಗೆ) 10,876 ಮಂದಿ ಮರಣ ಹೊಂದಿದ್ದಾರೆ. ಮರಣ ಪ್ರಮಾಣ ದರವು ಶೇ.3ರ ಗಡಿಗೆ ಸಮೀಪಿಸಿದೆ.

**ಚಿಕಿತ್ಸೆ ವಿಳಂಬದ್ದೇ ಸಮಸ್ಯೆ:** ಎರಡು ಮೂರು ವಾರಗಳ ಹಿಂದಿನ ಪ್ರಕರಣಗಳಲ್ಲಿ ಗಂಭೀರವಾಗಿ ಅಸ್ವಸ್ಥರಾದವರು ಐಸಿಯು ದಾಖಲಾತಿ ಪಡೆದು, ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಅವರಲ್ಲಿ ಕೆಲವರು ಚಿಕಿತ್ಸೆಗೆ ಸ್ಪಂದಿಸದೆಯೇ ಮೃತಪಡುತ್ತಿದ್ದಾರೆ. ಮನೆ ಆರೈಕೆಗೆ ಒಳಗಾದವರು ಕೂಡ ರಕ್ತದಲ್ಲಿನ ಆಮ್ಲಜನಕ ಪ್ರಮಾಣ ಶೇ.80 ಅಥವಾ ಅದಕ್ಕಿಂತ ಕೆಳಗೆ ಇಳಿಕೆಯಾದಾಗ ಆಸ್ಪತ್ರೆಗೆ ಬರುತ್ತಿದ್ದಾರೆ. ಇದರಿಂದ ಕೂಡ ಮರಣ ಪ್ರಕರಣಗಳು ಹೆಚ್ಚಿನ ಸಂಖ್ಯೆಯಲ್ಲಿ ವರದಿಯಾಗುತ್ತಿವೆ' ಎಂಬುದು ವೈದ್ಯಕೀಯ ತಜ್ಞರ ಅಭಿಮತ.

ಸೋಂಕು ದೃಢ ಪ್ರಮಾಣ ಕಡಿಮೆಯಾದರೂ ಇನ್ನೂ 8 ರಿಂದ 10 ದಿನಗಳು ಮರಣ ಪ್ರಮಾಣದ ದರ ಅಧಿಕ ಇರಲಿದೆ. ಮೂರು ವಾರದ ಹಿಂದೆ ಸೋಂಕಿತರಾಗಿ, ಐಸಿಯುನಲ್ಲಿ ಇರುವವರಲ್ಲಿ ಕೆಲವರು ಮೃತಪಡುತ್ತಿದ್ದಾರೆ. ಕೋವಿಡ್‌ನಂತಹ ಕಾಯಿಲೆಗಳಲ್ಲಿ ಸೋಂಕು ದೃಢ ಪ್ರಮಾಣವು ಪ್ರಾರಂಭದಲ್ಲಿ ಜಾಸ್ತಿ ಇರಲಿದ್ದು, ಮರಣ ಪ್ರಮಾಣ ದರ ಕಡಿಮೆ ಇರಲಿದೆ. ಬಳಿಕ ಸೋಂಕು ದೃಢ ಪ್ರಮಾಣ ದರ ಹೆಚ್ಚಳವಾಗುತ್ತದೆ. ಬಳಿಕ ಎರಡೂ ಕಡಿಮೆ ಆಗಲಿದೆ' ಎಂದು ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ ಹಾಗೂ ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಸದಸ್ಯ ಡಾ.ಸಿ.ಎನ್.ಮಂಜುನಾಥ್ ತಿಳಿಸಿದರು.

ಆಧಾರ: ಪ್ರಜಾವಾಣಿ, ದಿನಾಂಕ:18.05.2021.

## 30. ಕೋವಿಡ್: ಅನಾಥ ಮಕ್ಕಳ ಪೋಷಣೆಗೆ ವ್ಯವಸ್ಥೆ

ಕೋವಿಡ್‌ನಿಂದಾಗಿ ತಂದೆ–ತಾಯಿಯನ್ನು ಕಳೆದುಕೊಂಡು ಅನಾಥರಾದ ಮಕ್ಕಳ ಪೋಷಣೆಗೆ ರಾಜ್ಯ ಸರ್ಕಾರ ಸಿದ್ಧವಿದ್ದು, ಅವರ ಪಾಲನೆ, ಪೋಷಣೆ ಸೇರಿ ಎಲ್ಲ ರೀತಿಯ ನೆರವು ನೀಡಲಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಶಶಿಕಲಾ ಜೊಲ್ಲೆ ತಿಳಿಸಿದ್ದಾರೆ.

'ಅನಾಥರಾದ ಮಕ್ಕಳ ಸಂಖ್ಯೆಯ ಬಗ್ಗೆ ಮಾಹಿತಿ ಪಡೆಯಲು ಸೇವಾ ಸಂಸ್ಥೆಗಳ ನೆರವನ್ನು ಕೇಳಿದ್ದೇವೆ. ಅವರು ಮಕ್ಕಳ ಬಗ್ಗೆ ಮಾಹಿತಿ ನೀಡಬೇಕೆ ಹೊರತು, ಸಾಕುವ ಜವಾಬ್ದಾರಿ ಹೊರುವಂತಿಲ್ಲ. ಸರ್ಕಾರವೇ ಆ ವ್ಯವಸ್ಥೆ ಮಾಡುತ್ತದೆ' ಎಂದು ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಈ ಸಂಬಂಧ ಮಾಹಿತಿ ಕೇಳಲು ದಿನಕ್ಕೆ ಕನಿಷ್ಟ 60 ಕರೆಗಳು ಬರುತ್ತಿವೆ. ಮಕ್ಕಳನ್ನು ಸರ್ಕಾರದ ಸುಪರ್ದಿಗೆ ನೀಡಲು ಜನರು ಮುಂದೆ ಬರುತ್ತಿಲ್ಲ. ಮಂಡ್ಯ ಮತ್ತು ಚಾಮರಾಜನಗರದ ಎರಡು ಪ್ರಕರಣಗಳಲ್ಲಿ ಮುಂದೆ ಬಂದಿದ್ದಾರೆ ಎಂದು ಅವರು ಹೇಳಿದರು.

ಅನಾಥ ಮಕ್ಕಳನ್ನು ಗುರುತಿಸಿ ಪುನರ್ವಸತಿಗಾಗಿ ಸರ್ಕಾರ 1098 ಎಂಬ ಸಹಾಯವಾಣಿ ಆರಂಭಿಸಿದೆ. ಐಎಎಸ್ ಅಧಿಕಾರಿ ಮೋಹನ್ ರಾಜ್ ಅವರನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಲಾಗಿದೆ. ಇಂತಹ ಮಕ್ಕಳಿಗೆ ಕೌಟುಂಬಿಕ ವಾತಾವರಣ ಒದಗಿಸುವುದು ಸರ್ಕಾರದ ಆದ್ಯ ಕರ್ತವ್ಯ ಎಂದು ಜೊಲ್ಲೆ ತಿಳಿಸಿದರು.

ಅಪ್ಪ-ಅಮ್ಮ ಇಬ್ಬರು ಕೋವಿಡ್‌ನಿಂದ ಆಸ್ಪತ್ರೆಗೆ ದಾಖಲಾಗಿದ್ದರೆ ಅವರು ಗುಣಮುಖರಾಗಿ ಬರುವವರೆಗೆ ಅವರ ಮಕ್ಕಳ ಪಾಲನೆ ಪೋಷಣೆಗೆ ಸರ್ಕಾರ ವಸತಿ ಶಾಲೆಗಳಲ್ಲಿ ವ್ಯವಸ್ಥೆ ಮಾಡಲಿದೆ. 18 ವರ್ಷದೊಳಗಿನವರು ಇದರ ಪ್ರಯೋಜನ ಪಡೆಯಬಹುದು ಎಂದು ತಿಳಿಸಿದರು.

**ಮಕ್ಕಳ ಆರೈಕೆಗೆ ವಿಶೇಷ ಕೇಂದ್ರ:** ಆರು ವರ್ಷದೊಳಗಿನ ಮಕ್ಕಳ ಆರೈಕೆಗೆ ವಿಶೇಷ ಕ್ವಾರಂಟೈನ್ ಸೌಲಭ್ಯ ಮತ್ತು ದತ್ತು ಸಂಸ್ಥೆಗಳನ್ನು ಗೊತ್ತುಪಡಿಸಲಾಗುವುದು. 7 ರಿಂದ 18 ವರ್ಷದೊಳಗಿನ ಮಕ್ಕಳಿಗೆ ಆರೈಕೆಗೆ ವಿಶೇಷ ಕೇಂದ್ರ, 18 ವರ್ಷದವರೆಗಿನ ಮಕ್ಕಳಿಗೆ ವಸತಿ ಶಾಲೆ ಮೀಸಲಿಡಲು ತೀರ್ಮಾನಿಸಲಾಗಿದೆ.

ಯಾವುದೇ ಲಕ್ಷಣಗಳಿಲ್ಲದೆ ಕೋವಿಡ್ ಪೀಡಿತ ಮಕ್ಕಳಿಗೆ ವಿಶೇಷ ಪಿಡಿಯಾಟ್ರಿಕ್ ಕೋವಿಡ್ ಕೇರ್ ಸೆಂಟರ್‌ಗಳಲ್ಲಿ (ಸಿಸಿಸಿ) ಚಿಕಿತ್ಸೆ ನೀಡಲು ಅನುಕೂಲವಾಗುವಂತೆ 30 ಜಿಲ್ಲೆಗಳಲ್ಲಿ ಪ್ರತ್ಯೇಕ ಕೋವಿಡ್ ಕೇರ್ ಸೆಂಟರ್ ಸ್ಥಾಪಿಸಲಾಗುವುದು. ಲಕ್ಷಣ ಇರುವ ಕೋವಿಡ್ ಸೋಂಕಿತ ಮಕ್ಕಳಿಗೆ ತಾಲ್ಲೂಕು ಹಾಗೂ ಜಿಲ್ಲಾ ಆಸ್ಪತ್ರೆಯಲ್ಲಿ ಮಕ್ಕಳ ಕೋವಿಡ್ ಕೇರ್ ಸೆಂಟರ್‌ನಲ್ಲಿ ವಿಶೇಷ ಆರೈಕೆ ಮತ್ತು ಇಲಾಖೆಯಿಂದ ವಿಶೇಷ ಆರೈಕೆದಾರರ ನೇಮಕ ಮಾಡಲಾಗುವುದು ಎಂದು ಜೊಲ್ಲೆ ತಿಳಿಸಿದರು.

**ಯಾರಿಗೆಲ್ಲ ಸಿಗಲಿದೆ ಸೌಲಭ್ಯ:** ಕೋವಿಡ್‌ನಿಂದ ತಂದೆ-ತಾಯಿ ಮೃತಪಟ್ಟಿದ್ದರೆ, ತಂದೆ, ತಾಯಿ ಇಬ್ಬರೂ ಆಸ್ಪತ್ರೆಗೆ ದಾಖಲಾಗಿದ್ದರೆ, ಕೋವಿಡ್‌ನಿಂದ ಒಬ್ಬರು ಮೃತರಾಗಿ ಇನ್ನೊಬ್ಬರು ಬೇರೆ ಪ್ರದೇಶದಲ್ಲಿ ವಾಸವಾಗಿದ್ದರೆ ಅಂತಹವರ ಮಕ್ಕಳಿಗೆ ಅನಾಥ ಭಾವನೆ ಬರಬಾರದು ಎಂಬ ಕಾರಣಕ್ಕೆ ಸರ್ಕಾರ ನೆರವಿಗೆ ಬರಲಿದೆ ಎಂದು ಸಚಿವೆ ಶಶಿಕಲಾ ಜೊಲ್ಲೆ ತಿಳಿಸಿದರು.

ಆಧಾರ: ಪ್ರಜಾವಾಣಿ, ದಿನಾಂಕ:19.05.2021.

## 31. ಕೋವಿಡ್ ಹೊಣೆ ಡಿಸಿಗಳಿಗೆ

ಕೊರೋನಾ ನಿಯಂತ್ರಣ ಕ್ರಮಗಳನ್ನು ಮತ್ತಷ್ಟು ವಿಕೇಂದ್ರಿಕರಣಗೊಳಿಸಿರುವ ಪ್ರಧಾನಿ ನರೇಂದ್ರ ಮೋದಿ, ಸೋಂಕು ನಿಯಂತ್ರಣದ ಹೊಣೆಯನ್ನು ಜಿಲ್ಲಾಧಿಕಾರಿಗಳಿಗೆ ವಹಿಸಿದ್ದಾರೆ. ಜಿಲ್ಲೆಗಳು ಗೆದ್ದರೆ ದೇಶ ಗೆದ್ದಂತೆ ಎಂದು ಬಣ್ಣಿಸಿರುವ ಮೋದಿ, ವಿನೂತನ ಕ್ರಮಗಳ ಮೂಲಕ ಸಾಂಕ್ರಾಮಿಕ ರೋಗವನ್ನು ಮಟ್ಟಹಾಕುವಂತೆ ಜಿಲ್ಲಾಧಿಕಾರಿಗಳಿಗೆ ಕರೆ ಕೊಟ್ಟಿದ್ದಾರೆ. ಇದೇ ವೇಳೆ 'ಲಸಿಕೆ ಪೂರೈಕೆಯನ್ನು ತೀವ್ರಗೊಳಿಸಲು ಯತ್ನಿಸಲಾಗುತ್ತಿದೆ. 15 ದಿನ ಮುಂಚಿತವಾಗಿಯೇ ಲಸಿಕಾ ಅಭಿಯಾನದ ವೇಳಾ ಪಟ್ಟಿ ನಿಗದಿ ಮಾಡಿಕೊಳ್ಳಲು ರಾಜ್ಯಗಳಿಗೆ ಅನುಕೂಲವಾಗುವಂತೆ ಲಸಿಕೆ ಪೂರೈಸಲಾಗುತ್ತೆ' ಎಂದು ಸ್ಪಷ್ಟಪಡಿಸುವ ಮೂಲಕ, ಶೀಘ್ರವೇ ರಾಜ್ಯಗಳನ್ನು ಕಾಡುತ್ತಿರುವ ಲಸಿಕೆ ಅಭಾವ ನೀಗಿರುವ ಭರವಸೆ ನೀಡಿದ್ದಾರೆ.

ಪಾಸಿಟಿವಿಟಿ ಪ್ರಮಾಣ ಹೆಚ್ಚಿರುವ ಕರ್ನಾಟಕದ 17 ಸೇರಿದಂತೆ ದೇಶದ ವಿವಿಧ ರಾಜ್ಯಗಳ 46 ಜಿಲ್ಲಾಧಿಕಾರಿಗಳ ಜೊತೆ ವಿಡಿಯೋ ಸಂವಾದದಲ್ಲಿ ಮಾತನಾಡಿದ ಮೋದಿ ಅವರು ಕೊರೋನಾ ಪರಿಸ್ಥಿತಿಯನ್ನು ಅವಲೋಕಿಸಿದರು. ಜಿಲ್ಲಾಧಿಕಾರಿಗಳನ್ನು ಕೊರೋನಾ ವಿರುದ್ಧ ಹೋರಾಡುತ್ತಿರುವ 'ಫೀಲ್ಡ್ ಕಮಾಂಡರ್'ಗಳು ಎಂದು ಶ್ಲಾಘಿಸಿದ ಮೋದಿ, ಸೋಂಕು ನಿಯಂತ್ರಣಕ್ಕೆ ಸ್ಥಳೀಯ ಕಂಟೈನ್ಮೆಂಟ್ ವಲಯ ಸೃಷ್ಟಿ, ಟೆಸ್ಟಿಂಗ್ ತೀವ್ರಗೊಳಿಸುವಿಕೆ ಹಾಗೂ ಜನರ ಜೊತೆ ಸಂಪೂರ್ಣ ಮಾಹಿತಿ ಹಂಚಿಕೊಳ್ಳುವಿಕೆ ಇವು ಕೋವಿಡ್ ವಿರುದ್ಧದ ಹೋರಾಟಕ್ಕೆ ಪ್ರಮುಖ ಅಸ್ತ್ರಗಳು ಎಂದರು.

ಬೆಡ್ ಲಭ್ಯತೆ ಹಾಗೂ ಲಸಿಕೆ ಲಭ್ಯತೆಯ ಮಾಹಿತಿ ಜನರಿಗೆ ಸುಲಭವಾಗಿ ಸಿಗಬೇಕು. ಇದರಿಂದ ಅನುಕೂಲವಾಗುತ್ತದೆ, ಕಾಳದಂಧೆಕೋರರ ವಿರುದ್ಧ ಕ್ರಮ ಜರುಗಿಸಬೇಕು. ಕೆಲವು ರಾಜ್ಯಗಳಲ್ಲಿ ಕೊರೋನಾ ಇಳಿಯುತ್ತಿದ್ದರೆ, ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳು ಮತ್ತು ಜನ ಪ್ರತಿನಿಧಿಗಳು ಫೀಲ್ಡ್ ಕಮಾಂಡರ್ ರೀತಿ ಕಾರ್ಯನಿರ್ವಹಿಸಬೇಕು. ಸರ್ಕಾರದ ಆದೇಶಗಳನ್ನು ಸ್ಥಳೀಯವಾಗಿ ಸಣ್ಣ ಮಟ್ಟ ಪರಿವರ್ತನೆ ಮಾಡಿಕೊಂಡು ಕಾರ್ಯಗತಗೊಳಿಸಬೇಕು ಎಂದು ಸೂಚಿಸಿದರು.

ಲಾಕ್‌ಡೌನ್ ಜಾರಿಗೊಳಿಸುವುದು ರಾಜ್ಯಗಳಿಗೆ ಬಿಟ್ಟ ವಿಚಾರ. ಆಯಾ ರಾಜ್ಯದಲ್ಲಿನ ಪರಿಸ್ಥಿತಿಗನುಗುಣವಾಗಿ ಸರ್ಕಾರಗಳು ತೀರ್ಮಾನ ಕೈಗೊಳ್ಳಬಹುದು. ಆದರೆ, ಕೈಗೊಳ್ಳುವ ನಿರ್ಧಾರಗಳು ಕಟ್ಟುನಿಟ್ಟಾಗಿ ಜಾರಿಯಾಗಬೇಕು. ಆರ್ಥಿಕ ವ್ಯವಹಾರಗಳಿಗೆ ಹೆಚ್ಚಿನ ರೀತಿಯಲ್ಲಿ ಸಮಸ್ಯೆಯಾಗದಂತೆ ಎಚ್ಚರಿಕೆ ವಹಿಸುವುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಪಕ್ಷಾತೀತವಾಗಿ ಜನಪ್ರತಿನಿಧಿಗಳು ಕೋವಿಡ್ ವಿರುದ್ಧ ಹೋರಾಡಲು ಭಾಗಿಯಾಗಬೇಕು ಎಂದರು.

ಪ್ರಧಾನಿ ಸಭೆಯ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಗೃಹ ಸಚಿವ ಬೊಮ್ಮಾಯಿ, ರಾಜ್ಯದ 17 ಜಿಲ್ಲೆಗಳ ಜಿಲ್ಲಾಧಿಕಾರಿಗಳು ಸೇರಿದಂತೆ 10 ರಾಜ್ಯಗಳ ಒಟ್ಟು 46 ಜಿಲ್ಲೆಗಳ ಜಿಲ್ಲಾಧಿಕಾರಿಗಳೊಂದಿಗೆ ಪ್ರಧಾನಿ ವಿಡಿಯೋ ಸಂವಾದ ನಡೆಸಿದರು. ಈ ಸಂವಾದ ಉಪಯುಕ್ತವಾಗಿತ್ತು. ಬೇರೆ-ಬೇರೆ ರಾಜ್ಯಗಳಲ್ಲಿ ವಿನೂತನವಾಗಿ ಕೈಗೊಂಡಿರುವ ಕ್ರಮಗಳು ಮತ್ತು ಪ್ರಯೋಗಗಳನ್ನು ಎಲ್ಲ ರಾಜ್ಯದವರು ಅಳವಡಿಸಿಕೊಳ್ಳುವ ಉದ್ದೇಶದಿಂದ ಸಂವಾದ ನಡೆಸಿದರು. ಗ್ರಾಮೀಣ ಮತ್ತು ಅರೆ ನಗರ ಪ್ರದೇಶದಲ್ಲಿ ಕೊರೋನಾ ವ್ಯಾಪಕತೆ ಜಾಸ್ತಿ ಇದೆ. ಸೋಂಕು ನಿಯಂತ್ರಿಸಲು ಜನರನ್ನು ತೊಡಗಿಸಿಕೊಳ್ಳುವ ಕೆಲಸವಾಗಬೇಕು. ಮೈಕ್ರೋ ಕಂಟೈನ್ಮೆಂಟ್ ಯಶಸ್ವಿಯಾಗಬೇಕು. ಇದರಿಂದ ಸೋಂಕು ಹರಡಿಸುವುದನ್ನು ತಪ್ಪಿಸಬಹುದು ಎಂದು ಪ್ರಧಾನಿ ಹೇಳಿದರು ಎಂದು ತಿಳಿಸಿದರು.

ಗ್ರಾಮಗಳಲ್ಲಿ ಎಲ್ಲರೂ ಅಂಗಡಿಗಳಿಗೆ ಹೋಗುವ ಬದಲು, ಕೆಲವರೇ ಹೋಗಿ ಖರೀದಿ ಮಾಡುವುದು ಸೂಕ್ತ. ಆರೋಗ್ಯ ಸೌಕರ್ಯಕ್ಕೆ ಹೆಚ್ಚಿನ ಒತ್ತು ನೀಡಬೇಕು. ಮಧ್ಯಪ್ರದೇಶದಲ್ಲಿ ಗ್ರಾಮ ಪಂಚಾಯಿತಿಗಳಲ್ಲಿ ಕೊರೋನಾ ನಿಯಂತ್ರಣ ಸಂಬಂಧ ಉತ್ತಮ ಕೆಲಸವಾಗಿದೆ ಪ್ರತಿಯೊಂದು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಟಾಸ್ಕ್‌ಫೋರ್ಸ್ ರಚನೆಯಾಗಬೇಕು. ಟಾಸ್ಕ್‌ಫೋರ್ಸ್‌ನಲ್ಲಿ ಅಧಿಕಾರಿಗಳು ಮಾತ್ರವಲ್ಲದೇ, ಸಂಘ ಸಂಸ್ಥೆಗಳು, ಸ್ತ್ರೀ ಶಕ್ತಿ ಸಂಘಟನೆಗಳನ್ನು ತೊಡಗಿಸಿಕೊಳ್ಳಬೇಕು ಎಂದರು.

ಆಧಾರ: ಕನ್ನಡಪ್ರಭ, ದಿನಾಂಕ:19.05.2021.

## 32. 3ನೇ ಅಲೆ: ಎಲ್ಲ ಜಿಲ್ಲೆಲೂ ಮಕ್ಕಳ ಕ್ವಾರಂಟೈನ್ ಕೇಂದ್ರ

ಮೂರನೇ ಅಲೆಯಲ್ಲಿ ಮಕ್ಕಳಿಗೆ ಹೆಚ್ಚಾಗಿ ಸೋಂಕು ಕಂಡು ಬರುವ ಬಗ್ಗೆ ತಜ್ಞರು ಎಚ್ಚರಿಕೆ ನೀಡಿರುವ ಹಿನ್ನೆಲೆಯಲ್ಲಿ ಈಗಿರುವ ಆಸ್ಪತ್ರೆಗಳಲ್ಲಿ ಮಕ್ಕಳ ಆರೋಗ್ಯ ಕೇಂದ್ರ ಸ್ಥಾಪನೆಗೆ ಕ್ರಮ ಕೈಗೊಳ್ಳಲಾಗುತ್ತಿದ್ದು, 18 ವರ್ಷದೊಳಗಿನ ಮಕ್ಕಳ ಕ್ವಾರಂಟೈನ್‌ಗಾಗಿ ವಸತಿ ಶಾಲೆ ವ್ಯವಸ್ಥೆ ಮಾಡಲು ನಿರ್ಧರಿಸಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಶಶಿಕಲಾ ಜೊಲ್ಲೆ ತಿಳಿಸಿದ್ದಾರೆ.

ಆಸ್ಪತ್ರೆಯಲ್ಲಿ ಮಕ್ಕಳ ಜೊತೆ ಪೋಷಕರು ಇರುವಂತೆ ವ್ಯವಸ್ಥೆ ಮಾಡಲಾಗುವುದು ಎಂದು ಹೇಳಿದ್ದಾರೆ. ವಿಕಾಸ ಸೌಧದಲ್ಲಿ ಪತ್ರಿಕಾಗೋಷ್ಠಿ ನಡೆಸಿದ ಅವರು, ಕೋವಿಡ್ ನಿಯಮದ ಬಾಧಿತರಾದ ಮಕ್ಕಳನ್ನು ಗುರುತಿಸಲು ಮತ್ತು ಪುನರ್ವಸತಿ ಕಲ್ಪಿಸಲು ಸರ್ಕಾರ 1098 ಸಹಾಯವಾಣಿ ಆರಂಭಿಸಿದೆ.

ಹಿರಿಯ ಐಎಎಸ್ ಅಧಿಕಾರಿ ಮೋಹನ್ ರಾಜ್ ಅವರನ್ನು ನೋಡಲ್ ಅಧಿಕಾರಿಯಾಗಿ ನೇಮಕ ಮಾಡಲಾಗಿದೆ. ಮಕ್ಕಳಿಗೆ ಕೌಟಂಬಿಕ ವಾತಾವರಣ ಒದಗಿಸುವುದು ಇಲಾಖೆ ಮತ್ತು ಸರ್ಕಾರದ ಕರ್ತವ್ಯವಾಗಿದೆ ಎಂದರು.

ಮೂರನೇ ಅಲೆಯ ಮೇಲೆ ಚಿಕ್ಕಮಕ್ಕಳಿಗೆ ಹೆಚ್ಚಾಗಿ ಸೋಂಕು ಕಂಡು ಬರುವ ಬಗ್ಗೆ ತಜ್ಞರು ಎಚ್ಚರಿಕೆ ನೀಡಿರುವ ಹಿನ್ನೆಲೆಯಲ್ಲಿ ಇಲಾಖೆ ವತಿಯಿಂದ ಪೂರಕ ಕ್ರಮ ಕೈಗೊಳ್ಳಲಾಗುತ್ತಿದೆ. ಯಾವುದೇ ಲಕ್ಷಣಗಳಿಲ್ಲದ ಕೋವಿಡ್ ಪೀಡಿತ ಮಕ್ಕಳಿಗೆ ವಿಶೇಷ ಪೀಡಿಯಾಟ್ರಿಕ್ ಕೋವಿಡ್ ಕೇರ್ ಸೆಂಟರ್‌ಗಳಲ್ಲಿ ಚಿಕಿತ್ಸೆ ನೀಡಲು ಅನುಕೂಲವಾಗುವಂತೆ 30 ಜಿಲ್ಲೆಗಳಲ್ಲಿ ಪ್ರತ್ಯೇಕ ಕೋವಿಡ್ ಕೇರ್ ಸೆಂಟರ್ ಸ್ಥಾಪನೆ, ಲಕ್ಷಣವುಳ್ಳ ಕೋವಿಡ್ ಸೋಂಕಿತ ಮಕ್ಕಳಿಗೆ ತಾಲ್ಲೂಕು ಮತ್ತು ಜಿಲ್ಲಾಸ್ಪತ್ರೆಯಲ್ಲಿ ಪೀಡಿಯಾಟ್ರಿಕ್ ಕೋವಿಡ್ ಕೇರ್ ಸೆಂಟರ್‌ನಲ್ಲಿ ವಿಶೇಷ ಆರೈಕೆ ಹಾಗೂ ಆರೈಕೆಗೆ ಇಲಾಖೆಯಿಂದ ವಿಶೇಷ ಆರೈಕೆದಾರರನ್ನು ನೇಮಕ ಮಾಡಲಾಗಿದೆ ಎಂದು ಸಚಿವರು ವಿವರಿಸಿದರು.

ಆಧಾರ: ಕನ್ನಡಪ್ರಭ, ದಿನಾಂಕ:19.05.2021.

## 33. 1 ತಿಂಗಳಲ್ಲಿ ವರ್ಷದ ಕೇಸ್

ಕಳೆದ 1 ತಿಂಗಳಲ್ಲಿ ರಾಜ್ಯದಲ್ಲಿ ಕೊರೋನಾ ರೌದ್ರ ನರ್ತನ ಪ್ರದರ್ಶಿಸಿದೆ. ರಾಜ್ಯಕ್ಕೆ ಕೊರೋನಾ ಕಾಲಿಟ್ಟ 2020ರ ಮಾರ್ಚ 9 ರಿಂದ 1 ವರ್ಷ 40 ದಿನಗಳಲ್ಲಿ ವರದಿಯಾಗಿದ್ದ ಒಟ್ಟು ಪ್ರಕರಣಗಳ ಸರಿಸಮಾನ ಸೋಂಕು ಕಳೆದ ಒಂದು ತಿಂಗಳಲ್ಲೇ ವರದಿಯಾಗಿದೆ.

ಕಳೆದ 30 ದಿನದಲ್ಲಿ ಬರೋಬ್ಬರಿ 11,29,805 ಮಂದಿಗೆ ಸೋಂಕು ಉಂಟಾಗಿದ್ದು 9,809 ಮಂದಿ ಕೊರೋನಾಗೆ ಬಲಿಯಾಗಿದ್ದಾರೆ. 2020ರ ಮಾರ್ಚ 9 ರಿಂದ 2021 ರ ಏಪ್ರಿಲ್ 19ರವರೆಗೆ ರಾಜ್ಯದಲ್ಲಿ 11,76,850 (11,76 ಲಕ್ಷ) ಸೋಂಕು ಪ್ರಕರಣ ವರದಿಯಾಗಿತ್ತು. ಏಪ್ರಿಲ್ 19ರಿಂದ ಮೇ 19 ವೇಳೆಗೆ 30 ದಿನಗಳ ಅಂತರದಲ್ಲಿ 11,29,805 (11.29 ಲಕ್ಷ) ಮಂದಿಗೆ ಸೋಂಕು ದೃಢಪಟ್ಟಿದೆ. ಒಂದು ವರ್ಷ 40 ದಿನಗಳಲ್ಲಿ ವರದಿಯಾಗಿದ್ದ ಒಟ್ಟು ಪ್ರಕರಣಗಳ ಶೇ.96ರಷ್ಟು ಪ್ರಕರಣ 30 ಕಳೆದ ದಿನಗಳಲ್ಲೇ ವರದಿಯಾಗಿವೆ. ನಿತ್ಯ ಸರಾಸರಿ 37,660 ಪ್ರಕರಣಗಳಂತೆ ಸೋಂಕು ಪತ್ತೆಯಾಗಿವೆ. ಏಕಾಏಕಿ ಪ್ರಕರಣಗಳು ನಿರೀಕ್ಷೆಗೂ ಮೀರಿ ಹೆಚ್ಚಾಗಿದ್ದರಿಂದಲೇ ವೈದ್ಯಕೀಯ ವ್ಯವಸ್ಥೆ ಮೇಲೆ ತೀವ್ರ ಒತ್ತಡ ಹೆಚ್ಚಾಗಿ ನಿರ್ವಹಣೆ ಕಷ್ಟವಾಯಿತು ಎಂದು ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್ ಅಭಿಪ್ರಾಯಪಟ್ಟಿದ್ದಾರೆ.

**ಪ್ರತಿ ಗಂಟೆಗೆ 14 ಮಂದಿಯಂತೆ 9,809 ಸಾವು:** ಇನ್ನು ಈವರೆಗೆ 23,306 ಮಂದಿ ಸೋಂಕಿಗೆ ಬಲಿಯಾಗಿದ್ದಾರೆ. ಈ ಪೈಕಿ 2020 ಮಾರ್ಚ್ ತಿಂಗಳಿಂದ 2021ರ ಏಪ್ರಿಲ್ 19ರವರೆಗೆ 13497 ಮಂದಿ ಕೊರೋನಾದಿಂದ ಮೃತಪಟ್ಟಿದ್ದಾರೆ. ಕಳೆದ 30 ದಿನದಲ್ಲಿ ಬರೋಬ್ಬರಿ 9,809 ಮಂದಿ ಕೊರೋನಾಗೆ ಬಲಿಯಾಗಿದ್ದಾರೆ. ಪ್ರತಿ ಗಂಟೆಗೆ ಸರಾಸರಿ 14 ಮಂದಿಯಂತೆ ಸಾವನ್ನಪ್ಪಿದ್ದು ತೀವ್ರ ಆತಂಕ ಹುಟ್ಟಿಸಿದೆ.

**ಪ್ರತಿ 4 ಪರೀಕ್ಷೆಯಲ್ಲಿ ಒಬ್ಬರಿಗೆ ಸೋಂಕು:** ಮೇ 19ರ ವೇಳೆಗೆ ರಾಜ್ಯದಲ್ಲಿ 23.06 ಲಕ್ಷ ಮಂದಿಗೆ ಸೋಂಕು ದೃಢ ಪಟ್ಟಿದೆ. ಕಳೆದ 30 ದಿನದಲ್ಲಿ 11,29,805 ಪ್ರಕರಣ ವರದಿಯಾಗಿದ್ದು. ಪ್ರತಿ 100 ಪಾಸಿಟಿವ್ ಪ್ರಕರಣಗಳಲ್ಲಿ ಶೇ.0.86 ಸಾವಿನ ದರ ವರದಿಯಾಗಿದೆ.

ಇನ್ನು ಈವರೆಗೆ 2.81 ಕೋಟಿ ಮಂದಿಗೆ ಕೊರೋನಾ ಪರೀಕ್ಷೆ ನಡೆಸಲಾಗಿದೆ. ಕಳೆದ 30 ದಿನದಲ್ಲಿ 44.82ಲಕ್ಷ ಮಂದಿಗೆ ಪರೀಕ್ಷೆ ನಡೆಸಲಾಗಿದೆ. ಈ ಪೈಕಿ ಪ್ರತಿ 4 ಮಂದಿಯಲ್ಲಿ ಒಬ್ಬರಿಗೆ ಸೋಂಕು ದೃಢಪಟ್ಟಿದ್ದು, ಶೇ.25 ರಷ್ಟು ಪಾಸಿಟಿವಿಟಿ ದರದಂತೆ ಸೋಂಕು ಉಂಟಾಗಿದೆ. ಒಂದು ತಿಂಗಳಿಗೂ ಹೆಚ್ಚು ಕಾಲ ಶೇ.25ರಷ್ಟು ಸರಾಸರಿಯಲ್ಲಿ ಸೋಂಕು ವರದಿಯಾಗಿರುವುದು ಆತಂಕಕಾರಿ. ಪಾಸಿಟಿವಿಟಿ ದರ ಶೇ.5ಕ್ಕಿಂತ ಕಡಿಮೆ ಆಗುವರೆಗೂ ಆಪತ್ತು ತಪ್ಪಿದಂತಲ್ಲ ಎಂದು ಕೊರೋನಾ ತಾಂತ್ರಿಕ ಸಲಹಾ ಸಮಿತಿ ಸದಸ್ಯರೊಬ್ಬರು ಅಭಿಪ್ರಾಯಪಟ್ಟಿದ್ದಾರೆ.

**ರಾಜಧಾನಿಯಲ್ಲಿ 30 ದಿನದಲ್ಲಿ ಸೋಂಕು, ಸಾವು ಡಬಲ್:** ಬೆಂಗಳೂರಿನಲ್ಲಿ ಸಾವು ಹಾಗೂ ಸೋಂಕು ಬಹುತೇಕ ಡಬಲ್ ಆಗಿದೆ. ಮೇ 19ರವರೆಗೆ 10,84,844 ಒಟ್ಟು ಸೋಂಕು ವರದಿಯಾಗಿದೆ. ಈ ಪೈಕಿ ಕೊರೋನಾ ಆರಂಭದಿಂದ ಕಳೆದ ಏಪ್ರಿಲ್ 19 ವರೆಗೆ 5,56,253 ಸೋಂಕು ವರದಿಯಾಗಿದ್ದರೆ, ಕಳೆದ 30 ದಿನದಲ್ಲಿ 5,28,591 ಮಂದಿಗೆ ಸೋಂಕು ತಗುಲಿದೆ. ಸಾವಿನ ಸಂಖ್ಯೆಯೂ ದ್ವಿಗುಣಗೊಂಡಿದ್ದು 10,238 ಸಾವುಗಳಲ್ಲಿ ಕಳೆದ 30 ದಿನದಲ್ಲೇ 5,018 ಮಂದಿ ಸಾವನ್ನಪ್ಪಿದ್ದಾರೆ.

ಆಧಾರ: ಕನ್ನಡಪ್ರಭ, ದಿನಾಂಕ:21.05.2021.

## 34. ಬೆಳಗಾವಿಯಲ್ಲಿ ಜಯಮಂಗಲಂ

ಪ್ರತಿಷ್ಠೆಯ ಕಣವಾಗಿದ್ದ ರಾಜ್ಯದ ಮೂರು ಕ್ಷೇತ್ರಗಳ ಉಪ ಚುನಾವಣೆಯಲ್ಲಿ ಆಡಳಿತಾರೂಢ ಬಿಜೆಪಿ ಎರಡರಲ್ಲಿ ಜಯಗಳಿಸಿದ್ದು, ಮತ್ತೊಂದನ್ನು ಪ್ರತಿಪಕ್ಷ ಕಾಂಗ್ರೆಸ್ ತನ್ನ ಪಾಲಾಗಿಸಿಕೊಂಡಿದೆ. ಬೆಳಗಾವಿ ಲೋಕಸಭಾ ಕ್ಷೇತ್ರದಲ್ಲಿ ಏದುಸಿರು ಬಿಟ್ಟು ಉಳಿಸಿಕೊಂಡ ಬಿಜೆಪಿ, ಬಸವ ಕಲ್ಯಾಣ ವಿಧಾನಸಭಾ ಕ್ಷೇತ್ರದಲ್ಲಿ ನಿರಾಯಾಸವಾಗಿ ಗೆಲುವು ಸಾಧಿಸಿದೆ. ಹಿಂದಿನ ಸಮ್ಮಿಶ್ರ ಸರ್ಕಾರ ಪತನಗೊಳಿಸಿ ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ತಂದ ಕಾರಣಕರ್ತರಲ್ಲಿ ಒಬ್ಬರಾಗಿದ್ದ ಪ್ರತಾಪ್ ಗೌಡ ಪಾಟಿಲ್ ಅವರನ್ನು ಗೆಲ್ಲಿಸಿಕೊಳ್ಳುವಲ್ಲಿ ಬಿಜೆಪಿ ವಿಫಲವಾಗಿದೆ. ಇಲ್ಲಿ ಕಾಂಗ್ರೆಸ್ ತೆಕ್ಕೆಯಲ್ಲಿದ್ದ ಬಸವಕಲ್ಯಾಣ ಕ್ಷೇತ್ರವನ್ನು ಕಸಿಯುವಲ್ಲಿ ಸಫಲವಾಗಿದೆ.

ರಾಜಕೀಯ ತಂತ್ರಗಾರಿಕೆ ಭಾಗವಾಗಿ ಕೇವಲ ಬಸವಕಲ್ಯಾಣ ಕ್ಷೇತ್ರದಲ್ಲಿ ಮಾತ್ರ ಅಲ್ಪಸಂಖ್ಯಾತ ಅಭ್ಯರ್ಥಿಯನ್ನು ಕಣಕ್ಕಿಸಿದ್ದ ಜೆಡಿಎಸ್ ಅಭ್ಯರ್ಥಿಯಿಂದಾಗಿ ಬಿಜೆಪಿಗೇನು ದೊಡ್ಡ ಲಾಭವೂ ಆಗಲಿಲ್ಲ. ಕಾಂಗ್ರೆಸ್‌ಗೆ ಅಪಾಯವೂ ಆಗಲಿಲ್ಲ. ಆ ಕ್ಷೇತ್ರದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆಯೇ ನೇರ ಹಣಾಹಣಿ ಇತ್ತು.

ಮಸ್ಕಿ ಮತ್ತು ಬಸವಕಲ್ಯಾಣ ವಿಧಾನಸಭಾ ಕ್ಷೇತ್ರಗಳೆರಡರ ಫಲಿತಾಂಶ ಮಧ್ಯಾಹ್ನದ ಹೊತ್ತಿಗೆ ಪ್ರಕಟಗೊಂಡರು ತೀವ್ರ ಕುತೂಹಲ ಮೂಡಿಸಿದ್ದು ಬೆಳಗಾವಿ ಲೋಕಸಭಾ ಕ್ಷೇತ್ರದ ಮತ ಏಣಿಕೆ ಕಾರ್ಯ. ಮಧ್ಯಾಹ್ನದವರೆಗೆ ಹಲವು ಸುತ್ತುಗಳಲ್ಲಿ ಸತತವಾಗಿ ಮುಂದಿದ್ದ ಬಿಜೆಪಿಯ ಮಂಗಳಾ ಅಂಗಡಿ ಅವರು ನಂತರ ಹಿನ್ನೆಡೆ ಅನುಭವಿಸತೊಡಗಿದರು. ಕಾಂಗ್ರೆಸ್ ಸತೀಶ್ ಜಾರಕಿಹೊಳಿ ಮುನ್ನಡೆ ಸಾಧಿಸತೊಡಗಿದರು. ಇದು ಸಂಜೆವರೆಗೂ ಹಾವು ಏಣಿ ಆಟದಂತೆ ಮುಂದುವರೆಯಿತು. ಕ್ರಿಕೆಟ್ ಮ್ಯಾಚ್‌ನಂತೆ ರೋಚಕತೆ ಸೃಷ್ಟಿಯಾಯಿತು. ಅಂತಿಮವಾಗಿ ಮಂಗಳಾ ಅಂಗಡಿ ಅಲ್ಪ ಮತಗಳ ಅಂತರದಿಂದ ಗೆಲುವು ತಮ್ಮದಾಗಿಸಿಕೊಂಡರು.

ಮಸ್ಕಿ ವಿಧಾನಸಭಾಕ್ಷೇತ್ರದಲ್ಲಿ ಮುಖ್ಯಮಂತ್ರಿ ಯಡಿಯೂರಪ್ಪ ಪುತ್ರ ಹಾಗೂ ರಾಜ್ಯ ಬಿಜೆಪಿ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರೇ ಪಕ್ಷದ ಚುನಾವಣಾ ಉಸ್ತುವಾರಿಯಾಗಿದ್ದರು. ಅಸಾಧ್ಯ ಎನ್ನಲಾದ ಕ್ಷೇತ್ರಗಳಲ್ಲೇ ಉಪ ಚುನಾವಣೆಯನ್ನು ನಿಭಾಯಿಸಿ ಗೆಲುವು ತಂದಿದ್ದ ವಿಜಯೇಂದ್ರ ಅವರನ್ನು ಮಸ್ಕಿ ಕ್ಷೇತ್ರದ ಉಸ್ತುವಾರಿಯನ್ನಾಗಿ ಘೋಷಿಸಿದಾಗ ಬಿಜೆಪಿ ಗೆಲುವು ನಿಶ್ಚಿತ ಎಂಬ ವಾತಾವರಣ ನಿರ್ಮಾಣವಾಗಿತ್ತು. ಅದಕ್ಕೆ ಪೂರಕವಾಗಿ ಮತದಾನದ ಪ್ರಮಾಣವು ಹೆಚ್ಚಾಗಿತ್ತು. ಫಲಿತಾಂಶ ಹೊರಬಿದ್ದಾಗ ಎಲ್ಲ ಲೆಕ್ಕಾಚಾರ ಮತ್ತು ನಿರೀಕ್ಷೆ ತಲೆಕೆಳಗಾಗಿತ್ತು. ಕಾಂಗ್ರೆಸ್‌ನ ಬಸವನಗೌಡ ತುರ್ವಿಹಾಳ ಮುಂದೆ ಬಿಜೆಪಿಯ ಪ್ರತಾಪ ಗೌಡ ಪಾಟೀಲ್ ಮಂಡಿಯೂರಬೇಕಾಯಿತು. ಇವರಿಬ್ಬರೂ ಕಳೆದ ಸಾರ್ವತ್ರಿಕ ಚುನಾವಣೆಯಲ್ಲಿ ಕಣದಲ್ಲಿದ್ದ ಅಭ್ಯರ್ಥಿಗಳೇ. ಆದರೆ ಈ ಬಾರಿ ಪಕ್ಷ ಮಾತ್ರ ಅದಲು–ಬದಲಾಗಿತ್ತು. ಹಾಗೆಯೇ ಸೋಲು ಗೆಲುವು ಕೂಡ.

ಗುಂಬಜ್ ನಗರಿ, ಬಸವನ ನಾಡು ಎಂದು ಹೆಸರಾಗಿರುವ ಬೀದರ್ ಜಿಲ್ಲೆಯ ಬಸವ ಕಲ್ಯಾಣ ವಿಧಾನಸಭಾ ಕ್ಷೇತ್ರವನ್ನು ಬಿಜೆಪಿ ತನ್ನ ಹಿಡಿತಕ್ಕೆ ತೆಗೆದುಕೊಂಡಿದೆ. ಜೆಡಿಎಸ್‌ನ ಭದ್ರಕೋಟೆಯಾಗಿದ್ದ ಬಸವಕಲ್ಯಾಣ ಕ್ಷೇತ್ರವನ್ನು ಕಳೆದ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸ್ ಛಿದ್ರಗೊಳಿಸಿ ತನ್ನ ವಶಕ್ಕೆ ಪಡೆದುಕೊಂಡಿತ್ತು. ಆದರೆ, ಉಪಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಆಡಳಿತರೂಢ ಬಿಜೆಪಿ

ಕಸಿದುಕೊಂಡಿದೆ. ಈ ಗೆಲುವಿನಲ್ಲಿ ಕ್ಷೇತ್ರದ ಬಿಜೆಪಿ ಉಸ್ತುವಾರಿ ಹೊತ್ತಿದ್ದ ಸಚಿವರಾದ ವಿ.ಸೋಮಣ್ಣ ಬಸವರಾಜ್ ಬೊಮ್ಮಾಯಿ ಮತ್ತು ಉಪ ಮುಖ್ಯಮಂತ್ರಿ ಲಕ್ಷ್ಮಣ ಸವದಿ ಪಾತ್ರ ಬಹುದೊಡ್ಡದು.

ಕಾಂಗ್ರೆಸ್‌ನ ಮಾಲಾ ನಾರಾಯಣರಾವ್, ಬಿಜೆಪಿಯ ಶರಣು ಸಲಗರ ಮತ್ತು ಬಿಜೆಪಿ ಬಂಡಾಯ ಅಭ್ಯರ್ಥಿ ಮಲ್ಲಿಕಾರ್ಜುನ ಖೂಬಾ ನಡುವೆ ತೀವ್ರ ಸ್ಪರ್ಧೆ ಎಂಬತ್ತಿತ್ತು. ಮತ ಎಣಿಕೆಯ ಮೊದಲ ಸುತ್ತಿನಿಂದಲೂ ಶರಣು ಸಲಗರ ಅವರು ಮುನ್ನಡೆ ಕಾಯ್ದು ಕೊಂಡು ಅಂತಿಮವಾಗಿ ಗೆಲುವು ಸಾಧಿಸಿದರು. ಬಿಜೆಪಿಗೆ ಬಂಡಾಯದ ಬಿಸಿ ತಟ್ಟುವ ಸಾಧ್ಯತೆ ಇದೆ ಎಂಬ ನಿರೀಕ್ಷೆಯೂ ಸುಳ್ಳಾಯಿತು.

ಆಧಾರ: ಕನ್ನಡಪ್ರಭ, ದಿನಾಂಕ:21.05.2021.

## 35. 20 ಜಿಲ್ಲೆಗಳು ಸ್ವಲ್ಪ ರಿಲ್ಯಾಕ್ಸ್

ಕರ್ನಾಟಕದಲ್ಲಿ ಕೊರೋನಾ ದೈನಿಕ ಪ್ರಕರಣಗಳು ಹಾಗೂ ಪಾಸಿಟಿವಿಟಿ ದರ ಇಳಿಮುಖವಾಗುತ್ತಿರುವ ಹಿನ್ನೆಲೆಯಲ್ಲಿ ರಾಜ್ಯದ ಮುಕ್ಕಾಲು ಭಾಗದಲ್ಲಿ ಅನ್‌ಲಾಕ್ ಪ್ರಕ್ರಿಯೆ ಆರಂಭವಾಗಲಿದೆ. ಇನ್ನುಳಿದ ಭಾಗದಲ್ಲಿ ಕಠಿಣ ನಿರ್ಬಂಧ ಮುಂದುವರಿಯಲಿದೆ.

ರಾಜ್ಯದ 20 ಜಿಲ್ಲೆಗಳಲ್ಲಿ ಲಾಕ್‌ಡೌನ್ ಭಾಗಶ: ಸಡಿಲಿಕೆಯಾಗುತ್ತಿದ್ದು, ಕೊರೋನಾ ಪ್ರಕರಣ ಹೆಚ್ಚಿರುವ 11 ಜಿಲ್ಲೆಗಳಲ್ಲಿ ಮತ್ತಷ್ಟು ಕಠಿಣ ನಿಯಮ ಜಾರಿಯಾಗಲಿದೆ. ಲಾಕ್‌ಡೌನ್ ನಿಯಮ ಜಾರಿಗೆ ತಂದ 35 ದಿನಗಳ ಬಳಿಕ ಅಲ್ಪ ಪ್ರಮಾಣದ ವಿನಾಯಿತಿ ನೀಡಲಾಗುತ್ತಿದೆ. ಮೇ 10 ರಂದು ಲಾಕ್‌ಡೌನ್ ಘೋಷಿಸಿದಾಗ ದೈನಂದಿನ ಸೋಂಕು ಪ್ರಕರಣಗಳು 39,305, ಸೋಂಕು ದರ ಶೇ.31.66 ಇತ್ತು. ಈಗ ಹೊಸ ಪ್ರಕರಣಗಳ ಸಂಖ್ಯೆ 7,810 ಪಾಸಿಟಿವಿಟಿ ದರ ಶೇ.6.02ಕ್ಕೆ ಇಳಿಮುಖವಾಗಿದೆ. ಮರಣ ಪ್ರಮಾಣ ಶೇ.1.57 ರಿಂದ 1.47ಕ್ಕೆ ಇಳಿದಿದೆ.

**ಯಾವುದಕ್ಕೆ ವಿನಾಯಿತಿ**: ಆನ್‌ಲಾಕ್ ಜಾರಿಗೊಳ್ಳುವ ಜಿಲ್ಲೆಗಳಲ್ಲಿ ದಿನಸಿ ಅಂಗಡಿಗಳು, ಹಣ್ಣು–ತರಕಾರಿ, ಬೀದಿಬದಿ ವ್ಯಾಪಾರ, ಮದ್ಯ ಪಾರ್ಸೆಲ್ ಅವಧಿಯನ್ನು ಮಧ್ಯಾಹ್ನ 2ರವರೆಗೆ ವಿಸ್ತರಿಸಲಾಗಿದೆ. ಉದ್ಯಾನಗಳು ಬೆಳಿಗ್ಗೆ 5 ರಿಂದ 10ರವರೆಗೆ ತೆರೆದಿರಲಿವೆ. ಅಟೋ ಮತ್ತು ಟ್ಯಾಕ್ಸಿಗಳಲ್ಲಿ ಇಬ್ಬರೂ ಪ್ರಯಾಣಿಕರು ಓಡಾಡಬಹುದು. ರಾತ್ರಿ 7 ರಿಂದ ಬೆಳಿಗ್ಗೆ 5ರವರೆಗೆ ರಾತ್ರಿ ಕರ್ಫ್ಯೂ ಇರಲಿದೆ. ಎಲ್ಲ ವಿಧದ ಕೈಗಾರಿಕೆಗಳು ಶೇ.50, ಸಿದ್ಧ ಉಡುಪು ಕಾರ್ಖಾನೆಗಳು ಶೇ.30 ಸಿಬ್ಬಂದಿಯೊಂದಿಗೆ ಕಾರ್ಯನಿರ್ವಹಿಸಲು ಅವಕಾಶ ಕಲ್ಪಿಸಲಾಗಿದೆ.

**ಸೋಂಕು ಏರಿಳಿತ:** ಆರ್ಥಿಕ ಚಟುವಟಿಕೆಗಳಿಗೆ ಅನುವು ಮಾಡಿಕೊಡುವುದಕ್ಕಾಗಿ ಸರ್ಕಾರ ನಿರ್ಬಂಧ ಸಡಿಲಿಕೆ ಮಾಡಿದೆ. ಬೆಂಗಳೂರು ಸೇರಿ ಕೆಲವು ಕಡೆ ಹೊಸ ಸೋಂಕು ಪ್ರಕರಣಗಳಲ್ಲಿ ಏರಿಳಿತವಾಗುತ್ತಿವೆ. ಜೂನ್ 11 ರಂದು ಹೊಸ ಪ್ರಕರಣಗಳು 8,249 ಸಾವು 159, ಪಾಸಿಟಿವಿಟಿ ದರ ಸೇ.4.86ರಷ್ಟಿತ್ತು. ಜೂನ್ 12 ರಂದು ಹೊಸ ಪ್ರಕರಣಗಳು 9,785, ಸಾವು 144, ಪಾಸಿಟಿವಿಟಿ ದರ ಶೇ.6.61 ರಷ್ಟು ವರದಿಯಾಗಿದೆ. ಸಡಿಲಿಕೆಯಿಂದ ಜನದಟ್ಟಣೆಯಾಗಿ ಸೋಂಕು ಪ್ರಕರಣಗಳು ಹೆಚ್ಚಿದರೆ ತಾತ್ಕಾಲಿಕ ವಿನಾಯಿತಿ ರದ್ದಾಗುವ ಸಾಧ್ಯತೆಯೂ ಇದೆ.

ನಿರ್ಬಂಧಗಳನ್ನು ಸಡಿಲಿಸಿ ವಿನಾಯಿತಿ ನೀಡಿದ ಪಟ್ಟಿಯಲ್ಲಿ ಉದ್ಯಮ ಸಂಸ್ಥೆಗಳು ಮಾತ್ರ ಸೇರಿವೆ ಎಂದು ಸರ್ಕಾರ ಸ್ಪಷ್ಟಪಡಿಸಿದೆ. ಈಗಾಗಲೇ ಪ್ರಕಟಿಸಿದ್ದ ಪರಿಷ್ಕೃತ ಮಾರ್ಗಸೂಚಿಯಲ್ಲಿ ಇಂಡಸ್ಟ್ರಿಯಲ್/ಎಸ್ಟಾಬ್ಲಿಷ್‌ಮೆಂಟ್ಸ್ ಅಂದರೆ ಕೈಗಾರಿಕೆಗಳಿಗೆ ಸಂಬಂಧಿಸಿದ ಸಂಸ್ಥೆಗಳೇ ಹೊರತು ಬೇರೆ ಸಂಸ್ಥೆಗಳು ಅಥವಾ ಕಛೇರಿಗಳಲ್ಲವೆಂದು ವಿವರಿಸಿದೆ.

ಕೈಗಾರಿಕೆಗಳು, ಕಾರ್ಖಾನೆಗಳು, ನಿರ್ಮಾಣ ಚಟುವಟಿಕೆಗಳು ಮತ್ತೆ ಶುರುವಾಗಲಿವೆ ಎಂದ ಅರಿತ ವಲಸಿಗರು, ಬೆಂಗಳೂರು ಮಹಾನಗರದತ್ತ ಕಳೆದ 3–4 ದಿನಗಳಿಂದ ದೌಡಾಯಿಸುತ್ತಿದ್ದಾರೆ. ನಗರದಲ್ಲಿ ಹೊಸ ಸೋಂಕು ಪ್ರಕರಣಗಳ ಸಂಖ್ಯೆ 1,342 ಪಾಸಿಟಿವಿಟಿ ದರ ಶೇ. 3,23ಕ್ಕೆ ಇಳಿಕೆ ಸಮಾಧಾನ ತಂದಿದೆ. ಸೋಂಕು ಪ್ರಕರಣಗಳ ಇಳಿಕೆಯಲ್ಲಿ ಸ್ಥಿರತೆ ಇಲ್ಲದಿರುವುದು ಆತಂತಕ್ಕೆ ಕಾರಣ. ಲಾಕ್‌ಡೌನ್‌ನಿಂದಾಗಿ ಸ್ವಂತ ಊರಿಗೆ ಮರಳಿದ್ದ ಬಹುತೇಕ ವಲಸಿಗರು ಬೆಂಗಳೂರು ಸೇರುತ್ತಿದ್ದಾರೆ.

ಉದ್ಯಮ, ನಿರ್ಮಾಣ ಚಟುವಟಿಕೆ ಪುನರಾರಂಭಕ್ಕೆ ಕಾರ್ಮಿಕರು ಬೇಕು. ತೀವ್ರ ಕಷ್ಟದಲ್ಲಿರುವ ದುಡಿಯುವ ವರ್ಗದ ಕೈಗೂ ಕೆಲಸ ಕೊಡಬೇಕು. ಬೆಂಗಳೂರು ಸೇರಿ ವಲಸಿಗರು ಮರಳುವ ನಗರಗಳಲ್ಲಿ ಕೊರೋನಾ ಪರೀಕ್ಷೆಗೆ ವ್ಯವಸ್ಥೆ ಮಾಡಿಕೊಂಡು ಸಡಿಲಿಕೆ ನಿರ್ಧಾರ ಕೈಗೊಂಡಿದ್ದರೆ, ಸೋಂಕು ಹೆಚ್ಚುವ ಆಂತಕ  ಇರುತ್ತಿರಲಿಲ್ಲ ಎಂದು ಅಭಿಪ್ರಾಯ ಕೇಳಿಬರುತ್ತಿದೆ.

**ಯಾವ ಜಿಲ್ಲೆಗಳಿಗೆ ಸಡಿಲಿಕೆ:** ಕೋಲಾರ, ಬೆಂಗಳೂರು ನಗರ, ರಾಮನಗರ, ಚಿಕ್ಕಬಳ್ಳಾಪುರ, ತುಮಕೂರು, ಬಳ್ಳಾರಿ, ವಿಜಯನಗರ, ಉಡುಪಿ, ಉತ್ತರಕನ್ನಡ, ಚಿತ್ರದುರ್ಗ, ಧಾರವಾಡ, ಹಾವೇರಿ, ಗದಗ, ಬಾಗಲಕೋಟೆ, ವಿಜಯಪುರ, ಕೊಪ್ಪಳ, ರಾಯಚೂರು, ಯಾದಗಿರಿ, ಕಲಬುರಗಿ, ಬೀದರ್.

**ಎಲ್ಲೆಲ್ಲಿ ಲಾಕ್ ಮುಂದುವರಿಕೆ:** ಚಿಕ್ಕಮಗಳೂರು, ಮೈಸೂರು, ಚಾಮರಾಜನಗರ, ಕೊಡಗು, ಹಾಸನ, ಬೆಂಗಳೂರು ಗ್ರಾಮೀಣ, ಮಂಡ್ಯ, ದಾವಣಗೆರೆ, ಶಿವಮೊಗ್ಗ, ದಕ್ಷಿಣ ಕನ್ನಡ, ಬೆಳಗಾವಿ.

**21 ರಿಂದ ಆನ್‌ಲಾಕ್–2:** ರಾಜ್ಯದಲ್ಲಿ ಮೊದಲ ಆನ್‌ಲಾಕ್ ಅವಧಿ ಮುಗಿದ ಬಳಿಕ ಜೂನ್ 21 ರಿಂದ ಆನ್‌ಲಾಕ್–2 ಆರಂಭವಾಗುವ ನಿರೀಕ್ಷೆಯಿದೆ. ಈ ವೇಳೆ ಇನ್ನಷ್ಟು ವಿನಾಯಿತಿಗಳನ್ನು ನೀಡಲು ಚಿಂತನೆ ನಡೆಸಲಾಗಿದೆ.

**ದೊಡ್ಡಬಳ್ಳಾಪುರದಲ್ಲಿ ಗರಿಷ್ಠ:** ಸರ್ಕಾರದ ಅಧಿಕೃತ ದತ್ತಾಂಶಗಳ ಪ್ರಕಾರ ರಾಜ್ಯದಲ್ಲಿ ಬೆಂಗಳೂರು ಗ್ರಾಮೀಣ ಜಿಲ್ಲೆ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಗರಿಷ್ಠ ಪಾಸಿಟಿವಿಟಿ ದರ (ಶೇ.27.23) ಇದೆ. ಬೀದರ್ ಜಿಲ್ಲೆ ಬಸವಕಲ್ಯಾಣ ತಾಲ್ಲೂಕಿನಲ್ಲಿ ಕನಿಷ್ಠ ಶೇ.0.17 ರಷ್ಟಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸೇರಿ 70 ತಾಲ್ಲೂಕುಗಳಲ್ಲಿ ಶೇ.5ರೊಳಗೆ 67 ತಾಲ್ಲೂಕುಗಳಲ್ಲಿ ಶೇ.5 ರಿಂದ 10, 26 ತಾಲ್ಲೂಕುಗಳಲ್ಲಿ ಶೇ.10 ರಿಂದ 15, 4 ತಾಲ್ಲೂಕುಗಳಲ್ಲಿ ಶೇ.15 ರಿಂದ 20, ನಾಲ್ಕು ತಾಲ್ಲೂಕುಗಳಲ್ಲಿ ಶೇ.20 ರಿಂದ 25 ಮತ್ತು 1 ತಾಲ್ಲೂಕಿನಲ್ಲಿ ಶೇ.25 ಕ್ಕಿಂತ ಅಧಿಕ ಪಾಸಿಟಿವಿಟಿ ದರವಿದೆ.

ಆಧಾರ:ವಿಜಯವಾಣಿ, ದಿನಾಂಕ:14.06.2021.

## 36. ಹೊರಗುತ್ತಿಗೆ ನೌಕರರಿಗೆ ಸೇವಾ ಭದ್ರತೆ

ಆರೋಗ್ಯ ಗುತ್ತಿಗೆ ಮತ್ತು ಹೊರಗುತ್ತಿಗೆ ನೌಕರರಿಗೆ ಸೇವಾ ಭದ್ರತೆ ಸಂಬಂಧ ನಿವೃತ್ತ ಐಎಎಸ್ ಅಧಿಕಾರಿ ಶ್ರೀನಿವಾಸಾಚಾರಿ ಮಾನವ ಸಂಪನ್ಮೂಲ ನೀತಿ ಸಮಿತಿ ವರದಿಯ ಅನುಷ್ಠಾನದ ಶಿಫಾರಸ್ಸನ್ನು ಕ್ಯಾಬಿನೆಟ್‌ನಲ್ಲಿ ಮಂಡಿಸುವಂತೆ ಆರೋಗ್ಯ ಸಚಿವರಿಗೆ ಮುಖ್ಯಮಂತ್ರಿ ಸೂಚಿಸಿದ್ದಾರೆ ಎಂದು ವಿಧಾನ ಪರಿಷತ್ ಸದಸ್ಯ ಆಯನೂರು ಮಂಜುನಾಥ್ ತಿಳಿಸಿದ್ದಾರೆ. ಕೊರೋನಾ ಸಂಕಷ್ಟದ ಸಮಯದಲ್ಲಿ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ  ಹಾಗೂ ರಾಷ್ಟ್ರೀಯ ಆರೋಗ್ಯ ಅಭಿಯಾನದ ಗುತ್ತಿಗೆ ಮತ್ತು ಹೊರಗುತ್ತಿಗೆ ನೌಕರರಿಗೆ ಸೇವಾ ಭದ್ರತೆ ಮತ್ತು ವೇತನ ಪರಿಷ್ಕರಣೆ ಸಂಬಂಧ ಮಾನವ ಸಂಪನ್ಮೂಲ ನೀತಿ ವರದಿಯ ಕಡತವನ್ನು ಸಂಪುಟ ಸಭೆಯಲ್ಲಿ ಮಂಡಿಸುವಂತೆ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಆರೋಗ್ಯ ಸಚಿವರಿಗೆ ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸೂಚನೆ ನೀಡಿದ್ದಾರೆ ಎಂದರು.

ಗುತ್ತಿಗೆ ಹಾಗೂ ಹೊರಗುತ್ತಿಗೆ ನೌಕರರು ಯಾವುದೇ ಭದ್ರತೆ ಇಲ್ಲದೇ ಅತ್ಯಂತ ಕಡಿಮೆ ವೇತನ ಪಡೆಯುತ್ತಾ ಪ್ರಾಮಾಣಿಕವಾಗಿ ಜೀವನದ ಹಂಗನ್ನು ತೊರೆದು ಉತ್ತಮ ಸೇವೆ ನೀಡುತ್ತಿದ್ದು, ಸರ್ಕಾರ ಕೂಡಲೇ ನಿವೃತ್ತ ಐಎಎಸ್ ಅಧಿಕಾರಿ ಶ್ರೀನಿವಾಸಾಚಾರಿ ನೇತೃತ್ವದ ಸಮಿತಿ ಸಲ್ಲಿಸಿದ ವರದಿ 5–6 ತಿಂಗಳು ಕಳೆದರೂ ಜಾರಿ ಆಗಿರುವುದಿಲ್ಲ. ಕೂಡಲೇ ಆ ವರದಿ ಜಾರಿ ಮಾಡಿ ನೌಕರರು ಆತ್ಮಸ್ಥೈರ್ಯದಿಂದ ಕೆಲಸ ಮಾಡಲು ಅನುಕೂಲ ಮಾಡಿ ಕೊಡುವಂತೆ ತಾವು ಮಾಡಿದ ಮನವಿಗೆ ಮುಖ್ಯಮಂತ್ರಿ ಸಕಾರಾತ್ಮಕವಾಗಿ ಸ್ಪಂದಿಸಿರುವುದಾಗಿ ತಿಳಿಸಿದ್ದಾರೆ.

ಕೋವಿಡ್–19 ರೂಪಾಂತರಿ ವಿಷಮ ಪರಿಸ್ಥಿತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರ ಮಧ್ಯೆ ತಾರತಮ್ಯ ಸಲ್ಲದು. ಕೋವಿಡ್ ರಿಸ್ಕ್ ಇನ್ಸೆಂಟಿವ್ ಅನ್ನು ಎಲ್ಲ ಗುತ್ತಿಗೆ ಹಾಗೂ ಹೊರಗುತ್ತಿಗೆ ನೌಕರರಿಗೆ ನೀಡಬೇಕು. ಕೊರೋನಾ ಸಂದರ್ಭದಲ್ಲಿ ಮೃತಪಟ್ಟ ಎಲ್ಲ ನೌಕರರ ಕುಟುಂಬಕ್ಕೆ ಪರಿಹಾರವನ್ನು ನೀಡಲು ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಮುಖ್ಯಮಂತ್ರಿಗೆ ಆಯನೂರು ಮಂಜುನಾಥ್ ನೇತೃತ್ವದಲ್ಲಿ ಸಂಘದ ರಾಜ್ಯ ಕಾರ್ಯದರ್ಶಿ ರುದ್ರೇಶ್, ಜಿಲ್ಲಾ ಘಟಕದ ಗೌರವಾಧ್ಯಕ್ಷ ಡಾ: ರಾಘವೇಂದ್ರ ಶಿಲ್ಪಿ, ಜಿಲ್ಲಾ ಉಪಾಧ್ಯಕ್ಷ ಶಂಕರ್ ನವೀನ್ ಮತ್ತು ಇತರ ಸಂಘದ ಪ್ರಮುಖ ಪದಾಧಿಕಾರಿಗಳು ಮನವಿ ಸಲ್ಲಿಸಿದ್ದಾರೆ.

ಆರೋಗ್ಯ ಸಚಿವರು ಸಹ 15 ದಿನದೊಳಗಾಗಿ ಕ್ಯಾಬಿನೆಟ್‌ಗೆ ಮಂಡಿಸಲು ಸಿದ್ಧತೆ ಮಾಡಿಕೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿರುವುದು ಸಂತೋಷದ ವಿಷಯ. ನೌಕರರ ಬೇಡಿಕೆಗಳನ್ನು ಈಡೇರಿಸಿ ಗುತ್ತಿಗೆ ಹಾಗೂ ಹೊರಗುತ್ತಿಗೆ ನೌಕರರ ವಿಷಯವಾಗಿ ರಾಷ್ಟ್ರದಲ್ಲೆ ಮಾದರಿಯಾಗಲಿ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀಕಾಂತ್ ಸ್ವಾಮಿ ಆಶಯ ವ್ಯಕ್ತಪಡಿಸಿದ್ದಾರೆ.

ಆಧಾರ:ವಿಶ್ವವಾಣಿ, ದಿನಾಂಕ:14.06.2021.

## 37. ಕೊರೋನಾ ಸಾವು ರೂ.1 ಲಕ್ಷ ಪರಿಹಾರ

ಕೊರೋನಾದಿಂದ ಮೃತಪಟ್ಟ ಕಡುಬಡವರ ಕುಟುಂಬಗಳಿಗೆ ರೂ.1 ಲಕ್ಷ ಪರಿಹಾರನೀಡುವ ನಿರ್ಧಾರವನ್ನು ರಾಜ್ಯ ಸರ್ಕಾರ ಪ್ರಕಟಿಸಿದೆ. ಇದರಿಂದಾಗಿ ಬೊಕ್ಕಸಕ್ಕೆ ರೂ.250 ಕೋಟಿಗಳಿಂದ ರೂ.300 ಕೋಟಿವರೆಗೆ ಹೆಚ್ಚುವರಿ ವೆಚ್ಚ ಬೀಳಬಹುದು ಎಂದು ಮುಖ್ಯಮಂತ್ರಿಯವರು ಹೇಳಿದ್ದಾರೆ. ಆರ್ಥಿಕ ಇಲಾಖೆ ಅಧಿಕಾರಿಗಳ ಜೊತೆ ಸಭೆ ನಡೆಸಿದ ಮುಖ್ಯಮಂತ್ರಿಯವರು ಈ ಘೋಷಣೆ ಮಾಡಿದ್ದಾರೆ. ಸೋಂಕಿನಿಂದಾಗಿ ಬಿಪಿಎಲ್ ಕುಟುಂಬದಲ್ಲಿ ದುಡಿಯುವ ವಯಸ್ಕರು ಮೃತಪಟ್ಟರೆ ಒಬ್ಬರಿಗೆ ಮಾತ್ರ ಒಂದು ಲಕ್ಷ ರೂಪಾಯಿ ನೀಡಲು ನಿರ್ಧಾರ ಕೈಗೊಳ್ಳಲಾಗಿದೆ ಎಂದರು.

ಸೋಂಕಿನಿಂದಾಗಿ ಬಿಪಿಎಲ್ ಕುಟುಂಬಗಳ ಸುಮಾರು 20 ಸಾವಿರಕ್ಕೂ ಹೆಚ್ಚು ಜನರು ಮೃತಪಟ್ಟಿರುವ ಅಂದಾಜು ಮಾಡಲಾಗಿದೆ. ಎಷ್ಟೇ ಜನ ಮೃತಪಟ್ಟಿದ್ದರೂ ಒಂದು ಕುಟುಂಬಕ್ಕೆ ರೂ.1 ಲಕ್ಷ ಮಾತ್ರ ಪರಿಹಾರ ನೀಡಲಾಗುತ್ತದೆ ಎಂದರು. ದುಡಿಯುವ ವಯಸ್ಕರು ಅಸುನೀಗಿದ ಕುಟುಂಬಗಳ ರಕ್ಷಣೆಗೆ ಸರ್ಕಾರ ನಿಲ್ಲಲಿದೆ ಎಂದು ಮುಖ್ಯಮಂತ್ರಿಯವರು ಹೇಳಿದ್ದಾರೆ. ಪರಿಹಾರ ನೀಡಿಕೆಯ ಮಾರ್ಗಸೂಚಿ ಸದ್ಯದಲ್ಲೇ ಹೊರಡಿಸಲಾಗುವುದು. ಸರ್ಕಾರ ಈ ತೀರ್ಮಾನ ಬಡ ಕುಟುಂಬಗಳ ಪಾಲಿಗೆ ಸ್ವಲ್ಪ ಮಟ್ಟಿಗಾದರೂ ಆಶಾಭಾವನೆ ಮೂಡಿಸಲಿದೆ ಎಂದು ತಿಳಿಸಿದರು.

**ಎಸ್‌ಟಿಎಸ್ ಮಾದರಿ:** ಯಶವಂತಪುರ ಕ್ಷೇತ್ರದ ಶಾಸಕರೂ ಆಗಿರುವ ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಅವರು ರಾಜ್ಯದಲ್ಲಿ ಮೊದಲ ಬಾರಿಗೆ ಕೊರೋನಾದಿಂದ ಮೃತಪಟ್ಟ ಕುಟುಂಬಗಳಿಗೆ ವೈಯಕ್ತಿಕವಾಗಿ ರೂ.1 ಲಕ್ಷ ಪರಿಹಾರ ಘೋಷಿಸಿ ವಿತರಿಸಿದರು. ಇದನ್ನು ಆಧರಿಸಿ ಮುಖ್ಯಮಂತ್ರಿಯವರು ತೀರ್ಮಾನ ಕೈಗೊಂಡಿದ್ದಾರೆ ಎಂದು ಹೇಳಲಾಗಿದೆ.

**ಸಿಐಡಿ ತನಿಖೆಗೆ ತೀರ್ಮಾನ:** ಮಂಡ್ಯದಲ್ಲಿ ಹಾಲಿಗೆ ನೀರು ಬೆರಸಿ ಅಕ್ರಮ ಎಸಗಿರುವ ಪ್ರಕರಣವನ್ನು ಸಿಐಡಿ ತನಿಖೆಗೆ ವಹಿಸಲು ತೀರ್ಮಾನಿಸಲಾಗಿದೆ. ಈಗಾಗಲೇ ಪ್ರಕರಣ ಸಂಬಂಧ ವ್ಯವಸ್ಥಾಪಕ ನಿರ್ದೇಶಕರನ್ನು ವರ್ಗಾವಣೆ ಮಾಡಲಾಗಿದೆ. ಐವರನ್ನು ಅಮಾನತ್ತು ಮಾಡಲಾಗಿದೆ ಎಂದು ಮುಖ್ಯಮಂತ್ರಿಯವರು ಇದೇ ಸಂದರ್ಭದಲ್ಲಿ ಹೇಳಿದ್ದಾರೆ.

ಆಧಾರ:ಉದಯವಾಣಿ, ದಿನಾಂಕ:15.06.2021.

## 38. ಒತ್ತುವರಿ ತೆರವುಗೊಳಿಸಲು ಡಿ.ಸಿ. ಸೂಚನೆ

ನಗರ ಜಿಲ್ಲೆಯ ಎಲ್ಲ ಕೆರೆಗಳ ಸರ್ವೇ ಕಾರ್ಯಕೈಗೊಂಡು ಕೂಡಲೇ ಒತ್ತುವರಿ ತೆರವುಗೊಳಿಸಬೇಕು ಎಂದು ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ. ಮಂಜುನಾಥ್ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಕೆ.ಜೆ. ರಸ್ತೆಯ ಜಿಲ್ಲಾಧಿಕಾರಿಗಳ ಕಚೇರಿಯ ನ್ಯಾಯಾಂಗ ಸಭಾಂಗಣದಲ್ಲಿ ಕೆರೆಗಳ ಅಭಿವೃದ್ಧಿ ಕುರಿತು ಅಧಿಕಾರಿಗಳ ಸಭೆ ನಡೆಸಿದ ಅವರು ಕೆರೆಗಳನ್ನು ಶಾಶ್ವತ ಆಸ್ತಿಯನ್ನಾಗಿ ಅಭಿವೃದ್ಧಿಪಡಿಸಿ ಮುಂದಿನ ಪೀಳಿಗೆಗೆ ಸುರಕ್ಷಿತ ಪರಿಸರ ಉಳಿಸುವುದು ನಮ್ಮ ಜವಾಬ್ದಾರಿಯಾಗಿದೆ ಎಂದರು.

ಕೆರೆಗಳ ಗಡಿ ಗುರುತಿಸಿದರ ಸುತ್ತ ಇರುವ ಬಫರ್ ಝೋನ್ ಪ್ರದೇಶದಲ್ಲಿ ಕಟ್ಟಡ ಅಥವಾ ಇತರೆ ಕಾಮಗಾರಿಗಳಿಗೆ ಯಾವುದೇ ರೀತಿಯ ಅನುಮತಿ ನೀಡುವಂತಿಲ್ಲ. ಕೆರೆ ಒತ್ತುವರಿ ಸಂಬಂಧ ಸರ್ವೇ ನಡೆಸಿ ಮಾಹಿತಿ ನೀಡುವಂತೆ ತಾಕೀತು ಮಾಡಿದರು.

ಜೊತೆಗೆ ಕೆರೆಗಳಿಗೆ ನೀರು ಪೂರೈಸುವ ರಾಜಕಾಲುವೆಗಳ ಒತ್ತುವರಿಯನ್ನು ಕೂಡಲೇ ತೆರವುಗೊಳಿಸಬೇಕು. ಈ ಬಗ್ಗೆ ಸಂಪೂರ್ಣ ಕಾರ್ಯನಿರ್ವಹಿಸಲು ವೇಳಾಪಟ್ಟಿ ಸಿದ್ಧಪಡಿಸಿ ಜಿಲ್ಲಾಡಳಿತಕ್ಕೆ ಸಲ್ಲಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

**ಕೆರೆ ಬಗ್ಗೆ ಸಮೀಕ್ಷೆ ನಡೆಸಿ:** ಜಿಲ್ಲೆಯಲ್ಲಿ ಒಟ್ಟು 836 ಕೆರೆಗಳಿವೆ. ಇದರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿ 204 ಕೆರೆಗಳು ಸಣ್ಣ ನೀರಾವರಿ ಇಲಾಖೆ 46 ಕೆರೆಗಳು ಜಿಲ್ಲಾ ಪಂಚಾಯಿತಿ 421, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಐದು ಹಾಗೂ ಅರಣ್ಯ ಇಲಾಖೆ ವ್ಯಾಪ್ತಿಗೆ ಒಂದು ಕೆರೆ ಸೇರುತ್ತದೆ. ಉಳಿದ ಕೆರೆಗಳು ಯಾವ ಇಲಾಖೆಗೆ ಎಂಬ ಬಗ್ಗೆ ನಿರ್ಧರಿಸಲು ಸಮೀಕ್ಷೆ ನಡೆಸಲು ಪಂಚಾಯತ್ ರಾಜ್ ಎಂಜಿನಿಯರಿಂಗ್ ವಿಭಾಗದ ಅಧಿಕಾರಿಗಳಿಗೆ ಸೂಚಿಸಿದರು.

ಕೆರೆಗಳ ಸರ್ವೇ ಕಾರ್ಯ ಪೂರ್ಣಗೊಳಿಸಿದಲ್ಲಿ ಕೈಗಾರಿಕೆಗಳಿಗೆ ಅವುಗಳನ್ನು ಅಭಿವೃದ್ಧಿಪಡಿಸಲು ನೀಡಲಾಗುವುದು ಸರ್ಕಾರದ ಮಟ್ಟದಲ್ಲಿ ಪ್ರತಿ 15 ದಿನಗಳಿಗೊಮ್ಮೆ ಕೆರೆ ಅಭಿವೃದ್ಧಿ ಬಗ್ಗೆ ಪರಿಶೀಲನೆ ನಡೆಯುತ್ತಿದ್ದು, ಅನುಷ್ಠಾನ ಇಲಾಖೆಗಳ ಕ್ರಿಯಾಶೀಲರಾಗುವುದು ಅತ್ಯಗತ್ಯ ಎಂದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಸಂಗಪ್ಪ ಅಪರ ಜಿಲ್ಲಾಧಿಕಾರಿ ಜಿಲ್ಲಾಧಿಕಾರಿ ಅನಿತಾ ಲಕ್ಷ್ಮೀ, ಉತ್ತರ ವಿಭಾಗಾಧಿಕಾರಿ ರಂಗನಾಥ್, ದಕ್ಷಿಣ ಉಪ ವಿಭಾಗಾಧಿಕಾರಿ ಡಾ: ಶಿವಣ್ಣ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ: ಶ್ರೀನಿವಾಸ್ ಉಪಸ್ಥಿತರಿದ್ದರು.

ಆಧಾರ:ಉದಯವಾಣಿ, ದಿನಾಂಕ:15.06.2021.

## 39. ಖಾಸಗಿ ಶಾಲೆ ಶುಲ್ಕ ನಿಗದಿಗೆ ನಿವೃತ್ತ ಜಡ್ಜರ ಸಮಿತಿ

ಕೋವಿಡ್ ಸಾಂಕ್ರಾಮಿಕದ ಹಿನ್ನೆಲೆಯಲ್ಲಿ ಖಾಸಗಿ ಶಾಲೆಗಳ ನಡುವೆ ಉಂಟಾಗಿರುವ ಶುಲ್ಕ ನಿಗದಿ ವಿವಾದಕ್ಕೆ ಅಂತ್ಯ ಹಾಡಲು ರಾಜ್ಯ ಸರ್ಕಾರ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಗಳ ನೇತೃತ್ವದ ಸಮಿತಿಯನ್ನು ರಚನೆ ಮಾಡಲು ಒಲವು ತೋರಿದೆ. ಅದಕ್ಕಾಗಿ ಹೈಕೋರ್ಟ್‌ನಲ್ಲಿ ಮಧ್ಯಂತರ ಅರ್ಜಿಯನ್ನು ಹೂಡಿದೆ.

ಕರ್ನಾಟಕ ಖಾಸಗಿ ಶಾಳೆಗಳ ಸಮಿತಿ ಸಲ್ಲಿಸಿರುವ ಅರ್ಜಿಯಲ್ಲಿ ಸರ್ಕಾರ ಸಲ್ಲಿಸಿರುವ ಮಧ್ಯಂತರ ಅರ್ಜಿ ನ್ಯಾ. ಸಚಿನ್ ಶಂಕರ್ ಮಗದಂ ಅವರಿದ್ದ ಏಕಸದಸ್ಯ ಪೀಠದ ಮುಂದೆ ವಿಚಾರಣೆಗೆ ಬಂದಿತು.

ಆಗ ಸರ್ಕಾರದ ಪರ ಹಾಜರಾದ ಅಡ್ವೋಕೇಟ್ ಜನರಲ್ ಪ್ರಭುಲಿಂಗ ನಾವದಗಿ ಖಾಸಗಿ ಶಾಲೆಗಳಿಗೆ ಶೇ.70 ರಷ್ಟು ಶುಲ್ಕ ಪಡಯುವಂತೆ ಮತ್ತು ಶೇ.30 ರಷ್ಟು ಶುಲ್ಕ ರಿಯಾಯಿತಿ ನೀಡುವಂತೆ ಸೂಚಿಸಿತ್ತು. ಇದರ ವಿರುದ್ಧ ಖಾಸಗಿ ಶಾಲೆಗಳ ಒಕ್ಕೂಟ ಅರ್ಜಿ ಸಲ್ಲಿಸಿದೆ. ಆಗ ಸರ್ಕಾರ ಬಲವಂತದ ಕ್ರಮ ಕೈಗೊಳ್ಳಬಾರದೆಂದು ಆದೇಶ ನೀಡಿದೆ ಎಂದರು.

ಕೋವಿಡ್‌ನಿಂದಾಗಿ ಪೂರ್ಣ ಶುಲ್ಕ ಭರಿಸಲು ಪೋಷಕರಿಗೆ ತೊಂದರೆಯಾಗುತ್ತಿರುವುದರಿಂದ ಶುಲ್ಕ ನಿಗದಿ ಬಗ್ಗೆ ನಿವೃತ್ತ ಹೈಕೋರ್ಟ್ ನ್ಯಾಯಮೂರ್ತಿಗಳ ಸಮಿತಿ ರಚಿಸಲು ಪ್ರಸ್ತಾಪಿಸುತ್ತದೆ. ಸಮಿತಿ ಸೂಚನೆಯಂತೆ ಶುಲ್ಕ ನಿಗದಿ ಪರಿಶೀಲನೆ ಮಾಡಲಾಗುವುದು ಎಂದು ನ್ಯಾಯಪೀಠಕ್ಕೆ ತಿಳಿಸಿದರು.

ಇದಕ್ಕೆ ಖಾಸಗಿ ಶಾಲೆಗಳ ಪರ ವಕೀಲರು ತೀವ್ರ ವಿರೋಧ ವ್ಯಕ್ತಪಡಿಸಿ, ಸರ್ಕಾರಕ್ಕೆ ಶುಲ್ಕ ನಿಗದಿ ಅಧಿಕಾರವಿಲ್ಲ. ಸರ್ಕಾರದ ಪ್ರಸ್ತಾವಕ್ಕೆ ತಮ್ಮ ವಿರೋಧವಿದೆ ಎಂದರು.

ಮಧ್ಯಂತರ ಅರ್ಜಿಯಲ್ಲಿ ಏನೇನು ಅಂಶಗಳನ್ನು ಪ್ರಸ್ತಾಪಿಸಲಾಗಿದೆ ಎಂಬ ಬಗ್ಗೆ ತಮಗೆ ತಿಳಿದಿಲ್ಲ. ಅರ್ಜಿಯ ಪ್ರತಿಯನ್ನು ನೀಡುವಂತೆ ಸೂಚಿನೆ ನೀಡಿದೆ. ಅದ್ದರಿಂದ ನ್ಯಾಯಪೀಠ ಪ್ರತಿವಾದಿಗಳಿಗೆ ಮಧ್ಯಂತರ ಅರ್ಜಿಯ ಪ್ರತಿ ನೀಡುವಂತೆ ಸೂಚಿಸಿ ಜೂನ್ 21ಕ್ಕೆ ವಿಚಾರಣೆಯನ್ನು ಮುಂದೂಡಿತು.

ಆಧಾರ:ವಿಜಯ ಕರ್ನಾಟಕ, ದಿನಾಂಕ:16.06.2021.

## 40. ನಗರದಲ್ಲಿ ಇನ್ನೂ ಇದೆ ಕೊರೋನಾ ಅಪಾಯ

ರಾಜ್ಯದಲ್ಲಿ ಬೃಹತ್ ಪ್ರಮಾಣದಲ್ಲಿ ಕೋವಿಡ್ ಪ್ರಕರಣಗಳು ವರದಿಯಾಗಲು ಬೆಂಗಳೂರು ನಗರ ಹೇಗೆ ಕಾರಣವಾಗಿತ್ತೋ ಅದೇ ರೀತಿ ಕೋವಿಡ್ ಪ್ರಮಾಣದಲ್ಲಿ ಇಳಿಕೆಯಾಗುವಲ್ಲಿಯೂ ಬೆಂಗಳೂರಿನ ಪಾಲು ದೊಡ್ಡದು.

ಶೇಕಡ 40ಕ್ಕಿಂತ ಹೆಚ್ಚು ಪಾಸಿಟಿವಿಟಿ ದರ ದಾಖಲಿಸುತ್ತಿದ್ದ ಬೆಂಗಳೂರಿನಲ್ಲಿ ಸದ್ಯ ಕಳೆದೊಂದು ವಾರದಿಂದ ಶೇ.5 ಕ್ಕಿಂತ ಕಡಿಮೆ ಪಾಸಿಟಿವಿಟಿ ಬರುತ್ತಿದೆ. ಮೇ ಆರಂಭದಲ್ಲಿ 20 ಸಾವಿರಕ್ಕಿಂತ ಹೆಚ್ಚು ಪ್ರಕರಣ ದಾಖಲಾಗುತ್ತಿದ್ದ ಬೆಂಗಳೂರಿನಲ್ಲಿ ಸದ್ಯ 2 ಸಾವಿರ ಪ್ರಕರಣಗಳು ದಾಖಲಾಗುತ್ತಿದೆ.

ಲಾಕ್‌ಡೌನ್ ಆರಂಭದಲ್ಲಿ ರಾಜ್ಯದ ಒಟ್ಟು ಪ್ರಕರಣಗಳಲ್ಲಿ ಬೆಂಗಳೂರಿನ ಪಾಲು ಶೇ.60 ಇತ್ತು. ಸದ್ಯ ರಾಜ್ಯ ರಾಜಧಾನಿಯ ಪಾಲು ಶೇ.25ಕ್ಕಿಂತ ಕಡಿಮೆಯಾಗಿದೆ. ಬೆಂಗಳೂರು ನಗರ ಸೋಂಕನ್ನು ಹಿಮ್ಮೆಟ್ಟಿಸಿ ಬಿಟ್ಟಿತು ಎಂದು ಭಾವಿಸಬಹುದೇ ಎಂಬ ಪ್ರಶ್ನೆಗೆ ನಕಾರಾತ್ಮಕ ಉತ್ತರವನ್ನು ತಜ್ಞರು ನೀಡುತ್ತಾರೆ.

ರಾಜ್ಯ ರಾಜಧಾನಿಯಲ್ಲಿ ಕೋವಿಡ್ ಸೋಂಕಿತರ ಸಂಪರ್ಕಿತರ ಪತ್ತೆ ಮತ್ತು ಕೋವಿಡ್ ಪರೀಕ್ಷೆಯ ವಿಧಾನದಲ್ಲಿ ಲೋಪಗಳಿವೆ. ಅದೇ ರೀತಿ ನಗರ ತೊರೆದಿದ್ದ ಜನ ಮತ್ತೆ ವಾಪಾಸ್ಸು ಆಗುತ್ತಿದ್ದು ಮತ್ತೆ ಸೋಂಕಿನ ಪ್ರಮಾಣ ಹೆಚ್ಚಾಗುವ ಸಾಧ್ಯತೆಗಳಿವೆ ಎಂದು ಆರೋಗ್ಯ ತಜ್ಞರು ಹೇಳುತ್ತಾರೆ.

**ಸಂಪರ್ಕ ಪತ್ತೆಯಲ್ಲಿ ಉದಾಸೀನ:** ಒಬ್ಬ ಕೋವಿಡ್ ಸೋಂಕಿತನ ಸಂಪರ್ಕಕಕ್ಕೆ ಬಂದ (ಪ್ರಾಥಮಿಕ ಮತ್ತು ದ್ವಿತೀಯ) ಕನಿಷ್ಠ 20 ಜನರನ್ನು ಪತ್ತೆ ಹಚ್ಚಿ ಕೋವಿಡ್ ಪರೀಕ್ಷೆಗೆ ಒಳಪಡಿಸಬೇಕು ಎಂದು ರಾಜ್ಯ ಸರ್ಕಾರದ ಸೂಚನೆ ಇದೆ. ಬೆಂಗಳೂರಿನಲ್ಲಿ ಕೇವಲ ಸರಾಸರಿ 7.4 ಸಂಪರ್ಕಿತರನ್ನು ಪತ್ತೆ ಹಚ್ಚಲಾಗುತ್ತಿದೆ. ಸಂಪರ್ಕಿತರನ್ನು ಪತ್ತೆ ಹಚ್ಚುವುದರಲ್ಲಿ ಬೆಂಗಳೂರು ಕೊನೆಯಿಂದ ಮೂರನೇ (27)ನೇ ಸ್ಥಾನದಲ್ಲಿದೆ. ಮಂಡ್ಯ, ಧಾರವಾಡ, ಬೀದರ್ ಮತ್ತು ಗದಗದಲ್ಲಿ ಸರಾಸರಿ 20ಕ್ಕಿಂತ ಹೆಚ್ಚು ಸಂಪರ್ಕಿತರನ್ನು ಪತ್ತೆ ಹಚ್ಚಲಾಗಿದೆ. ಸಂಪರ್ಕಿತರನ್ನು ಪತ್ತೆ ಹಚ್ಚಿ ಪರೀಕ್ಷೆಗೆ ಒಳಪಡಿಸುವಲ್ಲಿನ ನಿರ್ಲಕ್ಷ್ಯದಿಂದ ಸೋಂಕು ಪತ್ತೆ ಪ್ರಮಾಣ ಕಡಿಮೆ ಆಗುತ್ತಿದೆ ಎಂದು ಆರೋಗ್ಯ ತಜ್ಞರು ಹೇಳುತ್ತಾರೆ.

ಸೋಂಕಿನ ಗುಣ ಲಕ್ಷಣಗಳಿಲ್ಲದವರ ಕೋವಿಡ್ ಪರೀಕ್ಷೆಗೆ ನಿರಾಕರಿಸುವ ವಿದ್ಯಮಾನಗಳು ವರದಿಯಾಗುತ್ತಿದೆ. ಅನ್‌ಲಾಕ್ ಪ್ರಕ್ರಿಯೆ ಜಾರಿಯಾಗುತ್ತಿದ್ದಂತೆ ಸೋಂಕಿನ ಗುಣ ಲಕ್ಷಣಗಳಿಲ್ಲದವರು ಹೆಚ್ಚು ಮಂದಿಗೆ ಸೋಂಕು ಹಬ್ಬಿಸುವ ಸಾಧ್ಯತೆಯಿದೆ. ಅದ್ದರಿಂದ ಕೋವಿಡ್ ಪರೀಕ್ಷೆಯನ್ನು ಯಾರಿಗೂ ನಿರಾಕರಿಸಬಾರದು ಎಂದು ತಜ್ಞರು ಹೇಳುತ್ತಾರೆ.

**ನಿಖರತೆ** ಕಡಿಮೆ ಇರುವ ಪರೀಕ್ಷೆಗೆ ಒತ್ತು: ಕೊನೆಯ ವಾರಗಳಲ್ಲಿ 75 ಸಾವಿರ ಮೀರಿ ಕೋವಿಡ್ ಪರೀಕ್ಷೆ ನಡೆಯುತ್ತಿತ್ತು. ಆದರೆ ಸೋಂಕಿನ ಪ್ರಮಾಣ ಏರುತ್ತಿದ್ದಂತೆ ಪರೀಕ್ಷೆಯ ಪ್ರಮಾಣದಲ್ಲೂ ಕುಸಿತ ದಾಖಲಾಗಿ ಸುಮಾರು 40 ಸಾವಿರ ಪರೀಕ್ಷೆ ದಿನ ನಿತ್ಯ ವರದಿಯಾಗಿತ್ತು. ಜೂನ್‌ನಲ್ಲಿ ಮತ್ತೆ ಪರೀಕ್ಷೆಗಳ ಪ್ರಮಾಣ 60 ಸಾವಿರ ದಾಟಿದೆ. ಏಪ್ರಿಲ್ 8 ರಂದು ಆರೋಗ್ಯ ಸಚಿವ ಸುಧಾಕರ್ ಅವರು ಬೆಂಗಳೂರು ನಗರದಲ್ಲಿ ಪ್ರತಿ ನಿತ್ಯ 1 ಲಕ್ಷ ಪರೀಕ್ಷೆ ನಡೆಸಬೇಕು ಮತ್ತು ಗರಿಷ್ಠ ಆರ್‌ಟಿಪಿಸಿಆರ್ ಪರೀಕ್ಷೆ ನಡೆಯಲಿ ಎಂಬ ಸೂಚನೆ ನೀಡಿದ್ದರು. ಕೋವಿಡ್ ಹೆಚ್ಚಾಗುತ್ತಿದ್ದಂತೆ ಪಾಲಿಕೆಯು ಈ ಗುರಿಯಿಂದ

ವಿಮುಖವಾಗುತ್ತಾ ಸಾಗಿತ್ತು. ಇದೇ ವೇಳೆ ಕೋವಿಡ್ ಎರಡನೇ ಅಲೆಯಲ್ಲಿ ಸೋಂಕು ಆರ್‌ಟಿಪಿಸಿಆರ್ ಪರೀಕ್ಷೆಯಲ್ಲಿ ಪತ್ತೆಯಾಗದೇ ಕೊನೆಗೆ ಸಿಟಿ ಸ್ಕಯಾನ್‌ನಲ್ಲಿ ಪತ್ತೆಯಾದ ಸಾವಿರಾರು ಉದಾಹರಣೆಗಳಿವೆ.

ಆರ್‌ಟಿಪಿಸಿಆರ್ ಪರೀಕ್ಷೆ ಶೇ.70 ರಷ್ಟು ಖಚಿತ ಫಲಿತಾಂಶ ನೀಡುತ್ತದೆ. ಸದ್ಯ ಸರ್ಕಾರ ಶೇ.50 ರಷ್ಟು ಖಚಿತ ಫಲಿತಾಂಶ ನೀಡುವ ಅಂಟಿಜೆನ್ ಪರೀಕ್ಷೆಯ ಸಂಖ್ಯೆಯನ್ನು ಹೆಚ್ಚಿಸುತ್ತಿರುವುದು ಅಚ್ಚರಿಗೆ ಕಾರಣವಾಗಿದೆ.

ಕಳೆದೆರಡು ತಿಂಗಳಿನಿಂದ ಕೋವಿಡ್ ಹೆಮ್ಮಾರಿ ಜನರ ಬದುಕನ್ನು ಧ್ವಂಸಗೊಳಿಸಿ, ವ್ಯವಸ್ಥೆಯ ಮೇಲೆ ವಿಪರೀತ ಒತ್ತಡ ಹಾಕಿದ್ದರು ಪಾಠ ಕಲಿಯದ ಸರ್ಕಾರ ಕಡಿಮೆ ನಿಖರತೆಯ ಪರೀಕ್ಷೆಗೆ ಒತ್ತು ನೀಡುತ್ತಿರುವುದು ತಜ್ಞರ ಆತಂಕಕ್ಕೆ ಕಾರಣವಾಗಿದೆ.

ಆಧಾರ:ಕನ್ನಡ ಪ್ರಭ, ದಿನಾಂಕ:16.06.2021.

## 41. ಸ್ಮಾರ್ಟ್‌ಸಿಟಿ ಯೋಜನೆ ಕಾಲಮಿತಿಯಲ್ಲಿ ಕಾಮಗಾರಿ ಪೂರ್ಣಕ್ಕೆ ಸಿಎಂ ಸೂಚನೆ

ಸ್ಮಾರ್ಟ್ ಸಿಟಿ ಯೋಜನೆಯಡಿ ಕೈಗೆತ್ತಿಕೊಂಡಿರುವ ಕಾಮಗಾರಿಗಳನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸುವಂತೆ ಮುಖ್ಯಮಂತ್ರಿಯವರು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಗೃಹ ಕಛೇರಿ ಕೃಷ್ಣಾದಲ್ಲಿ ಸ್ಮಾರ್ಟ್ ಸಿಟಿ ಯೋಜನೆಯ ಪ್ರಗತಿ ಪರಿಶೀಲಿಸಿದ ಅವರು, ಯೋಜನೆಗಳ ಪ್ರಗತಿ ಕುರಿತು ಮಾಹಿತಿ ಪಡೆದರು. ಕಾಮಗಾರಿ ಸ್ಥಳದಲ್ಲಿ ರಸ್ತೆಯ ಮೇಲೆ ಮತ್ತು ಪಾದಚಾರಿ ಮಾರ್ಗದಲ್ಲಿ ಬಿದ್ದಿರುವ ಮಣ್ಣನ್ನು ಸಂಪೂರ್ಣವಾಗಿ ತೆರವುಗೊಳಿಸಲು ಕೈಗೊಂಡ ಕ್ರಮದ ಬಗ್ಗೆ ಮಾತುಕತೆ ನಡೆಯಿತು. ರಸ್ತೆ ಕಾಮಗಾರಿ ಜಾರಿಯಿರುವ ಭಾಗಗಳಲ್ಲಿ ಶೇಖರಣೆಗೊಂಡಿರುವ ನಿರ್ಮಾಣ ಸಾಮಗ್ರಿಗಳಲ್ಲಿ ತಕ್ಷಣಕ್ಕೆ ಅಗತ್ಯ ಇರುವುದನ್ನು ಮಾತ್ರ ರಸ್ತೆಯ ಪಕ್ಕದ ಸ್ಥಳ ಅಥವಾ ಪಾದಚಾರಿಗಳ ಮಾರ್ಗಗಳ ಮೇಲೆ ಓಡಾಟ ಮತ್ತು ವಾಹನ ಸಂಚಾರಕ್ಕೆ ಯಾವುದೇ ಅಡೆತಡೆಯಾಗದಂತೆ ಸಂಗ್ರಹಿಸಿಟ್ಟುಕೊಳ್ಳುವ ಕುರಿತು ಕೈಗೊಂಡಿರುವ ಕ್ರಮದ ಕುರಿತು ಅಧಿಕಾರಿಗಳು ಮಾಹಿತಿ ನೀಡಿದರು.

ಕಾಮಗಾರಿ ನಡೆಯುತ್ತಿರುವ ಸ್ಥಳ ಮತ್ತು ರಸ್ತೆ ಅಗೆದಿರುವ ಭಾಗಗಳಲ್ಲಿ ಬ್ಯಾರಿಕೇಡಿಂಗ್ ಮಾಡಿರುವುದು, ಆರ್ಟೀರಿಯಲ್ ಮತ್ತು ಸಬ್–ಆರ್ಟೀರಿಯಲ್ ರಸ್ತೆಗಳ ವಾರ್ಷಿಕ ನಿರ್ವಹಣೆ ಗುತ್ತಿಗೆಯನ್ನು ನೀಡಿದ್ದು, ರಸ್ತೆಬದಿಯ ಚರಂಡಿಗಳಲ್ಲಿ ಮಣ್ಣು ಶೇಖರಣೆಯಾಗದಂತೆ ಕ್ರಮದ ಬಗ್ಗೆ ತಿಳಿಸಿದರು.

ತೆರೆದಿರುವ ಅಥವಾ ನೀರು ಸೋರಿಕೆಯಾಗುತ್ತಿರುವ ಮ್ಯಾನ್‌ಹೋಲ್/ಚರಂಡಿಗಳನ್ನು ಕೂಡಲೇ ದುರಸ್ತಿಪಡಿಸಲು ಕ್ರಮ ಕೈಗೊಂಡಿರುವುದು ಮತ್ತು ವಾಹನ ಸಂಚಾರಕ್ಕೆ ಯಾವುದೇ ಅಡೆತಡೆ ಇಲ್ಲದಂತೆ ಕ್ರಮ ವಹಿಸುವುದಕ್ಕೆ ಕೈಗೊಂಡ ಕ್ರಮಗಳ ವಿವರವನ್ನು ಮುಖ್ಯಮಂತ್ರಿಗಳಿಗೆ ನೀಡಲಾಯಿತು.

ಸ್ಮಾರ್ಟ್ ಸಿಟಿ ಯೋಜನೆಯಲ್ಲಿ ಒಟ್ಟು ರೂ.930ಕೋಟಿ ವೆಚ್ಚದಲ್ಲಿ 37 ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು, ಅದರಲ್ಲಿ 37 ರಸ್ತೆಗಳ ಅಭಿವೃದ್ಧಿ ಕೋವಿಡ್ ಆಸ್ಪತ್ರೆಗಳಿಗೆ ನೆರವು, ಐಟಿ ಯೋಜನೆಗಳು, ಕಟ್ಟಡ ನಿರ್ಮಾಣ ಹಾಗೂ ಇತರೆ ಯೋಜನೆ ಸೇರಿದ್ದು, ಈ ಎಲ್ಲ ಯೋಜನೆಗಳ ಪ್ರಗತಿ ಬಗ್ಗೆ ಮುಖ್ಯಮಂತ್ರಿಗಳು ಸುದೀರ್ಘವಾದ ಚರ್ಚೆ ನಡೆಸಿದರು.

ಮೆಟ್ರೋ ಯೋಜನೆಗಳ ಬಗ್ಗೆಯೂ ಚರ್ಚೆ ನಡೆಸಲಾಯಿತು. ಕಳೆದ ಸಭೆ ವೇಳೆ 4 ಕಾಮಗಾರಿ ಪೂರ್ಣಗೊಂಡಿದ್ದು, ಉಳಿದ ಕಾಮಗಾರಿ ಪ್ರಗತಿಯಲ್ಲಿವೆ.

ರೂ.103 ಕೋಟಿ ಖರ್ಚು ಮಾಡಲಾಗಿತ್ತು ಎನ್ನುವ ಮಾಹಿತಿ ನೀಡಿದ್ದು, ಮೇ ಅಂತ್ಯಕ್ಕೆ ರಸ್ತೆ ಕಾಮಗಾರಿ ಮುಗಿಯಲಿದೆ ಎನ್ನುವ ಮಾಹಿತಿ ನೀಡಲಾಗಿತ್ತು. ಆದರೆ ಇನ್ನು ಯಾಕೆ ಮುಗಿದಿಲ್ಲ ಎಂದು ಮುಖ್ಯಮಂತ್ರಿಯವರು ಪ್ರಶ್ನಿಸಿದರು. ಕಾಲಮಿತಿಯಲ್ಲಿ ಸ್ಮಾರ್ಟ್ ಸಿಟಿ ಯೋಜನೆಗಳನ್ನು ಮುಗಿಸಬೇಕು ಎಂದು ಅಧಿಕಾರಿಗಳಿಗೆ ಮುಖ್ಯಮಂತ್ರಿಯವರು ಕಟ್ಟುನಿಟ್ಟಿನ ಸೂಚನೆ ನೀಡಿದರು.

ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್, ನಮ್ಮ ಮೆಟ್ರೋ, ವ್ಯವಸ್ಥಾಪಕ ನಿರ್ದೇಶಕ ರಾಕೇಶ್ ಸಿಂಗ್, ಅಪರ ಮುಖ್ಯ ಕಾರ್ಯದರ್ಶಿ, ವಂದಿತಾ ಶರ್ಮಾ ಮತ್ತಿತರರಿದ್ದರು.

ಆಧಾರ: ಸಂಯುಕ್ತ ಕರ್ನಾಟಕ, ದಿನಾಂಕ:16.06.2021.

## 42. ಒಂದು ಲಕ್ಷ ರೂಪಾಯಿ ಪರಿಹಾರ

ಕೋವಿಡ್ ಸಂಕಟದ ಸಮಯದಲ್ಲಿ ಮುಖ್ಯಮಂತ್ರಿಯವರ ನೇತೃತ್ವದ ರಾಜ್ಯ ಸರ್ಕಾರವು ತನ್ನ ಕರ್ತವ್ಯವನ್ನು ಚಾಚೂ ತಪ್ಪದೇ ನಿರ್ವಹಿಸುತ್ತಿರುವುದು ಮಾತ್ರವಲ್ಲದೇ, ಮಾನವೀಯ ಕಾರ್ಯದಿಂದಲೂ ಹೆಚ್ಚು ಗಮನ ಸೆಳೆಯುತ್ತಿದೆ. ಕೋವಿಡ್ ಎರಡನೇ ಅಲೆಯಲ್ಲಿ ಈಗಾಗಲೇ ಎರಡು ಪ್ಯಾಕೇಜ್‌ಗಳನ್ನು ಘೋಷಿಸಿ ಸಂತ್ರಸ್ತರ ನೆರವಿಗೆ ಧಾವಿಸಿದ್ದ ಮುಖ್ಯಮಂತ್ರಿಯವರು ಇದೀಗ ಸೋಂಕಿನಿಂದಾಗಿ ದುಡಿಯುವ ಕೈ ಕಳೆದುಕೊಂಡ ಬಿಪಿಎಲ್ ಕುಟುಂಬಕ್ಕೆ ತಲಾ  ರೂ.1 ಲಕ್ಷ ಪರಿಹಾರ ಘೋಷಿಸಿದ್ದಾರೆ.

ಈ ಘೋಷಣೆ ಮೂಲಕ ಕರ್ನಾಟಕ ಸರ್ಕಾರವು ತನ್ನೆಲ್ಲ ಯೋಜನೆಗಳನ್ನು ಮಾನವೀಯ ನೆಲೆಯಲ್ಲಿ ಜಾರಿಗೊಳಿಸುತ್ತದೆ ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಅಂತ:ಕರಣದ ಸರ್ಕಾರ ಎಂಬುದನ್ನು ಮತ್ತೆ ಮುಖ್ಯಮಂತ್ರಿಯವರು ಘೋಷಿಸಿರುವ ಈ ಪರಿಹಾರದಲ್ಲಿ ಬಿಪಿಎಲ್ ಕುಟುಂಬದಲ್ಲಿ ಕೋವಿಡ್‌ನಿಂದ ಮೃತಪಟ್ಟ ಒಬ್ಬರಿಗೆ ಈ ಹಣ ದೊರೆಯಲಿದ್ದು, ರಾಜ್ಯಾದ್ಯಂತ ಸುಮಾರು 30,000 ಕುಟುಂಬಗಳು ಇದರ ಪ್ರಯೋಜನ ಪಡೆಯಲಿವೆ. ಆರ್ಥಿಕ ಇಲಾಖೆ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಬಳಿಕ ಮುಖ್ಯಮಂತ್ರಿಯವರು ಈ ವಿಷಯ ಪ್ರಕಟಿಸಿದರು.

ಇಡೀ ದೇಶದಲ್ಲಿ ಮೊದಲ ಬಾರಿ ಇಂತಹ ಪರಿಹಾರ ಘೋಷಿಸಲಾಗಿದೆ. ಈ ಪರಿಹಾರ ಯೋಜನೆಗೆ ಆಗುವ ಸುಮಾರು ರೂ.250 ಕೋಟಿಯಿಂದ ರೂ.300 ಕೋಟಿ ಹಣವನ್ನು  ಸರ್ಕಾರ ಭರಿಸಲು ಸರ್ಕಾರ ಮುಂದಾಗಿದೆ ಎಂದು ಮುಖ್ಯಮಂತ್ರಿಯವರು ಹೇಳಿದ್ದಾರೆ.

**ಈ ಬಾರಿಯೂ ಎರಡು ಪ್ಯಾಕೇಜ್:** ಕೋವಿಡ್ ಎರಡನೇ ಅಲೆ ಕಾಣಿಸಿಕೊಂಡಿರುವ ಈ ಸಂದರ್ಭದಲ್ಲೂ ಕಾರ್ಮಿಕ ವರ್ಗದವರು ಕರೆದುಕೊಂಡು ಮಕ್ಕಳ ಪಾಲನೆ, ಪೋಷಣೆ ಜೊತೆಗೆ ಭವಿಷ್ಯ ರೂಪಿಸಿಕೊಳ್ಳಲು ನೆರವಾಗುವಂತೆ 'ಸಿಎಂ ಬಾಲ ಸೇವಾ' ಯೋಜನೆ ಘೋಷಿಸಿದ್ದಾರೆ. ಪೋಷಕರ ಆರೈಕೆಯಲ್ಲಿರುವ ಮಕ್ಕಳಿಗೆ ಮಾಸಿಕ ರೂ.3,500 ಭತ್ಯೆ, ಬಂಧುಗಳ ಆರೈಕೆ ದೊರೆಯದ ಸ್ಥಿತಿಯಿದ್ದರೆ, 10 ವರ್ಷದೊಳಗಿನ ಮಕ್ಕಳನ್ನು ಆರೈಕೆ ಕೇಂದ್ರಗಳಲ್ಲಿ ನೋಂದಾಯಿತ ಮಕ್ಕಳಾಗಿ ಪರಿಗಣಿಸಿ ಪಾಲನೆಗೆ ವ್ಯವಸ್ಥೆ. 10 ವರ್ಷ ತುಂಬಿದ ಮಕ್ಕಳಿಗೆ ಸರ್ಕಾರಿ ಸ್ವಾಮ್ಯದ ಮಾದರಿ ವಸತಿ ಶಾಲೆಗಳಲ್ಲಿ ಶಿಕ್ಷಣ ವ್ಯವಸ್ಥೆ. 10 ವರ್ಷ ಪೂರೈಸಿದ ಮಕ್ಕಳಿಗೆ ಕೌಶಲ್ಯಾಭಿವೃದ್ಧಿಗೆ ಉಚಿತ ಟ್ಯಾಬ್, ಲ್ಯಾಪ್‌ಟಾಪ್ ವಿತರಣೆ. ಹೆಣ್ಣು ಮಕ್ಕಳಿಗೆ ಉನ್ನತ ಶಿಕ್ಷಣ ಸೇರಿದಂತೆ ಮುಂದಿನ ಜೀವನಕ್ಕೆ ಅನುಕೂಲವಾಗುವಂತೆ ಒಂದು ಲಕ್ಷ ರೂಪಾಯಿ ನೆರವು ಒದಗಿಸಲಾಗುತ್ತಿದೆ. ರಕ್ಷಣೆಗೆ ಯಾರೂ ಇಲ್ಲದ ಅನಾಥ ಮಕ್ಕಳನ್ನು ನೋಡಿಕೊಳ್ಳಲು ಸರ್ಕಾರವೇ ಮಾರ್ಗದರ್ಶಿ / ಹಿತೈಷಿಗಳನ್ನು ನೇಮಿಸುವ ಯೋಜನೆ ಜಾರಿಗೊಳಿಸಿದ್ದಾರೆ.

ಆರ್ಥಿಕವಾಗಿ ದುರ್ಬಲರು, ಹಿಂದುಳಿದವರು, ವೇತನ ಗೌರವಧನವಿಲ್ಲದೆ ಸಂಕಷ್ಟಕ್ಕೆ ಸಿಲುಕಿದವರಿಗೆ ಎರಡು ಪ್ಯಾಕೇಜ್ ಘೋಷಿಸಿದ್ದಾರೆ ಮೊದಲ ಪ್ಯಾಕೇಜ್‌ನಡಿ ರೂ.1,250 ಕೋಟಿ, ಎರಡನೇ ಪ್ಯಾಕೇಜ್‌ನಡಿ ರೂ.500 ಕೋಟಿ ಪ್ರಕಟಿಸಿದ್ದು, 55 ಲಕ್ಷ ಮಂದಿಗೆ ಆರ್ಥಿಕ ನೆರವು ಕಲ್ಪಿಸಿದ್ದಾರೆ.

ಆಧಾರ:ವಿಜಯ ಕರ್ನಾಟಕ, ದಿನಾಂಕ:17.06.2021.

## 43. ಹಿಗ್ಗಿತು ಬಿಬಿಎಂಪಿ ಬಜೆಟ್ ಗಾತ್ರ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) 2021–22ನೇ ಸಾಲಿನ ಬಜೆಟ್ ಗಾತ್ರವನ್ನು ನಗರಾಭಿವೃದ್ಧಿ ಇಲಾಖೆ ರೂ.9,951.80 ಕೋಟಿಗೆ ಹಿಗ್ಗಿಸಿ ಅನುಮೋದನೆ ನೀಡಿದೆ.

ಪ್ರಸ್ತುತ ಆರ್ಥಿಕ ಸಾಲಿನಲ್ಲಿ ಹೊಸ ಕಾಮಗಾರಿಗಳಿಗೆ ಅವಕಾಶ ನೀಡದೆ, ಆಡಳಿತ ಖರ್ಚು–ವೆಚ್ಚ ಹಾಗೂ ಪ್ರಗತಿಯಲ್ಲಿರುವ ಕಾಮಗಾರಿಗಳಿಗೆ ವೆಚ್ಚ ಭರಿಸುವ ನಿಟ್ಟಿನಲ್ಲಿ ಆದಾಯಕ್ಕೆ ಅನುಗುಣವಾಗಿ ರೂ.9,286.80 ಕೋಟಿ ಗಾತ್ರದ ವಾಸ್ತವಿಕ ಬಜೆಟ್ ಮಂಡಿಸಿ ಅಂಗೀಕರಿಸಿತ್ತು. ಇದನ್ನು 2 ತಿಂಗಳು ತಡವಾಗಿ ಸರ್ಕಾರಕ್ಕೆ ಅನುಮೋದನೆಗೆ ಕಳುಹಿಸಲಾಗಿತ್ತು. ಪ್ರತಿ ವರ್ಷದ ಬಜೆಟ್‌ನಲ್ಲಿ ಕೆಲವು ಅನಗತ್ಯ ಖರ್ಚುಗಳನ್ನು ಕಡಿತಗೊಳಿಸಿ ಅನುಮೋದನೆ ನೀಡುತ್ತಿದ್ದ ನಗರಾಭಿವೃದ್ಧಿ ಇಲಾಖೆ ಈ ಬಾರಿ ಗಾತ್ರದ ರೂ.665 ಕೋಟಿ ಹೆಚ್ಚಳ ಮಾಡಿ ಅನುಮೋದಿಸಿದೆ.

**ವಿವೇಚನಾ ಅನುದಾನ ಮೀಸಲು ಹೆಚ್ಚಳ:** ಪ್ರತಿವರ್ಷ ಮಂಡಿಸುವ ಬಜೆಟ್‌ನಲ್ಲಿ ಮೇಯರ್, ಉಪ ಮೇಯರ್, ಆಯುಕ್ತರು, ತೆರಿಗೆ ಸ್ಥಾಯಿ ಸಮಿತಿ, ಜಿಲ್ಲಾ ಉಸ್ತುವಾರಿ ಸಚಿವರ ವಿವೇಚನೆಯಡಿ ಬಳಸುವುದಕ್ಕೆ ವಿಶೇಷ ಅನುದಾನ ಕಾಯ್ದಿರಿಸಲಾಗುತ್ತಿತ್ತು. ಈ ಬಾರಿ ಮುಖ್ಯ ಆಯುಕ್ತರು ವಿವೇಚನೆಯಡಿ ಬಳಕೆಗೆ ರೂ.20 ಕೋಟಿ ಮತ್ತು ಮೇಲಿನ ಎಲ್ಲ ಕೋಟಾದಡಿ ಪ್ರಗತಿಯಲ್ಲಿರುವ ಕಾಮಗಾರಿಗಳಿಗಾಗಿ ರೂ.65 ಕೋಟಿ ಮಾತ್ರ ಕಾಯ್ದಿರಿಸಲಾಗಿತ್ತು. ಉಳಿದವರಿಗೆ ಮೀಸಲಿಟ್ಟಿರಲಿಲ್ಲ. ವಿವೇಚನೆಯಡಿ ಕೈಗೊಳ್ಳುವ ಕಾಮಗಾರಿ ಕೋಟಾವನ್ನು ಪರಿಷ್ಕರಿಸಿದ ಸರ್ಕಾರ ರೂ.385 ಕೋಟಿಗಳನ್ನು ಹೆಚ್ಚುವರಿಯಾಗಿ ಸೇರ್ಪಡೆಗೊಳಿಸಿದೆ.

**ಟೆಂಡರ್ ಪ್ರೀಮಿಯಂಗೆ ರೂ.300 ಕೋಟಿ:** ಪಾಲಿಕೆ ವ್ಯಾಪ್ತಿಯಲ್ಲಿ ರಾಜ್ಯ ಸರ್ಕಾರದ ಅನುದಾನದಲ್ಲಿ ಕೈಗೊಳ್ಳುವ ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳ ಟೆಂಡರ್ ಪ್ರೀಮಿಯಂ ಮೊತ್ತವನ್ನು ಪಾಲಿಕೆಯೇ ಭರಿಸಬೇಕಾಗುತ್ತದೆ. ಈ ಮೊತ್ತ ಪಾವತಿಗೆ ಬಿಬಿಎಂಪಿ ಬಜೆಟ್‌ನಲ್ಲಿ ಅನುದಾನ ಮೀಸಲಿಟ್ಟಿರಲಿಲ್ಲ. ನಗರಾಭಿವೃದ್ಧಿ ಇಲಾಖೆಯ ಟೆಂಡರ್ ಪ್ರೀಮಿಯಂ ಭರಿಸಲು ರೂ.300 ಕೋಟಿ ಅನುದಾನ ಹೆಚ್ಚುವರಿ ಸೇರಿಸಿದೆ.

**ವಿವೇಚನಾ ಬಳಕೆ ಪರಿಷ್ಕರಣೆ ವಿವರ (ಕೋಟಿ ರೂ.ಗಳಲ್ಲಿ)**

| ಹಂಚಿಕೆ | ಬಾಕಿ | ಪ್ರಗತಿ ಕಾಮಗಾರಿ | ಹೊಸ ಕಾಮಗಾರಿ | ಒಟ್ಟು |
|---|---|---|---|---|
| ಮೇಯರ್ | 32.28 | 10 | 50 | 92.27 |
| ಉಪಮೇಯರ್ | 27.95 | 15 | 35 | 77.94 |
| ಮುಖ್ಯ ಆಯುಕ್ತ | 6.48 | 10 | 35 | 51.47 |
| ತೆರಿಗೆ, ಆರ್ಥಿಕ ಸ್ಥಾಯಿ ಸಮಿತಿ | 21.72 | 15 | 15 | 51.72 |
| ಜಿಲ್ಲಾ ಉಸ್ತುವಾರಿ ಸಚಿವ | 32.19 | 15 | 250 | 297.19 |

**ಪಾಲಿಕೆ ಅಧಿಕಾರಿಗಳಿಗೆ ಹೊಂದಾಣಿಕೆ ಸವಾಲು:** ಪ್ರಸ್ತುತ ಆರ್ಥಿಕ ಸಾಲಿನಲ್ಲಿ ರೂ.9,291 ಸ್ವೀಕೃತಿಯನ್ನು ಬಿಬಿಎಂಪಿ ತೋರಿಸಿದೆ. ಈ ಪೈಕಿ ರೂ.9,286.80 ಕೋಟಿ ಬಜೆಟ್ ಮಂಡಿಸಿ ರೂ.5 ಕೋಟಿ ಉಳಿತಾಯದ ಬಜೆಟ್ ಎಂದು ತೋರಿಸಿತ್ತು. ಈಗ ಸರ್ಕಾರ ರೂ.665 ಕೋಟಿ ಹೆಚ್ಚುವರಿ ಸೇರ್ಪಡೆ ಮಾಡಿದ್ದು, ಯಾವ ಮೂಲದಿಂದ ಆದಾಯ ಮೂಲ ಹೊಂದಿಸುವುದು ಎಂಬುದು ಪಾಲಿಕೆಗೆ ಸವಾಲಾಗಿದೆ. ಒಟ್ಟಾರೆ ಪರಿಷ್ಕೃತ ಬಜೆಟ್ ಕೊರತೆ ಬಜೆಟ್ ಆಗಿದೆ. ಇನ್ನು ಕಳೆದ ಸಾಲಿನ ಪಾಲಿಕೆ ಬಜೆಟ್‌ನಲ್ಲಿ ರಾಜ್ಯ ಸರ್ಕಾರದ ಅನುದಾನಕ್ಕೆ ಪೂರಕ ಅನುದಾನ ಮೀಸಲಿಟ್ಟು ಅನುಮೋದನೆ ಪಡೆದ ನಂತರ ಮರುಹಂಚಿಕೆ ಮಾಡಿತ್ತು. ಈ ವರ್ಷ ಮರುಹಂಚಿಕೆ ತಡೆಯುವ ಉದ್ದೇಶದಿಂದ ಪೂರಕ ಅನುದಾನಕ್ಕೆ ಮೀಸಲಿಡುವ ಅನುದಾನವನ್ನು ಪ್ರತ್ಯೇಕ ಖಾತೆ ಮೂಲಕ ಬಳಸುವಂತೆ ಸರ್ಕಾರ ಸೂಚಿಸಿದೆ.

ಆಧಾರ:ವಿಜಯವಾಣಿ, ದಿನಾಂಕ:17.06.2021

## 44. ನನ್ನ ಫೋನ್ ಟ್ಯಾಪ್ ಆಗುತ್ತಿದೆ

ತಮ್ಮ ದೂರವಾಣಿ ಕದ್ದಾಲಿಸಲಾಗುತ್ತಿದೆ ಎಂದು ಬಿಜೆಪಿ ಶಾಸಕ ಅರವಿಂದ ಬೆಲ್ಲದ್ ಗಂಭೀರ ಆರೋಪ ಮಾಡಿದ್ದಾರೆ.

ರಾಜ್ಯ ಬಿಜೆಪಿ ಕಚೇರಿಯಲ್ಲಿ ಉಸ್ತುವಾರಿ ಅರುಣ್ ಸಿಂಗ್ ಅವರು ಶಾಸಕರಿಂದ ಅಹವಾಲು ಆಲಿಸುತ್ತಿದ್ದರೆ, ಮತ್ತೊಂದೆಡೆ ಸುದ್ದಿಗಾರರೊಂದಿಗೆ ಮಾತನಾಡಿದ ಅರವಿಂದ ಬೆಲ್ಲದ್ ಈ ಆರೋಪ ಮಾಡಿದರು. ಜೊತೆಗೆ ಈ ಸಂಬಂಧ ಸ್ಪೀಕರ್, ಗೃಹ ಸಚಿವರು ಹಾಗೂ ಡಿಜಿಪಿಗೆ ನೀಡಿದ ದೂರಿನ ಪ್ರತಿಯನ್ನು ಪ್ರದರ್ಶಿಸಿ, ತನಿಖೆ ನಡೆಸುವಂತೆ ಒತ್ತಾಯಿಸಿದರು.

ಸಿಂಗ್ ಆಗಮನಕ್ಕೆ ಕೆಲ ದಿನ ಮೊದಲು ದಿಲ್ಲಿಗೆ ತೆರಳಿದ್ದ ಬೆಲ್ಲದ್ ಸುದ್ದಿಯ ಕೇಂದ್ರವಾಗಿದ್ದರು. ವೈಯಕ್ತಿಕ ಕೆಲಸ ನಿಮಿತ್ತ ದಿಲ್ಲಿಗೆ ತೆರಳಿದ್ದಾಗಿ ಹೇಳಿಕೊಂಡಿದ್ದರೂ, ಹೈಕಮಾಂಡ್ ಪ್ರತಿನಿಧಿಗಳನ್ನು ಅವರು ಭೇಟಿ ಮಾಡಿದ್ದು ಕುತೂಹಲ ಕೆರಳಿಸಿತ್ತು. ಬೆಂಗಳೂರಿನಲ್ಲಿದ್ದರೂ ಸಿಂಗ್ ಅವರನ್ನು ಬೆಲ್ಲದ್ ಭೇಟಿ ಮಾಡದೇ ಫೋನ್ ಟ್ಯಾಪಿಂಗ್ ಬಗ್ಗೆ ಸ್ಫೋಟಕ ಹೇಳಿಕೆ ನೀಡುವ ಮೂಲಕ ಗಮನ ಸೆಳೆದಿದ್ದಾರೆ.

ಬಂಧನಕ್ಕೆ ಒಳಗಾಗಿರುವ ಯುವರಾಜ ಸ್ವಾಮಿ ಎಂಬುವವರು ತಮಗೆ ಕರೆ ಮಾಡಿದ್ದರ ಬಗ್ಗೆ ಬೆಲ್ಲದ್ ಹೇಳಿದ್ದಾರೆ. ಒಬ್ಬರು ನನಗೆ ಕರೆ ಮಾಡಿ ನಾನು ಸ್ವಾಮಿ ಎಂದರು, ಯಾರು ಎಂದು ಕೇಳಿದರೆ ಯುವರಾಜಸ್ವಾಮಿಯೆಂದರು. ಪುನ: ಬೇರೆ ನಂಬರ್‌ನಿಂದ ಕಾಲ್ ಮಾಡಿದರು. ನನಗೆ ಯುವರಾಜ ಸ್ವಾಮಿ ಪರಿಚಯವು ಇಲ್ಲ. ಜೈಲಿನಲ್ಲಿದ್ದವರೆಲ್ಲ ಕರೆ ಮಾಡಲು ಹೇಗೆ ಸಾಧ್ಯ ಇದೆಲ್ಲವೂ ತನಿಖೆಯಾಗಬೇಕು ಎಂದು ಒತ್ತಾಯಿಸಿದರು.

5 ಬಾರಿ ಶಾಸಕರಾಗಿದ್ದ ತಂದೆ ಹಾಗೂ ನಾನು ಪ್ರಾಮಾಣಿಕ ರಾಜಕಾರಣ ಮಾಡಿಕೊಂಡು ಬಂದಿದ್ದೇವೆ. ನನ್ನನ್ನು ಸಿಲುಕಿಸುವ ಯತ್ನ ನಡೆಯುತ್ತಿದೆ. ಫೋನ್ ಟ್ಯಾಪ್ ಆಗಿದೆ. ನಾನು ಎಲ್ಲಿಗೆ ಹೋಗುತ್ತೇನೆ, ಏನು ಮಾಡುತ್ತೇನೆ ಎಂಬ ಬಗ್ಗೆ ನಿಗಾ ಇಡುತ್ತಿದ್ದಾರೆಂದರೆ ಪೋನ್ ಟ್ಯಾಪಾಗಿದೆಯೆಂದು ಅರ್ಥ. ಸರ್ಕಾರದ ಬಗ್ಗೆ ಮಾತನಾಡುವುದಿಲ್ಲ. ಆರೋಪಿಸುವುದು ಇಲ್ಲ. ಈಗ ಹೊಸ ಟೆಕ್ನಾಲಜಿ ಬಂದಿದೆ. ಯಾರೂ ಟ್ಯಾಪಿಂಗ್ ಮಾಡಿದ್ದಾರೆ ಎನ್ನುವುದನ್ನು ತಿಳಿಯಲು ತನಿಖೆ ಮಾಡಿಸಬೇಕು ಎಂದು ಆಗ್ರಹಿಸಿದರು.

ಆಧಾರ:ವಿಜಯ ಕರ್ನಾಟಕ, ದಿನಾಂಕ:18.06.2021

## 45. ನಗರ ಸ್ಥಳೀಯ ಸಂಸ್ಥೆ ಚುನಾವಣೆ 6 ತಿಂಗಳು ಮುಂದೂಡಿಕೆ

ಕೊರೋನಾ ಸಾಂಕ್ರಾಮಿಕ ಹಿನ್ನೆಲೆಯಲ್ಲಿ ರಾಜ್ಯದ ಎಲ್ಲ ನಗರ ಸ್ಥಳೀಯ ಸಂಸ್ಥೆಗಳ ಸಾರ್ವತ್ರಿಕ ಚುನಾವಣೆ, ಉಪ ಚುನಾವಣೆ ಹಾಗೂ ಅಧ್ಯಕ್ಷ–ಉಪಾಧ್ಯಕ್ಷ ಸ್ಥಾನಗಳ ಚುನಾವಣೆಯನ್ನು ಮುಂದಿನ ಆರು ತಿಂಗಳ ಅವಧಿಗೆ ಮುಂದೂಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ರಾಜ್ಯಾದ್ಯಂತ ಮಾರಕ ಕೋವಿಡ್ ಸೋಂಕು ಪ್ರಕರಣಗಳು ಹೆಚ್ಚಾಗುತ್ತಿವೆ. ಸಾರ್ವಜನಿಕ ಹಿತದೃಷ್ಟಿಯಿಂದ ಚುನಾವಣೆ ನಡೆಸುವ ಪ್ರಕ್ರಿಯೆಯನ್ನು ಮುಂದೂಡುವ ತೀರ್ಮಾನಕ್ಕೆ ಬರಲಾಗಿದೆ. ರಾಜ್ಯದ ಎಲ್ಲ ನಗರ ಸ್ಥಳೀಯ ಸಂಸ್ಥೆಗಳಾದ ಮಹಾನಗರ ಪಾಲಿಕೆ, ನಗರ ಸಭೆ, ಪುರಸಭೆ ಹಾಗೂ ಪಟ್ಟಣ ಪಂಚಾಯಿತಿಗಳಿಗೆ ನಡೆಯಬೇಕಾಗಿದ್ದ ಸಾರ್ವತ್ರಿಕ ಚುನಾವಣೆ, ಉಪ ಚುನಾವಣೆ ಹಾಗೂ ಅಧ್ಯಕ್ಷ ಉಪಾಧ್ಯಕ್ಷರ ಆಯ್ಕೆ ಚುನಾವಣೆಯನ್ನು ಮುಂದಿನ ಆರು ತಿಂಗಳ ಅವಧಿಗೆ ನಡೆಸದಂತೆ ಮುಂದೂಡಿ ಸರ್ಕಾರದ ನಗರಾಭಿವೃದ್ಧಿ ಇಲಾಖೆ ಆದೇಶ ಹೊರಡಿಸಿದೆ.

ಕಳೆದ ಏಪ್ರಿಲ್ 26ರಂದು ಮುಖ್ಯಮಂತ್ರಿಯವರ ನೇತೃತ್ವದಲ್ಲಿ ನಡೆದಿದ್ದ ರಾಜ್ಯ ಸಚಿವ ಸಂಪುಟ ಸಭೆಯಲ್ಲಿಯೇ ಮುಂದಿನ ಆರು ತಿಂಗಳ ಅವಧಿಗೆ ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಮುಂದೂಡುವ ಕುರಿತು ತೀರ್ಮಾನ ಕೈಗೊಳ್ಳಲಾಗಿತ್ತು. ಈ ನಿರ್ಧಾರದ ಹಿನ್ನೆಲೆಯಲ್ಲಿ ನಗರಾಭಿವೃದ್ಧಿ ಇಲಾಖೆ ಈ ಆದೇಶದ ಪ್ರತಿಯನ್ನು ಪೌರಾಡಳಿತ ನಿರ್ದೇಶನಾಲಯದ ನಿರ್ದೇಶಕರು, ರಾಜ್ಯದ ಎಲ್ಲ

ಜಿಲ್ಲಾಧಿಕಾರಿಗಳು, ಎಲ್ಲ ಉಪ ವಿಭಾಗಾಧಿಕಾರಿಗಳು, ತಹಶೀಲ್ದಾರರು ಹಾಗು ಎಲ್ಲ ಯೋಜನಾ ನಿರ್ದೇಶಕರಿಗೆ ರವಾನಿಸಿದೆ.

ಆಧಾರ: ಸಂಯುಕ್ತ ಕರ್ನಾಟಕ, ದಿನಾಂಕ:18.06.2021.

## 46. ಶಿಕ್ಷಣ ನೀತಿ ಜಾರಿ : ರಾಜ್ಯ ಮುಂಚೂಣಿ

21ನೇ ಶತಮಾನದಲ್ಲಿ ಕರ್ನಾಟಕ ಪದ್ಧತಿ ಸೇರಿದಂತೆ ಇಡೀ ಭಾರತದ ಶಿಕ್ಷಣ ವ್ಯವಸ್ಥೆಯಲ್ಲಿ ಬಹುದೊಡ್ಡ ಕ್ರಾಂತಿಕಾರಕ ಬದಲಾವಣೆಗಳಾಗುತ್ತವೆ. ಆ ನಿಟ್ಟಿನಲ್ಲಿ ಕರ್ನಾಟಕ ರಾಜ್ಯವು ಮುಂಚೂಣಿಯಲ್ಲಿದೆ ಎಂದು ರಾಷ್ಟ್ರೀಯ ಶಿಕ್ಷಣ ನೀತಿ ಕರಡು ಸಮಿತಿಯ ಅಧ್ಯಕ್ಷರು ಆದ ಭಾರತೀಯ ಬಾಹ್ಯಾಕಾಶ ಸಂಸ್ಥೆ (ಇಸ್ರೋ) ಮಾಜಿ ಅಧ್ಯಕ್ಷ ಡಾ: ಕಸ್ತೂರಿರಂಗನ್ ಹೇಳಿರುತ್ತಾರೆ.

ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಮತ್ತು ಡೆನ್ಮಾರ್ಕ್‌ನ ಆಲ್ಬೋರ್ಗ್ ವಿವಿಯ ಯುನೆಸ್ಕೊ ಸೆಂಟರ್ ಫಾರ್ ಪ್ರಾಬ್ಲಮ್ ಬೇಸ್ಡ್ ಲರ್ನಿಂಗ್ ಇನ್ ಎಂಜಿನಿಯರಿಂಗ್ ಸೈನ್ಸ್ ಮತ್ತು ಸಸ್ಟೈನಬಿಲಿಟಿ ಸಹಯೋಗದಲ್ಲಿ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಕಲಿಕಾ ಪದ್ಧತಿ ಕುರಿತ ಪ್ರಾದೇಶಿಕ ಸಂಶೋಧನಾ ವಿಚಾರ ಸಂಕೀರಣವನ್ನು ಉದ್ದೇಶಿಸಿ ಅವರು ಮಾತನಾಡಿದರು. ರಾಷ್ಟ್ರೀಯ ಶಿಕ್ಷಣ ನೀತಿ ಕರ್ನಾಟಕದಲ್ಲಿ ಅತ್ಯಂತ ವೇಗವಾಗಿ ಜಾರಿಗೆ ಬರುತ್ತಿದೆ. ನೂತನ ಶಿಕ್ಷಣ ನೀತಿಯ ಕರಡು ಲಭ್ಯವಾದ ಕೂಡಲೇ ಹಾಗೂ ಕೇಂದ್ರ ಸರ್ಕಾರ ಈ ನೀತಿಯನ್ನು ಪ್ರಕಟಿಸಿದ ಮೊದಲ ದಿನದಿಂದಲೇ ಸರ್ಕಾರ ಈ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಿದ್ದನ್ನು ಕಂಡಿದ್ದೇನೆ ಎಂದು ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

**ಈ ವರ್ಷದಿಂದಲೇ ಜಾರಿಗೆ ಸಿದ್ಧತೆ:** ಉನ್ನತ ಶಿಕ್ಷಣ ಸಚಿವರೂ ಆದ ಉಪ ಮುಖ್ಯಮಂತ್ರಿ ಡಾ: ಅಶ್ವತ್ಥನಾರಾಯಣ, 'ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಈ ವರ್ಷದಿಂದಲೇ ಜಾರಿ ಮಾಡಲು ಸರ್ಕಾರ ಎಲ್ಲ ಸಿದ್ಧತೆಗಳನ್ನು ಮಾಡಿಕೊಂಡಿದೆ ಎಂದರು.

ಯುನೆಸ್ಕೋದ ಸಮಸ್ಯೆಗೆ ಪರಿಹಾರ ಕಲ್ಪಿಸುವ ಕಲಿಕಾ ಶಿಕ್ಷಣ ವಿಭಾಗದ ಮುಖ್ಯಸ್ಥೆ ಪ್ರೊ:ಆನೆಟ್ ಕೊಲ್ಮಸ್ ಮಾತನಾಡಿ 'ಯಾವುದೇ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ತಾಂತ್ರಿಕ ಮತ್ತು ಆವಿಷ್ಕಾರ ಶಿಕ್ಷಣಕ್ಕೆ ಯುನೆಸ್ಕೋ ಹೆಚ್ಚು ಒತ್ತು ನೀಡುತ್ತಿದೆ. ಆ ನಿಟ್ಟಿನಲ್ಲಿ ನಾವು ಎಲ್ಲ ದೇಶಗಳ ಜೊತೆ ಮುಖ್ಯವಾಗಿ ಭಾರತದ ಜೊತೆ ನಿಕಟವಾಗಿ ಕೆಲಸ ಮಾಡಲು ಸಿದ್ಧರಿದ್ದೇವೆ ಎಂದರು. ಉನ್ನತ ಶಿಕ್ಷಣ ಪರಿಷತ್‌ನ ಉಪಾಧ್ಯಕ್ಷ ಪ್ರೊ:ತಿಮ್ಮೇಗೌಡ, ಕಾರ್ಯನಿರ್ವಾಹಕ ನಿರ್ದೇಶಕ ಗೋಪಾಲ ಜೋಷಿ ಸೇರಿದಂತೆ ದೇಶ-ವಿದೇಶಗಳ ತಜ್ಞರು ಈ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.

ಆಧಾರ:ವಿಜಯ ಕರ್ನಾಟಕ, ದಿನಾಂಕ:19.06.2021

## 47. ಮೇಕೆದಾಟು: ರಾಜ್ಯದ ಮತ್ತೊಂದು ಆತಂಕ ದೂರ

ಮೇಕೆದಾಟು ಯೋಜನೆಗೆ ಸಂಬಂಧಿಸಿದಂತೆ ದಕ್ಷಿಣ (ಚೆನ್ನೈ) ದ ಪೀಠ ಆರಂಭಿಸಿದ್ದ ಸ್ವಯಂ ಪ್ರೇರಿತ ವಿಚಾರಣೆಯನ್ನು ಇತ್ಯರ್ಥಪಡಿಸಿ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ)ಯ ಪ್ರಧಾನ ಪೀಠ ತೀರ್ಪು ನೀಡಿದೆ.

ಮೇಕೆದಾಟು ಯೋಜನೆಯನ್ನೇ ಪ್ರಶ್ನಿಸಿ ತಮಿಳುನಾಡು ಸಲ್ಲಿಸಿರುವ ಪ್ರಕರಣದ ವಿಚಾರಣೆ ಸುಪ್ರೀಂ ಕೋರ್ಟ್‌ನಲ್ಲಿ ಬಾಕಿ ಇದೆ. ಈ ಸಂಬಂಧ ಅಗತ್ಯ ಪರಿಸರ ಅನುಮತಿ ಕೋರಿ ಕರ್ನಾಟಕ ಸಲ್ಲಿಸಿರುವ ಅರ್ಜಿಯೂ ಕೇಂದ್ರ ಸರ್ಕಾರದೆದುರು ಬಾಕಿ ಇದೆ. ಈ ಹಂತದಲ್ಲಿ ಸ್ವಯಂ ಪ್ರೇರಿತ ದೂರು ದಾಖಲಿಸಿ, ವಿಚಾರಣೆ ನಡೆಸುವಂತಿಲ್ಲ ಎಂದು ನ್ಯಾಯಮೂರ್ತಿ ಆದರ್ಶಕುಮಾರ್ ಗೋಯೆಲ್ ನೇತೃತ್ವದ ಪೀಠ ತೀರ್ಪಿನಲ್ಲಿ ಅಭಿಪ್ರಾಯ ಪಟ್ಟಿದೆ.

ಮೇಕೆದಾಟು ಬಳಿ ಕಾವೇರಿ ನದಿಗೆ ಅಡ್ಡಲಾಗಿ ಅನುಮತಿ ಪಡೆಯದೆಯೇ ಅಣೆಕಟ್ಟು ನಿರ್ಮಿಸಲಾಗುತ್ತಿದೆ' ಎಂಬ ಚೆನ್ನೈ ಮೂಲದ ಪತ್ರಿಕೆಯೊಂದರ ವರದಿ ಆಧರಿಸಿ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡಿದ್ದ ಎನ್‌ಜಿಟಿಯ ದಕ್ಷಿಣ ಪೀಠ, ಸ್ಥಳ ಪರಿಶೀಲನೆಗಾಗಿ ಸಮಿತಿ ರಚಿಸಿ, ಜುಲೈ 5 ರೊಳಗೆ ವರದಿ ಸಲ್ಲಿಸುವಂತೆ ಸೂಚಿಸಿ ಕಳೆದ ಮೇ 21 ರಂದು ಆದೇಶ ಹೊರಡಿಸಿತ್ತು.

ಈ ಆದೇಶದ ಪುನರ್ ಪರಿಶೀಲನೆ ಕೋರಿ ಕರ್ನಾಟಕ ಸರ್ಕಾರ ಸಲ್ಲಿಸಿದ್ದ ಮೇಲ್ಮನವಿಯ ವಿಚಾರಣೆಯನ್ನು ಪೂರ್ಣಗೊಳಿಸಿದ್ದ ಪ್ರಧಾನ ಪೀಠ ತೀರ್ಪು ಕಾಯ್ದಿರಿಸಿತ್ತು. ಯೋಜನೆಗಾಗಿ ಶಾಸನಬದ್ಧ ಪರಿಸರ ಅನುಮತಿ ಕೋರಿ ಕರ್ನಾಟಕವು ಕೇಂದ್ರದ ಪರಿಸರ ಮತ್ತು ಅರಣ್ಯ ಸಚಿವಾಲಯಕ್ಕೆ ಸಲ್ಲಿಸಿರುವ ಅರ್ಜಿಯು ಪರಿಗಣನೆಗೆ ಬಾಕಿ ಇದೆ ಎಂಬುದನ್ನು ಪತ್ರಿಕಾ ವರದಿಯಲ್ಲಿ ಉಲ್ಲೇಖಿಸಲಾಗಿಲ್ಲ ಎಂಬ ಕರ್ನಾಟಕದ ಅಡ್ವೊಕೇಟ್ ಜನರಲ್ ಪ್ರಭುಲಿಂಗ ನಾವದಗಿ ಅವರ ವಾದವನ್ನು ಪರಿಗಣಿಸಿ ದಕ್ಷಿಣ ಪೀಠ ದಾಖಲಿಸಿಕೊಂಡ ಪ್ರಕರಣವನ್ನು ಕೈಬಿಡಲು ನಿರ್ಧರಿಸಲಾಗಿದೆ' ಎಂದು ಪೀಠ ಹೇಳಿದೆ.

ಯೋಜನೆಗೆ ಅನುಮತಿ ನೀಡದಂತೆ ಕೋರಿ ತಮಿಳುನಾಡು ಸರ್ಕಾರ ಕೇಂದ್ರದ ಜಲಶಕ್ತಿ ಸಚಿವಾಲಯಕ್ಕೆ 2021ರ ಏಪ್ರಿಲ್ 27ರಂದು ಸಲ್ಲಿಸಿರುವ ದೂರಿನಲ್ಲಿ ಇದೇ ಪತ್ರಿಕಾ ವರದಿಯನ್ನು ಉದಾಹರಿಸಿದೆ. ಆದರೆ, ನ್ಯಾಯಮಂಡಳಿಗೆ ಸಲ್ಲಿಸಿರುವ ಹೇಳಿಕೆಯಲ್ಲಿ ಈ ವಿಷಯ ಮರೆಮಾಚಿದೆ ಎಂದೂ ಪೀಠ ಅಭಿಪ್ರಾಯಪಟ್ಟಿದೆ.

ಈ ಕಾರಣದಿಂದ ಹಸಿರು ನ್ಯಾಯಮಂಡಳಿಯ ದಕ್ಷಿಣ ಪೀಠವು ಪ್ರಕರಣದ ವಿಚಾರಣೆ ನಡೆಸುವ ಅಗತ್ಯ ಕಂಡುಬರುತ್ತಿಲ್ಲ ಎಂದು ತೀರ್ಪಿನಲ್ಲಿ ತಿಳಿಸಲಾಗಿದೆ. ಕಾವೇರಿಯ ಹೆಚ್ಚುವರಿ ನೀರನ್ನು ತಡೆದು, ಬೆಂಗಳೂರು, ಕನಕಪುರ ಮತ್ತಿತರ ಸುತ್ತಮುತ್ತಲಿನ ಪ್ರದೇಶಗಳ ಜನತೆಗೆ ಕುಡಿಯುವ ನೀರು ಪೂರೈಸುವ ಉದ್ದೇಶದಿಂದ ಕರ್ನಾಟಕ ಸರ್ಕಾರ ಮೇಕೆದಾಟು ಬಳಿ ಕೈಗೆತ್ತಿಕೊಳ್ಳಲಿರುವ ಯೋಜನೆಗೆ ಆರಂಭದಲ್ಲೇ ಎದುರಾಗಿರುವ ಮತ್ತೊಂದು ಆತಂಕ ಈ ತೀರ್ಪಿನಿಂದ ಕೊನೆಯಾದಂತಾಗಿದೆ.

ಆಧಾರ: ಪ್ರಜಾವಾಣಿ, ದಿನಾಂಕ:19.06.2021.

## 48. ಲಸಿಕೆ ಬಳಿಕ ಪದವಿ ತರಗತಿ

18 ವರ್ಷಕ್ಕಿಂತ ಮೇಲಿನ ವಿದ್ಯಾರ್ಥಿಗಳಿಗೆ ಕೋವಿಡ್ ಲಸಿಕೆ ನೀಡಿದ ಬಳಿಕವೇ ಪದವಿ ಕಾಲೇಜುಗಳ ತರಗತಿಗಳನ್ನು ಆರಂಭಿಸುವಂತೆ ಹೃದ್ರೋಗ ತಜ್ಞ ಡಾ. ದೇವಿ ಪ್ರಸಾದ್ ಶೆಟ್ಟಿ ನೇತೃತ್ವದ ತಜ್ಞರ ಸಮಿತಿ ರಾಜ್ಯ ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ.

ಕೋವಿಡ್ ಮೂರನೇ ಅಲೆ ನಿಯಂತ್ರಣ ಮತ್ತು ಚಿಕಿತ್ಸಾ ಸಿದ್ಧತೆಗಳ ಕುರಿತು ಅಧ್ಯಯನ ನಡೆಸಿ, ಸಲಹೆ ನೀಡಲು ನೇಮಿಸಿರುವ ತಜ್ಞರ ಸಮಿತಿಯು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ ತನ್ನ ಮಧ್ಯಂತರ ವರದಿ ಸಲ್ಲಿಸಿತು. ಮುಖ್ಯಮಂತ್ರಿಯವರ ಗೃಹ ಕಚೇರಿಯಲ್ಲಿ ನಡೆದ ಸಭೆಯಲ್ಲಿ ವರದಿಯಲ್ಲಿನ ಶಿಫಾರಸ್ಸುಗಳ ಕುರಿತು ವಿಸ್ತೃತ ಚರ್ಚೆಯೂ ನಡೆಯಿತು.

ಬಳಿಕ ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಿದ ಯಡಿಯೂರಪ್ಪ, 'ವಿದ್ಯಾರ್ಥಿಗಳು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗೆ ಲಸಿಕೆ ನೀಡಿದ ಬಳಿಕ ಪದವಿ ಕಾಲೇಜುಗಳನ್ನು ತೆರೆಯುವಂತೆ ಸಮಿತಿ ಶಿಫಾರಸ್ಸು ಮಾಡಿದೆ. 18 ವರ್ಷಕ್ಕಿಂತ ಕೆಳಗಿನವರಿಗೆ ಇನ್ನೂ ಲಸಿಕೆ ಲಭ್ಯ ಇಲ್ಲ. ಆದ್ದರಿಂದ, ಪದವಿಗಿಂತ ಕೆಳಗಿನ ಹಂತದ ಎಲ್ಲ ಶಾಲಾ, ಕಾಲೇಜುಗಳನ್ನು ಹಂತ ಹಂತವಾಗಿ ತೆರೆಯುವಂತೆ ಸಮಿತಿ ಸಲಹೆ ನೀಡಿದೆ' ಎಂದರು.

ಆಧಾರ: ಪ್ರಜಾವಾಣಿ, ದಿನಾಂಕ:23.06.2021.

## 49. ಮಳೆ : ಇಂದು ಡಿಸಿಗಳ ಜೊತೆ ಸಿಎಂ ಬಿಎಸ್‌ವೈ ಸಭೆ

ರಾಜ್ಯದ ಉತ್ತರ ಒಳನಾಡು, ಮಲೆನಾಡು ಮತ್ತು ಕರಾವಳಿ ಪ್ರದೇಶದಲ್ಲಿ ಮುಂಗಾರು ಪ್ರಾರಂಭವಾಗುತ್ತಿರುವ ಹಿನ್ನೆಲೆಯಲ್ಲಿ ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಕುರಿತು ಮುಖ್ಯ ಮಂತ್ರಿಯವರು 20 ಜಿಲ್ಲೆಗಳ ಜಿಲ್ಲಾಡಳಿತದೊಂದಿಗೆ ಸಭೆ ನಡೆಸಲಿದ್ದಾರೆ.

ತಮ್ಮ ಗೃಹ ಕಛೇರಿ ಕೃಷ್ಣಾದಿಂದ ವಿಡಿಯೋ ಸಂವಾದ ನಡೆಯಲಿದೆ. ಬಳ್ಳಾರಿ, ವಿಜಯನಗರ, ಕೊಪ್ಪಳ, ರಾಯಚೂರು, ಕಲಬುರಗಿ, ಯಾದಗಿರಿ, ಬೀದರ್, ಬೆಳಗಾವಿ, ಬಾಗಲಕೋಟೆ, ವಿಜಯಪುರ, ಗದಗ, ಹಾವೇರಿ, ಧಾರವಾಡ, ಶಿವಮೊಗ್ಗ, ಹಾಸನ, ಚಿಕ್ಕಮಗಳೂರು, ಕೊಡಗು, ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲಾಡಳಿತದೊಂದಿಗೆ ಮುಖ್ಯಮಂತ್ರಿಯವರು ಸಭೆ ನಡೆಸಲಿದ್ದಾರೆ.

ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲಾಧಿಕಾರಿಗಳು, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೇರಿದಂತೆ ಇತರೆ ಅಧಿಕಾರಿಗಳು ಭಾಗವಹಿಸಿ ಕೈಗೊಂಡಿರುವ ಕ್ರಮಗಳ ಕುರಿತು ಮಾಹಿತಿ ನೀಡಲಿದ್ದಾರೆ. ಮುಂದೆ ಸಂಭವಿಸಬಹುದಾದ ಅನಾಹುತಗಳನ್ನು ತಡೆಯಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಮುಖ್ಯಮಂತ್ರಿಗಳು ಸೂಚನೆ ನೀಡಲಿದ್ದಾರೆ. ಈ ಹಿಂದೆ ಸಂಭವಿಸಿದ ಕಹಿ ಘಟನೆಗಳು ಮರುಕಳಿಸದಂತೆ ಎಚ್ಚರಿಕೆ ವಹಿಸಬೇಕು ಮತ್ತು ನಿರಾಶ್ರಿತರಿಗೆ ಕಲ್ಪಿಸಬೇಕಾದ ಅಗತ್ಯ ಮೂಲ ಸೌಕರ್ಯ ಕುರಿತು ನಿರ್ದೇಶನ ನೀಡಲಿದ್ದಾರೆ.

ಆಧಾರ:ಕನ್ನಡಪ್ರಭ ದಿನಾಂಕ:19.06.2021

## 50. ಬೆಲ್ಲದ್ ಕರೆ ಕದ್ದಾಲಿಕೆ ತನಿಖೆಗೆ ಸರ್ಕಾರ ಆದೇಶ

ಫೋನ್ ಕರೆಗಳನ್ನು ಕದ್ದಾಲಿಸಲಾಗುತ್ತಿದೆ ಎಂದು ಆರೋಪಿಸಿ ಶಾಸಕ ಅರವಿಂದ ಬೆಲ್ಲದ್ ನೀಡಿರುವ ದೂರು ಆಧರಿಸಿ ಸರ್ಕಾರ ತನಿಖೆಗೆ ಶಿಫಾರಸ್ಸು ಮಾಡಿದೆ ಈ ಮಧ್ಯೆ ಪೊಲೀಸರು ತನಿಖೆ ಕೈಗೆತ್ತಿಕೊಂಡಿದ್ದಾರೆ.

ಕೇಂದ್ರ ವಿಭಾಗದ ಡಿಸಿಪಿ ಅನುಚೇತ್ ನೇತೃತ್ವದಲ್ಲಿ ಕಬ್ಬನ್‌ಪಾರ್ಕ್ ಉಪ ವಿಭಾಗದ ಎಸಿಪಿ ಯತಿರಾಜ್ ಅವರಿಗೆ ತನಿಖೆ ಜವಾಬ್ದಾರಿ ವಹಿಸಲಾಗಿದೆ. ಈ ಹಿಂದೆ ಜೆಡಿಎಸ್ ಮತ್ತು ಕಾಂಗ್ರೆಸ್ ಮೈತ್ರಿ ಸರ್ಕಾರದ ಅವಧಿಯಲ್ಲಿ ಬಾರಿ ಸದ್ದು ಮಾಡಿದ್ದ ಫೋನ್ ಕದ್ದಾಲಿಕೆ ಪ್ರಕರಣದಲ್ಲಿ ಕರ್ತವ್ಯ ಲೋಪದ ಮೇಲೆ ಎಸಿಪಿ ಯತಿರಾಜ್ ಅವರು ಸಿಬಿಐ ತನಿಖೆಗೆ ಗುರಿಯಾಗಿದ್ದರು. ಮತ್ತೆ ಅವರಿಗೆ ತನಿಖೆ ಜವಾಬ್ದಾರಿ ನೀಡಲಾಗಿದೆ.

ಶಾಸಕ ಅರವಿಂದ ಬೆಲ್ಲದ್, ಇತ್ತೀಚೆಗೆ ಡಿಜಿಪಿ ಪ್ರವೀಣ್ ಸೂದ್ ಅವರನ್ನು ಭೇಟಿ ಮಾಡಿ ಅಪರಿಚಿತರು ಕರೆ ಮಾಡುತ್ತಿದ್ದಾರೆ. ಕೆಲವು ಕರೆಗಳನ್ನು ಗಮನಿಸಿದರೆ ಫೋನ್ ಕದ್ದಾಲಿಕೆ ಆಗುತ್ತಿರುವ ಅನುಮಾನವಿದೆ. ಈ ಕುರಿತು ತನಿಖೆ ನಡೆಸುವಂತೆ ದೂರು ನೀಡಿದ್ದರು. ಈ ದೂರಿನ ಪ್ರತಿಯನ್ನು ಡಿಜಿಪಿ ಪ್ರವೀಣ್ ಸೂದ್ ಆದೇಶದ ಮೇಲೆ ತನಿಖೆ ನಡೆಸಲು ಕಬ್ಬನ್ ಪಾರ್ಕ್ ಉಪ ವಿಭಾಗದ ಎಸಿಪಿ ಯತಿರಾಜ್ ಅವರಿಗೆ ಸೂಚಿಸಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಕಮಲ್ ಪಂತ್ ತಿಳಿಸಿದ್ದಾರೆ.

ಸುದ್ದಿಗಾರರ ಜೊತೆ ಮಾತನಾಡಿದ ಪಂತ್ 'ಶಾಸಕ ಅರವಿಂದ ಬೆಲ್ಲದ್ ಅವರ ಪತ್ರ ಅಸ್ಪಷ್ಟವಾಗಿದೆ. ಹೆಚ್ಚಿನ ಮಾಹಿತಿ ಪಡೆದು ತನಿಖೆ ನಡೆಸಬೇಕಾಗಿದೆ. ಅದಕ್ಕಾಗಿ ಶಾಸಕ ಬೆಲ್ಲದ್ ಭೇಟಿಗೆ ಎಸಿಪಿ ಯತಿರಾಜ್ ಯತ್ನಿಸಿದ್ದಾರೆ. ಆದರೆ ಶಾಸಕರು ಸಂಪರ್ಕಕ್ಕೆ ಸಿಕ್ಕಿಲ್ಲ. ಈ ಕುರಿತು ಶಾಸಕರಿಂದ ಪೂರ್ಣ ಮಾಹಿತಿ ಪಡೆದ ಬಳಿಕ ಯಾವ ಆಯಾಮದಲ್ಲಿ ತನಿಖೆ ನಡೆಸಬೇಕೆಂಬುದನ್ನು ನಿರ್ಧಾರ ಮಾಡಲಾಗುವುದು ಎಂದು ಪಂತ್ ವಿವರಿಸಿದರು.

ಬೆಂಗಳೂರು ಕರೆಗಳನ್ನು ಕದ್ದಾಲಿಸಲಾಗುತ್ತಿದೆ ಎಂಬ ಶಾಸಕ ಅರವಿಂದ ಬೆಲ್ಲದ್ ದೂರಿನ ಬಗ್ಗೆ ತನಿಖೆ ನಡೆಸಲು ಪೊಲೀಸ್ ಆಯುಕ್ತರಿಗೆ ಶಿಫಾರಸ್ಸು ಮಾಡಲಾಗಿದೆ ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ತಿಳಿಸಿದರು. ಕರೆ ಕೇಳಿರುವ ಕುರಿತು ಯಾರೇ ತಪ್ಪು ಮಾಡಿದ್ದರೂ ಕಾನೂನು ಪ್ರಕಾರ ಕ್ರಮ ಕೈಗೊಳ್ಳಬೇಕು ಎಂದು ಕಮಲ್ ಪಂಥ್ ಅವರಿಗೆ ತಮ್ಮ ಕರೆಗಳು ಕದ್ದಾಲಿಸುತ್ತಿರುವ ಬಗ್ಗೆ ಶಂಕೆ ವ್ಯಕ್ತವಾಗಿದೆ. ಈ ಬಗ್ಗೆ ಸಭಾಧ್ಯಕ್ಷರು ಹಾಗೂ ನನಗೂ ತನಿಖೆ ನಡೆಸುವಂತೆ ಕೋರಿ ದೂರನ್ನು ನೀಡಿದ್ದಾರೆ. ಅವರ ಸಂಶಯ ನಿವಾರಿಸುವ ನಿಟ್ಟಿನಲ್ಲಿ ಸರ್ಕಾರ ತನಿಖೆಗೆ ಶಿಫಾರಸ್ಸು ಮಾಡಿದೆ ಎಂದು ಹೇಳಿದರು.

ಆಧಾರ:ವಿಜಯ ಕರ್ನಾಟಕ, ದಿನಾಂಕ:19.06.2021

## 51. ಕೊರೋನಾ ಬೆನ್ನಲ್ಲೇ ಪ್ರವಾಹ ಭೀತಿ

ಕೊರೋನಾ ಎರಡನೇ ಅಲೆ ಕಡಿಮೆಯಾಗುತ್ತಿರುವ ಬೆನ್ನಲ್ಲೇ ರಾಜ್ಯದಲ್ಲೆಡೆ ಮುಂಗಾರು ಚುರುಕುಗೊಂಡಿರುವುದರಿಂದ ಪ್ರವಾಹ ಎದುರಾಗುವ ಆತಂಕ ಶುರುವಾಗಿದೆ. ಮುಖ್ಯಮಂತ್ರಿಯವರು ಒಂದೆಡೆ ಪ್ರವಾಹ ನಿರ್ವಹಣೆ ಹಾಗೂ ಅನ್‌ಲಾಕ್ ಮಾಡುವ ಸಂಬಂಧ ಎರಡು ಪ್ರತ್ಯೇಕ ಸಭೆ ನಡೆಸಿದ್ದಾರೆ.

ಮೊದಲ ಸಭೆಯಲ್ಲಿ ರಾಜ್ಯದಲ್ಲಿ ಚುರುಕಾಗಿರುವ ಮುಂಗಾರು ಹಾಗೂ ಶುರುವಾಗಿರುವ ಪ್ರವಾಸ ಸ್ಥಿತಿಯ ಬಗ್ಗೆ ಚರ್ಚಿಸಿದರು. ರಾಜ್ಯದಲ್ಲಿ 1,710 ಗ್ರಾಮಗಳನ್ನು ಪ್ರವಾಹ ಭೀತಿ ಇರುವ ಗ್ರಾಮಗಳೆಂದು ಗುರುತಿಸಲಾಗಿದ್ದು, 20 ಜಿಲ್ಲೆಗಳಲ್ಲಿ ಎಚ್ಚರ ವಹಿಸುವಂತೆ ಮುಖ್ಯಮಂತ್ರಿಯವರು ಸೂಚನೆ ನೀಡಿದ್ದಾರೆ.

ಗ್ರಾಮ ಪಂಚಾಯಿತಿ ಮಟ್ಟದ ವಿಪತ್ತು ನಿರ್ವಹಣೆ ಕ್ರಿಯಾ ಯೋಜನೆಯನ್ನು ಅಭಿವೃದ್ಧಿಪಡಿಸಲಾಗಿದ್ದು, ಈ ಕ್ರಿಯಾ ಯೋಜನೆಯನ್ನು ಅನುಷ್ಠಾನಗೊಳಿಸಲು ತರಬೇತಿ ನೀಡಲಾಗಿದೆ. ಪ್ರವಾಹ ಪರಿಸ್ಥಿತಿಗಳಲ್ಲಿ ಜಲಾಶಯಗಳ ಹರಿವು ನಿರ್ವಹಣೆಗೆ ಬೇಕಾದ ಮಾಹಿತಿ ವಿನಿಮಯಕ್ಕೆ ಅಂತರರಾಜ್ಯ ಸಮನ್ವಯತೆ ಸಾಧಿಸಲಾಗಿದೆ ಎಂದು ಅಧಿಕಾರಿಗಳು ಮುಖ್ಯಮಂತ್ರಿಯವರಿಗೆ ಮಾಹಿತಿ ನೀಡಿದರು.

**ಕೊರೋನಾ ಬಗ್ಗೆ ಎಚ್ಚರವಿರಲಿ:** ಈ ಬಾರಿ ಪ್ರವಾಹದೊಂದಿಗೆ ಕೊರೋನಾ ಸೋಂಕು ಹಬ್ಬುವ ಆತಂಕ ಇರುವುದರಿಂದ ಕಾಳಜಿ ಹಾಗೂ ವೈದ್ಯಕೀಯ ಕೇಂದ್ರದಲ್ಲಿ ಸಾಮಾಜಿಕ ಅಂತರದೊಂದಿಗೆ ಜನರನ್ನು ಉಳಿಸುವುದಕ್ಕೆ ಅಗತ್ಯ ಕ್ರಮ ವಹಿಸುವಂತೆ ಅಧಿಕಾರಿಗಳಿಗೆ ಮುಖ್ಯಮಂತ್ರಿಯವರು ಸೂಚನೆ ನೀಡಿದ್ದಾರೆ.

ವಿಪತ್ತು ನಿರ್ವಹಣೆ ವಿವಿಧ ಹಂತಗಳಲ್ಲಿ ವಿವಿಧ ಇಲಾಖೆಗಳ ಪಾತ್ರ ಹಾಗೂ ಜವಾಬ್ದಾರಿಗಳನ್ನು ಗುರುತಿಸಲಾಗಿದೆ. ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದಲ್ಲಿ ಪ್ರವಾಹ ಮುನ್ಸೂಚನೆ ಕೋಶವನ್ನು ಸ್ಥಾಪಿಸಲಾಗಿದೆ. ರಕ್ಷಣಾ ಕಾರ್ಯಾಚರಣೆಗೆ ಬೇಕಾದ ಅಗತ್ಯಪರಿಕರಗಳ ಕ್ರೋಢೀಕರಣ ಹಾಗೂ ಸಾಮಗ್ರಿಗಳನ್ನು ಒದಗಿಸಲಾಗಿದೆ. ಪ್ರವಾಹ ರಕ್ಷಣಾ ಕಾರ್ಯಾಚರಣೆಗಾಗಿ 4 ರಾಷ್ಟ್ರೀಯ ವಿಪತ್ತು ಸ್ಪಂದನಾ ತಂಡಗಳನ್ನು ರಾಯಚೂರು, ಕೊಡಗು, ಬೆಳಗಾವಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ನಿಯೋಜಿಸಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿರುತ್ತಾರೆ.

ಸಭೆಯಲ್ಲಿ ಉಪ ಮುಖ್ಯಮಂತ್ರಿಗಳಾದ ಗೋವಿಂದ ಕಾರಜೋಳ, ಲಕ್ಷಣ ಸವದಿ, ಗೃಹ ಸಚಿವ ಬಸವರಾಜ ಬೊಮ್ಮಾಯಿ, ಕಂದಾಯ ಸಚಿವ ಆರ್. ಅಶೋಕ, ಗಣಿ ಮತ್ತೂ ಭೂ ವಿಜ್ಞಾನ ಸಚಿವ ಮುರುಗೇಶ್ ನಿರಾಣಿ, ಕಾರ್ಮಿಕ ಸಚಿವ ಶಿವರಾಮ ಹೆಬ್ಬಾರ್, ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್, ಅಪರ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ ಉಪಸ್ಥಿತರಿದ್ದರು.

**ಡಿಸಿಗಳಿಗೆ ನೀಡಿದ ಸೂಚನೆಗಳು:–**

- ಜಿಲ್ಲಾ ಮಟ್ಟದಲ್ಲಿ ಪ್ರವಾಹ ಪೀಡಿತ ಗ್ರಾಮಗಳನ್ನು ಗುರುತಿಸಿ, ಪರಿಸ್ಥಿತಿ ಎದುರಿಸಲು ಕ್ರಮವಹಿಸಿ
- ಜನ, ಜಾನುವಾರುಗಳ ರಕ್ಷಣೆಗೆ ಆದ್ಯತೆ ನೀಡಬೇಕು
- ಕಾಳಜಿ ಕೇಂದ್ರದಲ್ಲಿ ಕೋವಿಡ್–19 ಸೋಂಕು ಹರಡದಂತೆ ಎಚ್ಚರಿಕೆ ವಹಿಸಬೇಕು.
- ಜಿಲ್ಲೆ ಮತ್ತು ತಾಲ್ಲೂಕು ಮಟ್ಟಗಳಲ್ಲಿ ಸಹಾಯವಾಣಿ ಸ್ಥಾಪನೆ ಮಾಡಬೇಕು.
- ತುರ್ತು ನಿರ್ವಹಣೆಗೆ ಬೇಕಾದ ಸಾಮಗ್ರಿಗೆ ಅನುಗುಣವಾಗಿ ಖರೀದಿಸಲು ಕ್ರಮವಹಿಸಿ.

- ಪ್ರವಾಹ ಸಂದರ್ಭದಲ್ಲಿ ಜನರ ರಕ್ಷಣೆ, ಅವರಿಗೆ ಅಗತ್ಯ ಮೂಲಸೌಕರ್ಯಗಳುಳ್ಳ ಕಾಳಜಿ ಕೇಂದ್ರಗಳು, ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಲು ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳುವುದು ಅತಿ ಅಗತ್ಯ.

ಆಧಾರ:ವಿಶ್ವವಾಣಿ, ದಿನಾಂಕ:20.06.2021

## 52. 3ನೇ ಅಲೆಯಲ್ಲಿ ರಾಜ್ಯದ 1–1.5 ಲಕ್ಷ ಮಕ್ಕಳಿಗೆ ಸೋಂಕು

ರಾಜ್ಯದಲ್ಲಿ ಕೊರೋನಾ 3ನೇ ಅಲೆ ದಾಗುಂಡಿಯಿಟ್ಟರೆ ಸುಮಾರು ಒಂದರಿಂದ ಒಂದೂವರೆ ಲಕ್ಷ ಮಕ್ಕಳಿಗೆ ಸೋಂಕು ತಗಲುವ ಸಾಧ್ಯತೆಯಿದೆ. ಕನಿಷ್ಠ 5 ಸಾವಿರ ಹೆಚ್ಚುವರಿ ಐಸಿಯು ವೆಂಟಿಲೇಟರ್ ಸಿದ್ಧಪಡಿಸಿಕೊಳ್ಳಬೇಕು.

ಡಾ:ದೇವಿಪ್ರಸಾದ್ ಶೆಟ್ಟಿ ನೇತೃತ್ವದ ಉನ್ನತ ಮಟ್ಟದ ತಜ್ಞರ ಸಮಿತಿ ರಾಜ್ಯ ಸರ್ಕಾರಕ್ಕೆ ಪ್ರಾಥಮಿಕ ವರದಿ ಸಲ್ಲಿಸಿದೆ. ಕೊರೋನಾ ಮೂರನೇ ಅಲೆಗೆ ರಾಜ್ಯ ಸರ್ಕಾರ ಮಾಡಿಕೊಳ್ಳಬೇಕಿರುವ ಮೂಲಸೌಕರ್ಯ, ಮಾನವ ಸಂಪನ್ಮೂಲದ ಸಿದ್ಧತೆ ಹಾಗೂ ಲಸಿಕೆ ಅಭಿಯಾನದಲ್ಲಿ ಮಾಡಿಕೊಳ್ಳಬೇಕಾದ ಬದಲಾವಣೆಗಳ ಬಗ್ಗೆ ರಾಜ್ಯ ಸರ್ಕಾರಕ್ಕೆ ಪ್ರಾಥಮಿಕ ವರದಿ ಸಲ್ಲಿಸಿದ್ದು, ಇದರಲ್ಲಿ ಈ ಮುನ್ನೆಚ್ಚರಿಕೆ ನೀಡಿದೆ ಎಂದು ತಿಳಿದುಬಂದಿದೆ. ರಾಜ್ಯದಲ್ಲಿ ಮೂರನೇ ಅಲೆ ಆರಂಭವಾದ ನಂತರ ಪರಿಸ್ಥಿತಿ ಬಗ್ಗೆ ಎರಡು ರೀತಿಯ ಸಾಧ್ಯತೆಗಳನ್ನು ಸಮಿತಿ ಅಂದಾಜಿಸಿದೆ.

1. ಅತಿ ಕೆಟ್ಟ ಪರಿಸ್ಥಿತಿ ಎದುರಾದರೆ ರಾಜ್ಯದಲ್ಲಿ 1.5 ಲಕ್ಷದಷ್ಟು ಮಕ್ಕಳಿಗೆ ಸೋಂಕು ಉಂಟಾಗಬಹುದು. ಆಗ 50 ರಿಂದ 60 ಸಾವಿರ ಮಕ್ಕಳಲ್ಲಿ ಗಂಭೀರ ಲಕ್ಷಣಗಳು ಕಾಣಿಸಿಕೊಳ್ಳಬಹುದು. ಈ ಪೈಕಿ 5 ಸಾವಿರ ಮಕ್ಕಳಿಗೆ ತೀವ್ರ ನಿಗಾ ಘಟಕದ ಚಿಕಿತ್ಸೆ ಬೇಕಾಗುತ್ತದೆ. ನಿತ್ಯ 500 ಮಂದಿ ಮಕ್ಕಳಿಗೆ ಐಸಿಯು ದಾಖಲಾತಿ ಬೇಕಾಗುತ್ತದೆ.

2. ಇದ್ದುದರಲ್ಲೇ ಉತ್ತಮ ಪರಿಸ್ಥಿತಿ ಎದುರಾದರೆ ರಾಜ್ಯದಲ್ಲಿ ಒಂದು ಲಕ್ಷ ಮಕ್ಕಳು ಸೋಂಕಿತರಾಗಬಹುದು. ಆಗ 20 ರಿಂದ 30 ಸಾವಿರ ಮಕ್ಕಳಿಗೆ ಗಂಭೀರ ಲಕ್ಷಣ ಕಾಣಿಸಬಹುದು. ಮೂರೂ ಸಾವಿರ ಮಂದಿಗೆ ತೀವ್ರ ನಿಗಾ ಘಟಕದ ಚಿಕಿತ್ಸೆ ಬೇಕಾಗಬಹುದು. 300 ರಿಂದ 500 ಮಂದಿ ಮಕ್ಕಳಿಗೆ ಐಸಿಯು ದಾಖಲಾತಿ ಬೇಕಾಗಬಹುದು.

**ತಜ್ಞರ ವರದಿಯಲ್ಲೇನಿದೆ:–**

- 3ನೇ ಅಲೆ ತೀವ್ರವಾದರೆ 1.5 ಲಕ್ಷ ಸಾಧಾರಣವಾದರೆ 1 ಲಕ್ಷ ಮಕ್ಕಳಿಗೆ ಸೋಂಕು.
- ಪ್ರತಿನಿತ್ಯ 500 ಹಾಗೂ ಒಟ್ಟಾರೆ 5000 ಮಕ್ಕಳಿಗೆ ಐಸಿಯು ಬೆಡ್ ಬೇಕಾಗಬಹುದು.
- ಹೆಚ್ಚುವರಿ 5000 ಪೀಡಿಯಾಟ್ರಿಕ್ ಐಸಿಯು ವೆಂಟಿಲೇಟರ್‌ಗಳನ್ನು ಸಿದ್ಧಪಡಿಸಿಕೊಳ್ಳಿ.
- ಈ ವೈದ್ಯಕೀಯ ಸಲಕರಣೆ ನಿರ್ವಹಣೆಗೆ ತಜ್ಞ ವೈದ್ಯರು, ಸಿಬ್ಬಂದಿ ವ್ಯವಸ್ಥೆ ಮಾಡಿಕೊಳ್ಳಿ.
- 3000ದಷ್ಟು ಮಕ್ಕಳ ವೈದ್ಯರು ಸೇವೆ ನೀಡಲು ಸಿದ್ಧರಿದ್ದಾರೆ, ಅವರ ನೆರವು ಪಡೆದುಕೊಳ್ಳಿ.

**ಏಮ್ಸ್ ಎಚ್ಚರಿಕೆ:** ಕೊರೋನಾ ನಿಯಂತ್ರಣದ ಮಾರ್ಗಸೂಚಿಗಳ ಪಾಲಿಸದೆ ಅಂಗಡಿ ಮುಂಗಟ್ಟುಗಳು ಮತ್ತು ಮಾರುಕಟ್ಟೆ ಪ್ರದೇಶಗಳಲ್ಲಿ ಭಾರೀ ಪ್ರಮಾಣದ ಜನಸಂದಣಿ ಏರ್ಪಟಿದ್ದೇ ಆದಲ್ಲಿ ಮುಂದಿನ 6–8 ವಾರಗಳಲ್ಲಿ ದೇಶಕ್ಕೆ ಮತ್ತೆ ಕೋವಿಡ್ ಸೋಂಕಿನ 3ನೇ ಅಲೆಯ ಆಪತ್ತು ಎದುರಾಗಲಿದೆ ಎಂದು ಏಮ್ಸ್ ನಿರ್ದೇಶಕ ರಣದೀಪ್ ಗುಲೇರಿಯಾ ಎಚ್ಚರಿಕೆ ನೀಡಿದ್ದಾರೆ.

ಆಧಾರ:ಕನ್ನಡ ಪ್ರಭ, ದಿನಾಂಕ:20.06.2021

## 53. 3rd wave may hit 3.4L Kids in state: Devi Shetty panel

The 16- member expert committee headed by cardiologist Dr Devi Shetty recommended a slew of measures to combat the possible third wave of the Covid-19 pandemic, which is expected to largely affect children.

In its interim report submitted to the state government on Saturday, the panel outlined that as many as 3.4lakh children in Karnataka are likely to be infected by the peak of the third wave, keeping in mind "conservative estimated".

Health Minister Dr K Sudhakar acknowledged the receipt of the report and said the state will be fully prepared for the third wave"within 45 days of receiving the final report from the committee".

The 91-page interim report, a copy of which was accessed by DH, said Bengaluru, with and estimated 32.21 lakh population int the 0-18 years category, will witness infections among 45,958 children during the peak of the third wave. It also estimated that 2.2% of the total population in the state will be infected at the same time.

The Covid-19 Technical Advisory Committee(TAC) said the state may witness the possible surge of third wave either in October or November. The experts estimated a peak requirement of 3,677 hospital beds in Bengaluru for children, out of which 1,838 beds will be ICU and HDU (high dependency unit). Additionally, It estimated that 7,353 beds will be required in Covid Care Centres for children during the third wave's peak.

Hospital beds: Statewide, It estimates that out of the 2.38 crore population aged 0-18 years, as many as 3.4 lakh children will be infected, requiring 27,205 hospital beds with 13.602ICU/HDU beds and 54,409 beds in Covid Care Centres.

These numbers vary with a 'moderate' and 'least conservative' estimate, according to experts. "Among the total Covid-19 infections, children aged 0-18 constituted around 8% to 10% during the first and second wave. Most of the national and international data indivated that a maximum of 5%-7% of such children required hospitalization," the report said

Courtesy:- Deccan Hearld, Date: 20.06.2021

## 54. ಪರೀಕ್ಷೆಯಿಲ್ಲದೇ ಎಲ್ಲರೂ ಪಾಸ್

ಕೊರೋನಾ ಹೆಚ್ಚಳವಾಗುತ್ತಿರುವ ಬೆನ್ನಲ್ಲೇ ಒಂದರಿಂದ ಒಂಭತ್ತನೇ ತರಗತಿವರೆಗೆ ಎಲ್ಲ ವಿದ್ಯಾರ್ಥಿಗಳನ್ನು ಪಾಸ್ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಆದರೆ, ನಿಗದಿಯಂತೆಯೇ 10ನೇ ತರಗತಿ ಪರೀಕ್ಷೆ ಆರಂಭವಾಗಲಿದೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ಹೇಳಿದೆ.

ಕೊರೋನಾ ಹೆಚ್ಚಳವಾದ ಹಿನ್ನೆಲೆಯಲ್ಲಿ ಪರೀಕ್ಷೆ ರದ್ದು ಮಾಡಬೇಕು ಎಂಬ ಆಗ್ರಹ ಕೇಳಿಬಂದಿತ್ತು. ಈಗ ಸಾರ್ವಜನಿಕ ಶಿಕ್ಷಣ ಇಲಾಖೆ ಕಠಿಣ ಕ್ರಮ ತೆಗೆದುಕೊಂಡಿದೆ.

ಇದರ ಜೊತೆಗೆ ಮೇ 1 ರಿಂದ ಜೂನ್ 14ರವರೆಗೆ ಒಂದರಿಂದ ಏಳು/ಎಂಟನೇ ತರಗತಿ ಇರುವ ಪ್ರಾಥಮಿಕ ಶಾಲೆಗಳಿಗೆ ಬೇಸಿಗೆ ರಜೆ ನೀಡಲಾಗಿದೆ. ಈ ಶಾಲೆಗಳಿಗೆ ಜೂನ್ 15 ರಿಂದ 2021–22ನೇ ಸಾಲಿನ ಶೈಕ್ಷಣಿಕ ವರ್ಷ ಆರಂಭವಾಗಲಿದೆ. ಅದರಂತೆ 8 ಮತ್ತು 9ನೇ ತರಗತಿಯ ಪ್ರೌಢಶಾಲಾ

ವಿದ್ಯಾರ್ಥಿಗಳಿಗೆ ಮೇ 1 ರಿಂದ ಜುಲೈ 14ರವರೆಗೆ ಬೇಸಿಗೆ ರಜೆ ಘೋಷಿಸಲಾಗಿದ್ದು, ಜುಲೈ 15 ರಿಂದ ಹೊಸ ಶೈಕ್ಷಣಿಕ ವರ್ಷ ಆರಂಭವಾಗಲಿದೆ.

ಯಾವುದೇ ಕಾರಣಕ್ಕೂ ಆನ್‌ಲೈನ್ ಆಗಲಿ, ಆಫ್‌ಲೈನ್ ಆಗಲಿ ಪರೀಕ್ಷೆ ಮಾಡಕೂಡದು ಎಂದು ಆದೇಶ ನೀಡಲಾಗಿದೆ. ಈ ಎಲ್ಲ ಪ್ರಕ್ರಿಯೆ ಏಪ್ರಿಲ್ 30ರೊಳಗೆ ಮುಗಿಯಬೇಕು ಎಂದು ಸೂಚನೆ ನೀಡಲಾಗಿದೆ.

**ಪ್ರೌಢಶಾಲಾ ಶಿಕ್ಷಕರಿಗೆ ರಜೆ:** ಪ್ರೌಢಶಾಲೆಗಳ ಶಿಕ್ಷಕರಿಗೆ ಜೂನ್ 15 ರಿಂದ ಜುಲೈ 5ರವರೆಗೆ ಬೇಸಿಗೆ ರಜೆ ಇರಲಿದೆ. ಜೂನ್ 21 ರಿಂದ ಜುಲೈ 5ರವರೆಗೆ ಎಸ್.ಎಸ್.ಎಲ್.ಸಿ. ಪರೀಕ್ಷೆಗಳು ನಡೆಯುತ್ತವೆ. ಜುಲೈ 15 ರಿಂದ 2021–22ನೇ ಸಾಲಿನ ಶೈಕ್ಷಣಿಕ ವರ್ಷ ಆರಂಭವಾಗಲಿದೆ.

**ಐಸಿಎಸ್‌ಇ 10ನೇ ತರಗತಿ ಪರೀಕ್ಷೆ ರದ್ದು:** ಐಸಿಎಸ್‌ಇ 10ನೇ ತರಗತಿ ಪರೀಕ್ಷೆಗಳನ್ನು ರದ್ದು ಮಾಡಿ ಆದೇಶ ಹೊರಡಿಸಿದೆ. ಯಥಾಪ್ರಕಾರ 12ನೇ ತರಗತಿ ಪರೀಕ್ಷೆ ನಡೆಯಲಿದೆ. ಮುಂದಿನ ದಿನಗಳಲ್ಲಿ ಪರೀಕ್ಷಾ ದಿನಾಂಕ ಪ್ರಕಟಿಸಲಾಗುವುದು ಎಂದು ಐಸಿಎಸ್‌ಇ ಮಂಡಳಿ ಕಾರ್ಯದರ್ಶಿ ಗೆರ್ರಿ ಅರಥೂನ್ ಹೇಳಿದ್ದಾರೆ. ಮಂಡಳಿಯು 10 ಮತ್ತು 12ನೇ ತರಗತಿ ಪರೀಕ್ಷೆಗಳನ್ನು ಮುಂದೂಡಿಕೆ ಮಾಡಿತ್ತು. ಈಗ 10ನೇ ತರಗತಿ ಸಂಬಂಧ ನೀಡಲಾಗಿದ್ದ ಆದೇಶ ವಾಪಸ್ಸು ಪಡೆದಿದೆ.

**ಯುಜಿಸಿ–ನೆಟ್ ಮುಂದಕ್ಕೆ:** ಯುಜಿಸಿ–ನೆಟ್ (ರಾಷ್ಟ್ರೀಯ ಉಪನ್ಯಾಸಕರ ಅರ್ಹತಾ ಪರೀಕ್ಷೆ) ಪರೀಕ್ಷೆಯನ್ನು ಮುಂದೂಡಲಾಗಿದೆ. ರಾಷ್ಟ್ರೀಯ ಪರೀಕ್ಷಾ ಪ್ರಾಧಿಕಾರ (ಎನ್‌ಟಿಎ) ಈ ನಿರ್ಧಾರ ತೆಗೆದುಕೊಂಡಿದೆ. ಈ ಹಿಂದೆ ಪರೀಕ್ಷೆ ನಡೆಸಬೇಕಿತ್ತು. ಪರೀಕ್ಷೆಯ ಪರಿಷ್ಕೃತ ದಿನಾಂಕವನ್ನು ಕನಿಷ್ಠ 15 ದಿನಗಳ ಮುಂಚಿತವಾಗಿ ಘೋಷಿಸಲಾಗುವುದು ಎಂದು ಮಾಹಿತಿ ನೀಡಿದೆ.

ಆಧಾರ:ಉದಯವಾಣಿ, ದಿನಾಂಕ:21.06.2021

## 55. ರೈತರ ಮಕ್ಕಳಿಗೆ ಸಿಹಿ

ರೈತರ ಮಕ್ಕಳಿಗೆ ಯಡಿಯೂರಪ್ಪ ಸರ್ಕಾರ ಸಿಹಿ ಸುದ್ದಿ ನೀಡಿದೆ. ರಾಜ್ಯದ ಕೃಷಿ ಕಾಲೇಜುಗಳಲ್ಲಿ ಡಿಪ್ಲೋಮಾ ಮತ್ತು ಪದವಿ ಕೋರ್ಸ್‌ಗಳಲ್ಲಿ ಕೃಷಿಕರ ಮಕ್ಕಳಿಗೆ ಹೆಚ್ಚು ಅವಕಾಶ ಸಿಗಬೇಕೆಂಬ ಕಾರಣಕ್ಕೆ ಮೀಸಲಾತಿ ಪ್ರಮಾಣವನ್ನು ಶೇ.10ರಷ್ಟು ಹೆಚ್ಚಿಸುವ ಮಹತ್ವದ ತೀರ್ಮಾನ ಕೈಗೊಂಡಿದೆ. ಸಂಪುಟ ಸಭೆಯಲ್ಲಿ ಕೃಷಿ ಇಲಾಖೆ ಮುಂದಿಟ್ಟ ಪ್ರಸ್ತಾವನೆಗೆ ಅನುಮೋದನೆ ನೀಡಲಾಗಿದೆ. ಈ ನಿರ್ಧಾರದಿಂದಾಗಿ ಹಾಲಿ ಶೇ.40 ಇರುವ ಮೀಸಲು ಶೇ.50ಕ್ಕೆ ಹೆಚ್ಚಲಿದೆ.

ಕರ್ನಾಟಕದಲ್ಲಿ ಕೃಷಿ ಹಾಗೂ ಕೃಷಿಗೆ ಸಂಬಂಧಿತ ಆರು ವಿಶ್ವವಿದ್ಯಾಲಯಗಳಿವೆ. ಬೆಂಗಳೂರು, ಧಾರವಾಡ, ಶಿವಮೊಗ್ಗ ಮತ್ತು ರಾಯಚೂರಿನಲ್ಲಿನ ಕೃಷಿ ವಿಜ್ಞಾನ ವಿಶ್ವವಿದ್ಯಾಲಯ, ಬಾಗಲಕೋಟೆ ತೋಟಗಾರಿಕೆ ವಿಶ್ವವಿದ್ಯಾಲಯ ಬೀದರ್‌ನ ಪಶುವೈದ್ಯಕೀಯ ವಿಜ್ಞಾನ ವಿಶ್ವವಿದ್ಯಾಲಯದ ಅಧೀನದಲ್ಲಿ 26 ಸರ್ಕಾರಿ ಕಾಲೇಜುಗಳು ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳು ನಡೆಯುತ್ತಿವೆ.

ಪ್ರತಿ ಶೈಕ್ಷಣಿಕ ಸಾಲಿನಲ್ಲಿ ಸರಿಸುಮಾರು ನಾಲ್ಕು ಸಾವಿರ ಸೀಟುಗಳಿಗೆ ದಾಖಲಾತಿ ನಡೆಯುತ್ತದೆ> ಎಷ್ಟು ಸೀಟುಗಳಿಗೆ ಸುಮಾರು ಒಂದು ಲಕ್ಷಕ್ಕಿಂತ ಹೆಚ್ಚಿನ ಮಂದಿ ಕೋರ್ಸ್ ಪ್ರವೇಶಕ್ಕೆ ತೀವ್ರ ಪೈಪೋಟಿ ಎದುರಿಸಬೇಕಾಗುತ್ತದೆ. ಕೃಷಿ ಹಾಸುಹೊಕ್ಕಾದ ಕುಟುಂಬದಿಂದ ಬರುವ ಆಕಾಂಕ್ಷಿತರಿಗೆ ಶೇ.40 ಇರುವ ಮೀಸಲು ಪ್ರಮಾಣ ಹೆಚ್ಚಿಸಬೇಕೆಂಬ ಬೇಡಿಕೆ ಇತ್ತು.

**ಹೊಸ ಜಲನೀತಿಗೆ ತಯಾರಿ**: ನೀರಿನ ಬಳಕೆ ಹಾಗೂ ನಿರ್ವಹಣೆ ಮಾಡುವ ಸಂಬಂಧ ತೀರ್ಮಾನಿಸಿದೆ. ಕುಡಿಯುವ ನೀರು ಕೃಷಿ, ಕೈಗಾರಿಕೆ, ನಗರ ಸ್ಥಳೀಯ ಸಂಸ್ಥೆಗೆ ಸಂಬಂಧಪಟ್ಟಂತೆ ಪ್ರಾಧಿಕಾರ ರಚಿಸುವ ಪ್ರಸ್ತಾವನೆ ಮಾಡಿದೆ.

**ಹಾಲಿ ಮೀಸಲಾತಿ ಪ್ರಮಾಣ ಏನಿದೆ:** ಕೃಷಿಕ ಕುಟುಂಬ ಅಭ್ಯರ್ಥಿಗಳ ಕೋಟಾದ ಅಡಿಯಲ್ಲಿ ಅರ್ಹತೆ ಪಡೆಯಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸುವ ಪ್ರಾಯೋಗಿಕ ಪರೀಕ್ಷೆಯಲ್ಲಿ ಕನಿಷ್ಠ

ಶೇ.50 ರಷ್ಟು ಅಂಕ 'ಪಡೆದಿರಬೇಕು. ಕೃಷಿ ಕುಟುಂಬ ಅಭ್ಯರ್ಥಿಗಳ ಕೋಟಾದ ಅಡಿ ಕೃಷಿ ವಿಜ್ಞಾನ/ತೋಟಗಾರಿಕೆ ಕೋರ್ಸ್‌ಗಳ ಪ್ರವೇಶಕ್ಕೆ ಮೆರಿಟ್ ಪಟ್ಟಿಯನ್ನು ಸಿಇಟಿ ಐಚ್ಛಿಕ ವಿಷಯಗಳಲ್ಲಿ ಶೇ.50 ಅಂಕಗಳನ್ನು ಮತ್ತು ಪ್ರಾಯೋಗಿಕ ಪರೀಕ್ಷೆಯ ಶೇ.50 ಅಂಕಗಳನ್ನು ಪರಿಗಣಿಸಿ ರ‍್ಯಾಂಕ್ ನೀಡುವ ಪದ್ಧತಿ ಇದೆ.

**ಕೋರ್ಸ್‌ಗಳ ವಿವರ:** ಸದ್ಯ ಬಿಎಸ್‌ಸಿ (ಅನರ್ಸ್) ಕೃಷಿ ಬಿಎಸ್ಸಿ (ಅನರ್ಸ್) ರೇಷ್ಮೆ, ಕೃಷಿ ಬಿಎಸ್ಸಿ (ಅನರ್ಸ್) ಅರಣ್ಯ, ವಿಜ್ಞಾನ ಬಿಟೆಕ್ (ಜೈವಿಕ ತಂತ್ರಜ್ಞಾನ) ಬಿಎಸ್ಸಿ (ಅನರ್ಸ್) ಸಮುದಾಯ ವಿಜ್ಞಾನ ಬಿಟೆಕ್ (ಕೃಷಿ ಇಂಜಿನಿಯರಿಂಗ್) ಬಿಟೆಕ್ (ಆಹಾರ ತಂತ್ರಜ್ಞಾನ), ಬಿಟೆಕ್ (ಹೈನುಗಾರಿಕೆ ತಂತ್ರಜ್ಞಾನ), ಬಿಎಫ್‌ಎಸ್ಸಿ (ಮೀನುಗಾರಿಕೆ) ಬಿಎಸ್‌ಸಿ (ಆನರ್ಸ್) (ಕೃಷಿ ವ್ಯವಹಾರ ನಿರ್ವಹಣೆ) ಕೋರ್ಸ್‌ಗಳಿವೆ.

ಆಧಾರ:ವಿಜಯವಾಣಿ, ದಿನಾಂಕ:22.06.2021

## 56. ಟಿಡಿಆರ್ ನಿಯಮ ಬದಲು

ನಗರ ಪ್ರದೇಶದಲ್ಲಿ ರಸ್ತೆ ಅಗಲೀಕರಣ, ಮೆಟ್ರೋ ಇತರೆ ಯೋಜನೆಗಾಗಿ ಭೂಸ್ವಾಧೀನ ಮಾಡಿಕೊಂಡ ಸಂದರ್ಭದಲ್ಲಿ ಭೂ ಮಾಲೀಕರಿಗೆ ನೀಡುವ ಟಿಡಿಆರ್(ಟ್ರಾನ್ಸ್ ಫರ್ ಆಫ್ ಡೆವಲಪ್‌ಮೆಂಟ್ ರೈಟ್) ನಿಯಮದಲ್ಲಿ ಸರ್ಕಾರ ಮಹತ್ವದ ಬದಲಾವಣೆ ತಂದಿದೆ. ಸೋಮವಾರ ನಡೆದ ಸಂಪುಟ ಸಭೆಯಲ್ಲಿ ಟಿಡಿಆರ್ ಕುರಿತು ಚರ್ಚೆ ನಡೆದಿದ್ದು, ನಿಯಮಕ್ಕೆ ತಿದ್ದುಪಡಿ ತರಲು ನಿರ್ಣಯಿಸಲಾಯಿತು. ಕರ್ನಾಟಕ ಟೌನ್ ಎಂಡ್ ಕಂಟ್ರಿ ಪ್ಲಾನ್‌ಗೆ ತಿದ್ದುಪಡಿ ತರಲಿದ್ದು, ಟಿಡಿಆರ್ ಕೊಡುವಾಗ ಅನುಸರಿಸುವ ನಿಯಮದಲ್ಲಿ ಜನಸ್ನೇಹಿ ಬದಲಾವಣೆ ತರಲಾಗುತ್ತದೆ ಎಂದು ಸರ್ಕಾರ ಹೇಳಿಕೊಂಡಿದೆ. ಈಗಿರುವ ನಿಯಮದ ಪ್ರಕಾರ ಯಾವ ಏಜೆನ್ಸಿ ಯೋಜನೆ ಮಾಡುತ್ತದೋ ಅದು ಸರ್ವೇ ಮಾಡಿ ಟಿಡಿಆರ್ ನಿಗದಿ ಪಡಿಸುತ್ತದೆ. ಬಳಿಕ ಸಂಬಂಧಪಟ್ಟ ಅಭಿವೃದ್ಧಿ ಪ್ರಾಧಿಕಾರಕ್ಕೆ ಹೋಗುತ್ತದೆ. ಆ ಸಂಸ್ಥೆ ರಿಸರ್ವೇ ಮಾಡಿ ಟಿಡಿಆರ್ ದೊರಕುವುದೇ ಇಲ್ಲ. ಇನ್ನು ಮುಂದೆ ಯಾರು ಯೋಜನೆಗಾಗಿ ಮೊದಲು ಸರ್ವೆ ಮಾಡಿ ವರದಿ ಕೊಡುತ್ತಾರೋ ಆ ವರದಿಯಲ್ಲಿ ಉಲ್ಲೇಖಿಸಿದಂತೆಯೇ 90 ದಿನಗಳೊಳಗೆ ಟಿಡಿಆರ್ ಕೊಡಬೇಕು. ಎರಡು ಸರ್ವೇ ಮಾಡಿ ವರದಿ ಕೊಡುತ್ತಾರೋ ಆ ವರದಿಯಲ್ಲಿ ಉಲ್ಲೇಖಿಸಿದಂತಯೇ 90 ದಿನಗಳ ಬಳಿಕ ಡೀಮ್ಡ್ ಎಂದು ಪರಿಗಣಿಸಲಾಗುತ್ತದೆ. ಜನರಿಗೆ ಕಿರಿಕಿರಿ ತಪ್ಪಿಸಲು ಈ ಕ್ರಮ ಎಂದು ಗೃಹ ಸಚಿವ ಬಸವರಾಜ್ ಬೊಮ್ಮಾಯಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಒಂದು ವರದಿ ಬಂದ ಕೂಡಲೇ ದರ ಪರಿಷ್ಕರಿಸಲು ಕೆಲವರು ಪ್ರಯತ್ನ ಮಾಡುತ್ತಾರೆ. ಇದನ್ನು ತಪ್ಪಿಸಲು ಒಂದೇ ವರದಿಗೆ ಅಂತಿಮಗೊಳಿಸಲು ನಿರ್ಧರಿಸಲಾಗಿದೆ ಎಂದು ವಿವರಿಸಿದರು.

ಆಧಾರ: ವಿಜಯವಾಣಿ, ದಿನಾಂಕ:22.06.2021.

## 57. ಶಾಲಾರಂಭದ ಜಿಜ್ಞಾಸೆ

ಕೊರೋನಾ ಮೂರನೇ ಅಲೆಯ ಭೀತಿಯು ಈಗ ಶಾಲೆಗಳನ್ನು ಆರಂಭಿಸಬೇಕೋ, ಬೇಡವೋ ಎಂಬ ಹೊಸ ಜಿಜ್ಞಾಸೆಗೆ ದಾರಿ ಮಾಡಿಕೊಟ್ಟಿದೆ. ರಾಜ್ಯ ಸರ್ಕಾರ ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಕುರಿತು ವರದಿ ನೀಡಲು ಸರ್ಕಾರ ನೇಮಿಸಿದ್ದ ಡಾ.ದೇವಿ ಶೆಟ್ಟಿ ನೇತೃತ್ವದ ತಜ್ಞರ ಸಮಿತಿ ಮಧ್ಯಂತರ ವರದಿ ಸಲ್ಲಿಸಿದೆ.

ವಿದ್ಯಾರ್ಥಿಗಳಿಗೆ, ಬೋಧಕ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳ ಕುಟುಂಬಸ್ಥರು ಲಸಿಕೆ ಹಾಕಿಸಿಕೊಂಡ ಬಳಿಕ ಹಂತಹಂತವಾಗಿ ಶಾಲಾ ಕಾಲೇಜು ಆರಂಭಿಸಬಹುದು ಎಂದು ತಜ್ಞರು ವರದಿ ನೀಡಿದ್ದಾರೆ. ಸಮಿತಿ ಸುಮಾರು 92 ಪುಟಗಳ ಶಿಫಾರಸ್ಸುಗಳನ್ನೊಳಗೊಂಡ ವರದಿಯನ್ನು ಮುಖ್ಯಮಂತ್ರಿಗೆ ಸಲ್ಲಿಸಿದೆ. ಈ ಬಗ್ಗೆ ಪ್ರತಿಕ್ರಿಯಿಸಿರುವ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ರಾಜ್ಯ ಸರ್ಕಾರ ನೇಮಿಸಿರುವ ತಜ್ಞರ ಸಮಿತಿ ಮಧ್ಯಂತರ ವರದಿ ನೀಡಿ, ಹಲವು ಶಿಫಾರಸ್ಸುಗಳನ್ನು ಮಾಡಿದೆ. ಸರ್ಕಾರ ಶಾಲೆಗಳನ್ನು ಆರಂಭಿಸುವ ಬಗ್ಗೆ ಯಾವುದೇ ತೀರ್ಮಾನ ತೆಗೆದುಕೊಂಡಿಲ್ಲ ಎಂದಿದ್ದಾರೆ.

ಮೂರನೇ ಅಲೆಯು ಮಕ್ಕಳ ಮೇಲೆ ಗಂಭೀರ ಪರಿಣಾಮ ಬೀರುವ ಆತಂಕವಿರುವ ಹಿನ್ನೆಲೆಯಲ್ಲಿ ಶಾಲೆ ತೆರೆಯುವ ಮುನ್ನ ಎಚ್ಚರಿಕೆ ವಹಿಸುವಂತೆ ತಜ್ಞರ ಸಮಿತಿ ಶಿಫಾರಸ್ಸು ಮಾಡಿದೆ. ಹದಿನೆಂಟು ವಯೋಮಾನದ ಎಲ್ಲರೂ ಲಸಿಕೆ ಪಡೆದುಕೊಳ್ಳಬೇಕೆಂದು ತಾಕೀತು ಮಾಡಿರುವುದರಿಂದ ಪದವಿ ನಂತರದ ತರಗತಿಗಳ ಆರಂಭಕ್ಕೆ ಹಾದಿ ಸುಗಮವಾಗಬಹುದು. ಆದರೆ, ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ತರಗತಿ ಆರಂಭಕ್ಕೆ ಇನ್ನಷ್ಟು ದಿನಗಳು ಬೇಕಾಗಬಹುದು ಎಂಬ ಚರ್ಚೆ ಆರಂಭವಾಗಿದೆ. ವಿದ್ಯಾರ್ಥಿಗಳ ಪಾಲಕರು, ಕುಟುಂಬಸ್ಥರು, ಶಾಲಾ ಅಧ್ಯಾಪಕರು, ಬೋಧಕೇತರ ಸಿಬ್ಬಂದಿ ಲಸಿಕೆ ಪಡೆದುಕೊಂಡ ಬಳಿಕವಷ್ಟೇ ಶಾಲೆ ಆರಂಭಿಸಬೇಕಾಗುತ್ತದೆ.

**2 ಲಕ್ಷ ವಿಮೆ:** ರಾಜ್ಯದ ಎಲ್ಲ ಶಾಲಾ ಕಾಲೇಜುಗಳಿಗೆ ಭೌತಿಕವಾಗಿ ಹಾಜರಾಗುವ ಮಕ್ಕಳಿಗೆ ರೂ.2 ಲಕ್ಷಗಳ ವಿಮೆ ಮಾಡಿಸುವಂತೆ ಸಮಿತಿ ಶಿಫಾರಸ್ಸು ಮಾಡಿದೆ. ಶಾಲೆ ಆರಂಭಿಸುವ ಬಗ್ಗೆ ಜಿಲ್ಲೆ ತಾಲ್ಲೂಕು ಹಾಗೂ ಎಸ್‌ಡಿಎಂಸಿಗೆ ಅಧಿಕಾರ ನೀಡುವಂತೆಯೂ ಸಲಹೆ ನೀಡಿದೆ. ಆರೋಗ್ಯ ಕ್ಷೇತ್ರದಲ್ಲಿಯೂ ಅಲ್ಪಾವಧಿ ಮತ್ತು ದೀರ್ಘಾವಧಿಯಲ್ಲಿ ಸಾಕಷ್ಟು ಸುಧಾರಣೆ ಕೈಗೊಳ್ಳುವಂತೆ ಸೂಚಿಸಲಾಗಿದ್ದು, ಸರ್ಕಾರಿ ಆಸ್ಪತ್ರೆಗಳಲ್ಲಿ ಮೂಲ ಸೌಕರ್ಯ, ಮಕ್ಕಳಿಗಾಗಿ ಕೋವಿಡ್ ಕೇರ್ ಸೆಂಟರ್, ಆಕ್ಸಿಜನ್, ಅಗತ್ಯ ಔಷಧಿಗಳ ಸಿದ್ಧತೆ ಮಾಡಿಕೊಳ್ಳುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ.

ಆಧಾರ: ಉದಯವಾಣಿ, ದಿನಾಂಕ:23.06.2021.

## 58. ಜಂಟಿ ಸದನ ಸಮಿತಿ ರಚಿಸಲಿ

ಭದ್ರಾ ಮೇಲ್ದಂಡೆ ಕಾಮಗಾರಿಯ ರೂ.20 ಸಾವಿರ ಕೋಟಿ ಟೆಂಡರ್‌ನಲ್ಲಿ ಶೇ.10 ರಷ್ಟು ಕಿಕ್ ಬ್ಯಾಕ್ ಪಡೆದಿದ್ದಾರೆ' ಎಂಬ ವಿಧಾನಪರಿಷತ್ ಸದಸ್ಯ ಎಚ್.ವಿಶ್ವನಾಥ್ ಆರೋಪದ ತನಿಖೆಗೆ ಜಂಟಿ ಸದನ ಸಮಿತಿ ರಚಿಸಬೇಕು" ಎಂದು ಆಗ್ರಹಿಸಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, 'ಮುಖ್ಯಮಂತ್ರಿ ನೇತೃತ್ವದಲ್ಲಿಯೇ ಸಮಿತಿ ರಚಿಸಲಿ' ಎಂದು ಸಲಹೆ ನೀಡಿದರು.

'ಈ ಆರೋಪದ ತನಿಖೆಯನ್ನು ಎಸಿಬಿಗೆ(ಭ್ರಷ್ಟಾಚಾರ ನಿಗ್ರಹ ದಳ)ಒಪ್ಪಿಸಬೇಕು' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆಗ್ರಹಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಶಿವಕುಮಾರ್, 'ಯಾವ್ಯಾವ ಕೋಡ್‌ಗಳಲ್ಲಿ ಬಿಲ್ ಪಾಸ್ ಆಗುತ್ತಿದೆ. ಯಾವ್ಯಾವ ಎಂಜಿನಿಯರ್ ಏನೇನು ಮಾಡುತ್ತಿದ್ದಾರೆ ಎಲ್ಲವೂ ಗೊತ್ತಿದೆ. ರೂ.10 ಕೋಟಿಗೂ ಒಂದೊಂದು ಟೆಂಡರ್ ಕರೆಯಲಾಗುತ್ತಿದೆ. ಜಲಸಂಪನ್ಮೂಲ ಖಾತೆ ಮುಖ್ಯಮಂತ್ರಿ ಬಳಿಯಿದೆ. ವಿಶ್ವನಾಥ್ ಆರೋಪಕ್ಕೆ ಮುಖ್ಯಮಂತ್ರಿ ಉತ್ತರ ಕೊಡಬೇಕಿತ್ತು. ಯಾರೋ ಎಂ.ಡಿ ಕೈಯಲ್ಲಿ ಉತ್ತರ ಕೊಡಿಸಿದ್ದಾರೆ' ಎಂದರು.

**ಮುಚ್ಚಿ ಹಾಕುವ ಪ್ರಯತ್ನ:** 'ವಿಶ್ವನಾಥ್ ಮಾಡಿರುವ ಆರೋಪ ಎರಡು ಕಾರಣಗಳಿಗಾಗಿ ಗಂಭೀರ ಸ್ವರೂಪದ್ದು. ಮೊದಲನೆಯದಾಗಿ, ನೇರವಾಗಿ ಮುಖ್ಯಮಂತ್ರಿಯ ಮಗನ ಮೇಲೆ ಆರೋಪ ಮಾಡಲಾಗಿದೆ. ಎರಡನೆಯದಾಗಿ, ಆಡಳಿತ ಪಕ್ಷದ ವಿಧಾನಪರಿಷತ್ ಸದಸ್ಯರೇ ಈ ಆರೋಪ ಮಾಡಿದ್ದಾರೆ. ತರಾತುರಿಯಲ್ಲಿ ನೀರಾವರಿ ಇಲಾಖೆ ಸ್ಪಷ್ಟನೆ ನೀಡಿರುವುದನ್ನು ನೋಡಿದರೆ ಹಗರಣ ಮುಚ್ಚಿಹಾಕುವ ಪ್ರಯತ್ನ ಸ್ಪಷ್ಟ' ಎಂದು ಸಿದ್ದರಾಮಯ್ಯ ಅಭಿಪ್ರಾಯಪಟ್ಟಿದ್ದಾರೆ.

'ನಗರದ ಬಿಐಇಸಿಯಲ್ಲಿ ನಿರ್ಮಿಸಲಾಗಿದ್ದ ಕೋವಿಡ್ ಕೇರ್ ಸೆಂಟರ್ ಹಾಸಿಗೆ ಮತ್ತು ಬೆಡ್‌ಗಳ ಖರೀದಿ–ಮಾರಾಟದಲ್ಲಿ ಶಾಸಕ ಎಸ್.ಆರ್.ವಿಶ್ವನಾಥ್ ಭ್ರಷ್ಟಾಚಾರ ಎಸಗಿದ್ದಾರೆ ಮತ್ತು ಭೂಹಗರಣದಲ್ಲಿ ಭಾಗಿಯಾಗಿದ್ದಾರೆ ಎಂಬ ಎಚ್.ವಿಶ್ವನಾಥ್ ಅವರ ಇನ್ನೊಂದು ಆರೋಪದ ಬಗ್ಗೆಯೂ ತನಿಖೆ ನಡೆಯಬೇಕು. ಸರ್ಕಾರವನ್ನು ಎಚ್.ವಿಶ್ವನಾಥ್ 'ಗುತ್ತಿಗೆದಾರರ ಸರ್ಕಾರ' ಎಂದು ಬಣ್ಣಿಸಿರುವುದು ನೋಡಿದರೆ ಅವರ ಬಳಿ ಬೇರೆ ಸಚಿವರ ಭ್ರಷ್ಟಾಚಾರದ ಮಾಹಿತಿಯೂ ಇದ್ದಂತಿದೆ' ಎಂದು ಹೇಳಿದ್ದಾರೆ.

ಆಧಾರ: ಪ್ರಜಾವಾಣಿ, ದಿನಾಂಕ:24.06.2021.

## 59. 30 ಲಕ್ಷ ರೈತರಿಗೆ ಶೂನ್ಯ ಬಡ್ಡಿಯಲ್ಲಿ ಸಾಲ

ಕೋವಿಡ್‌ನಿಂದ ಸಂಕಷ್ಟದಲ್ಲಿರುವ 30,26 ಲಕ್ಷ ರೈತರಿಗೆ ಪ್ರಸಕ್ತ ಸಾಲಿನಲ್ಲಿ ಶೂನ್ಯ ಬಡ್ಡಿ ದರದಲ್ಲಿ ರೂ.19,370 ಕೋಟಿ ಅಲ್ಪಾವಧಿ ಬೆಳೆ ಸಾಲ ಹಾಗೂ 60 ಲಕ್ಷ ರೈತರಿಗೆ ಶೇ.3ರ ಬಡ್ಡಿ ದರದಲ್ಲಿ ರೂ.1,440 ಕೋಟಿ ಮಧ್ಯಮಾವಧಿ, ದೀರ್ಘಾವಧಿ ಸಾಲ ವಿತರಣೆ ಗುರಿ ಹೊಂದಲಾಗಿದೆ ಎಂದು ಮುಖ್ಯಮಂತ್ರಿಯವರು ಹೇಳಿದರು.

ಸಹಕಾರ ಹಾಗೂ ಬೆಂಗಳೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ವತಿಯಿಂದ ಬೆಂಗಳೂರಿನಲ್ಲಿ ನಡೆದ ರೈತ ಸ್ಪಂದನ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಅವರು ಕೆಲವು ರೈತರಿಗೆ ಸಾಲ ಪ್ರಮಾಣ ಪತ್ರ ವಿತರಿಸಿದರು.

'ಕೃಷಿ ಆರೋಗ್ಯ, ಶಿಕ್ಷಣ ನಮ್ಮ ಸರ್ಕಾರದ ಆದ್ಯತಾ ವಲಯಗಳಾಗಿವೆ. ರೈತರು ಸ್ವಾವಲಂಬಿ ಜೀವನ ನಡೆಸುವಂತಾಗಲು ಸಾಲ ಸೌಲಭ್ಯ ಕಲ್ಪಿಸುತ್ತಿದ್ದೇವೆ. ಸಾಲ ಮರುಪಾವತಿ ಅವಧಿಯನ್ನು ಮೂರು ತಿಂಗಳಿಗೆ ವಿಸ್ತರಿಸಿ ಆದೇಶ ಹೊರಡಿಸಲಾಗಿದೆ. ಇದರಿಂದ ಒಟ್ಟು 8.15 ಲಕ್ಷ ಸದಸ್ಯರಿಗೆ ಅನುಕೂಲವಾಗುತ್ತಿದೆ' ಎಂದು ಮುಖ್ಯಮಂತ್ರಿಯವರು ತಿಳಿಸಿದರು.

**ಟೀಕಾಕಾರರಿಗೆ ಉತ್ತರ:** ಯಾವುದೇ ಅಭಿವೃದ್ಧಿ ಕಾರ್ಯಗಳಾಗುತ್ತಿಲ್ಲ ಎಂದು ಟೀಕೆ ಮಾಡುವವರಿಗೆ ಈ ಅಂಕಿ ಸಂಖ್ಯೆಗಳೇ ಉದಾಹರಣೆ. ಸಹಕಾರ ಕ್ಷೇತ್ರ ಮಾತ್ರವಲ್ಲದೆ ಯಾವುದೇ ಕ್ಷೇತ್ರದಲ್ಲಿ ಯಾರಿಗೂ ಕೊರತೆಯಾಗದಂತೆ 2 ಪ್ಯಾಕೇಜ್ ಘೋಷಿಸಲಾಗಿದೆ. ಕೋವಿಡ್‌ನಿಂದ ಮೃತಪಟ್ಟವರ ಬಡ ಕುಟುಂಬಕ್ಕೆ ರೂ.1 ಲಕ್ಷ ಪರಿಹಾರ ನೀಡುವುದನ್ನು ದೇಶದಲ್ಲೇ ಪ್ರಥಮ ಬಾರಿಗೆ ಜಾರಿಗೊಳಿಸಲಾಗಿದೆ ಎಂದು ಮುಖ್ಯಮಂತ್ರಿಯವರು ತಿಳಿಸಿದರು.

ಉಪ ಮುಖ್ಯಮಂತ್ರಿ ಲಕ್ಷ್ಮಣ್ ಸವದಿ, ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಸಚಿವ ಶಿವರಾಮ ಹೆಬ್ಬಾರ್, ವಿಧಾನ ಪರಿಷತ್ ಸದಸ್ಯರಾದ ಅ.ದೇವೇಗೌಡ, ರಮೇಶ್‌ಗೌಡ ರಾಜ್ಯ ಸಹಕಾರ ಮಾರಾಟ ಮಹಾಮಂಡಳದ ಅಧ್ಯಕ್ಷ ರಾಜೇಂದ್ರ ಕುಮಾರ್ ಇತರರು ಪಾಲ್ಗೊಂಡಿದ್ದರು.

ಬೆಂಗಳೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಬೆಂಗಳೂರು ನಗರ, ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಯ ಎಲ್ಲ ಸಂಘಗಳು, ಸದಸ್ಯರ ಆರ್ಥಿಕ ಬೆಳವಣಿಗೆಗೆ ಸಕಾರಾತ್ಮಕವಾಗಿ ಸ್ಪಂದಿಸುತ್ತಿದೆ. ಸಹಕಾರ ಸಂಘಗಳು ಇನ್ನಷ್ಟು ಸೇವೆಗಳನ್ನು ಸದಸ್ಯರಿಗೆ ನೀಡಲು ಮುಂದಾಗಿವೆ. ಕೋವಿಡ್‌ನಿಂದ ಸಂಕಷ್ಟಕ್ಕೆ ಒಳಗಾದವರಿಗೆ ರೂ.4.62 ಕೋಟಿ ಮೌಲ್ಯದ ವೈದ್ಯ ಪರಿಕರ, ಮುಖ್ಯಮಂತ್ರಿಯವರು ಕೋವಿಡ್ ಪರಿಹಾರ ನಿಧಿಗೆ ರೂ.58 ಕೋಟಿ ದೇಣಿಗೆ ನೀಡಿ ಸಾಮಾಜಿಕ ಕಾಳಜಿ ಮೆರೆದಿವೆ ಎಂದು ಮುಖ್ಯಮಂತ್ರಿಯವರು ಮೆಚ್ಚುಗೆ ವ್ಯಕ್ತಪಡಿಸಿದರು.

**ರೈತ ವರ್ಗಕ್ಕೆ ಏನೇನು ನೆರವು:**

- 40 ಲಕ್ಷ ಸ್ತ್ರಿಶಕ್ತಿ ಗುಂಪುಗಳಿಗೆ ರೂ.1,400 ಕೋಟಿ ಸಾಲದ ಗುರಿ.
- ಮೇ ಅಂತ್ಯಕ್ಕೆ 6700 ಗುಂಪುಗಳಿಗೆ ರೂ.2.33 ಕೋಟಿ ಸಾಲ ವಿತರಣೆ
- ಹೂವು, ಹಣ್ಣು ಬೆಳೆಗಾರರಿಗೆ ಹೆಕ್ಟೇರ್‌ಗೆ ರೂ.10,000 ಪರಿಹಾರ.
- ದುರ್ಬಲ ವರ್ಗದವರಿಗೆ ರೂ.1,250 ಕೋಟಿ ಪರಿಹಾರ ಪ್ಯಾಕೇಜ್.
- ಆತ್ಮನಿರ್ಭರ ಯೋಜನೆಯಡಿ 930 ಸಹಕಾರ ಸಂಘಗಳಲ್ಲಿ ಗೋದಾಮು.
- 32 ಲಕ್ಷ ಸದಸ್ಯರೊಂದಿಗೆ ಸಹಕಾರ ಕ್ಷೇತ್ರದಲ್ಲಿ 2.50 ಲಕ್ಷ ಸ್ತ್ರೀಶಕ್ತಿ ಗುಂಪುಗಳು ರಚನೆ.
- ಕಳೆದ ವರ್ಷ ಕೃಷಿ ಕ್ಷೇತ್ರದಲ್ಲಿ 25.67 ಲಕ್ಷ ರೈತರಿಗೆ ರೂ.16,451 ಕೋಟಿ ಅಲ್ಪಾವಧಿ ಸಾಲ ವಿತರಣೆ.

- ➢ ಹೈನುಗಾರಿಕೆಯಲ್ಲಿರುವ 57 ಲಕ್ಷ ರೈತರಿಗೆ ಈಗಾಗಲೇ ರೂ.105.64 ಕೋಟಿ ಸಾಲ ವಿತರಣೆ.

**ಐತಿಹಾಸಿಕ ತೀರ್ಮಾನ**: ರೈತರಿಗೆ ತೊಂದರೆಯಾಗಬಾರದು ಎಂಬ ಕಾರಣಕ್ಕೆ ಒಂದರಿಂದ 10ನೇ ತರಗತಿವರೆಗಿನ 56 ಲಕ್ಷ ವಿದ್ಯಾರ್ಥಿಗಳಿಗೆ ಹಾಲಿನ ಪುಡಿ ವಿತರಣೆಗೆ ರೂ.163 ಕೋಟಿಗಳನ್ನು ಸರ್ಕಾರದಿಂದ ಭರಿಸುವ ಮೂಲಕ ರೈತರು ಹಾಗೂ ಹಾಲು ಒಕ್ಕೂಟಗಳಿಗೂ ಮುಖ್ಯಮಂತ್ರಿಗಳು ನೆರವಾಗಿದ್ದಾರೆ. ಬಿಪಿಎಲ್ ಕುಟುಂಬಕ್ಕೆ ರೂ.1 ಲಕ್ಷ ಘೋಷಿಸಿ ರೂ.400 ಕೋಟಿ ಪರಿಹಾರ ನೀಡುವ ಮುಖ್ಯಮಂತ್ರಿಯವರ ತೀರ್ಮಾನ ಐತಿಹಾಸಿಕ' ಎಂದು ಸಚಿವ ಎಸ್.ಟಿ.ಸೋಮಶೇಖರ್ ಶ್ಲಾಘಿಸಿದರು.

ಮುಖ್ಯಮಂತ್ರಿಗಳ ಸೂಚನೆ ಪ್ರಕಾರ ಹೊಸ ರೈತರಿಗೆ ಸಾಲ ಸೌಲಭ್ಯ ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ. ರಾಜ್ಯದ 5400 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, 21 ಡಿಸಿಸಿ ಬ್ಯಾಂಕ್, ಅಪೆಕ್ಸ್ ಬ್ಯಾಂಕ್‌ನ ಸುಗಮ, ಪಾರದರ್ಶಕ ಕಾರ್ಯ ನಿರ್ವಹಣೆಗಾಗಿ ಒಂದೇ ಸಾಫ್ಟ್‌ವೇರ್ ಅಭಿವೃದ್ಧಿ ಪಡಿಸುವ ಪ್ರಯತ್ನ ಮುಂದುವರಿದಿದೆ ಎಂದು ಹೇಳಿದರು.

ಆಧಾರ:ವಿಜಯ ಕರ್ನಾಟಕ, ದಿನಾಂಕ:22.06.2021

## 60. ಮಹಿಳಾ ಸರ್ಕಾರಿ ನೌಕರರಿಗೆ 180 ದಿನ ಶಿಶುಪಾಲನಾ ರಜೆ

ರಾಜ್ಯ ಸರ್ಕಾರದ ಮಹಿಳಾ ನೌಕರರಿಗೆ ಚಾಲ್ತಿಯಲ್ಲಿರುವ ಪ್ರಸೂತಿ ರಜೆಯೊಂದಿಗೆ ಒಟ್ಟು ಸೇವಾವಧಿಯಲ್ಲಿ ಶಿಶುಪಾಲನಾ ರಜೆ ಪಡೆದುಕೊಳ್ಳುವ ಸಂಬಂಧ ಆದೇಶ ಪ್ರಕಟಗೊಂಡಿದೆ. ಈ ಮೂಲಕ ಈಗಿರುವ ರಜೆಗಳ ಜೊತೆ ಹೆಚ್ಚುವರಿಯಾಗಿ 180 ದಿನಗಳ ವೇತನ ಸಹಿತ ಸೂಟಿ ಲಭ್ಯವಾಗಲಿದೆ.

2021–22ನೇ ಸಾಲಿನ ಅಯವ್ಯಯ ಭಾಷಣದಲ್ಲಿ ಮುಖ್ಯಮಂತ್ರಿಯವರು ಈ ವಿಷಯ ಪ್ರಸ್ತಾಪಿಸಿದರು. ಈ ಕುರಿತು ಆದೇಶ ಹೊರಡಿಸಲಾಗಿದೆ. ಇಡೀ ಸೇವಾವಧಿಯಲ್ಲಿ ಗರಿಷ್ಠ ಆರು ತಿಂಗಳವರೆಗೆ ಅಂದರೆ 180 ದಿನ ಶಿಶುಪಾಲನಾ ರಜೆಯನ್ನು ಸಕ್ಷಮ ಪ್ರಾಧಿಕಾರ ಮಂಜೂರು ಮಾಡಬೇಕೆಂದು ಸೂಚಿಸಲಾಗಿದೆ. ಸರ್ಕಾರಿ ನೌಕರಳು ಹೊಂದಿರುವ ಮಕ್ಕಳ ಸಂಖ್ಯೆ ಪರಿಗಣಿಸಿದೆ. ಅತ್ಯಂತ ಕಿರಿಯ ಮಗುವು 18 ವರ್ಷ ತಲುಪುವವರೆಗಿನ ಅವಧಿಗೆ ಮಾತ್ರ ಈ ರಜೆ ಸೌಲಭ್ಯಕ್ಕೆ ಅರ್ಹರಾಗಿರುತ್ತಾರೆ. ಈ ಅವಧಿಯಲ್ಲಿ ಆಕೆ ರಜೆಯ ಮೇಲೆ ಹೋಗುವ ನಿಕಟಪೂರ್ವದಲ್ಲಿ ಪಡೆಯಲಿರುವ ಸಂಪೂರ್ಣ ವೇತನಕ್ಕೆ ಸಮನಾದ ರಜೆ ಸಂಬಳಕ್ಕೆ ಅರ್ಹರಾಗತಕ್ಕದ್ದು. ಪ್ರತಿ ಬಾರಿಯ ಈ ರಜೆ ಮಂಜೂರಾತಿ ಕನಿಷ್ಠ 15 ದಿನಗಳಿಗಿಂತ ಕಡಿಮೆ ಇರಬಾರದು. ಅಂದರೆ 6 ತಿಂಗಳು ರಜೆಯನ್ನು ಒಟ್ಟಿಗೆ ಹಾಕಬೇಕೆಂದಿಲ್ಲ.

ಈ ರಜೆಯನ್ನು ಸಾಂದರ್ಭಿಕ ರಜೆಯ ಹೊರತಾಗಿ ನಿಯಮಾನುಸಾರ ಪಡೆಯಲು ಅರ್ಹವಿರುವ ಅಸಾಧಾರಣ ರಜೆಯೂ ಒಳಗೊಂಡಂತೆ ಇತರೆ ರಜೆಯೂ ಒಳಗೊಂಡಂತೆ ಇತರೆ ರಜೆಯೊಂದಿಗೆ ಸಂಯೋಜಿಸಿಯೂ ಪಡೆಯಬಹುದು. ಈ ವಿಶೇಷ ರಜೆಯನ್ನು ಯಾವುದೇ ರಜೆ ಲೆಕ್ಕದಿಂದ ಕಳೆಯತಕ್ಕದ್ದಲ್ಲ. ಉಪಯೋಗಿಸಿಕೊಳ್ಳದ ಈ ಸೌಲಭ್ಯದ ಸಂಬಂಧದಲ್ಲಿನ ರಜೆಯನ್ನು ಗಳಿಕೆ ರಜೆ ಲೆಕ್ಕಕ್ಕೆ ಜಮೆಗೊಳಿಸಲು ಅಥವಾ ನಗದೀಕರಿಸಲು ಅವಕಾಶ ಇರುವುದಿಲ್ಲ. ಬುದ್ಧಿಮಾಂದ್ಯ ಅಥವಾ ಅಂಗವಿಕಲ ಮಕ್ಕಳನ್ನು ಹೊಂದಿರುವ ಸರ್ಕಾರಿ ಮಹಿಳಾ ನೌಕರರಿಗೆ ಮಂಜೂರು ಮಾಡಿರುವ 730 ದಿನಗಳ ಶಿಶುಪಾಲನಾ ರಜೆ ಸೌಲಭ್ಯಕ್ಕೆ ಅರ್ಹರಾದವರು ಈ ಯೋಜನೆ ಅಡಿ ಸೌಲಭ್ಯಕ್ಕೆ ಅರ್ಹರಲ್ಲ. ಶಿಶುಪಾಲನಾ ರಜೆಯ ಮಂಜೂರಾತಿಗೆ ಯಾವುದೇ ಪೂರಕ ದಾಖಲೆಗಳನ್ನು ಪಡೆಯುವ ಅವಶ್ಯಕತೆ ಇರುವುದಿಲ್ಲ ಎಂದು ಸ್ಪಷ್ಟಪಡಿಸಲಾಗಿದೆ. ಸೇವಾ ಪುಸ್ತಕದಲ್ಲಿ ನಮೂದಿಸಿರುವ ಮಕ್ಕಳ ವಿವರಗಳ ಆಧಾರದ ಮೇಲೆ ರಜೆ ಮಂಜೂರಾಗಲಿದೆ.

**2 ಲಕ್ಷ ಸಿಬ್ಬಂದಿಗೆ ಅನುಕೂಲ:** ರಾಜ್ಯದಲ್ಲಿ 5.40 ಲಕ್ಷ ಸರ್ಕಾರಿ ನೌಕರರಿದ್ದು, ಅದರಲ್ಲಿ ಸುಮಾರು 3 ಲಕ್ಷ ಮಹಿಳಾ ನೌಕರರಿದ್ದಾರೆ. ಈ ಹೊಸ ಶಿಶುಪಾಲನಾ ರಜೆ ಅವಕಾಶ ಅಂದಾಜು 2 ಲಕ್ಷ ಮಹಿಳಾ ಸಿಬ್ಬಂದಿಗೆ ಅನುಕೂಲ ಕಲ್ಪಿಸಲಿದೆ.

ಕ್ಯಾನ್ಸರ್ ಕಾಯಿಲೆಯಿಂದ ಬಳಲುತ್ತಿರುವ ಸರ್ಕಾರಿ ನೌಕರರು, ಸರ್ಕಾರಿ ವೈದ್ಯರ ಸಲಹೆ ಮೇರೆಗೆ ಒಳಪಡುವ ಕಿಮೋ ಅಥವಾ ರೇಡಿಯೋಥೆರಪಿ ಸಂದರ್ಭದಲ್ಲಿ ವಿಶೇಷ ಸಾಂದರ್ಭಿಕ ರಜೆ ಪಡೆದುಕೊಳ್ಳಲು ಸರ್ಕಾರ ಅನುಮತಿ ನೀಡಿದೆ. ಕಿಮೋ ಅಥವಾ ರೇಡಿಯೋ ಥೆರಪಿ ಚಿಕಿತ್ಸೆ ಬಳಿಕ ಕಡ್ಡಾಯ ವಿಶ್ರಾಂತಿಪಡೆಯುವುದು ಅವಶ್ಯ ಮತ್ತು ಕಚೇರಿಯಲ್ಲಿ ಹಾಜರಾಗಲು ಕಷ್ಟವಾಗುತ್ತದೆ. ಈ ನಿಮಿತ್ತದ ಅವಧಿಯನ್ನು ಸಕ್ಷಮ ವೈದ್ಯಕೀಯ ಪ್ರಾಧಿಕಾರವು ನೀಡುವ ಪ್ರಮಾಣ ಪತ್ರ ಹಾಜರುಪಡಿಸುವ ಷರತ್ತುಗೊಳಪಟ್ಟು ವಿಶೇಷ ಸಾಂದರ್ಭಿಕ ರಜೆಯನ್ನಾಗಿ ಪರಿಗಣಿಸಲು ಸರ್ಕಾರಿ ನೌಕರರ ಸಂಘ ಸರ್ಕಾರಕ್ಕೆ ಮನವಿ ಮಾಡಿತ್ತು. ಈ ಬೇಡಿಕೆಗೆ ಆಸ್ತು ಎಂದಿರುವ ಸರ್ಕಾರ ಚಿಕಿತ್ಸೆ ಅವಧಿಯಲ್ಲಿ ಮಾತ್ರ ಆರು ತಿಂಗಳಿಗೊಳಪಟ್ಟು ವಿಶೇಷ ಸಾಂದರ್ಭಿಕ ರಜೆ ಪಡೆಯಲು ಅವಕಾಶ ಮಾಡಿಕೊಟ್ಟಿದೆ.

ಆಧಾರ:ವಿಜಯವಾಣಿ, ದಿನಾಂಕ:23.06.2021

## 61. 25 ಲಕ್ಷ ಗ್ರಾಮೀಣ ಮನೆಗಳಿಗೆ ನೀರು

ಜಲಜೀವನ್ ಮಿಷನ್ ಯೋಜನೆಯಡಿ ಈ ವರ್ಷ 25 ಲಕ್ಷ ಮನೆಗಳಿಗೆ ಶುದ್ಧ ಕುಡಿಯುವ ನೀರು ಒದಗಿಸಲು ಕ್ರಮ ವಹಿಸಬೇಕು ಎಂದು ಮುಖ್ಯಮಂತ್ರಿಯವರು ಸೂಚನೆ ನೀಡಿದ್ದಾರೆ.

ಜಲಜೀವನ್ ಮಿಷನ್‌ನಡಿ ರಾಜ್ಯ ಸರ್ಕಾರದ ಮನೆ ಮನೆಗೆ ಗಂಗೆ ಯೋಜನೆ ಪ್ರಗತಿ ಪರಿಶೀಲನೆ ನಡೆಸಿದ ಅವರು ಪ್ರಧಾನಿ ನರೇಂದ್ರ ಮೋದಿಯವರ ಮಹತ್ವಾಕಾಂಕ್ಷೆ ಯೋಜನೆ ಇದಾಗಿದ್ದು, ನಿಗದಿತ ಅವಧಿಯಲ್ಲಿ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

ಸಭೆಯ ನಂತರ ಮಾತನಾಡಿ, ರಾಜ್ಯದಲ್ಲಿ, 91.91 ಲಕ್ಷ ಗ್ರಾಮೀಣ ಕುಟುಂಬಗಳಿದ್ದು, ಈಗಾಗಲೇ 28 ಲಕ್ಷಕ್ಕೂ ಹೆಚ್ಚು ಮನೆಗಳಿಗೆ ನಲ್ಲಿ ಮೂಲಕ ಸಂಪರ್ಕ ಒದಗಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ 25.17 ಲಕ್ಷ ಮನೆಗಳಿಗೆ ಸಂಪರ್ಕ ಒದಗಿಸುವ ಗುರಿ ನಿಗದಿತ ಕಾಲಮಿತಿಯಲ್ಲಿ ಪೂರ್ಣಗೊಳಿಸಬೇಕೆಂದು ತಿಳಿಸಿದರು.

ರಾಜ್ಯದಲ್ಲಿ ಈವರೆಗೆ 435 ಬಹುಗ್ರಾಮ ಯೋಜನೆಗಳು ಪೂರ್ಣಗೊಂಡಿವೆ. 69 ಯೋಜನೆಗಳು ಪ್ರಗತಿಯಲ್ಲಿದ್ದು, 30 ಯೋಜನೆಗಳೀಗೆ ಅನುಮೋದನೆ ನೀಡಲಾಗಿದೆ. ಈ ವರ್ಷಕ್ಕೆ 161 ಯೋಜನೆಗಳ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಇದೇ ಸಂದರ್ಭದಲ್ಲಿ ಅಧಿಕಾರಿಗಳು ಮಾಹಿತಿ ನೀಡಿದರು.

ನದಿ ಮೂಲದಿಂದ ನೀರು ದೊರೆಯುವ ಸ್ಥಳದಲ್ಲಿ ಆದ್ಯತೆಯ ಮೇರೆಗೆ ಅನುಷ್ಠಾನಗೊಳಿಸಬೇಕು. ಈ ಕುರಿತು ಎಲ್ಲ ಜಿಲ್ಲೆಗಳ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳೊಂದಿಗೆ ನಾನೇ ವಿಡಿಯೋ ಕಾನ್ಫರೆನ್ಸ್ ನಡೆಸುತ್ತೇನೆ ಎಂದು ತಿಳಿಸಿದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್.ಈಶ್ವರಪ್ಪ, ಮುಖ್ಯಮಂತ್ರಿಯವರ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ:ಇ.ವಿ. ರಮಣರೆಡ್ಡಿ, ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತೆ ವಂದಿತಾ ಶರ್ಮ, ಆರ್ಥಿಕ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಐಎಸ್ಎನ್ ಪ್ರಸಾದ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಅವರ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್ ಹಾಗೂ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು,

ಆಧಾರ:ಉದಯವಾಣಿ, ದಿನಾಂಕ:23.06.2021

## 62. ಲಸಿಕೆ ಬಳಿಕ ಪದವಿ ತರಗತಿ

ವಿದ್ಯಾರ್ಥಿಗಳು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗೆ ಅದ್ಯತೆಯ ಮೇಲೆ ಲಸಿಕೆ ನೀಡಬೇಕು. ಶಾಲೆ, ಕಾಲೇಜುಗಳಲ್ಲಿ ತರಗತಿ ಆರಂಭಿಸುವ ಪ್ರಕ್ರಿಯೆಯನ್ನು ಬಹು ಹಂತಗಳಲ್ಲಿ

ಅನುಷ್ಠಾನಕ್ಕೆ ತರುವಂತೆ ಸಮಿತಿ ಶಿಫಾರಸ್ಸು ಮಾಡಿದೆ. ಈ ಎಲ್ಲ ವಿಷಯಗಳ ಬಗ್ಗೆಯೂ ಚರ್ಚಿಸಿ ತೀರ್ಮಾನಕ್ಕೆ ಬರಲಾಗುವುದು ಎಂದು ಹೇಳಿದರು.

**ವಿಶೇಷ ಆಸ್ಪತ್ರೆಗಳ ಆರಂಭಕ್ಕೆ ಸಲಹೆ:** ಕೋವಿಡ್ ಮೂರನೇ ಅಲೆಯಲ್ಲಿ ಮಕ್ಕಳಿಗೆ ಹೆಚ್ಚಿನ ತೊಂದರೆ ಆಗಬಹುದು ಎಂಬ ಅಂದಾಜು ಇದೆ. ಈ ಕಾರಣಕ್ಕಾಗಿಯೇ ಜಿಲ್ಲೆ ಹಾಗು ತಾಲ್ಲೂಕು ಮಟ್ಟದಲ್ಲಿ ವಿಶೇಷ ಆಸ್ಪತ್ರೆಗಳು, ಮಕ್ಕಳ ಚಿಕಿತ್ಸಾ ವಾರ್ಡ್‌ಗಳನ್ನು ಸಜ್ಜುಗೊಳಿಸುವಂತೆ ಸಮಿತಿ ಸಲಹೆ ನೀಡಿದೆ ಎಂದು ಮುಖ್ಯಮಂತ್ರಿಯವರು ತಿಳಿಸಿದರು.

ಎಲ್ಲ ಜಿಲ್ಲಾ ಹಾಗೂ ತಾಲ್ಲೂಕು ಆಸ್ಪತ್ರೆಗಳು, ವೈದ್ಯಕೀಯ ಕಾಲೇಜು ಆಸ್ಪತ್ರೆಗಳು ಮಕ್ಕಳ ಚಿಕಿತ್ಸಾ ವಿಭಾಗಗಳಲ್ಲಿ ಹೆಚ್ಚುವರಿಯಾಗಿ ಹೈಡಿಪ್ನೆಂಡೆನ್ಸಿ ವಾರ್ಡ್, ಮಕ್ಕಳ ತೀವ್ರ ನಿಗಾ ಘಟಕಗಳನ್ನು ಆರಂಭಿಸುವಂತೆ ತಜ್ಞರ ಸಮಿತಿ ಶಿಫಾರಸ್ಸು ಮಾಡಿದೆ. ಎಲ್ಲ ಆಸ್ಪತ್ರೆಗಳಲ್ಲೂ ಕೊರೋನಾ ವೈರಾಣು ಸೋಂಕಿತ ಮಕ್ಕಳಿಗೆ ಆತ್ಮಸ್ಥೈರ್ಯ ತುಂಬಲು ಮನೋವೈದ್ಯರನ್ನು ಒದಗಿಸಬೇಕು ಎಂಬ ಸಲಹೆಯನ್ನು ನೀಡಿದೆ.

ಅಪೌಷ್ಠಿಕತೆ ನಿವಾರಣೆಗೆ ಅಧ್ಯತೆ ನೀಡಬೇಕು. ಆಮ್ಲಜನಕದ ಕೊರತೆ ನೀಗಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ಕೋವಿಡ್ ನಂತರದ ದಿನಗಳಲ್ಲಿ ಎದುರಾಗುವ ಇತರ ಆರೋಗ್ಯದ ಸಮಸ್ಯೆಗಳು ಹಾಗೂ ಕೋವಿಡೇತರ ರೋಗಗಳ ಚಿಕಿತ್ಸೆಗೆ ಅಗತ್ಯ ವ್ಯವಸ್ಥೆ ಮಾಡಬೇಕು. ಕೋವಿಡ್ ಆರೈಕೆ ಕೇಂದ್ರಗಳಲ್ಲಿ ಹೆಚ್ಚಿನ ಸೌಲಭ್ಯ ಕಲ್ಪಿಸಬೇಕು ಮತ್ತು ಮಕ್ಕಳ ಕೋವಿಡ್ ಪರೀಕ್ಷೆಗೆ ವಿಶೇಷ ವ್ಯವಸ್ಥೆ ಮಾಡಬೇಕು ಎಂಬ ಶಿಫಾರಸುಗಳು ವರದಿಯಲ್ಲಿವೆ.

**ಖಾಸಗಿ ನೆರವು ಬಳಕೆಗೆ ಸಲಹೆ:** ಕೋವಿಡ್ ಮೂರನೇ ಅಲೆ ನಿಯಂತ್ರಿಸುವ ಪ್ರಕ್ರಿಯೆಯಲ್ಲಿ ಕಾರ್ಪೋರೇಟ್ ವಲಯವು ಸೇರಿದಂತೆ ಖಾಸಗಿ ನೆರವನ್ನು ಸರ್ಕಾರ ಬಳಕೆ ಮಾಡಿಕೊಳ್ಳಬೇಕು. ಅಲ್ಲಿ ಲಭ್ಯವಿರುವ ಮಾನವ ಸಂಪನ್ಮೂಲ ಮತ್ತು ಹಣಕಾಸಿನ ನೆರವನ್ನು ಬಳಸಿಕೊಳ್ಳಬೇಕು ಎಂದು ತಜ್ಞರ ಸಮಿತಿ ಸಲಹೆ ನೀಡಿದೆ.

ವೈದ್ಯರು, ನರ್ಸ್‌ಗಳು ಮತ್ತಿತರ ವೈದ್ಯಕೀಯ ಸಿಬ್ಬಂದಿಯ ಕೊರತೆಗೆ ಪರಿಹಾರ ಕಂಡುಕೊಳ್ಳಲು ವಿವಿಧ ವೈದ್ಯಕೀಯ ಸಂಘಟನೆಗಳ ಜೊತೆಗೂಡಿ ಕೆಲಸ ಮಾಡಬೇಕು. ಸರ್ಕಾರೇತರ ಸಂಸ್ಥೆಗಳನ್ನು ಈ ಕೆಲಸದಲ್ಲಿ ಬಳಸಿಕೊಳ್ಳಬೇಕು. ಸೋಂಕು ಹರಡುವುದನ್ನು ತಡೆಯುವ ದಿಸೆಯಲ್ಲಿ ಸಾರ್ವಜನಿಕರನ್ನು ಈ ಪ್ರಕ್ರಿಯೆಯಲ್ಲಿ ಜೊತೆಗೆ ಸೇರಿಸಿಕೊಳ್ಳಬೇಕು ಎಂದು ಸಮಿತಿ ಹೇಳಿದೆ.

ಆಧಾರ:ಪ್ರಜಾವಾಣಿ, ದಿನಾಂಕ:23.06.2021

## 63. ಡೆಲ್ಟಾ ಗಂಡಾಂತರ

ದೇಶದಲ್ಲಿ ಕೊರೋನಾ 2ನೇ ಅಲೆ ಅಂತೂ ನಿಯಂತ್ರಣಕ್ಕೆ ಬಂತು ಎಂದು ನಿಟ್ಟುಸಿರು ಬಿಡುವಷ್ಟರಲ್ಲೇ ಕೋವಿಡ್ ಲಸಿಕೆ ಹಾಗೂ ಪ್ರತಿಕಾಯದ ಶಕ್ತಿಯನ್ನು ನಾಶ ಮಾಡುವ ಸಾಮರ್ಥ್ಯ ಹೊಂದಿರುವ ಡೆಲ್ಟಾ ಪ್ಲಸ್ ರೂಪಾಂತರಿ ಸೋಂಕು ಕಾಟ ಶುರುವಾಗಿದೆ. ಮೈಸೂರು, ಬೆಂಗಳೂರಿನಲ್ಲಿ ತಲಾ ಇಬ್ಬರು ಸೇರಿ ದೇಶದ ವಿವಿಧೆಡೆಯ 40 ಜನರಲ್ಲಿ ಸೋಂಕು ಪತ್ತೆಯಾಗಿದೆ. ಮೈಸೂರಿನಲ್ಲಿ ಸೋಂಕಿಗೀಡಾಗಿದ್ದ ಯುವಕ ಚೇತರಿಸಿಕೊಂಡಿದ್ದರೂ ಡೆಲ್ಟಾ ಪ್ಲೆಸ್ 3ನೇ ಅಲೆಯಾಗಿ ಮಾರ್ಪಟ್ಟರೂ ಆಶ್ಚರ್ಯವಿಲ್ಲ ಎಂಬ ತಜ್ಞರ ಎಚ್ಚರಿಕೆ ಆತಂಕ ಸೃಷ್ಟಿಸಿದೆ.

**ಮೊದಲ ಪ್ರಕರಣ:** ಬೆಂಗಳೂರಿನಲ್ಲಿ ಡೆಲ್ಟಾ ಪ್ಲಸ್ ಮೊದಲ ಪ್ರಕರಣ ಬೆಳಕಿಗೆ ಬಂದಿರುವುದನ್ನು ಆರೋಗ್ಯ ಸಚಿವ ಡಾ: ಸುಧಾಕರ್ ಖಚಿತಪಡಿಸಿದ್ದಾರೆ. ರಾಜ್ಯದ ಮೊದಲ ಡೆಲ್ಟಾ ಪ್ರಕರಣ ಮೈಸೂರಿನಲ್ಲಿ ದೃಢಪಟ್ಟಿತ್ತು. ಸೋಂಕಿಗೀಡಾಗಿದ್ದ ಯುವಕನ ಪ್ರಥಮ ಹಾಗೂ ದ್ವಿತೀಯ ಸಂಪರ್ಕದಲ್ಲಿದ್ದ ಜನರನ್ನು ಪರೀಕ್ಷೆಗೆ ಒಳಪಡಿಸಲಾಗಿತ್ತು.

**ಸಂಪರ್ಕಿತರಿಗೆ ವೈರಾಣು ಹರಡಿಲ್ಲ:** ಜಿನೋಮಿಕ್ ಸೀಕ್ವೆನ್ಸ್‌ನಿಂದ ರೂಪಾಂತರಿ ವೈರಾಣು ಪತ್ತೆ ಮಾಡಲಾಗುತ್ತಿದ್ದು, ಡೆಲ್ಟಾ ಪ್ಲಸ್ ವೈರಾಣುವಿನ ಒಂದು ಪ್ರಕರಣ ಮೈಸೂರಿನಲ್ಲಿ ಕಂಡು ಬಂದಿದೆ.

ರೋಗಿಯನ್ನು ಐಸೋಲೇಟ್ ಮಾಡಲಾಗಿದ್ದು, ಸೋಂಕಿತನ ಸಂಪರ್ಕಿತರಿಗೆ ವೈರಾಣು ಹರಡಿಲ್ಲ ಎಂದು ಆರೋಗ್ಯ ಸಚಿವ ಡಾ: ಕೆ.ಸುಧಾಕರ್ ಹೇಳಿದ್ದಾರೆ. ರಾಜ್ಯದಲ್ಲಿ 2 ಕೋಟಿ ಜನರಿಗೆ ಕೋವಿಡ್ ಲಸಿಕೆ ನೀಡಿದ್ದು, ದಕ್ಷಿಣ ಭಾರತದಲ್ಲೇ ರಾಜ್ಯ ನಂ.1 ಆಗಿದೆ ಎಂದರು.

**ಲಕ್ಷಣಗಳೇನು:**

- ಅತಿ ವೇಗವಾಗಿ ಹರಡಬಲ್ಲದು.
- ತೀವ್ರ ಗ್ಯಾಸ್ಟ್ರಿಕ್, ಕಿವಿ ಕೇಳಿಸದಿರುವುದು, ರಕ್ತ ಹೆಪ್ಪುಗಟ್ಟಿಸುವಿಕೆ, ಕೆಲವೊಮ್ಮೆ ಗ್ಯಾಂಗ್ರಿನ್, ಹೊಟ್ಟೆನೋವು, ವಾಕರಿಕೆ, ಕೀಲುನೋವು, ಮಾನವ ಜೀವಕೋಶಕ್ಕೆ ಹಾನಿಯಾಗಬಹುದು.
- ಪ್ರತಿ ಕಾಯವನ್ನು ಹಂತಹಂತವಾಗಿ ನಾಶ ಮಾಡಬಲ್ಲದು.

ಆಧಾರ:ವಿಜಯವಾಣಿ, ದಿನಾಂಕ:24.06.2021

## 64. 6500 ತರಗತಿ ಸ್ಮಾರ್ಟ್ ತರಗತಿಗಳಾಗಿ ಪರಿವರ್ತನೆ

ಪ್ರಸಕ್ತ ಸಾಲಿನಲ್ಲಿ 6,500 ತರಗತಿ ಕೊಠಡಿಗಳನ್ನು ಸ್ಮಾರ್ಟ್ ತರಗತಿಗಳಾಗಿ ಪರಿವರ್ತಿಸಲಾಗುವುದು ಎಂದು ಮುಖ್ಯಮಂತ್ರಿಯವರು ಹೇಳಿದ್ದಾರೆ.

ಉನ್ನತ ಶಿಕ್ಷಣ ಇಲಾಖೆ ವಿಧಾನ ಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಡಿಜಿಟಲ್ ಕಲಿಕಾ ಯೋಜನೆಯಡಿ 2500 ಸ್ಮಾರ್ಟ್ ತರಗತಿಗಳನ್ನು ಉದ್ಘಾಟಿಸಿ ವಿದ್ಯಾರ್ಥಿಗಳಿಗೆ ಟ್ಯಾಬ್ಲೆಟ್ ಹಾಗೂ ಪಿಸಿಗಳನ್ನು ಸಾಂಕೇತಿಕವಾಗಿ ವಿತರಿಸಿ ಮಾತನಾಡಿದರು. 2021–22ನೇ ಸಾಲಿನಲ್ಲಿ ಸರ್ಕಾರಿ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶಾತಿ ಪಡೆಯುವ ಎಲ್ಲ ವಿದ್ಯಾರ್ಥಿಗಳಿಗೆ ಸರ್ಕಾರದ ವತಿಯಿಂದ ಟ್ಯಾಬ್ಲೆಟ್ ಪಿಸಿ ನೀಡಲಾಗುವುದು ಎಂದು ತಿಳಿಸಿದರು.

ಡಿಜಿಟಲ್ ಕಲಿಕೆ ಯೋಜನೆಯ ಮೂಲಕ ಸರ್ಕಾರಿ ಕಾಲೇಜುಗಳ ವಿದ್ಯಾರ್ಥಿಗಳು 21ನೇ ಶತಮಾನದ ಸವಾಲುಗಳನ್ನು ಆತ್ಮವಿಶ್ವಾಸದಿಂದ ಎದುರಿಸಲು ಅವರನ್ನು ಸಿದ್ಧಗೊಳಿಸಲಾಗುತ್ತಿದೆ. ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ನಿರ್ಲಕ್ಷಿತ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳು ಕಲಿಕೆಯಿಂದ ವಂಚಿತರಾಗದಂತೆ ಈ ಕಾರ್ಯಕ್ರಮ ಖಾತ್ರಿ ಪಡಿಸುತ್ತದೆ ಎಂದರು.

ಈ ತರಗತಿ ಕೊಠಡಿಗಳಲ್ಲಿ Projector, White Board, Android Box, UPS ಮತ್ತು Internet ಸೌಲಭ್ಯವಿದ್ದು, ಆಧುನಿಕ ಬೋಧನೆ–ಕಲಿಕೆಗಳಿಗೆ ಪೂರಕವಾಗಿರಲಿದೆ. ಕೋವಿಡ್ ಸಾಂಕ್ರಾಮಿಕದಿಂದ ಉಂಟಾಗಿರುವ ಈ ಸಂಧಿಗ್ದ ಪರಿಸ್ಥಿತಿಯಲ್ಲೂ ವಿದ್ಯಾರ್ಥಿಗಳ ಕಲಿಕೆ ನಿರಾತಂಕವಾಗಿ ಮುಂದುವರಿಯಬೇಕು ಎನ್ನುವ ಉದ್ದೇಶದಿಂದ ಡಿಜಿಟಲ್ ಲರ್ನಿಂಗ್ ಯೋಜನೆಯನ್ನು ಸರ್ಕಾರ ಅನುಷ್ಠಾನಗೊಳಿಸಿದೆ ಎಂದರು.

ಆಧಾರ:ವಿಶ್ವವಾಣಿ, ದಿನಾಂಕ:24.06.2021

## 65. ರಾಜ್ಯದಲ್ಲಿ ಡೆಲ್ಟಾ ಪ್ಲಸ್ 2 ಪ್ರಕರಣ

ರಾಜ್ಯದಲ್ಲಿ ಕೊರೋನಾ ಡೆಲ್ಟಾ ಪ್ಲಸ್‌ನ ಎರಡು ಪ್ರಕರಣಗಳು ದೃಢಪಟ್ಟಿವೆ. ಮೈಸೂರಿನಲ್ಲಿ ಮತ್ತು ಬೆಂಗಳೂರಿನಲ್ಲಿ ತಲಾ ಒಬ್ಬರಲ್ಲಿ ಪತ್ತೆಯಾಗಿದೆ. ಬೆಂಗಳೂರಿನ ಸೋಂಕಿತ ವ್ಯಕ್ತಿಯನ್ನು ಆಸ್ಪತ್ರೆಗೆ ದಾಖಲಿಸಿದ್ದು, ಪ್ರಾಥಮಿಕ ಸಂಪರ್ಕಿತರ ಪತ್ತೆಗೆ ಕ್ರಮವಹಿಸಲಾಗಿದೆ. ಜಿನೋಮಿಕ್ ಸೀಕ್ವೆನ್ಸ್‌ನಿಂದ ರೂಪಾಂತರಿ ವೈರಾಣು ಪತ್ತೆ ಮಾಡಲಾಗುತ್ತಿದೆ. ಡೆಲ್ಟಾ ಪ್ಲಸ್ ವೈರಾಣುವಿನ ಪತ್ತೆಗೆ ರಾಜ್ಯದಲ್ಲಿ 6 ಪ್ರಯೋಗಾಲಯ ರೂಪಿಸಲಾಗುತ್ತಿದೆ ಎಂದು ಆರೋಗ್ಯ ಸಚಿವ ಡಾ:ಕೆ. ಸುಧಾಕರ್ ತಿಳಿಸಿದ್ದಾರೆ. ಮೈಸೂರಿನಲ್ಲಿ ಪತ್ತೆಯಾದ ಮತ್ತೊಂದು ಪ್ರಕರಣದ ಮೂಲ ತಮಿಳುನಾಡು ಆಗಿದ್ದು, ತಾಂತ್ರಿಕವಾಗಿ ರಾಜ್ಯಕ್ಕೆ ಸೇರಿಸಿಲ್ಲ. ರಾಜ್ಯದಲ್ಲಿ ಎರಡು ಪ್ರಕರಣ ಎಂದು ಪರಿಗಣಿಸಲಾಗಿದೆ.

**ದೇಶದಲ್ಲಿ 40 ಪ್ರಕರಣ**: ಮಹಾರಾಷ್ಟ್ರ, ಮಧ್ಯಪ್ರದೇಶ, ಕೇರಳ ಮತ್ತು ತಮಿಳುನಾಡಿನಲ್ಲಿ ಹೆಚ್ಚು ಡೆಲ್ಟಾ ಪ್ಲಸ್ ಪ್ರಕರಣಗಳು ಪತ್ತೆಯಾಗಿದ್ದು, ಒಟ್ಟಾರೆ ಸಂಖ್ಯೆ 40ಕ್ಕೆ ಏರಿಕೆಯಾಗಿದೆ. ಕೊರೋನಾ ಎರಡನೇ ಅಲೆ ಮುಗಿಯುತ್ತಿದೆ ಅಂದುಕೊಳ್ಳುತ್ತಿರುವಾಗಲೇ ಡೆಲ್ಟಾ ಪ್ಲಸ್ ಸೋಂಕು ಹೆಚ್ಚಾಗುತ್ತಿರುವುದು ತೀವ್ರ ಆತಂಕ ಮೂಡಿಸಿದೆ. ಈಗಾಗಲೇ ಕೇಂದ್ರ ಸರ್ಕಾರ ಇದು ಅಪಾಯಕಾರಿ ಎಂದು ಹೇಳಿದೆ.

ಆಧಾರ:ಉದಯವಾಣಿ, ದಿನಾಂಕ:24.06.2021

## 66. 3ನೇ ಅಲೆ: ಮಕ್ಕಳಿಗೆ 95000 ಬೆಡ್ ಬೇಕು

ರಾಜ್ಯದಲ್ಲಿ ಮೂರನೇ ಅಲೆ ವೇಳೆ ಕೊರೋನಾ ಸೋಂಕು ಹೆಚ್ಚು ತೀವ್ರತೆ ತೋರಿದರೆ ಸೋಂಕಿತರ ಸಂಖ್ಯೆ ಗರಿಷ್ಠವಿದ್ದಾಗ (ಪೀಕ್) 18 ವರ್ಷದೊಳಗಿನ ಮಕ್ಕಳಿಗಾಗಿಯೇ ಬರೋಬರಿ 95,216 ಬೆಡ್‌ಗಳ ಅಗತ್ಯತೆ ಬೀಳಲಿದೆ. ಈ ಪೈಕಿ ಬೇಕಾಗುವ ಐಸಿಯು/ಹೆಚ್‌ಡಿಯು ಬೆಡ್‌ಗಳೇ ಸಂಖ್ಯೆಯೇ 13,602 ಆಗಲಿದೆ ಹೀಗಂತ ಮೂರನೇ ಅಲೆ ಸಿದ್ಧತೆ ಕುರಿತ ಡಾ: ದೇವಿಪ್ರಸಾದ್ ಶೆಟ್ಟಿ ನೇತೃತ್ವದ ತಜ್ಞರ ಸಮಿತಿ ಸರ್ಕಾರಕ್ಕೆ ಸಲ್ಲಿಸಿರುವ ವರದಿಯಲ್ಲಿ ಉಲ್ಲೇಖಿಸಿದೆ.

ಸಮಿತಿಯು ಕೊರೋನಾ ಸೋಂಕಿನ ತೀವ್ರತೆ ಹೆಚ್ಚು, ಸಾಧಾರಣ ಹಾಗೂ ಕಡಿಮೆ ಇರುವ ಮೂರು ಪ್ರತ್ಯೇಕ ಮಾದರಿಗಳಲ್ಲಿ ಸಂಭಾವ್ಯ ಸೋಂಕು ಹಾಗೂ ಅಗತ್ಯವಾಗಲಿರುವ ಬೆಡ್‌ಗಳ ಅಂದಾಜು ವರದಿ ಸಿದ್ಧಪಡಿಸಿದೆ. ಈ ವೇಳೆ ಕೊರೋನಾ ಪ್ರಕರಣಗಳ ತೀವ್ರತೆ ಹೆಚ್ಚಿದ್ದಾಗ 18 ವರ್ಷದೊಳಗಿನ 3,40,059 ಮಕ್ಕಳಿಗೆ ಸೋಂಕು ಉಂಟಾಗಬಹುದು. ಈ ವೇಳೆ ಶೇ.20 ರಷ್ಟು ಮಕ್ಕಳಿಗೆ ರೋಗ ಲಕ್ಷಣ ಕಾಣಿಸಿಕೊಳ್ಳಬಹುದು. 27,205 ಆಸ್ಪತ್ರೆ ಬೆಡ್, 13,602 ವೆಂಟಿಲೇಟರ್, ಐಸಿಯು, ಹೆಚ್‌ಡಿಯು (ಹೈ ಡಿಪೆಂಡೆನ್ಸಿ ಯುನಿಟ್) ಬೆಡ್, 54,409 ಕೊರೋನಾ ಆರೈಕೆ ಕೇಂದ್ರದ ಬೆಡ್ ಸೇರಿ ಬರೋಬ್ಬರಿ 95,216 ಬೆಡ್ ಮಕ್ಕಳ ಆರೈಕೆಗೆ ಆಗತ್ಯ ಬೀಳಲಿವೆ ಎಂದು ಹೇಳಿದೆ.

ಸಾಧಾರಣ ಸ್ಥಿತಿ ಇದ್ದರೆ 3.40 ಲಕ್ಷ ಮಂದಿ ಸೋಂಕಿತ ಮಕ್ಕಳ ಪೈಕಿ 23,804 ಆಸ್ಪತ್ರೆ ಬೆಡ್, 6801 ಐಸಿಯು/ಹೆಚ್‌ಡಿಯು ಬೆಡ್, 43,358 ಕೊರೋನಾ ಆರೈಕೆ ಕೇಂದ್ರದ ಬೆಡ್ ಅಗತ್ಯ ಬೀಳಲಿದೆ. ಕಡಿಮೆ ತೀವ್ರತೆ ವರದಿಯಾದರೆ 13,602 ಆಸ್ಪತ್ರೆ ಬೆಡ್, 6,801 ಐಸಿಯು/ಹೆಚ್‌ಡಿಯು ಬೆಡ್ 30,605 ಕೊರೋನಾ ಆರೈಕೆ ಕೇಂದ್ರದ ಬೆಡ್ ಅಗತ್ಯ ಸೃಷ್ಟಿಯಾಗಲಿದೆ ಎಂದು ತಜ್ಞರ ಸಮಿತಿ ಮಧ್ಯಂತರ ವರದಿಯಲ್ಲಿ ತಿಳಿಸಿದೆ.

ಜಿಲ್ಲಾಸ್ಪತ್ರೆಯಲ್ಲೂ ಕನಿಷ್ಠ 10 ಮಕ್ಕಳ ವೆಂಟಿಲೇಟರ್: ಪ್ರತಿ ಜಿಲ್ಲಾಸ್ಪತ್ರೆಯಲ್ಲಿ 10 ನಿಯೋನಾಟಲ್ ವೆಂಟಿಲೇಟರ್, 1 ಟ್ರಾನ್ಸ್‌ಪೋರ್ಟ್ ವೆಂಟಿಲೇಟರ್, 20 ಐಸಿಯು ಬೆಡ್, 20 ಇನ್‌ಫ್ಯೂಷನ್ ಪಂಪ್, 20 ಫಿಂಗರ್ ಪಲ್ಸ್ ಆಕ್ಸಿಮೀಟರ್, ಪಲ್ಸ್ ಆಕ್ಸಿಮೀಟರ್, 1 ಪೋರ್ಟೆಬಲ್ ಎಕ್ಸ್ ರೇ, 2 ಫೋಟೇಬಲ್ ಇಸಿಜಿ, ಶಿಫ್ಟಿಂಗ್ ಟ್ರಾಲಿ ಸಹಿತ 3 ಆಕ್ಸಿಜನ್ ಸಿಲಿಂಡರ್ ಸೇರಿದಂತೆ ಯಾವ್ಯಾವ ಅತ್ಯಗತ್ಯ ಸಲಕರಣೆ ಮಕ್ಕಳ ಚಿಕಿತ್ಸೆಗೆ ಆಗತ್ಯವಿದೆ ಎಂಬ ಬಗ್ಗೆ ವರದಿಯಲ್ಲಿ ತಿಳಿಸಲಾಗಿದೆ.

**ಬೆಳಗಾವಿಯಲ್ಲೂ ಆತಂಕ**: ರಾಜ್ಯದಲ್ಲಿ 0–18 ವರ್ಷದ 2.38 ಕೋಟಿ ಮಕ್ಕಳಿದ್ದಾರೆ ಎಂದು ಸಮಿತಿ ಅಂದಾಜಿಸಿದೆ. ಈ ಪೈಕಿ ಬೆಂಗಳೂರು (32.21 ಲಕ್ಷ) ಬಳಿಕ ಅತಿ ಹೆಚ್ಚು ಮಕ್ಕಳಿರುವುದು ಬೆಳಗಾವಿಯಲ್ಲಿ (20.01 ಲಕ್ಷ) ಬಳಿಕ ಕಲಬುರಗಿ 12.15 ಲಕ್ಷ, ವಿಜಯಪುರ 10.02 ಲಕ್ಷ ಮಕ್ಕಳಿದ್ದಾರೆ. ಹೆಚ್ಚು ಮಕ್ಕಳಿರುವ ಜಿಲ್ಲೆಗಳಲ್ಲಿ ಹೆಚ್ಚು ಮಂದಿಗೆ ಸೋಂಕು ಹರಡುವ ಅಂದಾಜಿದ್ದು, ಬೆಡ್‌ಗಳ ಅಗತ್ಯತೆಯೂ ಹೆಚ್ಚಿದೆ. ಬೆಂಗಳೂರಿನಲ್ಲಿ ಪೀಕ್ ಸಮಯದಲ್ಲಿ 45.958 ಪ್ರಕರಣ ದಾಖಲಾದರೆ ಬೆಳಗಾವಿಯಲ್ಲಿ 28,546 ಮಕ್ಕಳಿಗೆ ಸೋಂಕು ಉಂಟಾಗುವ ಅಂದಾಜಿದೆ.

ಆಧಾರ:ಕನ್ನಡಪ್ರಭ, ದಿನಾಂಕ:27.06.2021

## 67. ಕಾರ್ಮಿಕರಿಗೆ ಭರ್ಜರಿ ಭತ್ಯೆ

ಕಾರ್ಮಿಕರ ಕಲ್ಯಾಣ ಯೋಜನೆಯ ಸೌಲಭ್ಯಗಳ ಧನಸಹಾಯದ ಮೊತ್ತವನ್ನು ಪರಿಷ್ಕರಿಸಲಾಗಿದೆ. ಇದೇ ಮೊದಲ ಬಾರಿಗೆ ಸಂಘಟಿತ ವಲಯದ ಮಹಿಳಾ ಕಾರ್ಮಿಕರ ಮೊದಲ ಎರಡು ಹೆರಿಗೆ ವೇಳೆ ತಲಾ ರೂ.10 ಸಾವಿರ ಹೆರಿಗೆ ಭತ್ಯೆ ಘೋಷಿಸಲಾಗಿದೆ.

ಕಾರ್ಮಿಕ ಕಲ್ಯಾಣ ಮಂಡಳಿಯಿಂದ ಅನುಷ್ಠಾನಗೊಳಿಸಲಾಗುವ ಕಲ್ಯಾಣ ಯೋಜನೆಗಳ ಧನಸಹಾಯ ಮೊತ್ತವನ್ನು ಪರಿಷ್ಕರಿಸಬೇಕು ಎಂಬುದು ಕಾರ್ಮಿಕ ಸಂಘಟನೆಗಳ ಹಲವು ವರ್ಷಗಳ ಬೇಡಿಕೆಯಾಗಿತ್ತು. ಇತ್ತೀಚಿಗೆ ಕಾರ್ಮಿಕ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯ 90ನೇ ಸಭೆಯಲ್ಲಿ ಧನ ಸಹಾಯದ ಮೊತ್ತವನ್ನು ಪರಿಷ್ಕರಿಸಲು ತೀರ್ಮಾನಿಸಲಾಗಿದೆ.

ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ಸಂಘಟಿತ ವಲಯದ ನೋಂದಾಯಿತ ಕಾರ್ಮಿಕರಿಗೆ ಏಳು ಕಲ್ಯಾಣ ಯೋಜನೆಗಳನ್ನು ಅನುಷ್ಠಾನಕ್ಕೆ ತರಲಾಗುತ್ತಿದೆ. ಈಗ ಪರಿಷ್ಕರಣೆ ಮಾಡಲಾಗಿರುವ ಸಹಾಯಧನದಿಂದ 41 ಲಕ್ಷಕ್ಕೂ ಅಧಿಕ ಕಾರ್ಮಿಕರಿಗೆ ಅನುಕೂಲವಾಗಲಿದೆ.

ಕಾರ್ಮಿಕರಿಂದ ಹಾಗೂ ಉದ್ಯೋಗದಾತ ಸಂಸ್ಥೆ – ಕಾರ್ಖಾನೆ ಮಾಲೀಕರಿಂದ 20:40 ಅನುಪಾತದಲ್ಲಿ ಮಂಡಳಿ ವಂತಿಗೆ ಸಂಗ್ರಹಿಸಿ ಅದರಿಂದ ಈ ಭತ್ಯೆಗಳನ್ನು ನೀಡಲಾಗುತ್ತದೆ. 2017ರಿಂದ ವಂತಿಗೆ ಹಣ ಹೆಚ್ಚಾಗಿ ಬರುತ್ತದೆ. 2020–21ನೇ ಸಾಲಿನಲ್ಲಿ ರೂ.24.81 ಕೋಟಿ ಸಂಗ್ರಹವಾಗಿತ್ತು. ಸಹಾಯಧನದ ಮೊತ್ತವನ್ನು ಪರಿಷ್ಕರಿಸಲಾಗಿದೆ. ಈ ಪರಿಷ್ಕೃತ ಸೌಲಭ್ಯ 2021ರ ಜೂನ್ 22ರಿಂದ ಅನ್ವಯವಾಗಲಿದೆ ಎಂದು ಕಾರ್ಮಿಕ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

**ಆದಾಯ ಮಿತಿ ಪರಿಷ್ಕರಣೆ:** ಶೈಕ್ಷಣಿಕ ಪ್ರೋತ್ಸಾಹ ಧನ ಯೋಜನೆಯಡಿ 8 ರಿಂದ 10ನೇ ತರಗತಿವರೆಗಿನ ಮಕ್ಕಳಿಗೆ ವಾರ್ಷಿಕ 3 ಸಾವಿರ, ಪಿಯುಸಿ, ಡಿಪ್ಲೋಮಾ, ಐಟಿಐ ಕೋರ್ಸ್‌ಗೆ 4 ಸಾವಿರ, ಪದವಿ ಕೋರ್ಸ್‌ಗೆ 5 ಸಾವಿರ, ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಕೋರ್ಸ್‌ಗೆ ರೂ.10 ಸಾವಿರ ಪ್ರೋತ್ಸಾಹಧನ ನೀಡಲಾಗುತ್ತದೆ. ಇದು ಒಂದು ಕುಟುಂಬದಲ್ಲಿ ಇಬ್ಬರು ವಿದ್ಯಾರ್ಥಿಗೆ ಸಿಗಲಿದೆ. ಈ ಸೌಲಭ್ಯ ಪಡೆದುಕೊಳ್ಳಲು ಮೊದಲು ಮಾಸಿಕ ಆದಾಯ ಮಿತಿ ರೂ.15 ಸಾವಿರ ಇತ್ತು. ಈಗ ಅದನ್ನು ರೂ.21 ಸಾವಿರಕ್ಕೆ ಪರಿಷ್ಕರಿಸಲಾಗಿದೆ.

**ವೈದ್ಯಕೀಯ ನೆರವು ಹೆಚ್ಚಳ:** ವೈದ್ಯಕೀಯ ನೆರವು ಯೋಜನೆಯಡಿ ಹೃದಯ ಶಸ್ತ್ರಚಿಕಿತ್ಸೆ, ಕಿಡ್ನಿ ಕಸಿ, ಕ್ಯಾನ್ಸರ್, ಆ್ಯಂಜಿಯೊಪ್ಲಾಸ್ಟಿ, ಕಣ್ಣು, ಅರ್ಥೋಪೆಡಿಕ್ ಗರ್ಭಕೋಶದ ಶಸ್ತ್ರಚಿಕಿತ್ಸೆ ಗಾಲ್‌ಬ್ಲಾಡರ್ ತೊಂದರೆ, ಮೆದುಳಿನ ರಕ್ತಸ್ರಾವ ಮತ್ತಿತರ ಗಂಭೀರ ಸ್ವರೂಪದ ಕಾಯಿಲೆಗಳ ಚಿಕಿತ್ಸೆಗೆ ಈ ಹಿಂದೆ ನೀಡಲಾಗುತ್ತಿದ್ದ ರೂ.10 ಸಾವಿರ ಸಹಾಯ ಧನವನ್ನು ರೂ.25 ಸಾವಿರಕ್ಕೆ ಹೆಚ್ಚಿಸಲಾಗಿದೆ. ರೂ.3 ಸಾವಿರ ಇದ್ದ ಅಪಘಾತ ಸಹಾಯಧನ, ರೂ.10 ಸಾವಿರಕ್ಕೆ, ರೂ.5 ಸಾವಿರ ಇದ್ದ ಅಂತ್ಯಸಂಸ್ಕಾರ ಸಹಾಯಧನ ರೂ.10 ಸಾವಿರ, ವಾರ್ಷಿಕ ವೈದ್ಯಕೀಯ ತಪಾಸಣೆ ಶಿಬಿರ ನಡೆಸುವ ಕಾರ್ಮಿಕ ಸಂಘಟನೆಗಳಿಗೆ ನೀಡಲಾಗುತ್ತಿದ್ದ ರೂ.30 ಸಾವಿರಧನ ಸಹಾಯವನ್ನು ರೂ.1 ಲಕ್ಷಕ್ಕೆ, ವಾರ್ಷಿಕ ಕ್ರೀಡಾಕೂಟಕ್ಕೆ ನೀಡಲಾಗುತ್ತಿದ್ದ ರೂ.50 ಸಾವಿರಗಳನ್ನು ರೂ.1 ಲಕ್ಷಗಳಿಗೆ ಪರಿಷ್ಕರಿಸಲಾಗಿದೆ.

| **ಯೋಜನೆ** | **ಪ್ರಸ್ತುತ ಸಹಾಯಧನ** | **ಪರಿಷ್ಕೃತ ಸಹಾಯ ಧನ** |
|---|---|---|
| ಹೆರಿಗೆ ಭತ್ಯೆ | – | ರೂ.10 ಸಾವಿರ |
| ಶೈಕ್ಷಣಿಕ ಪ್ರೋತ್ಸಾಹಧನಕ್ಕಾಗಿ ಪೋಷಕರ ಮಾಸಿಕ ವೇತನ ಮಿತಿ | ರೂ.15 ಸಾವಿರ | ರೂ.21 ಸಾವಿರ |
| ವೈದ್ಯಕೀಯ ನೆರವು | ರೂ.10 ಸಾವಿರ | ರೂ.25 ಸಾವಿರ |
| ಅಪಘಾತ ಧನ ಸಹಾಯ | ರೂ.03 ಸಾವಿರ | ರೂ.10 ಸಾವಿರ |
| ಅಂತ್ಯ ಸಂಸ್ಕಾರ ಧನ ಸಹಾಯ | ರೂ.5 ಸಾವಿರ | ರೂ.10 ಸಾವಿರ |
| ವೈದ್ಯಕೀಯ ತಪಾಸಣೆ ಶಿಬಿರ ಆಯೋಜನೆ | ರೂ.30 ಸಾವಿರ | ರೂ.1 ಲಕ್ಷ |
| ವಾರ್ಷಿಕ ಕ್ರೀಡಾಕೂಟ ಆಯೋಜನೆ | ರೂ.50 ಸಾವಿರ | ರೂ.1 ಲಕ್ಷ |

ಆಧಾರ:ಉದಯವಾಣಿ, ದಿನಾಂಕ:28.06.2021

## 68. ಬೆಂಗಳೂರನ್ನು ಮಾದರಿ ನಗರವನ್ನಾಗಿಸಲು ಶ್ರಮ

ನಾಡಪ್ರಭು ಕೆಂಪೇಗೌಡರು ನಿರ್ಮಿಸಿರುವ ಬೆಂಗಳೂರನ್ನು ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಮಾದರಿ ನಗರವನ್ನಾಗಿಸಲು ಸರ್ಕಾರ ಬದ್ಧವಾಗಿದ್ದು, ಇದಕ್ಕೆ ಪೂರಕವಾಗಿ ಅಭಿವೃದ್ಧಿ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಮುಖ್ಯಮಂತ್ರಿಯವರು ಹೇಳಿದರು.

ವಿಧಾನಸೌಧದ ಬಾಂಕ್ವೆಟ್‌ನಲ್ಲಿ ನಡೆದ ನಾಡ ಪ್ರಭು ಕೆಂಪೇಗೌಡರ 512ನೇ ಜಯಂತಿ ಕಾರ್ಯಕ್ರಮದಲ್ಲಿ ಅಂಚೆ ಚೀಟಿ ಬಿಡುಗಡೆ ಹಾಗೂ ಬೆಂಗಳೂರು ವಿಶ್ವವಿದ್ಯಾಲಯ ಆವರಣದಲ್ಲಿ ಕೇಂಪೇಗೌಡರ ಪುತ್ಥಳಿ ನಿರ್ಮಾಣಕ್ಕೆ ಚಾಲನೆ ನೀಡಿದ ಬಳಿಕ ಮಾತನಾಡಿದ ಅವರು, ಬೆಂಗಳೂರಿನಲ್ಲಿ ಮೂಲಭೂತ ಸೌಕರ್ಯ ಕಲ್ಪಿಸಲು ಸರ್ಕಾರ ನಿರಂತರವಾಗಿ ಶ್ರಮಿಸುತ್ತಿದೆ. ಬೆಂಗಳೂರನ್ನು ಮಾದರಿ ನಗರವನ್ನಾಗಿ ಮಾಡುವ ಸಂಕಲ್ಪ ತೊಡಲಾಗಿದೆ. ಇದಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಹಲವಾರು ಯೋಜನೆಗಳನ್ನು ನೀಡಿದ್ದಾರೆ. ಫೆರಿಪೆರಲ್ ರಸ್ತೆ ನಿರ್ಮಾಣ, ಉಪನಗರ ರೈಲು ಯೋಜನೆ ಸೇರಿದಂತೆ ಹಲವಾರು ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳಲು ಈಗಾಗಲೇ ಸರ್ಕಾರ ಸಕಲ ಸಿದ್ಧತೆ ಮಾಡಿಕೊಂಡಿದೆ ಎಂದು ಹೇಳಿದರು.

ಕೆಂಪೇಗೌಡರು ನಾಡಿನ ಅಭಿವೃದ್ಧಿಗೆ ನೀಡಿದ ಕೊಡುಗೆ ಅವಿಸ್ಮರಣೀಯ. ಅವರು ಐದು ಶತಮಾನಗಳ ಹಿಂದೆಯೇ ಬೆಂಗಳೂರನ್ನು ಕಟ್ಟಿ ಹಲವಾರು ಸಮಾಜಮುಖಿ ಕಾರ್ಯಗಳನ್ನು ನಡೆಸಿ ನಗರವನ್ನು ಅಭಿವೃದ್ಧಿ ಪಡಿಸಿದ್ದರು. ಅವರ ಹೆಸರು ಅಜರಾಮರವಾಗಿಸುವ ನಿಟ್ಟಿನಲ್ಲಿ ಕೆಂಪೇಗೌಡರ ಅಧ್ಯಯನ ಪೀಠಕ್ಕೆ ಚಾಲನೆ ನೀಡಲಾಗಿದೆ. ಇದರಿಂದ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ ಎಂದರು.

**ಕೆಂಪೇಗೌಡ ಅಧ್ಯಯನ ಪೀಠ ಸ್ಥಾಪಿಸಿ:** ಆದಿಚುಂಚನಗಿರಿ ಮಹಾಸಂಸ್ಥಾನದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಮಾತನಾಡಿ, ಕೊಲಂಬಸ್ ಅಮೆರಿಕಕ್ಕೆ ಹೋಗಿ ಅಲ್ಲಿನ ಮೂಲ ನಿವಾಸಿಗಳನ್ನು ಕೊಲೆ ಮಾಡುತ್ತಿದ್ದ. ಇದೇ ಸಂದರ್ಭದಲ್ಲಿ ಕೆಂಪೇಗೌಡರು ಇಲ್ಲಿ ನಾಡನ್ನು ಕಟ್ಟಿದರು. ಕೆಂಪೇಗೌಡರ ಹೆಸರನ್ನು ಕೇವಲ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಇಟ್ಟರೆ ಸಾಲದು, ಕೇಂಪೇಗೌಡರ ವಿಶ್ವವಿದ್ಯಾಲಯ ಸ್ಥಾಪಿಸುವ ಬಹುಕಾಲದ ಬೇಡಿಕೆ ಇನ್ನು ನೆನೆಗುದಿಗೆ ಬಿದ್ದಿದೆ. ಸಮಸ್ತ ಸಮುದಾಯದ ಮಠಗಳ ಆಶೀರ್ವಾದ ಮುಖ್ಯಮಂತ್ರಿಯವರು ಮತ್ತು ಉಪ ಮುಖ್ಯಮಂತ್ರಿಯವರ ಮೇಲಿದೆ ಎಂದು ಹೇಳಿದರು.

ನಾಡಪ್ರಭು ವೀರ ಸಮಾಧಿ ಇರುವ ಮಾಗಡಿ ತಾಲ್ಲೂಕಿನ ಕೆಂಪಾಪುರ ಗ್ರಾಮವನ್ನು ಒಂದು ವರ್ಷದೊಳಗೆ ಸಮಗ್ರವಾಗಿ ಅಭಿವೃದ್ಧಿಪಡಿಸಿ, ಮುಂದಿನ ವರ್ಷದ ಜಯಂತಿಯನ್ನು ಇಲ್ಲಿಯೇ ಆಚರಿಸುವುದಾಗಿ ಉಪ ಮುಖ್ಯಮಂತ್ರಿ ಡಾ: ಸಿ.ಎನ್.ಅಶ್ವತ್ಥನಾರಾಯಣ ಹೇಳಿದರು. ಕೆಂಪಾಪುರ ಗ್ರಾಮದಲ್ಲಿರುವ ನಾಡಪ್ರಭುಗಳ ಮಿತ ಸಮಾಧಿಗೆ ಪೂಜೆ ಸಲ್ಲಿಸಿದ ಬಳಿಕ ಮಾತನಾಡಿದ ಅವರು ಸಮಸ್ತ ಕನ್ನಡಿಗರ ಪಾಲಿಗೆ ಕೆಂಪಾಪುರವು ಒಂದು ಶ್ರದ್ಧಾಕೇಂದ್ರ. ಸಮಾಧಿ ಸ್ಥಳ, ಕೆಂಪಾಪುರ ಕೆರೆ ಅಭಿವೃದ್ಧಿ ಮಾಡಲಾಗುವುದು. ನಾಡಿನ ಮತ್ತು ದೇಶದ ಸಮಸ್ತ ಜನರು ಇಲ್ಲಿಗೆ ಭೇಟಿ ನೀಡುವಂತೆ ಆಗಬೇಕು. ಕೆಂಪೇಗೌಡರ ಕಾಲದ ವೈಭವವನ್ನು ಮರುಸೃಷ್ಟಿ ಮಾಡಿ ಇಡೀ ಗ್ರಾಮವನ್ನು ಐತಿಹಾಸಿಕವಾಗಿ ಅಭಿವೃದ್ಧಿ ಪಡಿಸಲಾಗುವುದು ಎಂದರು. ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕೆಂಪೇಗೌಡರ 108 ಅಡಿ ಎತ್ತರದ ಲೋಹದ ಪ್ರತಿಮೆಯನ್ನು ಮುಂಬರುವ ಫೆಬ್ರವರಿ–ಮಾರ್ಚ್‌ನಲ್ಲಿ ಲೋಕಾರ್ಪಣೆ ಮಾಡಲಾಗುವುದು. ಕೋವಿಡ್‌ನಿಂದ ವಿಳಂಬವಾಗಿದ್ದ ಕಾಮಗಾರಿ ಪುನ: ಭರದಿಂದ ಸಾಗಿದೆ. ನೋಯಿಡಾದಲ್ಲಿ ಪ್ರತಿಮೆ ಸಿದ್ಧವಾಗುತ್ತಿದೆ ಎಂದರು.

ಆಧಾರ:ವಿಶ್ವವಾಣಿ, ದಿನಾಂಕ:28.06.2021

# ಭಾಗ–4

# ರಾಜ್ಯ ನೆಲ – ಜಲ –ಭಾಷೆ

## 1. ತೌಕ್ತೆ ಚಂಡಮಾರುತ ಅಬ್ಬರಕ್ಕೆ ಕರಾವಳಿ ತತ್ತರ

ಅರಬ್ಬಿ ಸಮುದ್ರದಲ್ಲಿ ಕಾಣಿಸಿಕೊಂಡ ತೌಕ್ತೆ ಚಂಡಮಾರುತ ಪ್ರಭಾವದಿಂದಾಗಿ ರಾಜ್ಯದ 10 ಜಿಲ್ಲೆಗಳಲ್ಲಿ ಗಾಳಿಯಿಂದ ಕೂಡಿದ ಮಳೆಯಾಗುತ್ತಿದ್ದು ಕರಾವಳಿ ಜಿಲ್ಲೆಗಳಲ್ಲಿ ರೌದ್ರಾವತಾರ ತಾಳಿದೆ. ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕಡಲು ತೀರಾ ಪ್ರಕ್ಷುಬ್ಧಗೊಂಡಿದ್ದು ಕಡಲ್ಕೊರೆತದಿಂದ ಜನಜೀವನ ಅಸ್ತವ್ಯಸ್ತಗೊಂಡಿದೆ. ಸಮುದ್ರ ತೀರ ಪ್ರದೇಶಗಳಲ್ಲಿ ಇನ್ನೂರಕ್ಕೂ ಅಧಿಕ ಮನೆಗಳು ಜಲಾವೃತವಾಗಿದ್ದು ಅಪಾರ ಪ್ರಮಾಣದ ಆಸ್ತಿಪಾಸ್ತಿಗಳಿಗೆ ಹಾನಿಯುಂಟಾಗಿದೆ. ಏತನ್ಮಧ್ಯೆ ಸಮುದ್ರದ ಅಲೆಗಳಿಂದ ತನ್ನ ದೋಣಿಯನ್ನು ರಕ್ಷಿಸಲು ಯತ್ನಿಸುತ್ತಿದ್ದ ಮೀನುಗಾರನೊಬ್ಬ ದಾರುಣವಾಗಿ ಮೃತಪಟ್ಟ ಘಟನೆ ಉತ್ತರ ಕನ್ನಡ ಜಿಲ್ಲೆಯ ಭಟ್ಕಳದಿಂದ ವರದಿಯಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಬಿಡುವಿಲ್ಲದ ಪ್ರಚಂಡ ಮಳೆ ಸುರಿದಿದೆ. ಶನಿವಾರ ನಸುಕಿನ ಜಾವದಿಂದ ಎಡೆಬಿಡದೆ ಸುರಿದ ಮಳೆ ಜನಜೀವನಕ್ಕೆ ಚಂಡಿ ಹಿಡಿಸಿದೆ. ಸೋಮೇಶ್ವರ ಉಳ್ಳಾಲಗಳಲ್ಲಿ ಕಡಲ್ಕೊರೆತ ತೀವ್ರಗೊಂಡಿದ್ದು ಸಮುದ್ರ ನೀರು ನುಗ್ಗಿದ್ದು ಆಸ್ತಿಪಾಸ್ತಿಗೆ ಹಾನಿಯುಂಟಾಗಿದೆ. ಅವಿರತ ಮಳೆಗೆ ಮಂಗಳೂರು ಪೇಟೆ ಅಕ್ಷರಶಃ ತೊಯ್ದಂತೆ ಆಗಿದ್ದು ತಗ್ಗು ಪ್ರದೇಶಗಳಿಗೆ ನೀರು ನುಗ್ಗಿ ಕೃತಕ ಪ್ರವಾಹ ಉಂಟು ಮಾಡಿದೆ. ಸುರತ್ಕಲ್‌ನಲ್ಲೂ ಜನವಸತಿಗೆ ನೀರು ನುಗ್ಗಿದೆ.

ಉಡುಪಿ ಜಿಲ್ಲೆಯಲ್ಲಿಯೂ ನಿರಂತರ ಗಾಳಿಯಿಂದ ಕೂಡಿದ ಮಳೆಯಾಗಿದ್ದು, ತೀರದಲ್ಲಿ ವಾಸಿಸುವ ಸಾವಿರಾರು ಕುಟುಂಬಗಳು ತೀವ್ರ ಭಯಾತಂಕಕ್ಕೊಳಗಾಗಿವೆ. ಬೈಂದೂರು ತಾಲ್ಲೂಕಿನ ಮರವಂತೆ, ಉಪ್ಪುಂದ, ಉಡುಪಿ ತಾಲ್ಲೂಕಿನ ಮಲ್ಪೆ ಕೋಡಿಬೇಂಗ್ರೆ, ಹೂಡೆ, ಪಡುಕರೆ, ಕಾಪು ತಾಲ್ಲೂಕಿನ ಲೈಟ್‌ಹೌಸ್ ಬೀಚ್, ಪಡುಬಿದ್ರಿ ಬೀಚ್‌ಗಳಲ್ಲಿ ಸಮುದ್ರವು ನೂರಾರು ಅಡಿ ಮುಂದಕ್ಕೆ ಬಂದಿದೆ. ಈಗಾಗಲೇ ನೂರಕ್ಕೂ ಹೆಚ್ಚು ತೆಂಗಿನ ಮರಗಳನ್ನು ಕೊಚ್ಚಿಕೊಂಡು ಹೋಗಿರುವ ಸಮುದ್ರ ಮರವಂತೆಯಲ್ಲಿ ಎರಡು ಮೀನುಗಾರಿಕಾ ಶೆಡ್‌ಗಳನ್ನು ಉರುಳಿಸಿದೆ. ನೂರಾರು ಮನೆಗಳ ಅಂಗಳಕ್ಕೆ ನೀರು ತಲುಪಿದ್ದು ಅಪಾಯದ ಅಂಚಿಗೆ ಸಿಲುಕಿವೆ. ಪಡುಕರೆ ಕಿನಾರೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಸುಮಾರು 50 ರಷ್ಟು ಮನೆಗಳ ನಿವಾಸಿಗಳನ್ನು ಕಾಳಜಿ ಕೇಂದ್ರಕ್ಕೆ ಸ್ಥಳಾಂತರಿಸಲಾಗಿದೆ. ಭಟ್ಕಳದ ಮಾವಿನಕುರ್ವೆ, ತಲಗೋಡ, ಮುರ್ಡೇಶ್ವವರ ಮತ್ತಿತರ ಕಡೆಗಳಲ್ಲಿ ಕಡಲಕೊರೆತ ತೀವ್ರವಾಗಿದೆ. ಹೊನ್ನಾವರದ ಬಡಗಣಿ ಹೊಳೆಯಲ್ಲಿ ಪ್ರವಾಹ ಪರಿಸ್ಥಿತಿ ಉಂಟಾಗಿದೆ.

ಕೊಡಗು ಜಿಲ್ಲೆಯ ಬಹುಭಾಗದಲ್ಲಿ ಮಳೆ ಅಬ್ಬರಿಸುತ್ತಿದ್ದು ಕಾವೇರಿ, ಲಕ್ಷ್ಮಣ ತೀರ್ಥ ನದಿಗಳು ಸೇರಿ ಹೊಳೆ, ವಿವಿಧ ಜಲ ಮೂಲಗಳು ತುಂಬಿ ಹರಿಯುತ್ತಿದೆ. ಇನ್ನುಳಿದಂತೆ ಹಾಸನ, ಚಿಕ್ಕಮಗಳೂರು, ಶಿವಮೊಗ್ಗ, ಮೈಸೂರುಗಳಲ್ಲೂ ನಿರಂತರವಾಗಿ ಶೀತಗಾಳಿಯಿಂದ ಕೂಡಿದ ಮಳೆ ಸುರಿದಿದೆ. ಗದಗ ಜಿಲ್ಲೆಯಲ್ಲಿ ಧಾರಾಕಾರ ಮಳೆಯಾಗಿದ್ದರೆ, ಹಾವೇರಿ ಜಿಲ್ಲೆಯ ಕೆಲಭಾಗಗಳಲ್ಲಿ ಸಾಧಾರಣ ಮಳೆಯಾಗಿದ್ದು ತಂಪಿನ ವಾತಾವರಣ ಸೃಷ್ಟಿಯಾಗಿದೆ.

ಆಧಾರ:ಕನ್ನಡಪ್ರಭ,ದಿನಾಂಕ:16.05.2021

## 2. ರಾಜ್ಯದಲ್ಲಿ ಮುಂಗಾರು ಅಬ್ಬರ, ನಷ್ಟ ಅಪಾರ

ಕರಾವಳಿ ಮಲೆನಾಡು ಸೇರಿದಂತೆ ರಾಜ್ಯದ ಹಲವೆಡೆ ಮುಂಗಾರು ಅಬ್ಬರ ಜೋರಾಗಿದೆ. ಸತತವಾಗಿ ಸುರಿಯುತ್ತಿರುವ ಮಳೆಗೆ ಹೊಳೆಗಳು ತುಂಬಿ ಹರಿಯುತ್ತಿದ್ದು, ತಗ್ಗು ಪ್ರದೇಶಗಳು ಜಲಾವೃತಗೊಂಡಿವೆ. ಉಡುಪಿ ಜಿಲ್ಲೆಯ ಶಿರೂರಿನಲ್ಲಿ ವ್ಯಕ್ತಿಯೊಬ್ಬರು ಹೊಳೆಗೆ ಬಿದ್ದು ಮೃತಪಟ್ಟಿದ್ದು, ಹಲವೆಡೆ ಮರಗಳು ಉರುಳಿ ಬಿದ್ದು ಹಾನಿಯಾಗಿವೆ. ಉತ್ತರ ಕನ್ನಡ, ಚಿಕ್ಕಮಗಳೂರು ಜಿಲ್ಲೆಯಲ್ಲಿ

ನಿರಂತರ ಮಳೆಯು ಮುಂದುವರೆದಿದ್ದು, ಜಲಾಶಯಗಳಲ್ಲಿ ಹೆಚ್ಚಿನ ಪ್ರಮಾಣದ ನೀರು ಸಂಗ್ರಹವಾಗುತ್ತಿದೆ.

ಮಳೆಯ ಅಬ್ಬರಕ್ಕೆ ಮಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ತೆರಳುವ ಮಂಗಳೂರು–ಅತ್ರಾಡಿ ರಾಜ್ಯ ಹೆದ್ದಾರಿಯ ಮರವೂರು ಸೇತುವೆ ಕುಸಿದಿದೆ. ಇದರಿಂದ ಅಲ್ಲಿ ಸಂಚಾರ ಸಂಪೂರ್ಣ ನಿರ್ಬಂಧಿಸಲಾಗಿದೆ.

ರಾಜ್ಯ ಹೆದ್ದಾರಿ 67ರ ಮಂಗಳೂರು–ಬಜಪೆ–ಕಟೀಲ–ಕಿನ್ನಿಗೋಳಿ ಸಂಪರ್ಕ ರಸ್ತೆ ಇದಾಗಿದ್ದು, ಪಲ್ಗುಣಿ ನದಿಗೆ ಅಡ್ಡವಾಗಿ 60 ವರ್ಷದ ಹಿಂದೆ ಸೇತುವೆ ನಿರ್ಮಿಸಲಾಗಿತ್ತು. ಮಂಗಳೂರು ಕಡೆ ಬರುವಾಗ ಸೇತುವೆಯ ಮೊದಲ ಮೂರು ಅಂಕಣ ಸುಮಾರು ಎರಡು ಅಡಿ ಕೆಳಗೆ ಕುಸಿದಿದೆ.

ಮರವೂರು ನೂತನ ಸೇತುವೆ ನಿರ್ಮಾಣ ಕಾಮಗಾರಿ ನಡೆಯುತ್ತಿದ್ದು, ಇದರಿಂದ ಸುಮಾರು 500 ಮೀ. ಉದ್ದಕ್ಕೆ ಮಣ್ಣು ಅಡ್ಡ ಹಾಕಲಾಗಿದೆ. ಇದರಿಂದ ನೆರೆ ನೀರು ಶೇಖರಣೆಯಾಗಿ ಸೇತುವೆಯ ಉತ್ತರ ದಿಕ್ಕಿನ ಒಂದೇ ಮಗ್ಗುಲಲ್ಲಿ ಹರಿದು ಹೋಗುತ್ತಿದೆ. ಅವೈಜ್ಞಾನಿಕ ಕಾಮಗಾರಿಯಿಂದ ನೆರೆ ನೀರಿನ ಒತ್ತಡಕ್ಕೆ ಸೇತುವೆ ಕುಸಿದಿರಬಹುದು ಎಂಬ ಆರೋಪಗಳು ಕೇಳಿಬರುತ್ತಿವೆ.

**ಪರ್ಯಾಯ ರಸ್ತೆಗಳು:** ಮಂಗಳೂರು ವಿಮಾನ ನಿಲ್ದಾಣ ಮಾತ್ರವಲ್ಲದೆ ಬಜಪೆ, ಕಟೀಲ, ಕಿನ್ನಿಗೋಳಿ, ನೆಲ್ಲಿತೀರ್ಥ ಅದ್ಯಪಾಡಿಗೆ ಮರವೂರು ಸೇತುವೆ ಮೂಲಕವೇ ಹೋಗಬೇಕು. ಸೇತುವೆ ಕುಸಿದ ಪರಿಣಾಮ ಈ ವ್ಯಾಪ್ತಿಯ ಜನರು ಇನ್ನೂ ಕೆಲವು ಸಮಯದವರೆಗೆ ಪರ್ಯಾಯ ರಸ್ತೆ ಅವಲಂಬಿಸಬೇಕಾಗಿದೆ.

ಉಡುಪಿ ಜಿಲ್ಲೆಯಲ್ಲಿ ಮುಂಗಾರು ಮತ್ತಷ್ಟು ಚುರುಕುಗೊಂಡಿದ್ದು, ನಿರಂತರವಾಗಿ ಮಳೆ ಸುರಿದಿದೆ. ಜೊತೆಗೆ ಜಿಲ್ಲೆಯಲ್ಲಿ ಒಂದು ಸಾವು ಕೂಡ ಸಂಭವಿಸಿದೆ. ಇದಲ್ಲದೆ ಹಲವೆಡೆ ಮನೆಗಳ ಮೇಲೆ ಮರ ಬಿದ್ದು ಅಪಾರ ಪ್ರಮಾಣದ ಹಾನಿ ಉಂಟಾಗಿದೆ.

ಆಧಾರ:ವಿಜಯ ಕರ್ನಾಟಕ, ದಿನಾಂಕ:16.06.2021

## 3. ಲೋಕಸಭೆ ತರಬೇತಿಗೆ ಕೊನೆಗೂ ಕನ್ನಡ ಸೇರ್ಪಡೆ

ಲೋಕಸಭೆ ಸಚಿವಾಲಯದ ಭಾಷೆಗಳ ಕಲಿಕಾ ತರಬೇತಿಯಲ್ಲಿ ಕನ್ನಡವನ್ನು ಕಡೆಗಣಿಸಿರುವ ಬಗ್ಗೆ ತೀವ್ರ ಆಕ್ರೋಶ ವ್ಯಕ್ತವಾದ ಬೆನ್ನಲ್ಲೇ ಕನ್ನಡ ಭಾಷೆಯನ್ನು ಸೇರ್ಪಡಿಸಿ ಆದೇಶಿಸಲಾಗಿದೆ.

ಜನಪ್ರತಿನಿಧಿಗಳು, ಅಧಿಕಾರಿಗಳಿಗೆ ದೇಶಿಯ ಮತ್ತು ವಿದೇಶಿ ಭಾಷೆಗಳನ್ನು ಕಲಿಸಲು ಜೂನ್ 22ರಂದು ದೆಹಲಿಯಲ್ಲಿ ಹಮ್ಮಿಕೊಂಡಿರುವ ಪ್ರೈಡ್ ಕಲಿಕಾ ಕಾರ್ಯಾಗಾರದಲ್ಲಿ ಕನ್ನಡಕ್ಕೆ ಆದ್ಯತೆ ನೀಡಿರಲಿಲ್ಲ.

ತೆಲುಗು, ಬಂಗಾಳಿ, ಮರಾಠಿ, ತಮಿಳು ಸೇರಿದಂತೆ ಬಹುತೇಕ ಭಾಷೆಗಳನ್ನು ಸೇರ್ಪಡೆ ಮಾಡಿ ಕನ್ನಡವನ್ನು ನಿರ್ಲಕ್ಷಿಸಿದ್ದ ಲೋಕಸಭಾ ಸಚಿವಾಲಯದ ಪಾರ್ಲಿಮೆಂಟರಿ ರಿಸರ್ಚ್ ಆ್ಯಂಡ್ ಟ್ರೈನಿಂಗ್ ಇನ್ಸ್‌ಸ್ಟಿಟ್ಯೂಟ್ ಫಾರ್ ಡೆಮಾಕ್ರಸಿ (ಪ್ರೈಡ್) ಸಂಸ್ಥೆಯ ಕ್ರಮಕ್ಕೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ರಾಜ್ಯಸಭಾ ಸದಸ್ಯ ಜೆ.ಸಿ.ಚಂದ್ರಶೇಖರ್ ಸೇರಿದಂತೆ ಹಲವರು ಆಕ್ರೋಶ ವ್ಯಕ್ತಪಡಿಸಿದ್ದರು. ಚಂದ್ರಶೇಖರ್ ಅವರು ಉಪ ರಾಷ್ಟ್ರಪತಿಗಳಿಗೆ ಈ ಬಗ್ಗೆ ಪತ್ರವನ್ನೂ ಬರೆದಿದ್ದರು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್.ನಾಗಾಭರಣ ಸಂಸದರೊಂದಿಗೆ ಹೋರಾಟ ನಡೆಸುವುದಾಗಿ ಎಚ್ಚರಿಸಿದ್ದರು. ಇದರ ಬೆನ್ನಲ್ಲೇ ಕನ್ನಡ ಭಾಷೆಯನ್ನು ಸೇರ್ಪಡೆ ಮಾಡಿ ಸಚಿವಾಲಯವು ಆದೇಶ ಹೊರಡಿಸಿದೆ. ಇದಕ್ಕೂ ಮೊದಲು ಟ್ವೀಟರ್ ಮೂಲಕ ಆಕ್ರೋಶ ವ್ಯಕ್ತಪಡಿಸಿದ್ದ ಹೆಚ್.ಡಿ.ಕುಮಾರಸ್ವಾಮಿ, ಕನ್ನಡಾಭಿಮಾನವಿಲ್ಲದ 25 ಮಂದಿಯನ್ನು ಲೋಕಸಭೆಗೆ ಆರಿಸಿ ಕಳುಹಿಸಿದ್ದರ ಫಲವಿದು. 22 ರಿಂದ ಭಾಷೆಗಳ ಕಲಿಕಾ ತರಬೇತಿ ಆನ್‌ಲೈನ್‌ನಲ್ಲಿ ಆರಂಭವಾಗುತ್ತಿದೆ. ಇದರಲ್ಲಿ ಕನ್ನಡವನ್ನು ಸೇರಿಸಬೇಕು. ಇಲ್ಲವೇ ನಾವೆಲ್ಲರೂ ಇದನ್ನು ಧಿಕ್ಕರಿಸಬೇಕು. ಅತ್ತು ಕರೆದು ಔತಣ ಪಡೆಯುವುದು ನಿಲ್ಲಬೇಕು. ಕನ್ನಡ ಮರೆತರೆ ಕಷ್ಟ ಎಂಬ ಸಂದೇಶ ರವಾನಿಸಬೇಕು ಎಂದಿದ್ದರು.

ಆಧಾರ:ಕನ್ನಡಪ್ರಭ, ದಿನಾಂಕ:16.06.2021

## 4. ಉತ್ತರ ಕರ್ನಾಟಕದ ನದಿಗಳು ಭರ್ತಿ; 4 ದೇಗುಲ ಮುಳುಗಡೆ

ಕಳೆದ 3–4 ದಿನಗಳಿಂದ ಮಹಾರಾಷ್ಟ್ರದ ಪಶ್ಚಿಮ ಘಟ್ಟದಲ್ಲಿ ನಿರಂತರ ಮಳೆ ಸುರಿಯುತ್ತಿರುವುದರಿಂದ ಬೆಳಗಾವಿ ಜಿಲ್ಲೆಯಲ್ಲಿ ಕೃಷ್ಣಾ, ಮಲಪ್ರಭಾ, ಘಟಪ್ರಭಾ ನದಿಗಳು ತುಂಬಿ ಹರಿಯುತ್ತಿವೆ. ಇದರಿಂದಾಗಿ ಉತ್ತರ ಕರ್ನಾಟಕದ 4 ದೇಗುಲಗಳು ಮುಳುಗಡೆಯಾಗಿವೆ. ಕರ್ನಾಟಕ–ಮಹಾರಾಷ್ಟ್ರದ ಲಕ್ಷಾಂತರ ಜನರ ಆರಾಧ್ಯ ದೈವವಾಗಿರುವ, ಬೆಳಗಾವಿ ಜಿಲ್ಲೆ ಚಿಕ್ಕೋಡಿ ಬಳಿಯ ಶ್ರೀಕ್ಷೇತ್ರ ನರಸಿಂಹವಾಡಿಯ ದತ್ತ ದೇವಸ್ಥಾನಕ್ಕೆ ಕೃಷ್ಣಾ ನದಿ ನೀರು ನುಗ್ಗಿದೆ. ಖಾನಾಪುರ ತಾಲ್ಲೂಕಿನ ಹಣಬರಹಟ್ಟಿ ಗ್ರಾಮದ ಆಂಜನೇಯ ದೇವಸ್ಥಾನ ಹಾಗೂ ಚಿಕ್ಕೋಡಿ ತಾಲ್ಲೂಕಿನ ಕಾರದಗಾ ಗ್ರಾಮದ ಬಂಗಾಲಿ ಬಾಬಾ ದರ್ಗಾ ಹುನ್ನರಗಿಯ ಲಕ್ಷ್ಮೀನರಸಿಂಹ ದೇವಸ್ಥಾನಗಳು ಕೂಡ ಜಲಾವೃತವಾಗಿವೆ. ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲ್ಲೂಕಿನ ಮಾಚಕನೂರ ಘಟಪ್ರಭಾ ನದಿ ದಡದಲ್ಲಿ ಇರುವ ಹೊಳೆಬಸವೇಶ್ವರ ದೇವಾಲಯ ಕೂಡ ಮುಳುಗಡೆಯಾಗಿದೆ.

ಆಧಾರ:ಕನ್ನಡ ಪ್ರಭ, ದಿನಾಂಕ:19.06.2021

## 5. ಎನ್‌ಜಿಟಿ ಸಂಕಟ ದಾಟಿದ ಮೇಕೆದಾಟು

ಮೇಕೆದಾಟು ಯೋಜನೆ ಜಾರಿಗೆ ಸಂಬಂಧಿಸಿ ಚೆನ್ನೈನ ರಾಷ್ಟ್ರೀಯ ಹಸಿರು ಪೀಠ ದಾಖಲಿಸಿಕೊಂಡಿದ್ದ ಸ್ವಯಂ ಪ್ರೇರಿತ ದೂರಿನ ವಿಚಾರಣೆ ಮುಗಿದಿದ್ದು ರಾಜ್ಯದ ಪರವಾಗಿ ತೀರ್ಪು ಬಂದಿದೆ.

ಮೇಕೆದಾಟು ಪ್ರಕರಣ ಸಂಬಂಧ ವಿಚಾರಣೆ ಸುಪ್ರೀಂಕೋರ್ಟ್‌ನಲ್ಲಿ ನಡೆಯುತ್ತಿದೆ. ಈ ನಡುವೆ ಕೆಲ ಮಾಧ್ಯಮಗಳ ವರದಿ ಆಧರಿಸಿ ಎನ್‌ಜಿಟಿ ಸ್ವಯಂ ಪ್ರೇರಿತ ದೂರು ದಾಖಲು ಮಾಡಿಕೊಂಡಿತ್ತು. ಇದನ್ನು ಪ್ರಶ್ನಿಸಿ ದೆಹಲಿ ಎನ್‌ಜಿಟಿ ಪೀಠದ ಮುಂದೆ ನಡೆದ ವಿಚಾರಣೆಯಲ್ಲಿ ಕರ್ನಾಟಕ ಸರ್ಕಾರ ಪ್ರಬಲ ವಾದ ಮಂಡಿಸಿ ಯೋಜನೆಯಿಂದ ಯಾವುದೇ ರೀತಿಯಲ್ಲಿ ಪರಿಸರಕ್ಕೆ ಹಾನಿಯಾಗುವುದಿಲ್ಲ ಎಂಬುದನ್ನು ಖಾತ್ರಿ ಮಾಡಿತ್ತು.

ರಾಜ್ಯ ಸರ್ಕಾರದ ಈ ಉತ್ತರವನ್ನು ಒಪ್ಪಿದ ಎನ್‌ಜಿಟಿ ಪ್ರಕರಣವನ್ನು ಮುಕ್ತಾಯಗೊಳಿಸಿದ್ದು, ಬಹುತೇಕ ಎನ್‌ಜಿಟಿ ಒಪ್ಪಿಗೆ ಸಿಕ್ಕಿದಂತಾಗಿದೆ.

**ಏನಿದು ವಿವಾದ:–** ಬೆಂಗಳೂರು ಸೇರಿದಂತೆ ಸುತ್ತಲಿನ ಜಿಲ್ಲೆಗಳಿಗೆ ಕುಡಿಯುವ ನೀರೊದಗಿಸುವ ಉದ್ದೇಶದಿಂದ ರಾಜ್ಯ ಸರ್ಕಾರ ಕನಕಪುರ ತಾಲ್ಲೂಕಿನ ಮೇಕೆದಾಟು ಬಳಿ ಅಣೆಕಟ್ಟು ನಿರ್ಮಾಣ ಮಾಡುವ ಯೋಜನೆ ರೂಪಿಸಿದೆ. ಇದನ್ನು ಪ್ರಶ್ನಿಸಿ ತಮಿಳುನಾಡು ಸರ್ಕಾರ ಸುಪ್ರೀಂಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದೆ. ಕರ್ನಾಟಕ ಸರ್ಕಾರ ಅಣೆಕಟ್ಟು ನಿರ್ಮಾಣ ಮಾಡುವ ಮೂಲಕ ತಮಿಳುನಾಡಿಗೆ ಸಿಗಬೇಕಿರುವ ನೀರನ್ನು ತಡೆಹಿಡಿಯುವ ಉದ್ದೇಶ ಹೊಂದಿದೆ. ಇದರಿಂದ ತಮಿಳುನಾಡು ರೈತರ ಜೀವನ ಹಾಳಾಗಲಿದೆ ಎಂದು ವಾದವನ್ನು ಮಂಡಿಸಿದೆ. ರಾಜ್ಯ ಸರ್ಕಾರ ಕುಡಿಯುವ ನೀರಿಗಾಗಿ ಮಾತ್ರ ಈ ಯೋಜನೆ ಜಾರಿಗೊಳಿಸುತ್ತಿದ್ದು, ಪರಿಸರಕ್ಕೆ ಯಾವುದೇ ಹಾನಿಯಾಗದಂತೆ ಯೋಜನೆ ಕಾರ್ಯರೂಪಕ್ಕೆ ಬರಲಿದೆ ಎಂಬ ವಾದವನ್ನು ಮಂಡಿಸಿದೆ.

ಆಧಾರ:ವಿಶ್ವವಾಣಿ, ದಿನಾಂಕ:19.06.2021

## 6. ಮೇಕೆದಾಟು: ಕರ್ನಾಟಕಕ್ಕಿದ್ದ ಅಡ್ಡಿ ನಿವಾರಣೆ

ಮೇಕೆದಾಟುವಿನಲ್ಲಿ ಕಾವೇರಿ ನದಿಗೆ ಅಣೆಕಟ್ಟು ಕಟ್ಟುವ ಕರ್ನಾಟಕ ಸರ್ಕಾರದ ಯೋಜನೆಯಲ್ಲಿ ಪರಿಸರ ನಿಯಮಗಳ ಉಲ್ಲಂಘನೆಯಾಗಿದೆ ಎಂಬ ಪತ್ರಿಕಾ ವರದಿ ಆಧರಿಸಿ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣದ (ಎನ್‌ಜಿಟಿ) ಚೆನ್ನೈ ಪೀಠ ಸ್ವಯಂ ದಾಖಲಿಸಿಕೊಂಡಿದ್ದ ಸ್ವಯಂಪ್ರೇರಿತ ಪ್ರಕರಣಕ್ಕೆ ಎನ್‌ಜಿಟಿ ಪ್ರಧಾನ ಪೀಠ ಮಂಗಳ ಹಾಡಿದೆ. ಇದರೊಂದಿಗೆ ಯೋಜನೆ ವಿಚಾರದಲ್ಲಿ ಕರ್ನಾಟಕದಲ್ಲಿ ಎದುರಾಗಿದ್ದ ಅಡ್ಡಿ ನಿವಾರಣೆಯಾಗಿದೆ.

ಮೇಕೆದಾಟು ಯೋಜನೆಯಲ್ಲಿ ಪರಿಸರ ನಿಯಮ ಉಲ್ಲಂಘನೆಯಾಗಿದೆ ಎಂಬ ಪತ್ರಿಕಾ ವರದಿಯನ್ನು ಗಂಭೀರವಾಗಿ ಪರಿಗಣಿಸಿದ್ದ ಚೆನ್ನೈ ಪೀಠ ಮೇ ತಿಂಗಳಲ್ಲಿ ಈ ಬಗ್ಗೆ ಸ್ವಯಂ ಪ್ರಕರಣ ದಾಖಲಿಸಿಕೊಂಡಿತ್ತು. ಸ್ಥಳ ಪರಿಶೀಲನೆ ಮಾಡಿ ಜುಲೈ 5ರೊಳಗೆ ವರದಿ ಸಲ್ಲಿಸಲು ಸಮಿತಿಯೊಂದನ್ನು ರಚಿಸಿತ್ತು. ಆದರೆ ಈ ಬಗ್ಗೆ ಕರ್ನಾಟಕ ಸರ್ಕಾರ ಆಕ್ಷೇಪ ವ್ಯಕ್ತಪಡಿಸಿ, ಪ್ರಧಾನ ಪೀಠದಲ್ಲಿ ಪ್ರಶ್ನಿಸಿತ್ತು.

ಪ್ರಧಾನ ಪೀಠದಲ್ಲಿ ನಡೆದ ಅರ್ಜಿ ವಿಚಾರಣೆ ವೇಳೆ ವಾದ ಮಂಡಿಸಿದ ಕರ್ನಾಟಕದ ಪರ ಅಡ್ವೋಕೇಟ್ ಜನರಲ್ ಪ್ರಭುಲಿಂಗ್ ನಾವಡಗಿ, ಮೇಕೆದಾಟು ಯೋಜನೆಗೆ ಕೇಂದ್ರ ಸರ್ಕಾರ ತಾತ್ವಿಕ ಒಪ್ಪಿಗೆಯನ್ನಷ್ಟೇ ನೀಡಿದೆ. ಆದರೆ ಪರಿಸರ ಅನುಮೋದನೆ ಇನ್ನೂ ಬಾಕಿ ಇದೆ. ಮತ್ತೊಂದೆಡೆ ಯೋಜನೆ ವಿರುದ್ಧ ತಮಿಳುನಾಡು ಸರ್ಕಾರ ಈಗಾಗಲೇ ಸುಪ್ರೀಂಕೋರ್ಟ್ ಮೆಟ್ಟಿಲೇರಿದ್ದು, ಅಲ್ಲಿ ಅದು ವಿಚಾರಣೆ ಹಂತದಲ್ಲಿದೆ. ಜೊತೆಗೆ ಪರಿಸರ ಉಲ್ಲಂಘನೆಯಾಗಿದೆ ಎಂದು ಆಂಗ್ಲಪತ್ರಿಕೆ ಮಾಡಿದ ವರದಿ ಏಕಪಕ್ಷೀಯವಾಗಿದೆ. ಯಾವ ನಿಯಮ ಉಲ್ಲಂಘನೆಯಾಗಿದೆ ಎಂಬ ಮಾಹಿತಿ ವರದಿಯಲ್ಲಿಲ್ಲ. ಜೊತೆಗೆ ವರದಿ ಅಸ್ಪಷ್ಟವಾಗಿದೆ. ಈಗಾಗಲೇ ವಿಚಾರಣೆ ನಡೆಯುತ್ತಿರುವ ಪ್ರಕರಣದ ಬಗ್ಗೆ ಮತ್ತೊಂದು ವಿಚಾರಣೆ ಅಗತ್ಯವಿಲ್ಲ ಎಂದು ವಾದಿಸಿದರು. ಈ ವಾದ ಮನ್ನಿಸಿದ ಪೀಠ, ಪ್ರಕರಣವನ್ನು ಮುಕ್ತಾಯಗೊಳಿಸಿದೆ.

**ಕೇಂದ್ರ ಅನುಮತಿ ಪಡೆದು ಮೇಕೆದಾಟು ಜಾರಿ:**

ಮೇಕೆದಾಟು ಯೋಜನೆಯನ್ನು ಕೇಂದ್ರದ ಅನುಮತಿ ಪಡೆದು ಯೋಜನೆ ಶೀಘ್ರವಾಗಿ ಪ್ರಾರಂಭ ಮಾಡುತ್ತೇವೆ ಎಂದು ಮುಖ್ಯಮಂತ್ರಿಯವರು ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೇಕೆದಾಟು ಯೋಜನೆ ಮಹತ್ವದ್ದು ಬೆಂಗಳೂರಿಗೆ ಕುಡಿಯುವ ನೀರು ಸಿಗಲಿದೆ. ತಮಿಳುನಾಡು ಈ ಯೋಜನೆಗೆ ವಿರೋಧ ಮಾಡಿತ್ತು. ಎನ್‌ಜಿಟಿ ಇದೀಗ ಹಸಿರು ನಿಶಾನೆ ನೀಡಿದೆ ಎಂದರು.

ಕಾನೂನು ಸಚಿವ ಬಸವರಾಜ ಬೊಮ್ಮಾಯಿ ಮಾತನಾಡಿ, ರಾಜ್ಯದ ಯಾವುದೇ ರೀತಿಯ ನೆಲ–ಜಲ ಹಾಗೂ ಅಂತರರಾಜ್ಯ ನೆಲ–ಜಲದ ವಿಷಯ ಬಂದಾಗ ರಾಜ್ಯ ಸರ್ಕಾರವು ಅದನ್ನು ಗಂಭೀರವಾಗಿ ತೆಗೆದುಕೊಂಡು ರಾಜ್ಯದ ಹಿತಾಸಕ್ತಿಯನ್ನು ಕಾಪಾಡಿಕೊಂಡು ಬಂದಿದೆ. ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ ಮೇಕೆದಾಟು ಯೋಜನೆಗೆ ಸಂಬಂಧಪಟ್ಟಂತೆ ಸುಮೋಟೋ ಪ್ರಕರಣ ದಾಖಲಿಸಿಕೊಂಡಾಗ ಇದರ ಬಗ್ಗೆ ನಮ್ಮ ಕಾನೂನು ಇಲಾಖೆ, ಅಡ್ವೋಕೇಟ್ ಜನರಲ್ ಹಾಗೂ ಕಾನೂನು ತಜ್ಞರ ತಂಡ ಕೂಲಂಕಷವಾಗಿ ಚರ್ಚೆ ಮಾಡಿತ್ತು ಎಂದು ತಿಳಿಸಿದರು.

ಎನ್‌ಜಿಟಿ ಮುಂದೆ ಹೋಗಿ ಮೇಕೆದಾಟು ಯೋಜನೆಯಲ್ಲಿ ಕಾನೂನು ಉಲ್ಲಂಘನೆ ಮಾಡಿಲ್ಲ. ಹಾಗೂ ಪರಿಸರಕ್ಕೆ ಹಾನಿ ಮಾಡಿಲ್ಲ ಎಂದು ಮನವರಿಕೆ ಮಾಡಲಾಯಿತು. ಅದರಂತೆ ನ್ಯಾಯಾಧೀಕರಣ ಅದೇಶವು ರಾಜ್ಯದ ಪರವಾಗಿ ಬಂದಿದೆ. ಈ ವಿಷಯದ ಬಗ್ಗೆ ಮುಖ್ಯ ಪ್ರಕರಣ ಸುಪ್ರೀಂಕೋರ್ಟ್‌ನಲ್ಲಿದೆ. ಅಲ್ಲಿಯೂ ರಾಜ್ಯದ ಹಿತಾಸಕ್ತಿ ಕಾಪಾಡಲು ಕ್ರಮ ಕೈಗೊಳ್ಳಲಾಗುವುದು ಎಂದರು.

**ಬಿಎಸ್‌ವೈ ಹೇಳಿಕೆಗೆ ಸ್ಟಾಲಿನ್ ಆಕ್ರೋಶ**: ಕೇಂದ್ರ ಅನುಮತಿ ಪಡೆದು ಮೇಕೆದಾಟು ಯೋಜನೆ ಶೀಘ್ರ ಆರಂಭಿಸಲಾಗುತ್ತದೆ ಎಂಬ ಕರ್ನಾಟಕದ ಮುಖ್ಯಮಂತ್ರಿ ಯಡಿಯೂರಪ್ಪ ಹೇಳಿಕೆಗೆ ತಮಿಳುನಾಡಿನ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಮೇಕೆದಾಟು ವಿಷಯ ಸುಪ್ರೀಂಕೋರ್ಟ್‌ನಲ್ಲಿದೆ. ಈ ವೇಳೆ ಬಿಎಸ್‌ವೈ ನೀಡಿದ ಹೇಳಿಕೆ ಏಕಪಕ್ಷೀಯ. ಕರ್ನಾಟಕದ ತೀರ್ಮಾನ ತಮಿಳುನಾಡು ರೈತರ ಹಿತಾಸಕ್ತಿಗೆ ವಿರುದ್ಧವಾದದ್ದು, ಕೂಡಲೇ ಯೋಜನೆಯನ್ನು ಕರ್ನಾಟಕ ಕೈಬಿಡಬೇಕು ಎಂದು ಸ್ಟಾಲಿನ್ ಹೇಳಿದ್ದಾರೆ.

ಆಧಾರ:ಕನ್ನಡಪ್ರಭ, ದಿನಾಂಕ:19.06.2021

## 7. ವಿಶ್ವ ಯೋಗ ದಿನಕ್ಕೆ ರಾಜ್ಯದಿಂದ ಹಂಪಿ ಆಯ್ಕೆ

ವಿಶ್ವ ಯೋಗ ದಿನಾಚರಣೆ ನಿಮಿತ್ತ ಕೇಂದ್ರ ಸಂಸ್ಕೃತಿ ಸಚಿವಾಲಯವು ದೇಶದ 75 ಪಾರಂಪರಿಕ ಸ್ಥಳಗಳಲ್ಲಿ ಬೆಳಿಗ್ಗೆ ಏಕಕಾಲಕ್ಕೆ ಕಾರ್ಯಕ್ರಮ ಆಯೋಜಿಸಿದ್ದು ರಾಜ್ಯದಿಂದ ಹಂಪಿ ಆಯ್ಕೆಯಾಗಿದೆ.

75 ಸ್ಥಳಗಳ ಪೈಕಿ, 35 ಸ್ಥಳಗಳಲ್ಲಿ ನಡೆಯುವ ಕಾರ್ಯಕ್ರಮದ ನೇರಪ್ರಸಾರ ದೂರದರ್ಶನ ವಾಹಿನಿಯಲ್ಲಿ ಆಗಲಿದೆ. ಅದರಲ್ಲಿ ಸಂಸ್ಕೃತಿ ಸಚಿವಾಲಯ ಹಾಗೂ ದೂರದರ್ಶನದ ಸಿಬ್ಬಂದಿ ಹಂಪಿಯಲ್ಲಿ ಬೀಡು ಬಿಟ್ಟಿದ್ದು ಅಗತ್ಯ ಸಿದ್ಧತೆ ಮಾಡಿಕೊಂಡಿದ್ದಾರೆ. 20 ಜನ ಅಂತರ ಕಾಯ್ದುಕೊಂಡು ಯೋಗಾಸನ ಮಾಡುವರು, ಪ್ರಧಾನಿ ನರೇಂದ್ರ ಮೋದಿಯವರು ಕಾರ್ಯಕ್ರಮ ವೀಕ್ಷಿಸುವರು ಎಂದು ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯ ಡೆಪ್ಯೂಟಿ ಸೂಪರಿಂಟೆಂಡೆಂಟ್ ಪಿ.ಕಾಳಿಮುತ್ತು ತಿಳಿಸಿದ್ದಾರೆ.

ಆಧಾರ:ಪ್ರಜಾವಾಣಿ, ದಿನಾಂಕ:21.06.2021

## 8. ವಾಸಯೋಗ್ಯ ರಾಜಧಾನಿ ಬೆಂಗಳೂರು ನಂ.1

ದೇಶದ ವಾಸಯೋಗ್ಯ ರಾಜಧಾನಿಗಳ ಪೈಕಿ ಕರ್ನಾಟಕದ ರಾಜಧಾನಿ ಬೆಂಗಳೂರು ದೇಶದಲ್ಲೇ ಮೊದಲ ಸ್ಥಾನ ಪಡೆದುಕೊಂಡಿದೆ. ವಿಜ್ಞಾನ ಮತ್ತು ಪರಿಸರ ಕೇಂದ್ರ (ಸಿಎಸ್ಇ) 2020ರ ಸುಲಭ ಜೀವನ ಸೂಚ್ಯಂಕವನ್ನು ವಿಶ್ಲೇಷಿಸಿ ವರದಿಯನ್ನು ಬಿಡುಗಡೆ ಮಾಡಿದ್ದು, ಅಗ್ರ 10 ವಾಸಯೋಗ್ಯ ನಗರಗಳ ಪಟ್ಟಿಯಲ್ಲಿ ಕೇವಲ ಮೂರು ರಾಜಧಾನಿಗಳು ಮಾತ್ರ ಸ್ಥಾನಪಡೆದಿವೆ.

ಗುಣಮಟ್ಟದ ಜೀವನ, ಆರ್ಥಿಕ ಸಾಮರ್ಥ್ಯ, ಸುಸ್ಥಿರತೆ ಮತ್ತು ನಾಗರಿಕ ಗ್ರಹಿಕೆ ಸಮೀಕ್ಷೆ ಈ ನಾಲ್ಕು ಮಾನದಂಡವನ್ನು ಬಳಸಿ ವರದಿಯನ್ನು ಸಿದ್ಧಪಡಿಸಲಾಗಿದೆ. ಆರ್ಥಿಕ ಸಾಮರ್ಥ್ಯದಲ್ಲಿ ಬೆಂಗಳೂರು 100ಕ್ಕೆ 78–82 ಅಂಕಗಳನ್ನು ಪಡೆದುಕೊಂಡಿದೆ. ಆರ್ಥಿಕ ಅಭಿವೃದ್ಧಿ ಮಟ್ಟ ಮತ್ತು ಆರ್ಥಿಕ ಅವಕಾಶಗಳ ಸೃಷ್ಟಿಯಲ್ಲಿ ಇತರ ನಗರಗಳಿಗಿಂತ ಬೆಂಗಳೂರು ಅತ್ಯುತ್ತಮ ಎನಿಸಿಕೊಂಡಿದೆ. ಚೆನ್ನೈ, ದೆಹಲಿ, ಮುಂಬೈ ಮತ್ತು ಹೈದರಾಬಾದ್ ಮಧ್ಯಮ ಗುಣಮಟ್ಟದ ಆರ್ಥಿಕ ಅವಕಾಶವನ್ನು ಒದಗಿಸುವ ನಗರಗಳೆನಿಸಿಕೊಂಡಿವೆ.

ಗುಣಮಟ್ಟದ ಜೀವನ ವಿಭಾಗದಲ್ಲಿ ಬೆಂಗಳೂರು 100ಕ್ಕೆ 55–67 ಅಂಕ, ಸುಸ್ಥಿರತೆಯಲ್ಲಿ 59–97 ಅಂಕ, ನಾಗರಿಕ ಗ್ರಹಿಕೆ ಸಮೀಕ್ಷೆಯಲ್ಲಿ 78 ಅಂಕವನ್ನು ಪಡೆದು ಮೊದಲ ಸ್ಥಾನದಲ್ಲಿದೆ.

ಆಧಾರ:ಕನ್ನಡಪ್ರಭ, ದಿನಾಂಕ:21.06.2021

## 9. ಆಯುಷ್ಮಾನ್ ಭಾರತದಲ್ಲಿ ಕರ್ನಾಟಕ ದೇಶಕ್ಕೆ ನಂ.1

ಕೇಂದ್ರ ಸರ್ಕಾರದ ಆಯುಷ್ಮಾನ್ ಭಾರತ್ ಅಡಿಯಲ್ಲಿ ಆರೋಗ್ಯ ಮತ್ತು ಕ್ಷೇಮ ಕೇಂದ್ರ ಯೋಜನೆಯನ್ನು ಜಾರಿಗೊಳಿಸುವಲ್ಲಿ ಕರ್ನಾಟಕ ರಾಜ್ಯ ದೇಶದಲ್ಲಿಯೇ ಮುಂಚೂಣಿಯಲ್ಲಿದ್ದು 2020–21ನೇ ಸಾಲಿನ ಮೂರನೇ ಮತ್ತು ನಾಲ್ಕನೇ ತ್ರೈಮಾಸಿಕದಲ್ಲಿ 95 ಅಂಕಗಳೊಂದಿಗೆ ಮೊದಲ ಸ್ಥಾನ ಗಳಿಸಿದೆ.

ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಉಪ ಆರೋಗ್ಯ ಕೇಂದ್ರದಲ್ಲಿ ಆರೋಗ್ಯ ವ್ಯವಸ್ಥೆಯನ್ನು ಬಲಪಡಿಸುವ ಉದ್ದೇಶದಿಂದ ಕೇಂದ್ರ ಸರ್ಕಾರ ಈ ಯೋಜನೆಯನ್ನು ಜಾರಿಗೊಳಿಸಿದೆ. ರಾಜ್ಯದಲ್ಲಿ 9,000 ಆರೋಗ್ಯ ಉಪ ಕೇಂದ್ರಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಸೇರಿ ಒಟ್ಟು 11,595 ಕೇಂದ್ರಗಳನ್ನು ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳನ್ನಾಗಿ ಮೇಲ್ದರ್ಜೆಗೆ ಏರಿಸುವ ಗುರಿಯೊಂದಿಗೆ ಸರ್ಕಾರ ಈ ಯೋಜನೆಯನ್ನು ಅಳವಡಿಸಿಕೊಂಡಿದೆ.

ಆರೋಗ್ಯ ಉಪ ಕೇಂದ್ರಗಳಲ್ಲಿ ಈ ಮೊದಲು ಕಿರಿಯ ಆರೋಗ್ಯ ಸಹಾಯಕಿಯರು ಮತ್ತು ಆಶಾ ಕಾರ್ಯಕರ್ತರು ಮಾತ್ರ ಇದ್ದರು. ಈ ಯೋಜನೆಯ ಮೂಲಕ ಬಿಎಸ್ಸಿ ನರ್ಸಿಂಗ್ ಓದಿರುವ ಮಧ್ಯಮ ಹಂತದ ಆರೋಗ್ಯ ಸಹಾಯಕಿಯರನ್ನು ನೇಮಿಸಿಕೊಳ್ಳಲಾಗಿದೆ. ಈ ಮೂಲಕ ಆರೋಗ್ಯ ಉಪ ಕೇಂದ್ರವನ್ನು ಕ್ಲಿನಿಕ್ ಆಗಿ ಪರಿವರ್ತಿಸಲಾಗಿದೆ.

ಸಣ್ಣಪುಟ್ಟ ಆರೋಗ್ಯ ಸಮಸ್ಯೆಗಳಿದ್ದರೂ ಚಿಕಿತ್ಸೆ ನೀಡುವುದು, ತುಸು ಗಂಭೀರ ಸಮಸ್ಯೆಗಳಿದ್ದಾಗ ಹಿರಿಯ ವೈದ್ಯರನ್ನು ಸಂಪರ್ಕಿಸಿ ಅವರಿಂದ ಮಾಹಿತಿ ಪಡೆದು ತುರ್ತು ಚಿಕಿತ್ಸೆ ನೀಡುವುದು. ಅಗತ್ಯ ಇದ್ದರೆ ತಕ್ಷಣ ಪ್ರಯೋಗಾಲಯಗಳಿಗೆ ಮತ್ತು ಆಸ್ಪತ್ರೆಗಳಿಗೆ ಶಿಫಾರಸ್ಸು ಮಾಡುವುದು ಮುಂತಾದ ಚಟುವಟಿಕೆಗಳನ್ನು ಈ ಉಪ ಕೇಂದ್ರಗಳೇ ನಿರ್ವಹಿಸುತ್ತಿವೆ.

**ಏನು ಮಾನದಂಡ**: ಉಪ ಕೇಂದ್ರಗಳ ಉನ್ನತೀಕರಣ, ಸೇವೆಗಳ ಮಾಹಿತಿ, ರೋಗಿಗಳ ಶಿಫಾರಸ್ಸು ಮಾಡುವುದು, ಸಮನ್ವಯ, ಟೆಲಿ ಕಮ್ಯುನಿಕೇಷನ್, 30 ವರ್ಷ ಮೇಲ್ಪಟ್ಟ ಎಲ್ಲರಿಗೂ ಆರೋಗ್ಯ ತಪಾಸಣೆ, ಯೋಗ ತರಬೇತಿ, ಆಹಾರ ಪಥ್ಯ ಬಗ್ಗೆ ಅರಿವು ಮೂಡಿಸುವುದು.

ಆರೋಗ್ಯ ಉಪ ಕೇಂದ್ರಗಳಲ್ಲಿ ಈ ಮೊದಲು ಕಿರಿಯ ಆರೋಗ್ಯ ಸಹಾಯಕಿಯರು ಮತ್ತು ಆಶಾ ಕಾರ್ಯಕರ್ತರು ಮಾತ್ರ ಇದ್ದರು. ಈ ಯೋಜನೆಯ ಮೂಲಕ ಬಿಎಸ್‌ಸಿ ನರ್ಸಿಂಗ್ ಓದಿರುವ ಮಧ್ಯಮ ಹಂತದ ಆರೋಗ್ಯ ಸಹಾಯಕಿಯರನ್ನು ನೇಮಿಸಿಕೊಳ್ಳಲಾಗಿದೆ. ಈ ಮೂಲಕ ಆರೋಗ್ಯ ಉಪ ಕೇಂದ್ರವನ್ನು ಕ್ಲಿನಿಕ್ ಆಗಿ ಪರಿವರ್ತಿಸಲಾಗಿದೆ.

ಗ್ರಾಮೀಣ ಜನರು ಆರೋಗ್ಯ ಸೇವೆಗಾಗಿ ದೂರದ ನಗರಗಳಿಗೆ ಅಲೆಯುವುದನ್ನು ತಪ್ಪಿಸಿ ತಮ್ಮ ಮನೆಯ ಸಮೀಪ ಆರೋಗ್ಯ ಸೇವೆ ಪಡೆಯಬೇಕು ಎಂಬುದು ಸರ್ಕಾರದ ಗುರಿ. ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳು ಈ ನಿಟ್ಟಿನಲ್ಲಿ ಯಶಸ್ವಿಯಾಗಿವೆ. ಈ ಸಾಧನೆಗಾಗಿ ಅಧಿಕಾರಿ ಹಾಗೂ ಸಿಬ್ಬಂದಿಯನ್ನು ಅಭಿನಂದಿಸುತ್ತೇನೆ.

ಆಧಾರ:ಕನ್ನಡಪ್ರಭ, ದಿನಾಂಕ:19.06.2021

## 10. ಲೋಕಸಭಾ ಸಚಿವಾಲಯದಿಂದ ಕನ್ನಡ ಕಡೆಗಣನೆ

ಲೋಕಸಭಾ ಸಚಿವಾಲಯದ ಅಡಿಯಲ್ಲಿ ಬರುವ ಪಾರ್ಲಿಮೆಂಟರಿ ರೀಸರ್ಚ್ ಆ್ಯಂಡ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್ ಫಾರ್ ಡೆಮಾಕ್ರಸಿ ಸಂಸ್ಥೆಯ ಕಾರ್ಯವೈಖರಿ ಇದೀಗ ಕನ್ನಡಪರ ಚಿಂತಕರ ಮತ್ತು ಸಾಹಿತಿಗಳ ಕೆಂಗಣ್ಣಿಗೆ ಗುರಿಯಾಗಿದೆ.

ಜೂನ್22ರಿಂದ ಸಂಸತ್ ಸದಸ್ಯರಿಗೆ, ಶಾಸಕರಿಗೆ ಮತ್ತು ಅಧಿಕಾರಿಗಳು ಮತ್ತವರ ಕುಟುಂಬದವರಿಗಾಗಿ ಆರು ವಿದೇಶಿ ಮತ್ತು ಆರು ಭಾರತೀಯ ಭಾಷೆಗಳನ್ನು ಆನ್‌ಲೈನ್ ತರಗತಿ ಮೂಲಕ ಕಲಿಸಲು ಮುಂದಾಗಿದೆ. ಇದರಲ್ಲಿ ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಹಾಗೂ ಆರು ವಿದೇಶಿ ಭಾಷೆಗಳಿರುವ ದೇಶಗಳ ರಾಯಭಾರಿಗಳು ಭಾಗಿಯಾಗಲಿದ್ದಾರೆ.

ದಕ್ಷಿಣ ಭಾರತದ ಭಾಷೆಗಳಾದ ತಮಿಳು, ತೆಲುಗು ಪಾರ್ಲಿಮೆಂಟರಿ ರೀಸರ್ಚ್ ಆ್ಯಂಡ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್ ಫಾರ್ ಡೆಮಾಕ್ರಸಿ ಸಂಸ್ಥೆ ಪ್ರಕಟಿಸಿರುವ ವೇಳಾಪಟ್ಟಿಯಲ್ಲಿ ಸ್ಥಾನ ಗಿಟ್ಟಿಸಿಕೊಂಡಿವೆ. ಬಂಗಾಳಿ, ಗುಜರಾತಿ, ಮರಾಠಿ, ಒಡಿಯಾ ಭಾಷೆಗಳು ಕೂಡ ಕಲಿಕಾ ಪಟ್ಟಿಯಲ್ಲಿವೆ. ವಿದೇಶಿ ಭಾಷೆಗಳಲ್ಲಿ ಫ್ರೆಂಚ್, ಜರ್ಮನ್, ಜಪಾನೀಸ್, ಪೋರ್ಚುಗೀಸ್, ರಷ್ಯನ್ ಮತ್ತು ಸ್ಪ್ಯಾನಿಶ್ ಭಾಷೆಗಳನ್ನು ಹೇಳಿ ಕೊಡಲಾಗುತ್ತದೆ. ಕನ್ನಡ 8 ಜ್ಞಾನಪೀಠ ಪ್ರಶಸ್ತಿಗೆ ಭಾಜನವಾಗಿರುವ ಭಾಷೆಯಾಗಿದೆ. ಯಾವ ಕಾರಣಕ್ಕೆ ಕನ್ನಡ ಭಾಷೆಯನ್ನು ಲೋಕಸಭಾ ಸಚಿವಾಲಯದ ಅಧಿಕಾರಿಗಳು ಕಡೆಗಣನೆ ಮಾಡಿದ್ದಾರೆ, ಜೊತೆಗೆ ತಮಿಳು, ತೆಲುಗು ಭಾಷೆಗಳಿಗೆ ಕನ್ನಡಕ್ಕಿಲ್ಲದ ಮನ್ನಣೆಯನ್ನು ಏಕೆ ನೀಡಲಾಯಿತು ಎಂಬ ಬಗ್ಗೆ ಸ್ಪಷ್ಟನೆ ನೀಡಬೇಕು ಎಂದು ಕನ್ನಡಪರ ಹೋರಾಟಗಾರ ರಾ.ನಂ. ಚಂದ್ರಶೇಖರ್ ಹೇಳುತ್ತಾರೆ.

**ಅಸಮಾನತೆಗೆ ಕಾರಣವಾಗುತ್ತದೆ:–** ಕೇಂದ್ರ ಸರ್ಕಾರವೇ ಕನ್ನಡ ಭಾಷೆಗೆ ಸಾಂಸ್ಕೃತಿಕ ಸ್ಥಾನ ಮಾನ ನೀಡಿದೆ. ಈ ಭಾಷೆಯನ್ನು ಸಂಸದರಿಗೆ ಕಲಿಸುವ ಭಾಷಾ ಪಟ್ಟಿಯಿಂದ ಕೈಬಿಟ್ಟಿರುವುದು ಸರಿಯಲ್ಲ ಎಂದು ಹಿರಿಯ ಸಾಹಿತಿ ಬರಗೂರು ರಾಮಚಂದ್ರಪ್ಪ ಹೇಳಿದ್ದಾರೆ. ದಕ್ಷಿಣ ಭಾರತ ಅಂದರೆ ಮದ್ರಾಸಿಗರು ಎಂದು ಕರೆಯುವ ಪದ್ಧತಿ ಈ ಹಿಂದೆ ಇತ್ತು. ಈಗ ತಮಿಳಿನ ಜೊತೆಗೆ ಸೇರಿಸಿಕೊಂಡಿದೆ. ಕೇರಳ ಮತ್ತು ಕರ್ನಾಟಕವನ್ನು ಕೈಬಿಟ್ಟಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಆಧಾರ:ಉದಯವಾಣಿ, ದಿನಾಂಕ:20.06.2021

# ಭಾಗ–5

# ಸರ್ವೋಚ್ಚ /ಉಚ್ಚ ನ್ಯಾಯಾಲಯದ ಸುದ್ದಿಗಳು

## 1. ಕೃಷಿ ಕಾಯಿದೆ : ತಜ್ಞರ ಸಮಿತಿಯಿಂದ ಸುಪ್ರೀಂಗೆ ವರದಿ

ಸುಮಾರು ಮೂರು ತಿಂಗಳಿಂದ ದಿಲ್ಲಿಯಲ್ಲಿ ರೈತರ ಪ್ರತಿಭಟನೆಗೆ ಕಾರಣವಾಗಿರುವ ವಿವಾದಿತ ಮೂರು ಕೃಷಿ ಕಾಯಿದೆಗಳ ಪರಾಮರ್ಶೆಗೆ ರಚಿಸಲಾಗಿದ್ದ ತಜ್ಞರ ಸಮಿತಿಯು ಸುಪ್ರೀಂಕೋರ್ಟ್‌ಗೆ ತನ್ನ ವರದಿಯನ್ನು ಸಲ್ಲಿಸಿದೆ. ಸುಪ್ರೀಂಕೋರ್ಟ್‌ನಿಂದ ನೇಮಿಸಲಾಗಿದ್ದ ಸಮಿತಿಯು ಮಾರ್ಚ್ 19 ರಂದೇ ಮುಚ್ಚಿದ ಲಕೋಟೆಯಲ್ಲಿ ವರದಿಯನ್ನು ಸಲ್ಲಿಸಿದೆ ಎಂದು ಮೂಲಗಳು ತಿಳಿಸಿವೆ. ವರದಿಯಲ್ಲಿ ಯಾವೆಲ್ಲ ಅಂಶಗಳ ಬಗ್ಗೆ ಗಮನ ಸೆಳೆಯಲಾಗಿದೆ ಎಂಬುದು ತಿಳಿದು ಬಂದಿಲ್ಲ. ಈ ಸಂಬಂಧ ಏಪ್ರಿಲ್ 5ರಂದು ಸುಪ್ರೀಂಕೋರ್ಟ್‌ನಲ್ಲಿ ವಿಚಾರಣೆ ನಡೆಯಲಿದೆ.

ವಿವಾದಿತ ಕೃಷಿ ಕಾಯಿದೆಗಳನ್ನು ಹಿಂಪಡೆಯುವಂತೆ ಕೇಂದ್ರದ ಮೇಲೆ ಒತ್ತಡ ಹೆಚ್ಚಿಸಲು ರೈತ ಸಂಘಟನೆಗಳು ಮೇ ತಿಂಗಳಲ್ಲಿ ಸಂಸತ್ ಚಲೋ ಚಳವಳಿಗೆ ಕರೆ ನೀಡಿವೆ. 40 ರೈತ ಸಂಘಟನೆಗಳ ಒಕ್ಕೂಟ ಸಂಯುಕ್ತ ಕಿಸಾನ್ ಮೋರ್ಚಾ ನಡೆಸಿದ ಸಭೆಯಲ್ಲಿ ಈ ಕುರಿತು ತೀರ್ಮಾನ ಕೈಗೊಳ್ಳಲಾಗಿದೆ.

ಆಧಾರ: ವಿಜಯ ಕರ್ನಾಟಕ, ದಿನಾಂಕ:01.04.2021.

## 2. ರಾಷ್ಟ್ರೀಯ ತುರ್ತು ಪರಿಸ್ಥಿತಿಯಂತಿದೆ

ದೇಶದ ಪ್ರಸ್ತುತ ಸ್ಥಿತಿಯು ರಾಷ್ಟ್ರೀಯ ತುರ್ತು ಪರಿಸ್ಥಿತಿಯನ್ನು ನೆನಪಿಸುತ್ತಿದೆ. ಆಮ್ಲಜನಕ ಪೂರೈಕೆ, ಅಗತ್ಯ ಔಷಧ ಹಾಗೂ ಲಸಿಕೆ ವಿತರಣೆ ವಿಧಾನದ ಕುರಿತ ರಾಷ್ಟ್ರೀಯ ಯೋಜನೆಯನ್ನು ಕೂಡಲೇ ನಮ್ಮ ಮುಂದಿರಿಸಿ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರಕ್ಕೆ ಸುಪ್ರೀಂಕೋರ್ಟ್ ನೀಡಿದ ಕಟ್ಟಪ್ಪಣೆಯಿದು.

ದೇಶವು ದಾಖಲೆಯ 3.14 ಲಕ್ಷ ಸೋಂಕು, 2,104 ಸಾವಿಗೆ ಸಾಕ್ಷಿಯಾದ ಕೊರೋನಾದ ಕಳವಳಕಾರಿ ಸ್ಥಿತಿಯ ಬಗ್ಗೆ ಸ್ವಯಂಪ್ರೇರಿತವಾಗಿ ವಿಚಾರಣೆ ನಡೆಸಿದ ಸುಪ್ರೀಂಕೋರ್ಟ್ ಕೇಂದ್ರ ಸರ್ಕಾರಕ್ಕೆ ಈ ರೀತಿಯ ಆದೇಶ ನೀಡಿದೆ. ಜೊತೆಗೆ ವಿಚಾರಣೆ ವೇಳೆ ತನಗೆ ನೆರವಾಗಲು ಹಿರಿಯ ನ್ಯಾಯವಾದಿ ಹರೀಶ್ ಸಾಳ್ವೆ ಅವರನ್ನು ಅಮಿಕಸ್ ಕ್ಯೂರಿಯಾಗಿ ನೇಮಕ ಮಾಡಿದೆ. ದೇಶದಲ್ಲಿ ಎದುರಾಗಿರುವ ಪರಿಸ್ಥಿತಿಗೆ ಸಂಬಂಧಿಸಿದ ಕೇಂದ್ರ ಸರ್ಕಾರಕ್ಕೆ ನೋಟಿಸ್ ಜಾರಿ ಮಾಡಿರುವ ನ್ಯಾಯಾಲಯ ವಿಚಾರಣೆ ಮುಂದೂಡಿದೆ.

**4 ವಿಚಾರಗಳ ಬಗ್ಗೆ ಸ್ಪಷ್ಟತೆ ಬೇಕು:** ಸೋಂಕಿನಿಂದ ದೇಶವು ತತ್ತರಿಸಿಹೋಗಿದೆ. ಕನಿಷ್ಠ 6 ಹೈಕೋರ್ಟ್‌ಗಳು ಕೊರೋನಾ ಸಂಬಂಧಿತ ಸಂಪನ್ಮೂಲಗಳ ಕುರಿತು ವಿಚಾರಣೆ ನಡೆಸುತ್ತಿವೆ. ದೆಹಲಿ, ಬಾಂಬೆ, ಸಿಕ್ಕಿಂ ಮಧ್ಯಪ್ರದೇಶ, ಕೋಲ್ಕತ್ತಾ ಮತ್ತು ಅಲಹಾಬಾದ್ ಹೈಕೋರ್ಟ್‌ಗಳು ಪ್ರಸ್ತುತ ಪರಿಸ್ಥಿತಿಯನ್ನು ಅರಿತು ತಮ್ಮಿಂದಾಗುವಷ್ಟು ಕೆಲಸವನ್ನು ಮಾಡುತ್ತಿವೆ. ನಮಗೆ ಈಗ 4 ವಿಚಾರಗಳ ಬಗ್ಗೆ ಸ್ಪಷ್ಟತೆ ಬೇಕು. ಆಕ್ಸಿಜನ್ ಪೂರೈಕೆ, ಅತ್ಯವಶ್ಯಕ ಔಷಧಗಳ ಸರಬರಾಜು, ಲಸಿಕೆ ವಿತರಣೆಯ ವಿಧಾನ ಹಾಗೂ ಲಾಕ್‌ಡೌನ್ ಘೋಷಿಸುವ ಅಧಿಕಾರದ ಬಗ್ಗೆ ರಾಷ್ಟ್ರೀಯ ಯೋಜನೆ ಸಿದ್ಧಪಡಿಸಿ ನಮ್ಮ ಮುಂದೂಡಿ ಎಂದು ಮುಖ್ಯ ನ್ಯಾಯಮೂರ್ತಿಗಳಾದ ಎಲ್.ಎನ್.ರಾವ್, ಎಸ್.ಆರ್.ಭಟ್ ಅವರನ್ನೊಳಗೊಂಡ ನ್ಯಾಯಪೀಠ ಸೂಚಿಸಿದೆ. ಲಾಕ್‌ಡೌನ್ ಘೋಷಿಸುವ ಅಧಿಕಾರವಿರುವುದು ಸರ್ಕಾರಗಳಿಗೆ ವಿನಾ ಕೋರ್ಟ್‌ಗಳಿಗಲ್ಲ ಎಂದು ಸ್ಪಷ್ಟಪಡಿಸಿದೆ.

ದೇಶಾದ್ಯಂತ ಆಮ್ಲಜನಕ, ರೆಮ್‌ಡೆಸಿವಿಯರ್ ಔಷಧದ ಕೊರತೆ ಕುರಿತು ಆರೋಪಗಳು ಕೇಳಿ ಬಂದಿರುವ ನಡುವೆ ಈ ಎಲ್ಲ ಬೆಳವಣಿಗೆಗಳು ನಡೆದಿವೆ. ತಡರಾತ್ರಿ ಆಮ್ಲಜನಕ ಅಭಾವ ಕುರಿತು ವಿಚಾರಣೆ ನಡೆಸಿದ್ದ ದೆಹಲಿ ಹೈಕೋರ್ಟ್ ಸರ್ಕಾರಗಳಿಗೆ ಜನರ ಪ್ರಾಣದ ಬಗ್ಗೆ ಚಿಂತೆಯೇ ಇಲ್ಲ

ಎಂಬಂತೆ ಭಾಸವಾಗುತ್ತಿದೆ. ಕಾಡಿ – ಬೇಡಿ – ಕದ್ದಾದರೂ ಸರಿ ಆಸ್ಪತ್ರೆಗಳಿಗೆ ಆಕ್ಸಿಜನ್ ಪೂರೈಕೆಯಾಗುವಂತೆ ನೋಡಿಕೊಳ್ಳಿ ಎಂದು ಆದೇಶಿಸಿತ್ತು.

ಆಧಾರ:ಉದಯವಾಣಿ, ದಿನಾಂಕ23.04.2021.

## 3. ಸಮರೋಪಾದಿಯಲ್ಲಿ ಕ್ರಮ ಕೈಗೊಳ್ಳಿ : ಹೈಕೋರ್ಟ್ ತಾಕೀತು

ರಾಜ್ಯದಲ್ಲಿ ಕೋವಿಡ್ ಎರಡನೇ ಅಲೆ ಉಲ್ಬಣಗೊಂಡಿರುವ ಹಿನ್ನೆಲೆಯಲ್ಲಿ ಅದರ ನಿಯಂತ್ರಣದ ನಿಟ್ಟಿನಲ್ಲಿ ರಾಜ್ಯ ಸರ್ಕಾರಕ್ಕೆ ಹಲವು ಮಹತ್ವದ ನಿರ್ದೇಶನಗಳನ್ನು ನೀಡಿರುವ ಹೈಕೋರ್ಟ್, ರೆಮ್‌ಡೆಸಿವಿಯರ್ ಮತ್ತು ಆಕ್ಸಿಜನ್‌ಗಾಗಿ ಕೋವಿಡ್ ಸೋಂಕಿತರು ಅಲೆಯುವುದನ್ನು ತಪ್ಪಿಸಲು ಅವುಗಳ ಲಭ್ಯತೆ ಮತ್ತು ಪೂರೈಕೆ ಹೆಚ್ಚಿಸಲು ಸಮರೋಪಾದಿಯಲ್ಲಿ ಕ್ರಮ ಕೈಗೊಳ್ಳಬೇಕು ಎಂದು ಹೇಳಿದೆ.

ರೆಮ್‌ಡಿಸಿವಿಯರ್ ಔಷಧ ಕಾಳಸಂತೆಯಲ್ಲಿ ಮಾರಾಟವಾಗುವುದನ್ನು ತಡೆಯಬೇಕು ಎಂದು ಸೂಚನೆ ನೀಡಿದೆ. ಕೋವಿಡ್–19 ನಿಯಂತ್ರಣಕ್ಕೆ ಸಂಬಂಧಿಸಿದಂತೆ ಸಲ್ಲಿಕೆಯಾಗಿರುವ ಹಲವು ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ಮತ್ತು ನ್ಯಾ.ಅರವಿಂದ್ ಕುಮಾರ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಸುದೀರ್ಘ ವಿಚಾರಣೆ ಬಳಿಕ ಸರ್ಕಾರಕ್ಕೆ ಸರಣಿ ನಿರ್ದೇಶನಗಳನ್ನು ನೀಡಿತು.

**ಆಕ್ಸಿಜನ್ ಲಭ್ಯತೆ ವಿವರಣೆ ಕೊಡಿ**: ಸರ್ಕಾರ ಸಲ್ಲಿಸಿದ ಪ್ರಮಾಣ ಪತ್ರವನ್ನು ಪರಿಶೀಲಿಸಿದ ನ್ಯಾಯಪೀಠ ರಾಜ್ಯದಲ್ಲಿ ಆಕ್ಸಿಜನ್ ಲಭ್ಯತೆ ಬಗ್ಗೆ ಸ್ಪಷ್ಟತೆ ಇಲ್ಲ, ಎಷ್ಟು ಉತ್ಪಾದನೆಯಾಗುತ್ತಿದೆ ಎಷ್ಟು ಬೇಡಿಕೆ ಇದೆ ಹಾಗೂ ಎಷ್ಟು ಪೂರೈಕೆಯಾಗುತ್ತಿದೆ ಎಂಬ ಕುರಿತು ಮುಂದಿನ ವಿಚಾರಣೆ ವೇಳೆ ಸ್ಪಷ್ಟವಾಗಿ ವಿವರ ನೀಡಬೇಕು ಎಂದು ಸೂಚಿಸಿತು. ಸದ್ಯ ರಾಜ್ಯದಲ್ಲಿ ಆಮ್ಲಜನಕದ ಕೊರತೆ ನಿವಾರಣೆಗೆ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಹೇಳಿತು.

**ಕೋರ್ಟ್ ನಿರ್ದೇಶನಗಳು:–**

- ಸಾರ್ವಜನಿಕ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ಸೋಂಕಿತರು ಹಾಸಿಗೆಯಿಲ್ಲದೆ ಪರದಾಡುತ್ತಿದ್ದಾರೆ ಅದನ್ನು ತಪ್ಪಿಸಬೇಕು.
- ಎಲ್ಲ ಆಸ್ಪತ್ರೆಗಳ ಮುಂಭಾಗದಲ್ಲಿ ಹೆಲ್ಪ್ ಡೆಸ್ಕ್‌ಗಳನ್ನು ಸ್ಥಾಪಿಸಿ, ಅಲ್ಲಿ ಯಾವ ಆಸ್ಪತ್ರೆಗಳಲ್ಲಿ ಹಾಸಿಗೆ ಖಾಲಿ ಇದೆ ಎಂಬುದನ್ನು ಕುರಿತು ಮಾಹಿತಿ ನೀಡಬೇಕು.
- 24 ಗಂಟೆಗಳಲ್ಲಿ ಆರ್‌ಟಿಪಿಸಿಆರ್ ವರದಿ ಲಭ್ಯವಾಗುತ್ತಿಲ್ಲ. ಸರ್ಕಾರದ ಆದೇಶ ಕೇವಲ ಕಾಗದದಲ್ಲಿಯೇ ಉಳಿದಿದೆ. ಅದನ್ನು ಸರಿಪಡಿಸಲು ಕ್ರಮ ಕೈಗೊಳ್ಳಬೇಕು.
- ಸೋಂಕು ಪರೀಕ್ಷಾ ಕೇಂದ್ರಗಳ ಮುಂದೆ ದಟ್ಟಣೆ ತಗ್ಗಿಸಬೇಕು. ವೃದ್ಧರು ಮತ್ತು ಗರ್ಭಿಣಿಯರಿಗೆ ಪ್ರತ್ಯೇಕ ಸರತಿ ಸಾಲು ರಚಿಸಲು ಸರ್ಕಾರ ಸೂಚನೆ ನೀಡಬೇಕು.
- ಕೊರೋನಾ ಲಕ್ಷಣಗಳಿಲ್ಲದ ಗರ್ಭಿಣಿಯರಿಗೆ ಆಸ್ಪತ್ರೆಗಳಿಗೆ ಪ್ರವೇಶಕ್ಕೆ ಅವಕಾಶ ಮಾಡಿಕೊಡಬೇಕು.
- ಸರ್ಕಾರ ರೆಮ್‌ಡೆಸಿವಿಯರ್ ಔಷಧ ಕಾಳಸಂತೆಯಲ್ಲಿ ಮಾರಾಟವಾಗುವುದನ್ನು ತಪ್ಪಿಸಿ, ಸೋಂಕಿತರ ಸಂಬಂಧಿಗಳ ಅಲೆದಾಟ ನಿಲ್ಲುವಂತೆ ಮಾಡಬೇಕು.
- ರೆಮ್‌ಡೆಸಿವಿಯರ್ ಲಭ್ಯತೆ ಬಗ್ಗೆ ವೆಬ್‌ಸೈಟ್‌ನಲ್ಲಿ ಪ್ರತಿದಿನ ವಿವರಗಳನ್ನು ಪ್ರಕಟಿಸಿ, ಯಾವ ಯಾವ ಸ್ಟಾಕಿಸ್ಟ್‌ಗಳ ಬಳಿ ಔಷಧ ಲಭ್ಯವಿದೆ ಅದರ ಬೆಲೆ ಎಷ್ಟು. ಅದು ಎಲ್ಲಿ ದೊರಕುತ್ತದೆ ಎಂಬುದನ್ನು ತಿಳಿಸಬೇಕು.

- ಸಾಧ್ಯವಾದರೆ ಸರ್ಕಾರವೇ ರೆಮ್‌ಡೆಸಿವಿಯರ್ ಖರೀದಿಸಿ ನ್ಯಾಯಯುತ ರೀತಿಯಲ್ಲಿ ಆಸ್ಪತ್ರೆಗಳಿಗೆ ನಿಗದಿತ ದರಕ್ಕೆ ನೀಡಬೇಕು.
- ಆಕ್ಸಿಜನ್ ಲಭ್ಯತೆ ಖಾತ್ರಿಗೆ ಕ್ರಮ ಕೈಗೊಳ್ಳಬೇಕು.
- ವಾರ್‌ರೂಮ್‌ನಲ್ಲಿ ರೆಮ್‌ಡೆಸಿವಿಯರ್ ಮತ್ತು ಆಕ್ಸಿಜನ್ ಪೂರೈಕೆ ಕುರಿತಂತೆ ಸಮಗ್ರ ಮೇಲ್ವಿಚಾರಣೆ ನಡೆಸಬೇಕು.
- ಚಿತಾಗಾರಗಳ ಮೇಲಿನ ಒತ್ತಡ ತಗ್ಗಿಸಬೇಕು. ಇದು ಅತ್ಯಂತ ಗಂಭೀರ ವಿಚಾರ, ಸರ್ಕಾರ ತನ್ನ ವಿವೇಚನೆ ಬಳಸಿ, ಮೃತ ಸೋಂಕಿತರ ಅಂತ್ಯಕ್ರಿಯೆ ಗೌರವಯುತವಾಗಿ ನಡೆಯುವಂತೆ ಹೆಚ್ಚುವರಿ ಸೌಕರ್ಯಗಳನ್ನು ಸೃಷ್ಟಿಸಬೇಕು.
- ತಜ್ಞರ ಸಮಿತಿ ಮುಂದಿನ ದಿನಗಳಲ್ಲಿ ಸೋಂಕು ಇನ್ನು ತೀವ್ರವಾಗಿ ಹರಡಲಿದೆ ಎಂದು ಅಂದಾಜಿಸಿರುವುದರಿಂದ ಸರ್ಕಾರ ಹಾಸಿಗೆ, ರೆಮ್‌ಡಿಸಿವಿಯರ್ ಔಷಧ ಮತ್ತು ಆಮ್ಲಜನಕ ಪೂರೈಕೆಗೆ ಸಮರ್ಪಕ ಕ್ರಮಗಳನ್ನು ಕೈಗೊಳ್ಳುವ ಮೂಲಕ ಸೋಂಕು ಎದುರಿಸಲು ಸಜ್ಜಾಗಬೇಕು.

ಆಧಾರ:ಉದಯವಾಣಿ, ದಿನಾಂಕ23.04.2021.

## 4. 48ನೇ ಸಿಜೆಐ ಆಗಿ ನ್ಯಾಯಾಮೂರ್ತಿ ರಮಣ ಪ್ರತಿಜ್ಞೆ

ನ್ಯಾಯಮೂರ್ತಿ ಎನ್.ವಿ.ರಮಣ ಅವರು ಭಾರತದ 48ನೇ ಮುಖ್ಯ ನ್ಯಾಯಮೂರ್ತಿಯಾಗಿ ಪ್ರಮಾಣವಚನ ಸ್ವೀಕರಿಸಿದ್ದಾರೆ. ಕೊರೋನಾ ನಿರ್ಬಂಧ ಹಿನ್ನೆಲೆಯಲ್ಲಿ ರಾಷ್ಟ್ರಪತಿ ಭವನದಲ್ಲಿ ನಡೆದ ಸರಳ ಸಮಾರಂಭದಲ್ಲಿ ರಾಷ್ಟಪತಿ ರಾಮನಾಥ್ ಕೋವಿಂದ್ ಪ್ರತಿಜ್ಞಾವಿಧಿ ಬೋಧಿಸಿದರು. ಸರ್ವೋಚ್ಚ ನ್ಯಾಯಾಲಯದಲ್ಲಿ ಖಾಲಿ ಇರುವ 6 ಉನ್ನತ ಹುದ್ದೆಗಳನ್ನು ಭರ್ತಿಗೊಳಿಸುವ ಬಹುದೊಡ್ಡ ಸವಾಲು ನೂತನ ಸಿಜೆಐ ಮೇಲಿದೆ. ಹಿಂದಿನ ಸಿಜೆಐ ಎಸ್. ಎ. ಭೋಬ್ಡೆ ಅವಧಿಯಲ್ಲಿ ಈ ಹುದ್ದೆಗಳಿಗೆ ನೇಮಕ ನಡೆದಿರಲಿಲ್ಲ.

ಆಧಾರ: ಉದಯವಾಣಿ, ದಿನಾಂಕ25.04.2021.

## 5. ಇಡೀ ದೇಶ ಮತ್ತೆ ಲಾಕ್‌ಡೌನ್ ಮಾಡಿ : ಸುಪ್ರೀಂಕೋರ್ಟ್

ಕೊರೋನಾ ಸೋಂಕಿನ 2ನೇ ಅಲೆಯನ್ನು ತುಂಡರಿಸಲು ಕೆಲ ವಾರವಾದರೂ ಇಡೀ ಭಾರತವನ್ನು ಲಾಕ್‌ಡೌನ್ ಮಾಡಬೇಕು ಎಂದು ಆಮೆರಿಕ ಸಲಹೆ ಮಾಡಿದ ಬೆನ್ನಲ್ಲೇ ಸರ್ವೋಚ್ಚ ನ್ಯಾಯಾಲಯ ಕೂಡ ಅದೇ ರೀತಿಯ ಸಲಹೆ ನೀಡಿದೆ. ಕೊರೋನಾ ವೈರಸ್ ವ್ಯಾಪಕವಾಗಿ ಹಬ್ಬುತ್ತಿರುವ ಹಿನ್ನೆಲೆಯಲ್ಲಿ ಅದನ್ನು ತಡೆಯಲು ಇಡೀ ದೇಶವನ್ನು ಲಾಕ್‌ಡೌನ್ ಮಾಡುವ ಕುರಿತು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಪರಿಶೀಲನೆ ನಡೆಸಬೇಕು ಎಂದು ಸೂಚನೆ ನೀಡಿದೆ.

ಕೋವಿಡ್ ಅರ್ಜಿಗಳಿಗೆ ಸಂಬಂಧಿಸಿದಂತೆ ವಿಚಾರಣೆ ನಡೆಸಿದ ಸುಪ್ರೀಂಕೋರ್ಟ್ ಹೆಚ್ಚು ಜನರು ಸೇರುವ ಸಮಾರಂಭ ಹಾಗೂ ಸೂಪರ್ ಸ್ಪ್ರೆಡರ್ ಕಾರ್ಯಕ್ರಮಗಳನ್ನು ನಿಷೇಧಿಸುವ ಕುರಿತು ಗಂಭೀರವಾಗಿ ಪರಿಗಣಿಸಬೇಕು ಎಂದು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳನ್ನು ಕೋರುತ್ತೇವೆ. ಇದೇ ವೇಳೆ ಸಾರ್ವಜನಿಕ ಕಲ್ಯಾಣದ ದೃಷ್ಟಿಯಿಂದ ಲಾಕ್‌ಡೌನ್ ಹೇರುವ ಕುರಿತು ಪರಿಶೀಲಿಸಬೇಕು. ಲಾಕ್‌ಡೌನ್‌ನಿಂದ ವಿಶೇಷವಾಗಿ ದುರ್ಬಲ ವರ್ಗಗಳಿಗೆ ಸಾಮಾಜಿಕ–ಆರ್ಥಿಕ ಪರಿಣಾಮವಾಗುತ್ತದೆ. ಲಾಕ್‌ಡೌನ್ ಹೇರುವ ಮುನ್ನ ಆ ಸಮುದಾಯಗಳ ಬಗ್ಗೆ ಕಾಳಜಿ ತೆಗೆದುಕೊಂಡು ನಿರ್ಧಾರ ಕೈಗೊಳ್ಳಬೇಕು ಎಂದು ಸಲಹೆ ಮಾಡಿದೆ.

**ಕರ್ನಾಟಕದಲ್ಲಿ 2 ವಾರ ಲಾಕ್‌ಡೌನ್ ಮಾಡಿ**: ರಾಜ್ಯದಲ್ಲಿ ಈಗ ಜಾರಿಗೆ ತಂದಿರುವ ಜನತಾ ಕರ್ಫ್ಯೂ ನಿಯಮಗಳ ಪಾಲನೆ ಸಮರ್ಪಕವಾಗಿ ಆಗದೇ ಇರುವುದರಿಂದ ಎರಡು ವಾರಗಳ ಸಂಪೂರ್ಣ

ಲಾಕ್‌ಡೌನ್ ಮಾಡಬೇಕು. ಇಲ್ಲದಿದ್ದರೆ ಸೋಂಕಿನ ತೀವ್ರತೆಗೆ ಇಡೀ ಆರೋಗ್ಯ ವ್ಯವಸ್ಥೆ ಕುಸಿದು ಹೋಗಲಿದೆ ಎಂದು ತಜ್ಞರು ಸರ್ಕಾರಕ್ಕೆ ಎಚ್ಚರಿಕೆ ರೂಪದ ಸಲಹೆ ನೀಡಿದ್ದಾರೆ. ಈಗಾಗಲೇ ಆಕ್ಸಿಜನ್ ಹಾಗೂ ಐಸಿಯುಗಳ ಕೊರತೆ ತಾರಕಕ್ಕೇರಿದ್ದು, ಸೋಂಕಿತರು ಪರದಾಡುವಂತಾಗಿದೆ. ಸೋಂಕು ನಿಯಂತ್ರಣಕ್ಕೆ ತರದಿದ್ದರೆ ಆರೋಗ್ಯ ವ್ಯವಸ್ಥೆ ಮೇಲಿನ ಒತ್ತಡ ಹೆಚ್ಚಿ, ಸೋಂಕಿತರಿಗೆ ಬೆಡ್ ಸಿಗದೆ ಸಾವು ನೋವಿನ ಸಂಖ್ಯೆ ಹೆಚ್ಚಬಹುದು. ಜನತಾ ಕರ್ಫ್ಯೂ ಪರಿಣಾಮಕಾರಿಯಾಗಿ ಜಾರಿಗೆ ಬಂದಿದ್ದರೆ ಸಮಸ್ಯೆ ಕಡಿಮೆಯಾಗುತ್ತಿತ್ತು. ಸಂಪೂರ್ಣ ಲಾಕ್‌ಡೌನ್ ಒಂದೇ ಈಗಿರುವ ಪರಿಹಾರ ಎಂದು ತಜ್ಞರು ತೀಕ್ಷ್ಣವಾಗಿ ಹೇಳಿದ್ದಾರೆ ಎನ್ನಲಾಗಿದೆ.

ಸುಪ್ರೀಂಕೋರ್ಟ್ ಕೂಡ ಇಡೀ ದೇಶದಲ್ಲಿ ಲಾಕ್‌ಡೌನ್ ಜಾರಿಗೊಳಿಸುವುದು ಸೂಕ್ತ ಎಂದಿದೆ. ಅಮೆರಿಕದ ಅಧ್ಯಕ್ಷರ ಸಲಹೆಗಾರರು ಕೂಡ ಭಾರತದಲ್ಲಿ ಪರಿಸ್ಥಿತಿಯನ್ನು ನಿಯಂತ್ರಿಸಲು ಲಾಕ್‌ಡೌನ್ ಜಾರಿಗೊಳಿಸುವುದೊಂದೇ ಪರಿಹಾರ ಎಂದು ಹೇಳಿದ್ದಾರೆ. ಇದರ ನಡುವೆಯೇ ತಜ್ಞರು ಇದೇ ಸಲಹೆಯನ್ನು ನೀಡಿದ್ದಾರೆ. ಈ ನಿಟ್ಟಿನಲ್ಲಿ ಸರ್ಕಾರ ಪರಿಶೀಲನೆ ನಡೆಸಿದೆ ಎನ್ನಲಾಗಿದೆ.

**3ನೇ ಅಲೆ:** ಸೆಪ್ಟೆಂಬರ್ – ಆಕ್ಟೋಬರ್ ಹೊತ್ತಿಗೆ ಕೋವಿಡ್‌ನ ಮೂರನೇ ಅಲೆ ಅಪ್ಪಳಿಸಲಿದೆ. ಅಷ್ಟು ಹೊತ್ತಿಗೆ ದೇಶದ ಬಹುತೇಕ ಜನರಿಗೆ ಲಸಿಕೆ ನೀಡಲು ಸಾಧ್ಯವಾಗುವುದರಿಂದ ಆಗ ಲಾಕ್‌ಡೌನ್ ಬೇಕಾಗಕ್ಕಿಲ್ಲ. ಕೆಲವು ಕಠಿಣ ನಿಯಮಗಳ ಮೂಲಕ ಎದುರಿಸಲು ಸಾಧ್ಯವಾಗುತ್ತದೆ.

ರಾಜ್ಯದಲ್ಲಿ ಈಗ ಜನತಾ ಕರ್ಫ್ಯೂ ಜಾರಿಗೆ ಬಂದು ಒಂದು ವಾರವಾಗುತ್ತಿದೆ. ದಿನನಿತ್ಯ ಜನರ ಸಂಚಾರ ಹೆಚ್ಚುತ್ತಲೇ ಇದೆ. ಪೊಲೀಸರು ಕೆಲ ಹೊತ್ತು ನಿಯಂತ್ರಿಸಿದರೂ ಅನಗತ್ಯವಾಗಿ ಜನರ ಓಡಾಟ ನಡೆಯುತ್ತಿದೆ. ಜೊತೆಗೆ ದಿನಸಿ, ತರಕಾರಿ ಸೇರಿದಂತೆ ಅಗತ್ಯ ವಸ್ತುಗಳ ಖರೀದಿಗೆ ಅವಕಾಶ ನೀಡುವುದರಿಂದ ಜನಜಂಗುಳಿ ತಡೆಯಲು ಕೂಡ ಆಗುತ್ತಿಲ್ಲ. ಸೋಂಕಿನ ಪ್ರಮಾಣವು ನಿಯಂತ್ರಣಕ್ಕೆ ಬರುತ್ತಿಲ್ಲ. ಅದರ ಬದಲು ಎರಡು ವಾರಗಳ ಸಂಪೂರ್ಣ ಲಾಕ್‌ಡೌನ್ ಮಾಡುವುದರಿಂದ ಜನರ ಓಟಾಟಕ್ಕೆ ಬ್ರೇಕ್ ಬೀಳಲಿದೆ. ಆಗ ಸೋಂಕು ಕೂಡ ನಿಯಂತ್ರಣಕ್ಕೆ ಬರಲಿದೆ ಎಂದು ಹೇಳಿದ್ದಾರೆ.

**ತಜ್ಞರು ಹೇಳುವುದೇನು:**

- ಲಸಿಕೆ ಬಂದಿದೆ, ಹೀಗಾಗಿ ಲಾಕ್‌ಡೌನ್ ಅಗತ್ಯವಿಲ್ಲ ಎಂದು ಮೋದಿ ಹೇಳಿದ್ದರು.
- ಆದರೆ ಈಗ ಲಸಿಕೆ ತಡವಾಗುತ್ತಿದೆ, ಜನರ ಕರ್ಫ್ಯೂ ಉಲ್ಲಂಘಿಸಿ ಬೇಕಾಬಿಟ್ಟೀ ಓಡಾಡುತ್ತಿದ್ದಾರೆ.
- ಸೋಂಕಿತರ ಸಂಖ್ಯೆ ಹೆಚ್ಚಿ ಆರೋಗ್ಯ ವ್ಯವಸ್ಥೆ ಕುಸಿದು ಬೆಡ್ ಸಿಗದೆ ಸಾವು ಹೆಚ್ಚಬಹುದು.
- ಈಗಾಗಲೇ ಊರಿಗೆ ಮರಳಿರುವವರಿಂದ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸೋಂಕು ಏರಿಕೆಯಾಗುತ್ತಿದೆ.

ಆಧಾರ:ಕನ್ನಡಪ್ರಭ, ದಿನಾಂಕ:04.05.2021.

## 6. ಕರ್ನಾಟಕಕ್ಕೆ ಆಕ್ಸಿಜನ್ ನೀಡಿ: ಸುಪ್ರೀಂ

ಕೊರೋನಾ 2ನೇ ಅಲೆಯಿಂದ ಜರ್ಝರಿತವಾಗಿರುವ ಕರ್ನಾಟಕಕ್ಕೆ ಪ್ರತಿನಿತ್ಯ 1200 ಮೆಟ್ರಿಕ್ ಟನ್ ಆಮ್ಲಜನಕ ಪೂರೈಸಬೇಕೆಂಬ ಹೈಕೋರ್ಟ್ ನಿರಾಕರಿಸಿದೆ. ಕರ್ನಾಟಕದ ನಾಗರಿಕರು ಆಮ್ಲಜನಕ ಕೊರತೆಯಿಂದ ತತ್ತರಿಸಲು ಬಿಡಲಾಗದು ಎಂದು ಹೇಳಿರುವ ನ್ಯಾಯಾಲಯ ಹೈಕೋರ್ಟ್ ಆದೇಶದಲ್ಲಿ ಮಧ್ಯಪ್ರವೇಶಿಸಲು ನಿರಾಕರಿಸಿದೆ. ಇದರಿಂದಾಗಿ ಆದೇಶಕ್ಕೆ ತಡೆ ನೀಡಲು ಕೋರಿದ್ದ ಕೇಂದ್ರ ಸರ್ಕಾರಕ್ಕೆ ಹಿನ್ನಡೆಯಾಗಿದೆ.

ರಾಜ್ಯಕ್ಕೆ 965 ಮೆಟ್ರಿಕ್ ಟನ್ ಆಕ್ಸಿಜನ್ ಸರಬರಾಜಾಗುತ್ತಿದ್ದು, ಆ ಪ್ರಮಾಣವನ್ನು 1200 ಮೆಟ್ರಿಕ್ ಟನ್‌ಗೆ ಹೆಚ್ಚಳ ಮಾಡಬೇಕು ಎಂದು ಸೂಚಿಸಿ ಕರ್ನಾಟಕ ಹೈಕೋರ್ಟ್ ಮೇ 5 ರಂದು ಆದೇಶಿಸಿರುವುದು ಸರಿಯಾಗಿದೆ. ಆ ಆದೇಶ ವಿವೇಚನೆಯಿಂದ ಕೂಡಿದೆ. ನ್ಯಾಯಾಂಗದ ಅಧಿಕಾರವನ್ನು ಸೂಕ್ತ ರೀತಿಯಲ್ಲಿ ಬಳಸಿಕೊಳ್ಳಲಾಗಿದೆ ಎಲ್ಲ ವಾಸ್ತವಾಂಶ, ಸಂದರ್ಭಗಳನ್ನು ಪರಿಗಣಿಸಿ ಈ ಆದೇಶವನ್ನು ಹೊರಡಿಸಲಾಗಿದೆ. ಕರ್ನಾಟಕ ಸರ್ಕಾರವೇ 1165 ಮೆಟ್ರಿಕ್ ಟನ್ ಆಮ್ಲಜನಕ ಬೇಕು ಎಂದು ಅಂದಾಜಿಸಿದೆ. ಅದರ ಆಧಾರದಲ್ಲಿ ಆದೇಶ ಹೊರಡಿಸಲಾಗಿದೆ ಎಂದು ನ್ಯಾಯಾಮೂರ್ತಿಗಳಾದ ಡಿ.ವೈ.ಚಂದ್ರಚೂಡ್ ಹಾಗೂ ಎಂ.ಆರ್.ಶಾ ಅವರಿದ್ದ ಪೀಠ ಅಭಿಪ್ರಾಯಪಟ್ಟಿದೆ.

ಕರ್ನಾಟಕ ಹೈಕೋರ್ಟ್ ತನ್ನ ಆದೇಶ ಹೊರಡಿಸುವ ಮುನ್ನ ಚಾಮರಾಜನಗರ ಹಾಗೂ ಕಲಬುರಗಿಯಲ್ಲಿ ಆಕ್ಸಿಜನ್ ಕೊರತೆಯಿಂದ ಸಂಭವಿಸಿದ ಸಾವುಗಳನ್ನು ಗಣನೆಗೆ ತೆಗೆದುಕೊಂಡಿದೆ. ನ್ಯಾಯಾಧೀಶರು ಮನುಷ್ಯರೇ. ಅವರು ಅನುಭವಿಸುತ್ತಿರುವ ಬವಣೆಗಳನ್ನು ಅವರು ನೋಡುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಹೈಕೋರ್ಟ್‌ಗಳು ಕಣ್ಣು ಮುಚ್ಚಿಕೊಂಡಿರಲಾಗದು ಎಂದು ಹೇಳಿದೆ. ಪ್ರತಿ ರಾಜ್ಯಕ್ಕೂ ಆಮ್ಲಜನಕ ಬೇಕು. ಹಾಗಂತ ಎಲ್ಲ ಹೈಕೋರ್ಟ್‌ಗಳು ಈ ರೀತಿ ನಿರ್ದೇಶನ ನೀಡಲು ಮುಂದಾದರೆ ದೊಡ್ಡ ಸಮಸ್ಯೆ ಸೃಷ್ಟಿಯಾಗುತ್ತದೆ ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಹೇಳಿದರು. ಆದರೆ ಅವರ ವಾದವನ್ನು ಸುಪ್ರೀಂಕೋರ್ಟ್ ತಿರಸ್ಕರಿಸಿತು.

**ಸುಪ್ರೀಂಕೋರ್ಟ್ ಹೇಳಿದ್ದೇನು:**

- ಕರ್ನಾಟಕ ಹೈಕೋರ್ಟ್ ಆದೇಶ ಸರಿಯಾಗಿದೆ, ವಿವೇಚನೆಯಿಂದ ಕೂಡಿದೆ.
- ಚಾಮರಾಜನಗರ, ಕಲಬುರಗಿಯಲ್ಲಿ ಆಕ್ಸಿಜನ್ ಕೊರತೆಯಿಂದ ಸಾವು ಸಂಭವಿಸಿವೆ.
- ನ್ಯಾಯಮೂರ್ತಿಗಳು ಮನುಷ್ಯರೇ ಜನರ ಬವಣೆಯನ್ನು ಅವರು ನೋಡಿದ್ದಾರೆ.
- ನ್ಯಾಯಾಧೀಶರು ಇದನ್ನು ನೋಡಿಯೂ ಕಣ್ಣು ಮುಚ್ಚಿಕೊಂಡು ಇರಲಾಗದು.
- ಕರ್ನಾಟಕ ಸರ್ಕಾರವೇ ನಿತ್ಯ 1165 ಮೆಟ್ರಿಕ್ ಟನ್ ಆಮ್ಲಜನಕ ಬೇಕು ಎಂದಿದೆ.
- ರಾಜ್ಯದ ಬೇಡಿಕೆ ಮನಗಂಡು ಹೈಕೋರ್ಟ್ 1200 ಟನ್ ಆಕ್ಸಿಜನ್‌ಗೆ ಆದೇಶಿಸಿದೆ.

ಆಧಾರ: ಕನ್ನಡಪ್ರಭ, ದಿನಾಂಕ:08.05.2021.

## 7. ಸದನದಲ್ಲಿ ಮಂಡಿಸಿದ ವಕ್ಫ್ ಆಸ್ತಿ ವರದಿ ವಿವರ ಸಲ್ಲಿಸಲು ಆದೇಶ

ರಾಜ್ಯದಲ್ಲಿ ವಕ್ಫ್ ಆಸ್ತಿಗಳ ಒತ್ತುವರಿ ಹಾಗೂ ದುರ್ಬಳಕೆ ಸಂಬಂಧ ರಾಜ್ಯ ಅಲ್ಪ ಸಂಖ್ಯಾತರ ಆಯೋಗ ಸಲ್ಲಿಸಿರುವ ವಿಶೇಷ ವರದಿಯ ಶಿಫಾರಸ್ಸುಗಳನ್ನು ವಿಧಾನ ಮಂಡಲದ ಉಭಯ ಸದನಗಳಲ್ಲಿ ಮಂಡಿಸಿರುವ ಬಗ್ಗೆ ವಿವರ ನೀಡುವಂತೆ ರಾಜ್ಯ ಸರ್ಕಾರಕ್ಕೆ ಆದೇಶಿಸಿದೆ.

ವಕ್ಫ್ ಆಸ್ತಿಗಳ ಒತ್ತುವರಿ ಹಾಗೂ ದುರ್ಬಳಕೆಯನ್ನು ಸಿಬಿಐ ತನಿಖೆಗೆ ವಹಿಸುವಂತೆ ಕೋರಿ ಮಾಜಿ ಸಚಿವ ಎಸ್.ಕೆ.ಕಾಂತಾ ಸಲ್ಲಿಸಿರುವ ಅರ್ಜಿಯನ್ನು ಸಿಜೆ ಎ.ಎಸ್. ಓಕಾ ನೇತೃತ್ವದ ಪೀಠ ವಿಚಾರಣೆ ನಡೆಸಿತು. ವಿಚಾರಣೆ ನಂತರ, ರಾಜ್ಯದಲ್ಲಿ ವಕ್ಫ್ ಆಸ್ತಿಗಳ ಒತ್ತುವರಿ ಹಾಗೂ ದುರ್ಬಳಕೆ ಸಂಬಂಧ ರಾಜ್ಯ ಅಲ್ಪಸಂಖ್ಯಾತರ ಆಯೋಗ 2012ರಲ್ಲಿ ಸಲ್ಲಿಸಿರುವ ವಿಶೇಷ ವರದಿಯ ಶಿಫಾರಸ್ಸುಗಳನ್ನು ರಾಜ್ಯ ಅಲ್ಪಸಂಖ್ಯಾತರ ಆಯೋಗ ಕಾಯಿದೆ 1994ರ ಸೆಕ್ಷನ್ 110(2) ಪ್ರಕಾರ ವಿಧಾನಮಂಡಲದ ಉಭಯ ಸದನಗಳಲ್ಲಿ ಮಂಡಿಸಿರುವ ಬಗ್ಗೆ ವಿವರ ನೀಡಬೇಕು ಎಂದು ನ್ಯಾಯಪೀಠ ಸೂಚಿಸಿತು.

ಆಯೋಗದ ವರದಿ ಆಧರಿಸಿ ಲೋಕಾಯುಕ್ತ ಸಂಸ್ಥೆಯು 2016ರಲ್ಲಿ ನೀಡಿದ ವರದಿ ಮೇರೆಗೆ ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಸೆಕ್ಷನ್ 12(2) ಪ್ರಕಾರ ಕೈಗೊಂಡ ಕ್ರಮಗಳ ಮಾಹಿತಿ ಒದಗಿಸಲು ಸರ್ಕಾರಕ್ಕೆ ನಿರ್ದೇಶನ ನೀಡಿದ ಪೀಠ, ವಿಚಾರಣೆಯನ್ನು ಆಗಸ್ಟ್ 8ಕ್ಕೆ ಮುಂದೂಡಿತು.

ಅರ್ಜಿದಾರರ ಪರ ವಕೀಲ ಶ್ರೀಧರ ಪ್ರಭು ಅಲ್ಪಸಂಖ್ಯಾತರ ಆಯೋಗದ ವಿಶೇಷ ವರದಿಯಲ್ಲಿ ಮಾಡಲಾದ ಶಿಫಾರಸ್ಸುಗಳನ್ನು ಸರ್ಕಾರ ಜಾರಿಗೊಳಿಸಿಲ್ಲ ಆ ವರದಿಯನ್ನು ನಿಯಮದಂತೆ ಸದನದಲ್ಲಿ ಮಂಡಿಸಿಲ್ಲ ಜೊತೆಗೆ ಲೋಕಾಯುಕ್ತ ವರದಿಯನ್ನು ಜಾರಿಗೊಳಿಸಿಲ್ಲ ಎಂದರು.

ಆಧಾರ:ವಿಜಯ ಕರ್ನಾಟಕ, ದಿನಾಂಕ:23.06.2021.

## 8. ಕೆರೆ ಒತ್ತುವರಿ ತೆರವಿಗೆ ಮೂರು ವಾರಗಳಲ್ಲಿ ನಿರ್ಧಾರ ಕೈಗೊಳ್ಳಿ

ನಗರದ ಕಾಚರಕನಹಳ್ಳಿ ಕೆರೆ ಪ್ರದೇಶದಲ್ಲಿ ಸರ್ಕಾರಿ ಸಂಸ್ಥೆಗಳು ಹಾಗೂ ಖಾಸಗಿಯವರಿಂದ ಆಗಿರುವ ಎಲ್ಲ ಒತ್ತುವರಿ ತೆರವುಗೊಳಿಸಲು ಅನುಸರಿಸಲಾಗುವ ವಿಧಾನಗಳ ಬಗ್ಗೆ 3 ವಾರಗಳಲ್ಲಿ ನಿರ್ಧಾರ ಕೈಗೊಳ್ಳುವಂತೆ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶಿಸಿದೆ.

ಕಾಚರಕನಹಳ್ಳಿ ಕೊಳೆಗೇರಿ ಪ್ರದೇಶದಲ್ಲಿ ವಾಸಿಸುತ್ತಿದ್ದ ವಲಸೆ ಕಾರ್ಮಿಕರ ಗುಡಿಸಲುಗಳಿಗೆ ಬೆಂಕಿ ಹಚ್ಚಿದ ಪ್ರಕರಣದ ಬಗ್ಗೆ ವಕೀಲೆ ವೈಶಾಲಿ ಹೆಗಡೆ ಬರೆದ ಪತ್ರ ಆಧರಿಸಿ ದಾಖಲಿಸಿಕೊಂಡಿರುವ ಸ್ವಯಂಪ್ರೇರಿತ ಪಿಐಎಲ್ ಅನ್ನು ಮುಖ್ಯ ನ್ಯಾಯಮೂರ್ತಿ ಎ.ಎಸ್.ಓಕಾ ನೇತೃತ್ವದ ವಿಭಾಗೀಯ ಪೀಠ ವಿಚಾರಣೆ ನಡೆಸಿತು.

ಗುಡಿಸಲುಗಳಿದ್ದ ಜಾಗ ಕೆರೆ ಪ್ರದೇಶವಾಗಿದ್ದು, ಕೆಲವರು ಅದನ್ನು ಒತ್ತುವರಿ ಮಾಡಿದ್ದಾರೆ ಎಂಬ ಆರೋಪದ ಹಿನ್ನೆಲೆಯಲ್ಲಿ ಆ ಜಾಗದ ಸಮೀಕ್ಷೆ ನಡೆಸಿ ವರದಿ ಸಲ್ಲಿಸುವಂತೆ ಅರ್ಜಿಯ ಹಿಂದಿನ ವಿಚಾರಣೆ ವೇಳೆ ಸರ್ಕಾರಕ್ಕೆ ನ್ಯಾಯಾಲಯ ನಿರ್ದೇಶಿಸಿತ್ತು.

ಸರ್ಕಾರದ ಪರ ವಕೀಲರು ಸಲ್ಲಿಸಿದ ಸಮೀಕ್ಷೆ ವರದಿಯನ್ನು ನ್ಯಾಯಪೀಠ ಪರಿಶೀಲಿಸಿತು. ಕೆರೆ ಪ್ರದೇಶದ 13.30 ಎಕರೆ ಜಾಗವನ್ನು ಖಾಸಗಿಯವರು ಒತ್ತುವರಿ ಮಾಡಿದ್ದು, 23.6 ಎಕರೆ ಸರ್ಕಾರದ ಪ್ರಾಧಿಕಾರಗಳಿಂದಲೇ ಒತ್ತುವರಿಯಾಗಿದೆ ಎಂದು ವರದಿಯಲ್ಲಿ ಹೇಳಲಾಗಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದಲೇ ಗರಿಷ್ಠ ಒತ್ತುವರಿಯಾಗಿದ್ದು (15.27 ಎಕರೆ). 7.30 ಎಕರೆ ಪ್ರದೇಶದಲ್ಲಿ ದೇವಸ್ಥಾನ ನಿರ್ಮಾಣ ಮಾಡಲಾಗಿದೆ ಎನ್ನಲಾಗಿದೆ. ಆದ್ದರಿಂದ, ಈ ಎಲ್ಲ ಒತ್ತುವರಿಗಳನ್ನು ಹೇಗೆ ತೆರವುಗೊಳಿಸಲಾಗುತ್ತದೆ ಎಂಬ ಬಗ್ಗೆ ಸರ್ಕಾರ ಮೂರು ವಾರಗಳಲ್ಲಿ ನಿರ್ಧಾರ ಕೈಗೊಳ್ಳಬೇಕು ಎಂದು ಸೂಚಿಸಿ, ವಿಚಾರಣೆಯನ್ನು ಮುಂದೂಡಿತು.

ಆಧಾರ:ವಿಜಯವಾಣಿ, ದಿನಾಂಕ:24.06.2021.

# ಭಾಗ–6

# ಹೊರ ರಾಜ್ಯಗಳ ಸುದ್ದಿಗಳು

## 1. Gujarat Assembly Passes, stricter bill on 'love jihad'

The Gujarat Assembly passed a bill proposing amendments to the Gujarat Freedom of Religion Act, 2003 paying way for more stringent punishment for forced religious conversions through marriage. The amendment bill provided for up to ten years of jail for the dulent or forced conversion by marriage.

As per the government the Gujarat Freedom of Religion (Amendment) Bill, 2021 sought to curtail "emerging trend in which women are lured to marriage for the purpose of religious conversion". The main opposition Congress voted against the bill.

Many states like Uttar Pradesh, Uttarkhand, Madhya Pradesh, Arunachal Pradesh, Chhattisgarh, Jharkhand and Odisha have enacted anti-conversion laws while states like Haryana and Karnataka are working towards bringing in a similar law.

The BJP government in Gujarat claimed that love jihad or forced conversion had become a major law and order issue. After amendments, the Act has sufficient provisions against any type of forced conversion or conversion through fraudulent ways, the BJP said.

Proposing the amendments Minister of State for Home. Pradipsingh Jadeja, said "The Gujarat Freedom of Religion Act, 2003 seeks to deal with religious conversion, through allurement force or by misrepresentation or by any other fraudulent means. Hindu girls have been lured by vidharmi boys using fake Hindu names and thereafter forcefully converted to other religious.

Tablighi Jamat and other such organisations which want to destabilize Indian Hindu population fund such activities in an organized way said Jadeja.

The minister said that not only girls but their parents and family members also face life threats and harassment. "Social organizations like RSS and VHP which try to save the girls and their families from harassment face life threats too, so it has become a law and order problem and amendments to the law are required Jadeja said.

The Congress vehement opposed the Bill. The leader of opposition and senior Congress leader Pradesh BJP desisted from using the words love jihad in the proposed amendments.

Courtesy:- Times of India, Date: 02.04.2021

## 2. Disqualification pleas: Goa Speaker to rule on April 20

Nudged by the Supreme Court, the Goa Assembly Speaker agreed to advance the date of his decision on the disqualification petitions filed against 10 former Congress MLAs who merged with the BJP in 2019 from April 29.

Chief Justice of India Sharad A.Bobde asked Solicitor General Tushar Mehta, who appeared for the Speakers office, whether the initial date of April 29 was fixed with an eye on the fact that he would retire on April 23.

You want the matter to go to another Bench, which will have to hear the case all over again. Chief Justice Bobde, who heads the three judge hearing the case, asked the law officer.

It was never that Idea Have it in April 21-22 Mr. Mehta said.

The court said the Speaker had reserved the disqualification proceedings for orders on February 26. April 29 is not acceptable by this Bench... Ask him (Speaker) to dispose of the petition preferably this week itself. Chief Justice Bobde told Mr. Mehta. The Solicitor General said the Speaker was a constitutional authority who should be free to exercise his discretion in these issues.

But Senior Advocate Kapil Sibal, appearing for the petitioner and the Congress party, said the Speaker was making a mockery of the whole process, under the Tenth Scheduled of the Constitution. He has not decided the petitions for the past 19 months. There is a judgement of this court which says the Speaker should decide in four months... Mr. Sibal argued.

Finally after receiving instructions, Mr. Mehta informed the court that the Speaker would decide on April 20. The court scheduled a hearing on April 21.

On January 4, the CJI had orally observed that nobody can have a vested right to delay a plea filed by Goa Congress leader Girish Chodankar challenging the Speakers delay of over 19 months.

Courtesy:- Times of India, Date: 02.04.2021

## 3. ಬಿಜೆಪಿ ಅಭ್ಯರ್ಥಿ ಪತ್ನಿ ಕಾರಿನಲ್ಲಿ ಮತಯಂತ್ರ

ಅಸ್ಸಾಂನ ರತಬಾಡಿ ವಿಧಾನಸಭಾ ಕ್ಷೇತ್ರದ ಮತ ಗಟ್ಟೆಯೊಂದರ ಚುನಾವಣಾಧಿಕಾರಿಯ ಮತದಾನದ ಬಳಿಕ ಮತ ಯಂತ್ರವನ್ನು ಬಿಜೆಪಿ ಅಭ್ಯರ್ಥಿಯ ಪತ್ನಿಯ ಕಾರಿನಲ್ಲಿ ಸಾಗಿಸಿದ್ದು ಪತ್ತೆಯಾಗಿದೆ. ಈ ಮತಗಟ್ಟೆಯಲ್ಲಿ ಮರು ಮತದಾನಕ್ಕೆ ಚುನಾವಣಾ ಆಯೋಗವು ಆದೇಶ ನೀಡಿದೆ.

ಚುನಾವಣಾಧಿಕಾರಿ ಮತ್ತು ಇತರ ಮೂವರು ಅಧಿಕಾರಿಗಳನ್ನು ಅಮಾನತ್ತು ಮಾಡಲಾಗಿದೆ ಎಂದು ಆಯೋಗವು ಹೇಳಿದೆ. ಮತಯಂತ್ರದ ಮೊಹರು ಒಡೆದಿಲ್ಲ. ಹಾಗಿದ್ದರೂ 149ನೇ ಸಂಖ್ಯೆಯ ಮತಗಟ್ಟೆಯಲ್ಲಿ ಮರು ಮತದಾನ ನಡೆಸಲು ನಿರ್ಧರಿಸಲಾಗಿದೆ. ಈ ಬಾರಿ ಇನ್ನಷ್ಟು ಎಚ್ಚರ ವಹಿಸಲಾಗುವುದು ಎಂದು ಆಯೋಗವು ತಿಳಿಸಿದೆ. ಮತಯಂತ್ರ ಸಾಗಾಟಕ್ಕೆ ಸಂಬಂಧಿಸಿ ವರದಿ ನೀಡುವಂತೆ ವಿಶೇಷ ವೀಕ್ಷಕರಿಗೆ ಸೂಚಿಸಲಾಗಿದೆ.

**ಆಯೋಗ ನೀಡಿದ ಮಾಹಿತಿ**: ರತಬಾಡಿ ಕ್ಷೇತ್ರದ 149ನೇ ಮತಗಟ್ಟೆಯಲ್ಲಿ ಮತದಾನದ ಬಳಿಕ ಆರು ಗಂಟೆಗೆ ಚುನಾವಣಾಧಿಕಾರಿ ಮತ್ತು ಇತರ ಮೂವರು ಸಿಬ್ಬಂದಿ ಚುನಾವಣಾ ಕರ್ತವ್ಯಕ್ಕೆ ನಿಯೋಜಿಸಲಾಗಿದ್ದ ವಾಹನದಲ್ಲಿ ಹೊರಟಿದ್ದಾರೆ.

ಒಬ್ಬ ಕಾನ್ಸ್ಟೇಬಲ್ ಮತ್ತು ಒಬ್ಬ ಹೋಮ್‌ಗಾರ್ಡ್ ಇದ್ದ ಬೆಂಗಾವಲು ವಾಹನವು ಜೊತೆಗಿತ್ತು. ಈ ಸಂದರ್ಭದಲ್ಲಿ ಭಾರಿ ಮಳೆ ಸುರಿಯುತ್ತಿತ್ತು. ಮತ ಯಂತ್ರ ಇದ್ದ ವಾಹನದಲ್ಲಿ ತೊಂದರೆ ಕಾಣಿಸಿಕೊಂಡಿತು. ಸಂಚಾರ ದಟ್ಟಣೆ ಮತ್ತು ಮಳೆಯಿಂದಾಗಿ ಮತಯಂತ್ರ ಇದ್ದ ಕಾರು ಮತ್ತು ಬೆಂಗಾವಲು ವಾಹನ ಪ್ರತ್ಯೇಕಗೊಂಡವು.

ಚುನಾವಣಾ ಅಧಿಕಾರಿಯ ವಲಯ ಅಧಿಕಾರಿಗೆ ಕರೆ ಮಾಡಿ ಹೊಸ ವಾಹನ ಕಳುಹಿಸಿಕೊಡಲು ಕೋರಿದ್ದಾರೆ. ಮತಯಂತ್ರ ತಲುಪಿಸಬೇಕಿರುವ ಕೇಂದ್ರಕ್ಕೆ ಬೇಗನೆ ತಲುವುದಕ್ಕಾಗಿ ರಸ್ತೆಯಲ್ಲಿ ಬಂದ ವಾಹನವೊಂದನ್ನು ಏರಿಕೊಂಡು ಅಧಿಕಾರಿಗಳು ಹೋಗಿದ್ದಾರೆ. ಮತ ಯಂತ್ರವನ್ನು ಆ ವಾಹನದಲ್ಲಿ ಇರಿಸಿದ್ದಾರೆ. ಆ ಕಾರಿನ ಮಾಲೀಕರು ಯಾರು ಎಂಬುದನ್ನು ಆ ಸಂದರ್ಭದಲ್ಲಿ ಅಧಿಕಾರಿಗಳು ಖಚಿತಪಡಿಸಿಕೊಂಡಿಲ್ಲ ಎಂದು ಆಯೋಗವು ಹೇಳಿದೆ.

ಕರೀಮ್‌ಗಂಜ್‌ನತ್ತ ಸಾಗುತ್ತಿದ್ದ ವಾಹನವು ವಾಹನ ದಟ್ಟಣೆಯಿಂದಾಗಿ ನಿಧಾನವಾಗಿತ್ತು. ಈ ಸಂದರ್ಭದಲ್ಲಿ ಸುಮಾರು 50 ಜನರಿದ್ದ ಗುಂಪು ವಾಹನವನ್ನು ಸುತ್ತುವರಿದು, ಕಲ್ಲು ತೂರಾಟ ನಡೆಸಿದೆ. ಇದು ಪಕ್ಕದ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕೃಷ್ಣೇಂದು ಪಾಲ್ ಅವರ ಕಾರು. ತಿರುಚುವುದಕ್ಕಾಗಿಯೇ ಮತ ಯಂತ್ರವನ್ನು ಈ ಕಾರಿನಲ್ಲಿ ಒಯ್ಯಲಾಗುತ್ತಿದೆ ಎಂದು ಗುಂಪು ಆರೋಪಿಸಿದೆ. ದಾಖಲೆಗಳನ್ನು ಪರಿಶೀಲಿಸಿದಾಗ ವಾಹನವು ಕೃಷ್ಣೇಂದು ಅವರ ಪತ್ನಿ ಮಧುವಿತಾ ಹೆಸರಿನಲ್ಲಿ ಇರುವುದು ಗೊತ್ತಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಅಧಿಕಾರಿಗಳ ಮೇಲೆ ಹಲ್ಲೆ ನಡೆಸಿದ ಸ್ಥಳೀಯರು ಅವರನ್ನು ಒತ್ತೆ ಇರಿಸಿಕೊಂಡರು. ಬಳಿಕ ಪೊಲೀಸರು ಸ್ಥಳಕ್ಕೆ ಧಾವಿಸಿ, ಅಧಿಕಾರಿಗಳನ್ನು ರಕ್ಷಿಸಿದರು.

**ಮತಯಂತ್ರ – ಮರು ಚಿಂತನೆ ಅಗತ್ಯ:** ಮತಯಂತ್ರ ಬಳಕೆಯ ಬಗ್ಗೆ ಗಂಭೀರ ಮರುಚಿಂತನೆ ನಡೆಸಬೇಕಾದ ಅಗತ್ಯ ಇದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಹೇಳಿದ್ದಾರೆ. ಇಂತಹ ದೂರುಗಳು ಬಂದಾಗ ಆಯೋಗವು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಮತಯಂತ್ರ ಬಳಕೆ ಬಗ್ಗೆ ಎಲ್ಲ ರಾಷ್ಟ್ರೀಯ ಪಕ್ಷಗಳು ಗಂಭೀರ ಮರು ಮೌಲ್ಯಮಾಪನ ನಡೆಸಬೇಕು ಎಂದಿದ್ದಾರೆ.

ಪ್ರತಿ ಬಾರಿ ಚುನಾವಣೆ ನಡೆದಾಗಲೂ ಖಾಸಗಿ ವಾಹನದಲ್ಲಿ ಮತ ಯಂತ್ರ ಸಿಗುತ್ತದೆ. ಎಲ್ಲ ಪ್ರಕರಣಗಳಲ್ಲಿಯೂ ಒಂದು ವಿಚಾರ ಸಾಮಾನ್ಯವಾಗಿರುವುದು ಆಶ್ಚರ್ಯಕರವೇನೂ ಅಲ್ಲ. ಮತಯಂತ್ರ ಸಿಕ್ಕ ವಾಹನವು ಬಿಜೆಪಿ ಅಭ್ಯರ್ಥಿಯದ್ದು ಅಥವಾ ಅವರ ಸಹವರ್ತಿಗಳದ್ದು ಆಗಿರುತ್ತದೆ. ಇಂತಹ ಹಲವು ಪ್ರಕರಣಗಳು ವರದಿಯಾಗಿದ್ದರೂ ಈ ಬಗ್ಗೆ ಕೈಗೊಂಡಿರುವ ಕ್ರಮಗಳು ಅತ್ಯಲ್ಪ ಎಂದು ಪ್ರಿಯಾಂಕ ಹೇಳಿದ್ದಾರೆ.

ಆಧಾರ:ಪ್ರಜಾವಾಣಿ, ದಿನಾಂಕ:03.04.2021

## 4. ಒಡಿಶಾ ವಿಧಾನಸಭೆ ಸ್ಪೀಕರ್ ಪೀಠದತ್ತ ಚಪ್ಪಲಿ, ಕಾಗದ ಎಸೆತ

ಒಡಿಶಾ ಸಭಾಪತಿ ಪೀಠದಲ್ಲಿ ಕೆಲ ವಿಪಕ್ಷ ಸದಸ್ಯರು ಚಪ್ಪಲಿ, ಇಯರ್‌ಫೋನ್ ಎಸೆದು ಅಗೌರವ ತೋರಿದ ಘಟನೆಗೆ ಒಡಿಶಾ ವಿಧಾನಸಭೆ ಸಾಕ್ಷಿಯಾಗಿದೆ. ವಿಧಾನಸಭೆಯಲ್ಲಿ ಲೋಕಾಯುಕ್ತ (ತಿದ್ದುಪಡಿ) ಮಸೂದೆಯನ್ನು ಚರ್ಚೆ ಇಲ್ಲದೆ ಅನುಮೋದಿಸಲಾಗಿತ್ತು. ಇದಕ್ಕೂ ಮುನ್ನ ಸಭಾಪತಿ ಎಸ್.ಎನ್.ಪಥ್ರೋ ಗಣಿಗಾರಿಕೆಯಲ್ಲಿನ ಭ್ರಷ್ಟಾಚಾರದ ಬಗ್ಗೆ ಚರ್ಚೆ ಮನವಿ ತಿರಸ್ಕರಿಸಿದ್ದರು. ಇದರಿಂದ ಆಕ್ರೋಶಗೊಂಡ ಇಬ್ಬರು ಬಿಜೆಪಿ ಶಾಸಕರಾದ ಮಿಶ್ರಾ ಮತ್ತು ಸೇಥಿ ತಮ್ಮ ಕುರ್ಚಿಯ ಮೇಲೆ ನಿಂತು ಸಭಾಪತಿ ಪೀಠದೆಡೆಗೆ ಚಪ್ಪಲಿ, ಕಾಗದ, ಪೆನ್ನು, ಕಸದ ಬುಟ್ಟಿ ಮತ್ತು ಇಯರ್‌ಫೋನ್ ಎಸೆದರು.

ಆಧಾರ:ಕನ್ನಡಪ್ರಭ, ದಿನಾಂಕ:04.04.2021

## 5. ಮಹಾ ಸೆಮಿಲಾಕ್

ಕೊರೋನಾ ಸೋಂಕು ಪ್ರಕರಣಗಳು ದಿಢೀರ್ ಹೆಚ್ಚಳವಾಗುತ್ತಿರುವಂತೆಯೇ ಮಹಾರಾಷ್ಟ್ರ ಸರ್ಕಾರ ಸೆಮಿ ಲಾಕ್‌ಡೌನ್ ಘೋಷಿಸುವ ಮೂಲಕ ಸೋಂಕಿನ ವ್ಯಾಪಿಸುವಿಕೆಗೆ ಬ್ರೇಕ್ ಹಾಕಲು ಮುಂದಾಗಿದೆ. ಇತ್ತ ಕರ್ನಾಟಕದಲ್ಲಿ ಜಿಮ್‌ಗಳ ಸ್ಥಗಿತಕ್ಕೆ ಆದೇಶ ಮಾಡಿದ್ದ ರಾಜ್ಯ ಸರ್ಕಾರ, ಪರಿಷ್ಕೃತ ಆದೇಶ ಹೊರಡಿಸಿದ್ದು ಶೇ.50 ರಷ್ಟು ಜನರೊಂದಿಗೆ ಜಿಮ್ ತೆರೆಯಬಹುದು ಎಂದಿದೆ.

ಮಹಾರಾಷ್ಟ್ರದಲ್ಲಿ ಸತತ 3 ದಿನಗಳಿಂದಲೂ 50 ಸಾವಿರದಷ್ಟು ಪ್ರಕರಣಗಳು ಪತ್ತೆಯಾದ ಹಿನ್ನೆಲೆಯಲ್ಲಿ ವಾರಾಂತ್ಯದ ಲಾಕ್‌ಡೌನ್, ನೈಟ್ ಕರ್ಫ್ಯೂ, ಸೆಕ್ಷನ್ 144ರನ್ವಯ ನಿಷೇಧಾಜ್ಞೆ ಜಾರಿ ಮಾಡಿ ಸಿಎಂ. ಉದ್ಧವ್ ಠಾಕ್ರೆ ಆದೇಶ ಹೊರಡಿಸಿದ್ದಾರೆ. ಸೋಮವಾರದಿಂದಲೇ ಈ ನಿಯಮಗಳು ಅನ್ವಯವಾಗಲಿದ್ದು, ಏ.30ರವರೆಗೂ ಮುಂದುವರಿಯಲಿದೆ.

ಮಹಾರಾಷ್ಟ್ರ ಸಂಪುಟ ಸಭೆಯಲ್ಲಿ ಸಂಪೂರ್ಣ ಲಾಕ್‌ಡೌನ್ ಹೇರುವುದು ಬೇಡ ಎಂಬ ಅಭಿಪ್ರಾಯ ಕೇಳಿಬಂದಿದೆ. ಈ ಹಿನ್ನೆಲೆಯಲ್ಲಿ ಭಾಗಶಃ ನಿರ್ಬಂಧ ಹೇರುವ ನಿರ್ಧಾರಕ್ಕೆ ಬರಲಾಗಿದೆ.

**ಎಲ್ಲರ ವಿಶ್ವಾಸದೊಂದಿಗೆ ನಿರ್ಧಾರ**: ಲಾಕ್‌ಡೌನ್ ಕುರಿತು ಇನ್ನೆರಡು ದಿನಗಳಲ್ಲಿ ಅಂತಿಮ ನಿರ್ಧಾರ ಕೈಗೊಳ್ಳುವುದಾಗಿ ಘೋಷಿಸಿದ್ದ ಸಿಎಂ. ಉದ್ಧವ್ ಠಾಕ್ರೆ, ಎಲ್ಲ ರಾಜಕೀಯ ಪಕ್ಷಗಳ ನಾಯಕರು ಹಾಗೂ ಮಲ್ಟಿಪ್ಲೆಕ್ಸ್ ಜಿಮ್, ಪತ್ರಿಕೆಗಳ ಮಾಲೀಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಬೆಳಿಗ್ಗೆವರೆಗೂ ಸಮಾಲೋಚನೆ ನಡೆಸಿ ಸಂಜೆ ವೇಳೆಗೆ ತೀರ್ಮಾನ ಘೋಷಿಸಿದ್ದಾರೆ. ಇದಕ್ಕೂ ಮುನ್ನ ಮಾಜಿ ಸಿಎಂ. ಪ್ರತಿಪಕ್ಷ ನಾಯಕ ದೇವೇಂದ್ರ ಫಡ್ನವೀಸ್, ಎಂಎನ್‌ಎಸ್ ಮತ್ತು ರಾಜ್ ಠಾಕ್ರೆ ಅವರೊಂದಿಗೂ ಮಾತುಕತೆ ನಡೆಸಿ, ನಿರ್ಬಂಧ ಹೇರಲು ಬೆಂಬಲ ಕೋರಿದ್ದರು. ಅದಕ್ಕೆ ಇವರಿಬ್ಬರೂ ಸಕಾರಾತ್ಮಕವಾಗಿ ಸ್ಪಂದಿಸಿದ್ದರು.

**ವಿಶೇಷ ಅಭಿಯಾನ**: ಸೋಂಕಿತರ ಸಂಖ್ಯೆ ಏರುಗತಿಯಲ್ಲಿ ಸಾಗುತ್ತಿರುವ ಹಿನ್ನೆಲೆಯಲ್ಲಿ ಪ್ರಧಾನಿ ಮೋದಿ ಉನ್ನತ ಮಟ್ಟದ ಸಭೆ ನಡೆಸಿದ್ದಾರೆ. ಪರೀಕ್ಷೆ ಸಂಪರ್ಕಿತರ ಪತ್ತೆ ಚಿಕಿತ್ಸೆ ಕೊರೋನಾ ಮಾರ್ಗಸೂಚಿ ಪಾಲನೆ ಮತ್ತು ಲಸಿಕೆ ಸ್ವೀಕಾರದಂತಹ 5 ಅಂಶಗಳ ಕಾರ್ಯತಂತ್ರವನ್ನು ಅನುಸರಿಸಿದರೆ ಸೋಂಕಿಗೆ ಕಡಿವಾಣ ಹಾಕಲು ಸಾಧ್ಯ ಎಂದು ಅವರು ಸಲಹೆ ನೀಡಿದ್ದಾರೆ. ಶೇ.100ರಷ್ಟು ಮಾಸ್ಕ್ ಬಳಕೆ, ವೈಯಕ್ತಿಕ ನೈರ್ಮಲ್ಯ, ಸಾರ್ವಜನಿಕ ಸ್ಥಳಗಳಲ್ಲಿ ಸ್ಯಾನಿಟೇಶನ್‌ಗೆ ಮಹತ್ವ ನಡೆಸುವ ಘೋಷಣೆಯನ್ನು ಮಾಡಿದ್ದಾರೆ.

**ಜಿಮ್‌ಗಳಲ್ಲಿ ಶೇ.50 ಅನುಮತಿ**: ಜಿಮ್‌ಗಳ ಮೇಲೆ ಕರ್ನಾಟಕ ಸರ್ಕಾರ ವಿಧಿಸಿದ್ದ ಕಠಿಣ ನಿಯಮವನ್ನು ಸಡಿಲಗೊಳಿಸಿದ್ದು ಶೇ.50 ಭರ್ತಿಯೊಂದಿಗೆ, ಕಾರ್ಯಾಚರಣೆ ನಡೆಸಲು ಅನುಮತಿ ನೀಡಲಾಗಿದೆ. ಜಿಮ್ ಮಾಲೀಕರ ಮನವಿ ಮೇರೆಗೆ ಅವರುಗಳ ಜೀವನೋಪಾಯವನ್ನು ಗಮನದಲ್ಲಿಟ್ಟುಕೊಂಡು ಮುಖ್ಯಮಂತ್ರಿಗಳು ನಿಯಮ ಸಡಿಲಿಕೆಗೆ ಸೂಚನೆ ನೀಡಿದ್ದಾರೆ. ಈ ಹಿನ್ನೆಲೆ ಪರಿಷ್ಕೃತ ಮಾರ್ಗಸೂಚಿ ಹೊರಡಿಸಲಾಗಿದೆ. ಈ ಪ್ರಕಾರ ಜಿಮ್ ತೆರೆದ ಸಮಯದಲ್ಲಿ 50 ಆಸನಗಳನ್ನು ಮಾತ್ರ ಭರ್ತಿ ಮಾಡಿರಬೇಕು.

ಆಧಾರ:ಉದಯವಾಣಿ, ದಿನಾಂಕ:05.04.2021

## 6. ಪಂಚ ರಾಜ್ಯಗಳ ಚುನಾವಣೆ

ಕೇರಳ, ತಮಿಳುನಾಡು ಮತ್ತು ಪುದುಚೇರಿ ವಿಧಾನಸಭಾ ಚುನಾವಣೆಗೆ ಒಂದೇ ಹಂತದಲ್ಲಿ ಮತದಾನ ನಡೆದಿದ್ದು, ಅಸ್ಸಾಂ ಮತ್ತು ಪಶ್ಚಿಮ ಬಂಗಾಳದಲ್ಲಿ ಮೂರನೇ ಹಂತದ ಮತದಾನ ಯಶಸ್ವಿಯಾಗಿದೆ.

ಕೇರಳದಲ್ಲಿ ಶೇ.73.40, ಅಸ್ಸಾಂನಲ್ಲಿ ಶೇ.82.28, ಪುದುಚೇರಿಯಲ್ಲಿ ಶೇ.77.87, ತಮಿಳುನಾಡಿನಲ್ಲಿ ಶೇ.71.79 ಹಾಗೂ ಪಶ್ಚಿಮ ಬಂಗಾಳದಲ್ಲಿ ಶೇ.84.21 ರಷ್ಟು ಮತದಾನವಾಗಿದೆ. ಕೇರಳದಲ್ಲಿ 140

ಕ್ಷೇತ್ರಗಳ 40,771 ಮತಗಟ್ಟೆಗಳಲ್ಲಿ 2.74 ಕೋಟಿ ಮತದಾರರು ತಮ್ಮ ಹಕ್ಕು ಚಲಾಯಿಸಿದ್ದಾರೆ. ಸಂಜೆ 6 ರಿಂದ 7ರ ವರೆಗೂ ಕೋವಿಡ್–19 ರೋಗಿಗಳಿಗೆ ಹಾಗೂ ಸೋಂಕಿನಿಂದಾಗಿ ಪ್ರತ್ಯೇಕ ವಾಸದಲ್ಲಿದ್ದವರು ಮತದಾನ ಮಾಡಲು ಅವಕಾಶ ಕಲ್ಪಿಸಲಾಗಿತ್ತು. ಒಟ್ಟು 957 ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಒಟ್ಟು ಮತದಾನ ಪೈಕಿ 73.69ರಷ್ಟು ಪುರುಷರು ಶೇ.73.48 ಮಹಿಳೆಯರು ಹಾಗೂ ಶೇ.37.37ರಷ್ಟು ಲೈಂಗಿಕ ಅಲ್ಪಸಂಖ್ಯಾತ ಮತದಾರರು ಮತದಾನ ಮಾಡಿದ್ದಾರೆ.

ಆಧಾರ:ವಿಶ್ವವಾಣಿ, ದಿನಾಂಕ:07.04.2021

## 7. ಮಹಾರಾಷ್ಟ್ರದತ್ತ ಮೂರನೇ ಅಲೆ

ಕೋವಿಡ್–19. ಎರಡನೇ ಅಲೆ ಅಬ್ಬರ ತಗ್ಗಿತೆಂದು ನಿಟ್ಟುಸಿರು ಬಿಡುವಷ್ಟರಲ್ಲೇ 3ನೇ ಅಲೆಯ ಆತಂಕ ಶುರುವಾಗಿದೆ. ಮುಂದಿನ 2–4 ವಾರದೊಳಗೆ ಮಹಾರಾಷ್ಟ್ರ ಅಥವಾ ಮುಂಬೈ ನಗರಕ್ಕೆ ಮೂರನೇ ಅಲೆ ಅಪ್ಪಳಿಸುವ ಸಾಧ್ಯತೆ ಹೆಚ್ಚಿದೆಯೆಂದು ಮಹಾರಾಷ್ಟ್ರ ಕೋವಿಡ್ ಕಾರ್ಯಪಡೆ ಗಂಭೀರ ಎಚ್ಚರಿಕೆ ನೀಡಿದೆ. ಮೂರನೇ ಅಲೆಗೆ ಮುನ್ನೆಚ್ಚರಿಕೆ ವಹಿಸುವ ಕುರಿತು ಸಿಎಂ ಉದ್ಧವ್ ಠಾಕ್ರೆ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಕಾರ್ಯಪಡೆಯ ಸದಸ್ಯರು ಈ ಬಗ್ಗೆ ವರದಿ ನೀಡಿದ್ದಾರೆ.

ಮೊದಲ ಎರಡು ಅಲೆಗಳಿಂದ ತಪ್ಪಿಸಿಕೊಂಡಿದ್ದ ಅಥವಾ ಅತ್ಯಧಿಕ ಪ್ರಮಾಣದಲ್ಲಿ ಪ್ರತಿಕಾಯಗಳನ್ನು ಕಳೆದುಕೊಂಡಿರುವ ವರ್ಗದಲ್ಲಿ 3ನೇ ಅಲೆ ಪರಿಣಾಮ ಹೆಚ್ಚಿರಲಿದೆ ಎಂದು ತಜ್ಞರು ಹೇಳಿದ್ದಾರೆ. ಇದುವರೆಗೆ ಸೋಂಕಿಗೆ ತುತ್ತಾಗದ ಕೆಳ–ಮಧ್ಯಮ ವರ್ಗದ ಕ್ಲಸ್ಟರ್‌ಗಳಲ್ಲಿ ಮಕ್ಕಳಿಗೆ ಅಪಾಯ ಎದುರಾಗುವುದಿಲ್ಲ ಎಂದು ಕಾರ್ಯಪಡೆ ಹೇಳಿದೆ.

ಆಧಾರ:ವಿಜಯವಾಣಿ, ದಿನಾಂಕ:08.04.2021

## 8. ಮತ್ತೆ ಎಡಕ್ಕೆ ವಾಲಿದ ಕೇರಳ

ಪ್ರತಿ ಐದು ವರ್ಷಕ್ಕೊಮ್ಮೆ ಎಲ್‌ಡಿಎಫ್ ಹಾಗೂ ಯುಡಿಎಫ್ ನಡುವೆ ಅಧಿಕಾರ ಬದಲಾಗುವ ಪರಿಪಾಠವಿರುವ ಕೇರಳದಲ್ಲಿ ಮುಖ್ಯಮಂತ್ರಿ ಪಿಣರಾಯಿವಿಜಯನ್ ಹೊಸ ಇತಿಹಾಸ ಸೃಷ್ಟಿಸಿದ್ದಾರೆ. ಸತತ ಎರಡನೇ ಬಾರಿಗೆ ಎಲ್‌ಡಿಎಫ್ ಜಯಭೇರಿ ಬಾರಿಸಿದ್ದು ತನ್ಮೂಲಕ 40 ವರ್ಷಗಳ ನಂತರ ಪುನರಾಯ್ಕೆಯಾದ ಮೊದಲ ಸರ್ಕಾರ ಎಂಬ ಹಿರಿಮೆಗೆ ಪಾತ್ರವಾಗಿದೆ. ಅಧಿಕಾರಕ್ಕೇರುವ ಅವಕಾಶ ಕಳೆದುಕೊಂಡಿರುವ ಕಾಂಗ್ರೆಸ್ ನೇತೃತ್ವದ ಯುಡಿಎಫ್ 2ನೇ ಸ್ಥಾನಕ್ಕೆ ಕುಸಿದಿದ್ದರೆ, ಬಿಜೆಪಿ ಶೂನ್ಯ ಸಂಪಾದನೆ ಮಾಡಿದೆ. ಮೆಟ್ರೋಮ್ಯಾನ್ ಖ್ಯಾತಿಯ ದೇಶದ ಪ್ರಸಿದ್ಧ ಎಂಜಿನಿಯರ್ ಇ.ಶ್ರೀಧರನ್ ಅವರು ಇಳಿವಯಸ್ಸಿನಲ್ಲಿ ತಾವು ಸ್ಪರ್ಧಿಸಿದ ಮೊದಲ ಚುನಾವಣೆಯಲ್ಲೆ ಪರಾಭವಗೊಂಡಿದ್ದಾರೆ.

2019ರ ಲೋಕಸಭೆ ಚುನಾವಣೆಯಲ್ಲಿ ಕೇರಳದಲ್ಲಿ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಭರ್ಜರಿ ಜಯಭೇರಿ ಬಾರಿಸಿ 20 ಕ್ಷೇತ್ರಗಳ ಪೈಕಿ 19ನ್ನು ಬಾಚಿಕೊಂಡಿತ್ತು. ಎಲ್‌ಡಿಎಫ್ ಕೇವಲ 1 ಸ್ಥಾನ ಪಡೆದು ತೀವ್ರ ಮುಖಭಂಗ ಅನುಭವಿಸಿತ್ತು. ಇದರಿಂದ ಎಚ್ಚೆತ್ತ ಪಿಣರಾಯಿ ಅವರು ಕೈಗೊಂಡ ಹಲವು ಕ್ರಮಗಳು ಇದೀಗ ಎಲ್‌ಡಿಎಫ್‌ಗೆ ವರವಾಗಿ ಪರಿಣಮಿಸಿದೆ.

ಶಬರಿಮಲೆ ವಿವಾದ ಮಗ್ಗುಲ ಮುಳ್ಳಾದ ಹಿನ್ನೆಲೆಯಲ್ಲಿ ಎಲ್‌ಡಿಎಫ್ ಆ ವಿಚಾರದಲ್ಲಿ ತುಸು ಮೃದು ಧೋರಣೆ ತಾಳಿತು. ಹೋರಾಟಗಾರರ ವಿರುದ್ಧ ದಾಖಲಾಗಿದ್ದ ಪ್ರಕರಣಗಳನ್ನು ಹಿಂಪಡೆಯಿತು. ಈ ನಡುವೆ 2019 ಹಾಗೂ 2020ರಲ್ಲಿ ಕೇರಳ ಭೀಕರ ಮಳೆ, ಪ್ರವಾಹಕ್ಕೆ ತುತ್ತಾಯಿತು. ಆ ಸಂದರ್ಭ ಪರಿಹಾರ ವಿತರಣೆಯಲ್ಲಿ ಸರ್ಕಾರದ ಕಾರ್ಯವೈಖರಿ ಎಲ್‌ಡಿಎಫ್ ಬಗೆಗಿನ ಇಮೇಜ್ ಬದಲಿಸಿತು. ದೇಶದಲ್ಲಿ ಮೊದಲ ಕೊರೋನಾ ಪ್ರಕರಣ ಕೇರಳದಲ್ಲೇ ಪತ್ತೆಯಾದರೂ, ಆ ವೈರಾಣುವನ್ನು ಯಶಸ್ವಿಯಾಗಿ ನಿರ್ವಹಿಸಿದ ಕೇರಳಕ್ಕೆ ವಿಶ್ವ ಆರೋಗ್ಯ ಸಂಸ್ಥೆಯೇ ಮೆಚ್ಚುಗೆ ವ್ಯಕ್ತಪಡಿಸಿತ್ತು. ಕೇರಳದಲ್ಲಿ ಮುಸ್ಲಿಮರು, ಕ್ರೈಸ್ತರಿಗೆ ಮೊದಲಿನಿಂದಲೂ ಕಾಂಗ್ರೆಸಿನ ಬಗ್ಗೆ ಒಲವು ಜಾಸ್ತಿ. ಆದರೆ ಯುಡಿಎಫ್‌ನಲ್ಲಿದ್ದ ಕೇರಳ ಕಾಂಗ್ರೆಸ್ ಪಕ್ಷ ಎಲ್‌ಡಿಎಫ್ ಸೇರಿದ್ದು ವರದಾನವಾಯಿತು. ಬಹುಸಂಖ್ಯಾತ ಈಳವರು,

ದಲಿತರು, ಎಡರಂಗದ ಬೆಂಬಲಕ್ಕೆ ನಿಂತರು. ಬಿಜೆಪಿ ಹೆಚ್ಚಿನ ಪ್ರಮಾಣದಲ್ಲಿ ಮತ ವಿಭಜನೆ ಮಾಡುವಲ್ಲಿ ವಿಫಲವಾಯಿತು.

**ಕೇರಳ ಒಟ್ಟು ಸ್ಥಾನ 140 ಬಹುಮತಕ್ಕೆ 71**

| ಪಕ್ಷ | ಸ್ಥಾನ | % | 2016 | ಲಾಭ/ನಷ್ಟ |
|---|---|---|---|---|
| ಎಲ್‌ಡಿಎಫ್ | 99 | 40 | 91 | +8 |
| ಯುಡಿಎಫ್ | 41 | 21 | 41 | 00 |
| ಬಿಜೆಪಿ | 00 | 11 | 1 | –1 |
| ಇತರರು | 00 | 17 | 7 | –7 |

**ಪಿಣರಾಯಿಗೆ ಮತ್ತೆ ಗದ್ದುಗೆ**

ಕೇರಳ ಚುನಾವಣೆಯಲ್ಲಿ ಎಲ್‌ಡಿಎಫ್‌ಗೆ ಐತಿಹಾಸಿಕ ಗೆಲವು ತಂದುಕೊಟ್ಟಿರುವ ಪಿಣರಾಯಿ ಮತ್ತೆ ಸಿಎಂ ಆಗುವುದು ಖಚಿತ. ವಿಧಾನಸಭೆಯಲ್ಲಿ ಎಲ್‌ಡಿಎಫ್ ಮೈತ್ರಿಗೆ ಸಿಕ್ಕ ಜಯವನ್ನು ರಾಜ್ಯದ ಜನತೆಗೆ ಸಮರ್ಪಿಸುತ್ತೇನೆ, ನಮ್ಮ ಪಕ್ಷವನ್ನು ಆಡಳಿತಕ್ಕೆ ತರುವ ಮೂಲಕ ರಾಜ್ಯದಲ್ಲಿ ಕೋಮು ಶಕ್ತಿಗಳಿಗೆ ನೆಲೆ ಇಲ್ಲ ಎಂಬುದನ್ನು ಜನ ತೋರಿಸಿಕೊಟ್ಟಿದ್ದಾರೆ. ನಮ್ಮ ಸರ್ಕಾರ ಕೈಗೊಂಡ ಅಭಿವೃದ್ಧಿ ಯೋಜನೆಗಳು ಮತ್ತು ಸಾಮಾಜಿಕ ಸಬಲೀಕರಣದ ಯೋಜನೆಗಳು ನಮ್ಮ ಸರ್ಕಾರಕ್ಕೆ ಮಸಿ ಮೆತ್ತಬೇಕೆಂಬ ಪ್ರತಿಪಕ್ಷಗಳ ಕುತಂತ್ರವನ್ನು ವಿಫಲಗೊಳಿಸಿದವು.

**ಸತತ 2ನೇ ಬಾರಿ ಬಿಜೆಪಿಗೆ ಅಸ್ಸಾಂ**

ಅಸ್ಸಾಂನಲ್ಲಿ ಬಿಜೆಪಿ ಸತತ 2ನೇ ಬಾರಿ ಜಯಗಳಿಸಿ ಅಧಿಕಾರಕ್ಕೆ ಬಂದಿದೆ. ಬಿಜೆಪಿ ಮಿತ್ರರನ್ನು ಸೆಳೆದು ಹಾಗೂ ಇತರ ಜಾತ್ಯತೀತ ಪಕ್ಷಗಳನ್ನು ಒಗ್ಗೂಡಿಸಿ ಕಾಂಗ್ರೆಸ್ ಪಕ್ಷ ರಚಿಸಿದ್ದ ಬೃಹತ್ ಮೈತ್ರಿಕೂಟಕ್ಕೆ ಸೋಲಾಗಿದೆ.

ಬಿಜೆಪಿ–ಅಸ್ಸಾಂ ಗಣಪರಿಷತ್ ಹಾಗೂ ಯುನೈಟೆಡ್ ಪೀಪಲ್ಸ್ ಪಕ್ಷ ಈ ಬಾರಿ ಒಟ್ಟಾಗಿ ಮೈತ್ರಿಕೂಟ ರಚಿಸಿಕೊಂಡು ಕಣಕ್ಕಿಳಿದವು. ಇದೇ ವೇಳೆ, ಕಾಂಗ್ರೆಸ್ ಪಕ್ಷವು ಬಿಜೆಪಿ ಜೊತೆಗಿದ್ದ ಬೋಡೋಲ್ಯಾಂಡ್ ಪೀಪಲ್ಸ್ ಪಕ್ಷವನ್ನು ತನ್ನತ್ತ ಸೆಳೆದುಕೊಂಡಿದ್ದಲ್ಲದೇ ಎಐಯುಡಿಎಫ್ ಪಕ್ಷದ ಜೊತೆಗೂ ಮೈತ್ರಿ ಮಾಡಿಕೊಂಡು ಕಣಕ್ಕೆ ಇಳಿದಿತ್ತು.

ಮತದಾರರು ಆಡಳಿತ ವಿರೋಧಿ ಅಲೆಗೆ ಮನ್ನಣೆ ನೀಡದೇ ಬಿಜೆಪಿ ಕೂಟಕ್ಕೆ ಜಯದ ಹಾರ ಹಾಕಿದ್ದಾರೆ. ಸಿಎಂ. ಸೋನೊವಾಲ್, ಹಿಮಂತ ಬಿಸ್ವ ಶರ್ಮ ಜಯಶಾಲಿಯಾಗಿದ್ದಾರೆ.

**ಅಸ್ಸಾಂ ಒಟ್ಟು ಸ್ಥಾನ 126 ಬಹುಮತಕ್ಕೆ 64**

| ಪಕ್ಷ | ಸ್ಥಾನ | % | 2016 | ಲಾಭ/ನಷ್ಟ |
|---|---|---|---|---|
| ಬಿಜೆಪಿ+ | 75 | 40 | 74 | +1 |
| ಕಾಂಗ್ರೆಸ್ | 50 | 38 | 51 | –1 |
| ಇತರರು | 1 | 22 | 1 | 00 |

**ಪುದುಚೇರಿಯಲ್ಲಿ ಕಮಲ ಕಮಾಲ್**

ಪುದುಚೇರಿ ವಿಧಾನಸಭೆ ಚುನಾವಣೆಯಲ್ಲಿ ಎನ್‌ಆರ್ ಕಾಂಗ್ರೆಸ್–ಬಿಜೆಪಿ–ಅಣ್ಣಾಡಿಎಂಕೆ ಮೈತ್ರಿಕೂಟ ಜಯಗಳಿಸಿದೆ. ಇದರಿಂದಾಗಿ ಮೊದಲ ಬಾರಿ ಬಿಜೆಪಿ ರಾಜ್ಯದಲ್ಲಿ ಅಧಿಕಾರದ ಗದ್ದುಗೆ ಏರಲು ಸಿದ್ಧವಾಗಿದೆ.

ಈ ಹಿಂದೆ ರಂಗಸ್ವಾಮಿ 13 ವರ್ಷ (2001 ರಿಂದ 2008 ಹಾಗೂ 2011 ರಿಂದ 2016) ಮುಖ್ಯಮಂತ್ರಿಯಾಗಿದ್ದರು. ಆದರೆ ಕಳೆದ ಸಲ ಅವರು ಅಧಿಕಾರ ಕಳೆದುಕೊಂಡಿದ್ದರು. ಈ ನಡುವೆ, ಅಧಿಕಾರಕ್ಕೆ ಬಂದ ಕಾಂಗ್ರೆಸ್–ಡಿಎಂಕೆ ಕೂಟದ ನಾಯಕ ನಾರಾಯಣಸ್ವಾಮಿ ಅವರ ನೇತೃತ್ವದ ಕಾಂಗ್ರೆಸ್ ಈ ಸಲ ಆಡಳಿತ ವಿರೋಧಿ ಅಲೆಯಿಂದಾಗಿ ಕೊಚ್ಚಿಹೋಗಿದೆ.

30 ಸ್ಥಾನದ ಪೈಕಿ ಎನ್‌ಆರ್ ಕಾಂಗ್ರೆಸ್ 16ರಲ್ಲಿ ಬಿಜೆಪಿ 9ರಲ್ಲಿ ಹಾಗೂ ಅಣ್ಣಾಡಿಎಂಕೆ 5 ರಲ್ಲಿ ಸ್ಪರ್ಧಿಸಿದ್ದವು. ಕಾಂಗ್ರೆಸ್ 14ರಲ್ಲಿ ಡಿಎಂಕೆ 13ರಲ್ಲಿ ಹಾಗೂ ಇತರ ಮಿತ್ರರು 3 ರಲ್ಲಿ ಸ್ಪರ್ಧಿಸಿದ್ದರು.

**ಪುದುಚೇರಿ ಒಟ್ಟು ಸ್ಥಾನ 30 ಬಹುಮತಕ್ಕೆ 16**

| ಪಕ್ಷ | ಸ್ಥಾನ | % | 2016 | ಲಾಭ/ನಷ್ಟ |
|---|---|---|---|---|
| ಎನ್‌ಆರ್‌ಸಿ+ಬಿಜೆಪಿ | 16 | 40 | 12 | +4 |
| ಕಾಂಗ್ರೆಸ್+ಡಿಎಂಕೆ | 9 | 34 | 17 | –8 |
| ಇತರರು | 5 | 26 | 1 | +4 |

ಆಧಾರ:ಪ್ರಜಾವಾಣಿ, ದಿನಾಂಕ:03.05.2021

## 9. ದೀದಿ ಬಂಗಾಳ ದಿಗ್ವಿಜಯ

ಚುನಾವಣೆಗೂ ಮುನ್ನ ಡಜನ್ ಶಾಸಕರ ವಲಸೆ, ನೂರಾರು ಮುಖಂಡರ ಪಕ್ಷಾಂತರ, ನರೇಂದ್ರ ಮೋದಿ–ಅಮಿತ್ ಶಾ ಅಬ್ಬರದ ಪ್ರಚಾರ ನಡುವೆಯೂ ತೃಣಮೂಲ ಕಾಂಗ್ರೆಸ್ ನಾಯಕಿ ಮಮತಾ ಬ್ಯಾನರ್ಜಿ ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಯಲ್ಲಿ ಭರ್ಜರಿ ಜಯಭೇರಿ ಬಾರಿಸಿದ್ದಾರೆ. 10 ವರ್ಷಗಳ ಆಡಳಿತ ವಿರೋಧಿ ಅಲೆಯನ್ನು ಯಶಸ್ವಿಯಾಗಿ ಮೆಟ್ಟಿ ನಿಂತಿರುವ ಅವರು ಮೂರನೇ ಎರಡಷ್ಟು ಐತಿಹಾಸಿಕ ಬಹುಮತದೊಂದಿಗೆ ಹ್ಯಾಟ್ರಿಕ್ ಜಯಭೇರಿ ಬಾರಿಸಿದ್ದಾರೆ. ಶತಾಯಗತಾಯ ಅಧಿಕಾರ ಹಿಡಿಯಲೇಬೇಕು ಎಂದು ತನ್ನೆಲ್ಲಾ ಶಕ್ತಿಯನ್ನು ವಿನಿಯೋಗಿಸಿದ್ದ ಬಿಜೆಪಿಗೆ ತೀವ್ರ ಹಿನ್ನಡೆಯಾಗಿದೆ. ಮೂರೂವರೆ ದಶಕಗಳ ಕಾಲ ಬಂಗಾಳವನ್ನು ಆಳಿದ್ದ ಎಡರಂಗ, ಅಸ್ತಿತ್ವ ಉಳಿಸಿಕೊಳ್ಳಲು ಪರದಾಡುತ್ತಿರುವ ಕಾಂಗ್ರೆಸ್ ಅಕ್ಷರಶಃ ಧೂಳೀಪಟವಾಗಿವೆ. ಆದರೆ ನಂದಿಗ್ರಾಮದಲ್ಲಿ ತಮ್ಮ ಮಾಜಿ ಆಪ್ತ ಸುವೆಂದು ವಿರುದ್ಧ ಸೋಲಬೇಕಾಗಿ ಬಂದಿದ್ದು ಮಮತಾ ಪಾಲಿಗೆ ಸಣ್ಣ ನಿರಾಸೆಯ ಸಂಗತಿ.

8 ಹಂತಗಳಲ್ಲಿ ನಡೆದ ಬಂಗಾಳ ಚುನಾವಣೆ ಕಂಡುಕೇಳರಿಯದ ಪೈಪೋಟಿಗೆ ಸಾಕ್ಷಿಯಾಗಿತ್ತು. 2019ರ ಲೋಕಸಭೆ ಚುನಾವಣೆಯಲ್ಲಿ ಬರೋಬ್ಬರಿ 18 ಸ್ಥಾನಗಳನ್ನು ಗೆದ್ದ ಹುಮ್ಮಸ್ಸಿನಲ್ಲಿದ್ದ ಬಿಜೆಪಿ, ಬಂಗಾಳವನ್ನು ಕೈವಶ ಮಾಡಿಕೊಳ್ಳಲು ಭರ್ಜರಿ ತಂತ್ರಗಾರಿಕೆ ರೂಪಿಸಿತ್ತು. ತೃಣಮೂಲ ಕಾಂಗ್ರೆಸ್ ಹಾಗೂ ಬಂಗಾಳದ ನಡುವೆ ಜಿದ್ದಾಜಿದ್ದಿ ಪೈಪೋಟಿ ಏರ್ಪಟ್ಟು, ಯಾರೇ ಗೆದ್ದರೂ ಭರ್ಜರಿ ಬಹುಮತ ಕಷ್ಟ ಎಂಬ ಪರಿಸ್ಥಿತಿ ಇತ್ತು. ಆದರೆ ಇದೆಲ್ಲವನ್ನೂ ಹುಸಿಯಾಗಿಸಿರುವ ಮಮತಾ ಹೆಚ್ಚೂ ಕಡಿಮೆ ಕಳೆದ ಬಾರಿಯಷ್ಟೇ ಸ್ಥಾನ ಗಳಿಸಿದ್ದಾರೆ. ಪ್ರಚಾರ ವೇಳೆ ಕಾಲಿಗೆ ಗಾಯವಾಗಿದ್ದರಿಂದ ಗಾಲಿ ಕುರ್ಚಿಯ ಮೇಲೆ ಕುಳಿತೇ ಮಮತಾ ರಾಜ್ಯ ಸುತ್ತಿ ಚುನಾವಣೆ ಗೆದ್ದಿರುವುದು ಗಮನಾರ್ಹ ತನ್ಮೂಲಕ ಸದ್ಯದ ಮಟ್ಟಿಗೆ

ದೇಶದ ಏಕೈಕ ಮಹಿಳಾ ಮುಖ್ಯಮಂತ್ರಿಯಾಗಿ ಅವರು ಮುಂದುವರಿಯಲು ಹಾದಿ ಸುಗಮವಾದಂತಾಗಿದೆ.

ಮುಸ್ಲಿಂಮರು ಮಮತಾ ಬೆನ್ನಿಗೆ ಗಟ್ಟಿಯಾಗಿ ನಿಂತಿದ್ದರೆ, ನಗರವಾಸಿಗಳು ಕೂಡ ತೃಣಮೂಲ ಕಾಂಗ್ರೆಸ್ ಬೆಂಬಲಿಸಿದ್ದಾರೆ. ಕಾಂಗ್ರೆಸ್ ಹಾಗೂ ಎಡರಂಗದ ಮತಗಳು ಸಂಪೂರ್ಣವಾಗಿ ಬಿಜೆಪಿಗೆ ವರ್ಗಾವಣೆಯಾಗಿದ್ದು, ಗ್ರಾಮೀಣ ಪ್ರದೇಶಗಳಲ್ಲೂ ಬಿಜೆಪಿ ಉತ್ತಮ ಸಾಧನೆ ತೋರಿದೆ. 2016ರಲ್ಲಿ ಮೊದಲ ಬಾರಿಗೆ ಕೇವಲ 3 ಸ್ಥಾನ ಗೆದ್ದಿದ ಬಿಜೆಪಿ ಕೇವಲ ಐದೇ ವರ್ಷದಲ್ಲಿ ಪ್ರಬಲ ಪ್ರತಿಪಕ್ಷವಾಗಿ ಹೊರಹೊಮ್ಮುವಲ್ಲಿ ಸಫಲವಾಗಿದೆ. ನೆಲೆಯೇ ಇಲ್ಲದ ಬಂಗಾಳದಲ್ಲಿ ಕಡೆಗೂ ಅಸ್ತಿತ್ವವನ್ನು ಕಂಡುಕೊಂಡಿದೆ. ಎರಡೂ ಪಕ್ಷಗಳ ನಡುವೆ ಅಂತರ ಕಡಿಮೆ ಇದ್ದರೆ ರಾಜಕೀಯ ಸ್ಥಿತ್ಯಂತರಕ್ಕೆ ಅವಕಾಶವಿರುತ್ತಿತ್ತು. ಆದರೆ ಮತದಾರರು ಅದಕ್ಕೆ ಆಸ್ಪದವೇ ಇಲ್ಲದಂತೆ ಮಮತಾಗೆ ಭರ್ಜರಿ ಬಹುಮತ ನೀಡಿದ್ದಾರೆ.

**ಪಶ್ಚಿಮ ಬಂಗಾಳ ಒಟ್ಟು ಸ್ಥಾನ 294 ಬಹುಮತಕ್ಕೆ 148**

| ಪಕ್ಷ | ಸ್ಥಾನ | % | 2016 | ಲಾಭ/ನಷ್ಟ |
|---|---|---|---|---|
| ಟಿಎಂಸಿ | 215 | 48 | 211 | +4 |
| ಬಿಜೆಪಿ | 75 | 37 | 3 | +72 |
| ಎಡರಂಗ+ಕಾಂಗ್ರೆಸ್ | 01 | 8 | 70 | –69 |
| ಇತರರು | 03 | 7 | 10 | –7 |

**ಮಮತಾ ಹ್ಯಾಟ್ರಿಕ್ ಸಿಎಂ**

ಪಶ್ಚಿಮ ಬಂಗಾಳ ಚುನಾವಣೆಯಲ್ಲಿ ದಿಗ್ವಿಜಯ ಸಾಧಿಸಿರುವ ಮಮತಾ ಬ್ಯಾನರ್ಜಿ ಸತತ 3ನೇ ಬಾರಿಗೆ ಸಿಎಂ ಆಗುವುದು ನಿಶ್ಚಿತವಾಗಿದೆ.

ಪಶ್ಚಿಮ ಬಂಗಾಳದಲ್ಲಿ ತೃಣಮೂಲ ಕಾಂಗ್ರೆಸ್‌ನ ಗೆಲುವು ಅಭೂತ ಪೂರ್ವ. ಈ ಫಲಿತಾಂಶದೊಂದಿಗೆ ಪಶ್ಚಿಮ ಬಂಗಾಳ ಭಾರತವನ್ನು ರಕ್ಷಿಸಿದೆ. ಇದು ಪಶ್ಚಿಮ ಬಂಗಾಳದ ಜನರ ಗೆಲುವು, ಪ್ರಜಾಪ್ರಭುತ್ವದ ಗೆಲುವು. ಈ ಗೆಲುವಿಗಾಗಿ ನಾನು ಪಕ್ಷದ ಎಲ್ಲ ಕಾರ್ಯಕರ್ತರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಕೊರೋನಾ ಹಿನ್ನೆಲೆಯಲ್ಲಿ ಕಾರ್ಯಕರ್ತರು ಗೆಲುವಿನ ಸಂಭ್ರಮಾಚರಣೆಯಲ್ಲಿ ತೊಡಗಬಾರದೆಂದು ಮಮತಾ ಬ್ಯಾನರ್ಜಿ, ಪಶ್ಚಿಮ ಬಂಗಾಳ ಮುಖ್ಯಮಂತ್ರಿಯವರು ತಿಳಿಸಿರುತ್ತಾರೆ.

ಆಧಾರ: ಕನ್ನಡಪ್ರಭ ದಿನಾಂಕ:03.05.2021

## 10. ತಮಿಳುನಾಡಿಗೆ ಸ್ಟಾಲಿನ್ ಬಾಸ್

ಎಂ.ಕರುಣಾನಿಧಿ ಹಾಗೂ ಜೆ.ಜಯಲಲಿತಾ ಅವರ ಅನುಪಸ್ಥಿತಿಯಲ್ಲಿ ನಡೆದ ತಮಿಳುನಾಡಿನ ಮೊದಲ ಸಾರ್ವತ್ರಿಕ ವಿಧಾನಸಭೆ ಚುನಾವಣೆಯಲ್ಲಿ ಎಂ.ಕೆ.ಸ್ಟಾಲಿನ್ ನೇತೃತ್ವದಲ್ಲಿ ಡಿಎಂಕೆ ಭರ್ಜರಿ ಭೇರಿ ಬಾರಿಸಿದೆ. 10 ವರ್ಷಗಳಿಂದ ಅಧಿಕಾರದಲ್ಲಿದ್ದ ಅಣ್ಣಾಡಿಎಂಕೆ ಪರಾಭವಗೊಂಡಿದೆ. ಭದ್ರವಾಗಿ ನೆಲೆಯೂರಲು ಪ್ರಯತ್ನಿಸುತ್ತಿದ್ದ ಬಿಜೆಪಿಗೆ ತೀವ್ರ ನಿರಾಶೆಯಾಗಿದೆ.

ತಮಿಳುನಾಡಿನಲ್ಲಿ ಪ್ರತಿ 5 ವರ್ಷಕ್ಕೊಮ್ಮೆ ಅಧಿಕಾರ ಡಿಎಂಕೆ ಹಾಗೂ ಅಣ್ಣಾಡಿಎಂಕೆ ನಡುವೆ ಬದಲಾವಣೆಯಾಗುವ ಪರಿಪಾಠ ಇತ್ತು. ಆದರೆ 2016ರಲ್ಲಿ ಸತತ ಎರಡನೇ ಅವಧಿಗೆ ಜಯಭೇರಿ ಬಾರಿಸುವ ಮೂಲಕ ಜಯಲಲಿತಾ ಅವರು 32 ವರ್ಷದ ಬಳಿಕ ಹೊಸ ಇತಿಹಾಸ ಸೃಷ್ಟಿಸಿದ್ದರು. ಮುಖ್ಯಮಂತ್ರಿಯಾದ ಕೆಲವೇ ತಿಂಗಳಲ್ಲಿ ಅವರು ಕಾಲವಾದರು. ಆನಂತರ ಅಣ್ಣಾಡಿಎಂಕೆಯಲ್ಲಿ

ನಾಟಕೀಯ ಬೆಳವಣಿಗೆಗಳಾದವು. ಈ ನಡುವೆ ಕರುಣಾನಿಧಿ ಕೂಡ ನಿಧನ ಹೊಂದಿ, ಸ್ಟಾಲಿನ್ ಪಕ್ಷದ ಹೊಣೆಗಾರಿಕೆ ಹೊತ್ತರು.

2019ರ ಲೋಕಸಭೆ ಚುನಾವಣೆಯಲ್ಲಿ ತಮಿಳುನಾಡಿನ 39ರ ಪೈಕಿ 38 ಕ್ಷೇತ್ರಗಳನ್ನು ಡಿಎಂಕೆ ಮಿತ್ರಕೂಟ ಬಾಚಿಕೊಂಡಾಗಲೇ ಅಣ್ಣಾಡಿಎಂಕೆಗೆ ಎಚ್ಚರಿಕೆಯ ಗಂಟೆ ಮೊಳಗಿತ್ತು. ಇದನ್ನು ಸರಿಪಡಿಸಿಕೊಳ್ಳಲು ಮುಖ್ಯಮಂತ್ರಿ ಎಡಪ್ಪಾಡಿ ಪಳನಿಸ್ವಾಮಿ ಸಾಕಷ್ಟು ಪ್ರಯತ್ನ ಪಟ್ಟಿದ್ದರು. ಪನ್ನೀರ್‌ಸೆಲ್ವಂ ಜೊತೆಗಿನ ಸಂಘರ್ಷ ತಿಳಿಗೊಳಿಸಲು ಸಂಧಾನ ಮಾಡಿಕೊಂಡಿದ್ದರು. ಆದರೆ ಅವರ ಸರ್ಕಾರದ ವಿರುದ್ಧ ಡಿಎಂಕೆ ನಿರಂತರವಾಗಿ ಭ್ರಷ್ಟಾಚಾರ ಆರೋಪಗಳನ್ನು ಮಾಡಿಕೊಂಡು ಬಂದಿತ್ತು. ಕರುಣಾನಿಧಿ ಅವರಿಂದ ತೆರವಾದ ನಾಯಕ ಸ್ಥಾನವನ್ನು ತುಂಬಲು ಸ್ಟಾಲಿನ್ ತಕ್ಕಮಟ್ಟಿಗೆ ಯಶಸ್ವಿಯಾದರು. ಆದರೆ ಜಯಲಲಿತಾರಿಂದ ಖಾಲಿಯಾದ ಸ್ಥಾನವನ್ನು ಯಶಸ್ವಿಯಾಗಿ ನಿರ್ವಹಿಸಿ ಡಿಎಂಕೆಯನ್ನು ಮಣಿಸುವಲ್ಲಿ ಪಳನಿಸ್ವಾಮಿ ವಿಫಲರಾದರು.

ಸಾಲಮನ್ನಾದಂತಹ ಯೋಜನೆಗಳ ಮೂಲಕ ಜನರ ಮನ ಸೆಳೆಯಲು ಪಳನಿಸ್ವಾಮಿ ಯತ್ನಿಸಿದರು. 10 ವರ್ಷಗಳ ಕಾಲ ಆಡಳಿತದಲ್ಲಿದ್ದರೂ ಅಣ್ಣಾಡಿಎಂಕೆ ಹೀನಾಯ ಸೋಲನ್ನೇನು ಅನುಭವಿಸಿಲ್ಲ. ಕೋವಿಡ್ ನಿರ್ವಹಣೆ ವೈಫಲ್ಯ ಅಣ್ಣಾಡಿಎಂಕೆಗೆ ಪ್ರತಿಕೂಲವಾಗಿ ಪರಿಣಮಿಸಿದಂತಿದೆ. ಚುನಾವಣೆ ಸಂದರ್ಭದಲ್ಲಿ ಸ್ಟಾಲಿನ್ ಪುತ್ರಿ ಸೇರಿದಂತೆ ಹಲವು ಡಿಎಂಕೆ ನಾಯಕರ ಮೇಲೆ ನಡೆದ ಐಟಿ ದಾಳಿ ತಿರುಗುಬಾಣವಾಗಿ ಪರಿಣಮಿಸಿರುವಂತಿದೆ. ಅಣ್ಣಾಡಿಎಂಕೆ ಬೆನ್ನೇರಿ ನೆಲೆಯೂರುವ ಬಿಜೆಪಿ ಪ್ರಯತ್ನ ಮತ್ತೊಮ್ಮೆ ವಿಫಲವಾಗಿದೆ. ಡಿಎಂಕೆ ಮೈತ್ರಿಕೂಟದಲ್ಲಿ ಕಾಂಗ್ರೆಸ್ ಇರುವುದರಿಂದ ಆ ಪಕ್ಷ ಸಂತಸದಲ್ಲಿದೆ. ಚುನಾವಣೆ ಸಂದರ್ಭದಲ್ಲಿ ಮೌನವಾಗಿದ್ದ ಶಶಿಕಲಾರನ್ನು ಮುಂಬರುವ ದಿನಗಳಲ್ಲಿ ಅಣ್ಣಾಡಿಎಂಕೆ ಕೈವಶ ಮಾಡಿಕೊಳ್ಳಲು ದಾಳ ಉರುಳಿಸುವ ಸಾಧ್ಯತೆಯೂ ಇದೆ.

**ತಮಿಳುನಾಡು ಒಟ್ಟು ಸ್ಥಾನ 234 ಬಹುಮತಕ್ಕೆ 118**

| ಪಕ್ಷ | ಸ್ಥಾನ | % | 2016 | ಲಾಭ/ನಷ್ಟ |
|---|---|---|---|---|
| ಡಿಎಂಕೆ+ಕಾಂಗ್ರೆಸ್ | 160 | 41 | 98 | +62 |
| ಎಐಡಿಎಂಕೆ+ಬಿಜೆಪಿ | 74 | 37 | 136 | –62 |
| ಇತರರು | 00 | 22 | 00 | 00 |

ಡಿಎಂಕೆ ಜಯಭೇರಿ ಬಾರಿಸಿರುವ ಹಿನ್ನೆಲೆಯಲ್ಲಿ ಎಂ.ಕೆ.ಸ್ಟಾಲಿನ್ ಸಿಎಂ ಆಗುವುದು ಖಚಿತ. ಡಿಎಂಕೆ ಪಕ್ಷವನ್ನು ಅಧಿಕಾರಕ್ಕೆ ತಂದ ರಾಜ್ಯದ ಜನತೆಗೆ ಹೃದಯಪೂರ್ವಕ ಧನ್ಯವಾದಗಳು. ನಾನು ಸದಾಕಾಲ ನಿಮಗೆ ಪ್ರಾಮಾಣಿಕ ಸೇವೆ ಸಲ್ಲಿಸುತ್ತೇನೆ. ಈ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ ಪಕ್ಷದ ಕಾರ್ಯಕರ್ತರು ಹಾಗೂ ಕೇಡರ್‌ಗಳು ಮತ್ತು ಮೈತ್ರಿ ಪಕ್ಷಗಳಿಗೂ ಧನ್ಯವಾದಗಳೆಂದು ಎಂ.ಕೆ.ಸ್ಟಾಲಿನ್ ಡಿಎಂಕೆ ಅಧ್ಯಕ್ಷ ತಿಳಿಸಿರುತ್ತಾರೆ.

ಆಧಾರ:ಕನ್ನಡ ಪ್ರಭ,ದಿನಾಂಕ:03.05.2021

## 11. ಸರ್ಕಾರಿ ಯೋಜನೆ ಲಾಭಕ್ಕೆ ಎರಡು ಮಕ್ಕಳು ಕಡ್ಡಾಯ

ಮುಂದಿನ ದಿನಗಳಲ್ಲಿ ಅಸ್ಸಾಂ ಸರ್ಕಾರದ ಯೋಜನೆಗಳ ಲಾಭ ಪಡೆದುಕೊಳ್ಳಬೇಕಾದ ಎರಡು ಮಕ್ಕಳನ್ನು ಹೊಂದಿರಬೇಕಾದ್ದು ಕಡ್ಡಾಯ. ಈ ಅಂಶವನ್ನು ಖುದ್ದು ಸಿಎಂ.ಹಿಮಾಂತ ಶರ್ಮ ಬಿಸ್ವಾ ಪ್ರಕಟಿಸಿದ್ದಾರೆ. ನಿಧಾನವಾಗಿ ಈ ನಿಯಮ ಜಾರಿ ಮಾಡಲಾಗುತ್ತದೆ ಪ್ರಸ್ತಾವಿತ ಜನಸಂಖ್ಯೆ ನಿಯಂತ್ರಣ ಕ್ರಮ ರಾಜ್ಯ ಸರ್ಕಾರದ ಎಲ್ಲ ಯೋಜನೆಗಳಿಗೆ ಅನ್ವಯಿಸುವುದಿಲ್ಲ. ಕೆಲವಕ್ಕೆ ಕೇಂದ್ರ ವಿತ್ತೀಯ ನೆರವು ನೀಡುತ್ತದೆ ಎಂದರು.

**ಬಿಜೆಪಿಗೆ ಬನ್ನಿ**: ನಾಲ್ಕು ಬಾರಿ ಕಾಂಗ್ರೆಸ್‌ನಿಂದ ಆಯ್ಕೆಯಾಗಿರುವ ಶಾಸಕ ರೂಪಜ್ಯೋತಿ ಕುರ್ಮಿ ಬಿಜೆಪಿ ಸೇರ್ಪಡೆಗೊಳ್ಳುವ ಇಚ್ಛೆಯನ್ನು ಈಗಾಗಲೇ ಪ್ರಕಟಿಸಿದ್ದಾರೆ. ಅದಕ್ಕೆ ಪೂರಕವಾಗಿ ಮಾತನಾಡಿರುವ ಸಿಎಂ. ಹಿಮಾಂತ ಪ್ರತಿಪಕ್ಷಗಳ ಶಾಸಕರು ಆಡಳಿತಾರೂಢ ಬಿಜೆಪಿಗೆ ಸೇರ್ಪಡೆಯಾಗಬೇಕು ಎಂದಿದ್ದಾರೆ. ಅಸ್ಸಾಂನಲ್ಲಿ ಪ್ರತಿ ದಿನ 3 ಲಕ್ಷ ಮಂದಿಗೆ ಕೊರೋನಾ ಲಸಿಕೆ ಹಾಕಿಸಲಾಗುತ್ತದೆ ಎಂದಿದ್ದಾರೆ ಮುಖ್ಯಮಂತ್ರಿಗಳು.

ಆಧಾರ:ಉದಯವಾಣಿ, ದಿನಾಂಕ:20.06.2021

## 12.ಆಂಧ್ರ : ಒಂದೇ ದಿನ 13 ಲಕ್ಷ ಡೋಸ್ ಲಸಿಕೆ ನೀಡಿಕೆ ದಾಖಲೆ

ಕೊರೋನಾ ಲಸಿಕೆ ನೀಡಿಕೆಯಲ್ಲಿ ಆಂಧ್ರ ಪ್ರದೇಶ ಹೊಸ ದಾಖಲೆ ನಿರ್ಮಿಸಿದೆ. ಒಂದೇ ದಿನ ರಾಜ್ಯದ 13 ಲಕ್ಷ ಡೋಸ್‌ಗಿಂತಲೂ ಅಧಿಕ ಲಸಿಕೆ ನೀಡಲಾಗಿದೆ. ರಾತ್ರಿ 9 ಗಂಟೆಗೆ ಕೊನೆಗೊಂಡ ವಿಶೇಷ ಅಭಿಯಾನದ ವೇಳೆ 13,45,004 ಡೋಸ್ ಲಸಿಕೆ ನೀಡಲಾಗಿದೆ. ಯಾವುದೇ ರಾಜ್ಯದಲ್ಲಿ ಒಂದೇ ದಿನ ಇಷ್ಟೊಂದು ಪ್ರಮಾಣದ ಲಸಿಕೆ ನೀಡಿರುವುದು ಇದೇ ಮೊದಲು. ಈ ಮೂಲಕ ಆಂಧ್ರದಲ್ಲಿ ಲಸಿಕೆ ಪಡೆದವರ ಸಂಖ್ಯೆ 1 ಕೋಟಿ ದಾಟಿದೆ. ಕೊರೋನಾ ಲಸಿಕೆ ಅಭಿಯಾನಕ್ಕೆ ಚುರುಕು ನೀಡುವ ನಿಟ್ಟಿನಿಂದ ಆಂಧ್ರದಲ್ಲಿ ಜಗನ್ ಮೋಹನ್ ರೆಡ್ಡಿ ನೇತೃತ್ವದ ಸರ್ಕಾರ ವಿಶೇಷ ಲಸಿಕೆ ಅಭಿಯಾನವನ್ನು ಹಮ್ಮಿಕೊಳ್ಳಲಾಗಿತ್ತು. ಈ ಮುನ್ನ ರಾಜ್ಯದಲ್ಲಿ ಒಂದೇ ದಿನ 6 ಲಕ್ಷ ಮಂದಿಗೆ ಲಸಿಕೆ ನೀಡಿದ್ದು, ಈವರೆಗಿನ ಗರಿಷ್ಟ ಎನಿಸಿಕೊಂಡಿತ್ತು.

ಆಧಾರ: ಕನ್ನಡಪ್ರಭ, ದಿನಾಂಕ:21.06.2021

## 13. Minister offers Rs.1 lakh for parent with most children

Three years after the Young Mizo Association (YMA), an influential organisation, asked the tribal people to have more babies, a Minister in Mizoram has announced a cash prize of Rs.1 lakh to a parent in his Assembly constituency with the most number of children. Sports, Youth Affairs and Tourism Minister Robert Romawia Royte made the announcement on June 20 for encouraging the demographically small Mizos to reverse the declining population growth rate.

He represents the Mizo National Front from the Aizawl East-II constituency. Mr.Royte did not quantify the children a man or woman should have to be eligible for the award.

I made the announcement on Father's Day. The prize money will be sponsored by the North East Constituency Services, he told journalists. His family runs the agency.

The Minister said Mizoram's population density of 52 persons per sq.km was much below the national average of 382. The infertility rate and the decling growth rate of the Mizo population has been a serious concern for many years, he said is announcement came a week after the death of Zion-a Chana, the leader of a polygamous Christian cult who had 39 wives and 94 children besides several grandchildren.

Courtesy:The Hindu Date: 23.06.2021

# ಭಾಗ–7

# ಶ್ರದ್ಧಾಂಜಲಿ

## 1. ಪಂಡಿತ್ ತರ್ಲಗಟ್ಟಿ, ಖ್ಯಾತ ಸಿತಾರ್ ಕಲಾವಿದ

ಕರ್ನಾಟಕ ಸರ್ಕಾರದ ಪ್ರತಿಷ್ಠಿತ ಕಲಾಶ್ರೀ ಮತ್ತು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ, ಖ್ಯಾತ ಸಿತಾರ್‌ವಾದಕ ಮತ್ತು ಕರ್ನಾಟಕ ವಿಶ್ವವಿದ್ಯಾಲಯ ಸಂಗೀತ ಮತ್ತು ಲಲಿತಕಲಾ ಮಹಾ ವಿದ್ಯಾಲಯದ ನಿವೃತ್ತಿ ಪ್ರಾಧ್ಯಾಪಕ ಪಂಡಿತ್ ಶಿವಾನಂದ ತರ್ಲಗಟ್ಟಿ ನಿಧನರಾದರು. ಅವರಿಗೆ 94 ವರ್ಷ ವಯಸ್ಸಾಗಿತ್ತು.

ಪಂಡಿತ್ ಮಲ್ಲಿಕಾರ್ಜುನ ಮನ್ಸೂರ್ ಅವರಿಂದ ರಾಗ–ರಾಗಿಣಿಕಲಿತು ಸಿತಾರ್ ವಾದನದಲ್ಲಿ ಅವರಿಂದ ರಾಗ–ರಾಗಿಣಿ ಕಲಿತು ಸಿತಾರ್ ವಾದನದಲ್ಲಿ ಜೈಪುರ್ ಅತ್ರೋಳಿ ಘರಾಣಾ ಬೆಳೆಸುವ ಪ್ರೇರಣೆ ಪಡೆದರು.

ಆಧಾರ:ಕನ್ನಡಪ್ರಭ, ದಿನಾಂಕ:05.04.2021.

## 2. ಗಾಂಧಿವಾದಿ ಸದಾಶಿವ ಭೋಸಲೆ

ಮಾಜಿ ಶಾಸಕರ ಹಾಗೂ ಅಪ್ಪಟ ಗಾಂಧಿವಾದಿ ಸದಾಶಿವ ಬಾಪುಸಾಹೇಬ ಭೋಸಲೆ ಕಡೋಲಿ ತಾಲ್ಲೂಕಿನ ಕಡೋಲಿ ಗ್ರಾಮದ ತಮ್ಮ ನಿವಾಸದಲ್ಲಿ ನಿಧನರಾದರು. ಅವರಿಗೆ 101 ವರ್ಷ ವಯಸ್ಸಾಗಿತ್ತು.

**ಶಾಸಕ ಸ್ಥಾನಕ್ಕೆ ರಾಜೀನಾಮೆ:** 1946ರಲ್ಲಿ ಮುಂಬಯಿ ವಿಧಾನ ಸಭೆಗೆ ಬೆಳಗಾವಿ ಕ್ಷೇತ್ರದಿಂದ ಆಯ್ಕೆಯಾಗಿದ್ದರು. 1951ರಲ್ಲಿ ಕಡೋಲಿ ಗ್ರಾಮದಲ್ಲಿ ಕಸ್ತೂರಬಾ ಕೇಂದ್ರ ಆರಂಭಿಸಿ ಮಕ್ಕಳಿಗೆ ಮತ್ತು ಮಹಿಳೆಯರಿಗೆ ಶಿಕ್ಷಣ ನೀಡುತ್ತಿದ್ದರು. ಸ್ವಾತಂತ್ರ್ಯ ನಂತರ ನಡೆದ ಮೊದಲ ಚುನಾವಣೆಯಲ್ಲಿ (1952ರಲ್ಲಿ) ಬಾಗೇವಾಡಿ ಕ್ಷೇತ್ರದಿಂದ ಮುಂಬಯಿ ವಿಧಾನಸಭೆಗೆ ಅವರು ಪುನರಾಯ್ಕೆಯಾಗಿದ್ದರು. 1956ರಲ್ಲಿ ಭಾಷಾವಾರು ಪ್ರಾಂತ್ಯ ರಚನೆಯಾದಾಗ ಅಂದಿನ ಮೈಸೂರು ಸರ್ಕಾರದ ಶಾಸಕರಾಗಿ ಮುಂದುವರಿದಿದ್ದರು. 1957ರಲ್ಲಿ ನಡೆದ ಭೂದಾನ ಚಳುವಳಿಯಲ್ಲಿ ಪಾಲ್ಗೊಳ್ಳುವ ಉದ್ದೇಶದಿಂದ ಅವರು ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. 1958ರಲ್ಲಿ ದೇವಗಿರಿ ಗ್ರಾಮದಲ್ಲಿ ಗಾಂಧಿವಾದ, ಸಾವಯವ ಕೃಷಿ ಜಾಗೃತಿ ಮೂಡಿಸುವಲ್ಲಿ ತೊಡಗಿಸಿಕೊಂಡಿದ್ದರು. ಇಳಿವಯಸ್ಸಿನಲ್ಲೂ ಚರಕದಿಂದ ನೂಲನ್ನು ಮಗ್ಗಕ್ಕೆ ಕೊಟ್ಟು ಅದರಿಂದ ಜುಬ್ಬಾ ಮತ್ತು ಪೈಜಾಮ್ ಮಾಡಿಸಿಕೊಂಡು ಧರಿಸುತ್ತಿದ್ದರು.

ಆಧಾರ:ವಿಜಯಕರ್ನಾಟಕ, ದಿನಾಂಕ:16.04.2021.

## 3. ಸೈಯದ್ ಜುಲ್ಫೀಕರ್ ಹಷ್ಮಿ, ಮಾಜಿ ಶಾಸಕ

ಬಹುಜನ ಸಮಾಜ ಪಕ್ಷದ ದಕ್ಷಿಣ ಭಾರತದ ಮೊದಲ ಶಾಸಕರಾಗಿ ಆಯ್ಕೆಯಾಗಿ ದಾಖಲೆ ನಿರ್ಮಿಸಿದ್ದ ಬೀದರ್‌ನ ಮಾಜಿ ಶಾಸಕ ಸೈಯದ್ ಜುಲ್ಫೀಕರ್ ಹಷ್ಮಿ ನಿಧನರಾದರು.

ಆಧಾರ:ಕನ್ನಡಪ್ರಭ, ದಿನಾಂಕ:21.04.2021.

## 4. ಎಂ.ಎ. ಹೆಗಡೆ, ಯಕ್ಷಗಾನ ಅಕಾಡೆಮಿ ಅಧ್ಯಕ್ಷ

ಯಕ್ಷಗಾನ ಕೃತಿಕರ್ತ, ಅರ್ಥಧಾರಿ ಹಾಗೂ ಯಕ್ಷಗಾನ ಅಕಾಡೆಮಿ ಅಧ್ಯಕ್ಷ ಎಂ.ಎ. ಹೆಗಡೆ ದಂಟ್ಕಲ್ ನಿಧನರಾಗಿದ್ದಾರೆ. ಅವರಿಗೆ 73 ವರ್ಷ ವಯಸ್ಸಾಗಿತ್ತು. ಯಕ್ಷಗಾನ ಕ್ಷೇತ್ರದಲ್ಲಿ ಪಾತ್ರಧಾರಿ, ಆರ್ಥಧಾರಿ, ಪ್ರಸಂಗ ಕರ್ತ, ಸಂಶೋಧಕರಾಗಿ ಕಾರ್ಯ ನಿರ್ವಹಿಸಿದ್ದರು. ಹಲವು ಕೃತಿ ರಚಿಸಿದ್ದು, 20ಕ್ಕೂ ಅಧಿಕ ಯಕ್ಷಗಾನ ಪ್ರಸಂಗ ರಚಿಸಿದ್ದಾರೆ.

ಆಧಾರ:ಕನ್ನಡಪ್ರಭ, ದಿನಾಂಕ:19.04.2021.

## 5. ವೆಂಕಟಸುಬ್ಬಯ್ಯ, ನಿಘಂಟು ತಜ್ಞ

ನಿಘಂಟು ತಜ್ಞರೆಂದೇ ಪ್ರಸಿದ್ಧಿ ಹೊಂದಿದ್ದ ಖ್ಯಾತ ಭಾಷಾ ತಜ್ಞ, ಶತಾಯುಷಿ ಪ್ರೊ: ಜಿ. ವೆಂಕಟಸುಬ್ಬಯ್ಯ ನಿಧನರಾದರು. ಅವರಿಗೆ 108 ವರ್ಷ ವಯಸ್ಸಾಗಿತ್ತು.

ವೆಂಕಟಸುಬ್ಬಯ್ಯ ಅವರು ಕನ್ನಡದ ನಿಘಂಟುಶಾಸ್ತ್ರ, ಪ್ರಾಚೀನ ಸಾಹಿತ್ಯ ಅಧ್ಯಯನ, ಅನುವಾದ ಕ್ಷೇತ್ರಗಳಲ್ಲಿ ಅಪೂರ್ವ ಸಾಧನೆ ಮಾಡಿದ್ದಾರೆ. ಕನ್ನಡ ಭಾಷೆ ಅಥವಾ ಪದಗಳ ಅರ್ಥ ವಿವರಣೆಗೆ ಹಾಗೂ ಭಾಷೆಗೆ ಸಂಬಂಧಿಸಿದ ಗೊಂದಲಗಳ ನಿವಾರಣೆಗೆ ಇಂದಿಗೂ ಅವರು ರಚಿಸಿದ ಕೃತಿಗಳನ್ನೇ ಆಧಾರವಾಗಿ ಬಳಸಲಾಗುತ್ತಿದೆ.

ಪ್ರಜಾವಾಣಿಯಲ್ಲಿ ಅವರು ಬರೆಯುತ್ತಿದ್ದ ಇಗೋ ಕನ್ನಡ ಅಂಕಣ ಪ್ರಸಿದ್ಧಿ ಪಡೆದಿತ್ತು. ಈ ಅಂಕಣದ ಮೂಲಕ ಅವರು ಭಾಷಾ ಬಳಕೆಗೆ ಸಂಬಂಧಿಸಿದ ಗೊಂದಲಗಳನ್ನು ಬಗೆಹರಿಸಲು ನೆರವಾಗಿದ್ದರು. ಭಾಷೆಗೆ ನೀಡಿದ ಕೊಡುಗೆಗಾಗಿ ಅವರಿಗೆ 2017ರಲ್ಲಿ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಲಾಗಿತ್ತು.

1913ರಲ್ಲಿ ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆಯ ಕೈಗೊನಹಳ್ಳಿಯಲ್ಲಿ ಜನಿಸಿದರು. ಆನಂತರ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಉಪನ್ಯಾಸಕರಾಗಿ ವೃತ್ತಿ ಆರಂಭಿಸಿದ ಅವರು ನಂತರ ಬೆಂಗಳೂರಿನ ವಿಜಯಾ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿ, ನಿವೃತ್ತರಾಗಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ – ಕನ್ನಡ ನಿಘಂಟುವಿನ ಪ್ರಧಾನ ಸಂಪಾದಕರಾಗಿ ಸೇವೆ ಸಲ್ಲಿಸಿದ್ದರು.

ನಡೆದಾಡುವ ನಿಘಂಟು "ಶಬ್ದ ಬ್ರಹ್ಮ" ಎಂದು ಜನಜನಿತರಾಗಿದ್ದ ಅವರು ಸಾಹಿತ್ಯ ವಿಮರ್ಶೆ ಸಂಶೋಧನೆ, ಅನುವಾದ ನಿಘಂಟು ರಚನೆ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಅವರು 70 ಪುಸ್ತಕಗಳು ಹಾಗೂ 14 ನಿಘಂಟುಗಳು ಪ್ರಕಟಗೊಂಡಿವೆ. ನಿಘಂಟು ಪರಿವಾರ ಅಕ್ರೂರ ಚರಿತ್ರೆ (ಸಂಪಾದನೆ) ಇಗೋ ಕನ್ನಡ (ಸಾಮಾಜಿಕ ನಿಘಂಟು), ಗತಿ ಪ್ರಜ್ಞೆ ಕನ್ನಡವನ್ನು ಉಳಿಸಿ ಬೆಳೆಸಿದವರು. "ಅನುಕಲ್ಪನೆ" "ಕರ್ಣ ಕರ್ಣಾಮೃತ" ಪತ್ರಿಕಾ ಪದಕೋಶ ಮುಂತಾದವು ಇವರ ಪ್ರಮುಖ ಕೃತಿಗಳು.

ವಿದ್ಯಾಲಂಕಾರ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಂಪ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಶಂಬಾ ಪ್ರಶಸ್ತಿ, ಸೇರಿಯಾಪು ಪ್ರಶಸ್ತಿ, ಕಾಯಕ ಪ್ರಶಸ್ತಿ, ಮಾಸ್ತಿ ಪ್ರಶಸ್ತಿ, ಹಂಪಿ ವಿಶ್ವವಿದ್ಯಾನಿಲಯದ ನಾಡೋಜ ಕೇಂದ್ರ ಸಾಹಿತ್ಯ ಅಕಾಡೆಮಿಯ ಭಾಷಾ ಸಮ್ಮಾನ್ ಪುರಸ್ಕಾರ ಸೇರಿದಂತೆ ಹಲವು ಪ್ರಶಸ್ತಿಗಳು ಅವರಿಗೆ ಸಂದಿವೆ. ಬೆಂಗಳೂರಿನಲ್ಲಿ ನಡೆದ 77ನೇ ಆಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವಕ್ಕೂ ಇವರು ಪಾತ್ರರಾಗಿದ್ದರು.

ಆಧಾರ:ಪ್ರಜಾವಾಣಿ, ದಿನಾಂಕ:20.04.2021.

## 6. ಮೋಹನ ಶಾಂತನಗೌಡರ, ನ್ಯಾಯಮೂರ್ತಿಗಳು

ಅನಾರೋಗ್ಯ ಕಾರಣದಿಂದ ನಿಧನರಾದ ಸುಪ್ರೀಂಕೋರ್ಟ್ ನ್ಯಾಯಾಮೂರ್ತಿ ಮೋಹನ ಎಂ. ಶಾಂತನಗೌಡರ ಪಾರ್ಥಿವ ಶರೀರದ ಅಂತ್ಯಕ್ರಿಯೆ ನಗರದ ಚಾಮರಾಜಪೇಟೆಯ ವೀರಶೈವ ಲಿಂಗಾಯತ ರುದ್ರಭೂಮಿಯಲ್ಲಿ ಸಕಲ ಸರ್ಕಾರಿ ಗೌರವದೊಂದಿಗೆ ನೆರವೇರಿತು.

2017ರಲ್ಲಿ ಸುಪ್ರಿಂಕೋರ್ಟ್ ನ್ಯಾಯಾಮೂರ್ತಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಶಾಂತನಗೌಡರ 2022ರ ಮೇ 4 ರಂದು ನಿವೃತ್ತಿ ಹೊಂದಬೇಕಿತ್ತು. ನ್ಯಾ. ಮೋಹನ ಶಾಂತನಗೌಡರ ನಿಧನಕ್ಕೆ ಸಿಜೆಐ ಎನ್.ವಿ.ರಮಣ, ಮುಖ್ಯಮಂತ್ರಿಯವರು, ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ, ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ, ರಾಜ್ಯ ಅಡ್ವೋಕೇಟ್ ಜನರಲ್ ಪ್ರಭುಲಿಂಗ ಕೆ ನಾವದಗಿ ಸೇರಿ ಅನೇಕ ಗಣ್ಯರು ಕಂಬನಿ ಮಿಡಿದಿದ್ದಾರೆ.

ಹಾವೇರಿ ಜಿಲ್ಲೆ ಹಿರೇಕೆರೂರು ತಾಲ್ಲೂಕಿನ ಚಿಕ್ಕೆರೂರಿನಲ್ಲಿ 1958ರ ಮೇ 5 ರಂದು ಜನಿಸಿದ ಮೋಹನ ಶಾಂತನಗೌಡರ ಕರ್ನಾಟಕ ವಿಶ್ವವಿದ್ಯಾಲಯದ ಕಾನೂನು ಕಾಲೇಜಿನಲ್ಲಿ ಕಾನೂನು ಪದವಿ ಪೂರೈಸಿದರು. ಅಂದಿನ ಹೆಸರಾಂತ ವಕೀಲರಾಗಿದ್ದ ಐ.ಜಿ. ಹಿರೇಗೌಡರ ಬಳಿ 1980ರಲ್ಲಿ ವಕೀಲವೃತ್ತಿ ಆರಂಭಿಸಿದರು. ಧಾರವಾಡದಲ್ಲಿ ಒಂದು ವರ್ಷ ವಕೀಲಿಕೆ ನಂತರ ಬೆಂಗಳೂರಿಗೆ ಸ್ಥಳಾಂತರಗೊಂಡಿದ್ದರು. 1991 ರಿಂದ 93ರ ತನಕ ಕರ್ನಾಟಕ ರಾಜ್ಯ ವಕೀಲರ ಪರಿಷತ್‌ನ ಉಪಾಧ್ಯಕ್ಷರಾಗಿದ್ದ ಅವರು 1999 ರಿಂದ 2002ರವರೆಗೆ ರಾಜ್ಯದ ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿ ಕಾರ್ಯ ನಿರ್ವಹಿಸಿದ್ದರು. 2003ರಲ್ಲಿ ರಾಜ್ಯ ಹೈಕೋರ್ಟ್‌ನ ಹೆಚ್ಚುವರಿ ನ್ಯಾಯಮೂರ್ತಿಗಳಾಗಿದ್ದ ಅವರನ್ನು 2004ರಲ್ಲಿ ಖಾಯಂ ನ್ಯಾಯಾಮೂರ್ತಿಗಳನ್ನಾಗಿ ನೇಮಕ ಮಾಡಲಾಯಿತು. ನಂತರ 2016ರಲ್ಲಿ ಕೇರಳ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ನೇಮಕಗೊಂಡ ಅವರು 2017ರಲ್ಲಿ ಸುಪ್ರೀಂಕೋರ್ಟ್ ನ್ಯಾಯಮೂರ್ತಿಯಾಗಿ ಪದೋನ್ನತಿ ಹೊಂದಿದ್ದರು.

ಆಧಾರ:ವಿಜಯವಾಣಿ, ದಿನಾಂಕ:26.04.2021.

## 7. ಪಂಡಿತ್ ರಾಜನ್ ಮಿಶ್ರಾ, ಖ್ಯಾತ ಹಿಂದೂಸ್ತಾನಿ ಸಂಗೀತಗಾರ

ಹೆಸರಾಂತ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತಗಾರ ಪಂಡಿತ್ ರಾಜನ್ ಮಿಶ್ರಾ ಕೊರೋನಾ ಸೋಂಕಿನ ಕಾರಣ ನಿಧನರಾರು ಅವರಿಗೆ 73 ವರ್ಷ ವಯಸ್ಸಾಗಿತ್ತು.

ಬನಾರಸ್ ಘರಾನಾದ ಸಂಗೀತಾಭ್ಯಾಸಿಯಾಗಿದ್ದ ರಾಜನ್, ಖಯಾಲ್ ಗಾಯಕಿ ಪ್ರಕಾರದಲ್ಲಿ ನಿಷ್ಣಾತರಾಗಿದ್ದರು. ರಾಜನ್ ಅವರಿಗೆ ಪದ್ಮಭೂಷಣ, ಸಂಗೀತ ನಾಟಕ ಅಕಾಡೆಮಿ, ಸಂಗೀತ ಕಲಿತರು. ನಂತರ ಪದ್ಮಭೂಷಣ, ಸಂಗೀತ ರತ್ನ, ಸಂಗೀತ ಭೂಷಣ ಕುಮಾರ್ ಗಂಧರ್ವ ಪ್ರಶಸ್ತಿ, ಕಾಶಿ ಗೌರವ ಪುರಸ್ಕಾರಗಳು ಸಂದಿವೆ.

ರಾಜನ್ ಮಿಶ್ರಾ ನಿಧನಕ್ಕೆ ಪ್ರಧಾನಿ ನರೇಂದ್ರ ಮೋದಿ ಸಂತಾಪ ಸೂಚಿಸಿದ್ದು, ಹಿಂದೂಸ್ತಾನಿ ಸಂಗೀತದ ಅಳಿಸಲಾಗದ ಛಾಪು ಮೂಡಿಸಿದ್ದ ರಾಜನ್ ಮರಣದಿಂದ ಸಂಗೀತಲೋಕ ಬಡವಾಗಿದೆ ಎಂದು ಟ್ವೀಟ್ ಮಾಡಿದ್ದಾರೆ.

ಆಧಾರ:ವಿಜಯವಾಣಿ, ದಿನಾಂಕ:26.04.2021.

## 8. ಮಹ್ಮದ್ ಲೈಕೊದ್ದೀನ್, ಮಾಜಿ ಶಾಸಕರು

ಮಹ್ಮದ್ ಲೈಕೊದ್ದೀನ್ ಮಾಜಿ ಶಾಸಕ ಇವರು ನಿಧನರಾದರು. ಅವರಿಗೆ 80 ವರ್ಷ ವಯಸ್ಸಾಗಿತ್ತು. ತೀವ್ರ ಅನಾರೋಗ್ಯದಿಂದ ಬಳಲುತ್ತಿದ್ದ ಇವರು ಕೋವಿಡ್‌ನಿಂದಾಗಿ ಕೊನೆಯುಸಿರೆಳೆದರು. ಲೈಕೊದ್ದೀನ್ 1985ರ ಬೀದರ್ ವಿಧಾನ ಸಭಾ ಕ್ಷೇತ್ರದಿಂದ ಕಾಂಗ್ರೆಸ್‌ನಿಂದ ಸ್ಪರ್ಧಿಸಿ ಗೆದ್ದಿದ್ದರು.

ಆಧಾರ:ವಿಜಯವಾಣಿ, ದಿನಾಂಕ:01.05.2021.

## 9. ಸೋಲಿ ಸೋರಾಬ್ಜಿ, ಖ್ಯಾತ ನ್ಯಾಯವಾದಿಗಳು

ಖ್ಯಾತ ನ್ಯಾಯವಾದಿ ಮಾಜಿ ಅಟಾರ್ನಿ ಜನರಲ್ ಸೋಲಿ ಸೋರಾಬ್ಜಿ, ಅವರು ಕೊರೋನಾ ಸೋಂಕಿಗೆ ಬಲಿಯಾಗಿದ್ದಾರೆ ಅವರಿಗೆ 91 ವರ್ಷ ವಯಸ್ಸಾಗಿತ್ತು. ಅವರೊಬ್ಬರು ಮಹೋನ್ನತ ನ್ಯಾಯವಾದಿಗಳಾಗಿದ್ದರು. ಮೂಲಭೂತ ಹಕ್ಕುಗಳು ಮತ್ತು ಮಾನವ ಹಕ್ಕುಗಳ ವಿಷಯದಲ್ಲಿ ಅವರ ಕೊಡುಗೆ ಅಪಾರವಾಗಿದೆ.

ಆಧಾರ:ಸಂಯುಕ್ತ ಕರ್ನಾಟಕ, ದಿನಾಂಕ:01.05.2021.

## 10. ಜಗಮೋಹನ್ ಮಲ್ಹೋತ್ರ, ಕೇಂದ್ರ ಮಾಜಿ ಸಚಿವರು

ಜಮ್ಮು- ಕಾಶ್ಮೀರದ ಮಾಜಿ ರಾಜ್ಯಪಾಲ ಹಾಗೂ ಕೇಂದ್ರದ ಮಾಜಿ ಸಚಿವ ಜಗಮೋಹನ್ ಮಲ್ಹೋತ್ರ, ಅವರು ಅನಾರೋಗ್ಯದಿಂದ ವಿಧಿವಶರಾಗಿದ್ದಾರೆ ಅವರಿಗೆ 93 ವರ್ಷ ವಯಸ್ಸಾಗಿತ್ತು.

ಜಮು–ಕಾಶ್ಮೀರದಲ್ಲಿ ಜಗಮೋಹನ್ ರಾಜ್ಯಪಾಲರಾಗಿದ್ದಾಗ ಭಯೋತ್ಪಾದಕ ಚಟುವಟಿಕೆಗಳಿಗೆ ಕಡಿವಾಣ ಹಾಕಿದ್ದರು. ದೆಹಲಿ ಮತ್ತು ಗೋವಾದ ಉಪ ರಾಜ್ಯಪಾಲರಾಗಿಯೂ ಸೇವೆ ಸಲ್ಲಿಸಿದ್ದ ಅವರು ವಾಜಪೇಯಿ ಸರ್ಕಾರದಲ್ಲಿ ನಗರಾಭಿವೃದ್ಧಿ ಮತ್ತು ಪ್ರವಾಸೋದ್ಯಮ ಸಚಿವರಾಗಿ ಕಾರ್ಯನಿರ್ವಹಿಸಿದ್ದರು.

ಆಧಾರ:ಸಂಯುಕ್ತ ಕರ್ನಾಟಕ, ದಿನಾಂಕ:04.05.2021.

## 11. ಅಜಿತ್ ಸಿಂಗ್, ಕೇಂದ್ರ ಮಾಜಿ ಸಚಿವರು

ರೈತಪರ ಹೋರಾಟಗಳ ಮೂಲಕ ಗುರುತಿಸಿಕೊಂಡಿದ್ದ ಕೇಂದ್ರದ ಮಾಜಿ ಸಚಿವ ಹಾಗೂ ರಾಷ್ಟ್ರೀಯ ಲೋಕದಳ (ಆರ್‌ಎಲ್‌ಡಿ) ಮುಖ್ಯಸ್ಥ ಅಜಿತ್ ಸಿಂಗ್ ಅವರು ಕೊರೋನಾ ಸೋಂಕಿನಿಂದ ನಿಧರಾಗಿದ್ದಾರೆ ಅವರಿಗೆ 81 ವರ್ಷ ವಯಸ್ಸಾಗಿತ್ತು. ಅವರು ರಾಜಕಾರಣಿಗಿಂತಲೂ ರೈತ ಮುಖಂಡರಾಗಿಯೇ ಖ್ಯಾತಿಗಳಿಸಿದ್ದರು.

1980ರ ದಶಕದಲ್ಲಿ ಸಕ್ರಿಯ ರಾಜಕಾರಣ ಪ್ರವೇಶಿಸಿದ ಅವರು 1986ರಲ್ಲಿ ರಾಜ್ಯಸಭೆ ಸದಸ್ಯರಾಗಿ ಮೊದಲ ಬಾರಿಗೆ ಸಂಸತ್ ಪ್ರವೇಶಿಸಿದ್ದರು. ನಂತರ ಆರು ಬಾರಿ ಲೋಕಸಭೆಗೆ ಆಯ್ಕೆಯಾಗಿದ್ದರು.

ಆಧಾರ:ವಿಜಯವಾಣಿ, ದಿನಾಂಕ:07.05.2021.

## 12. ಕೆ.ಬಿ. ಶಾಣಪ್ಪ, ಮಾಜಿ ಸಚಿವರು

ಕೆ.ಬಿ. ಶಾಣಪ್ಪ, ಮಾಜಿ ಸಚಿವರು ಇವರು ಕೋವಿಡ್‌ನಿಂದಾಗಿ ನಿಧನರಾದರು. ಇವರಿಗೆ 79 ವರ್ಷ ವಯಸ್ಸಾಗಿತ್ತು. ಕಲ್ಯಾಣ ಕರ್ನಾಟಕ ಭಾಗದ ಪ್ರಭಾವಿ ದಲಿತ ಮುಖಂಡರಾಗಿದ್ದ ಅವರು ವಾಡಿ ಎಸಿಸಿ ಸಿಮೆಂಟ್ ಕಾರ್ಖಾನೆಯಲ್ಲಿ ಕಾರ್ಮಿಕ ಮುಖಂಡರಾಗಿ ಅನೇಕ ಹೋರಾಟಗಳನ್ನು ರೂಪಿಸಿದ್ದರು. ಪಟೇಲ್ ಸಂಪುಟದಲ್ಲಿ ಅಬಕಾರಿ ಸಚಿವರಾಗಿದ್ದು, ಪರಿಷತ್ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದರು. 2006ರಲ್ಲಿ ಬಿಜೆಪಿಗೆ ಸೇರ್ಪಡೆಯಾಗಿ ರಾಜ್ಯಸಭೆಗೆ ಆಯ್ಕೆಯಾಗಿದ್ದರು. ಲೋಕಸಭಾ ಚುನಾವಣೆ ವೇಳೆ 2018ರಲ್ಲಿ ಕಾಂಗ್ರೆಸ್‌ಗೆ ಸೇರ್ಪಡೆಗೊಂಡಿದ್ದರು.

ಆಧಾರ:ವಿಜಯ ಕರ್ನಾಟಕ, ದಿನಾಂಕ:10.05.2021.

## 13. ಮನೋಹರ್ ಕಟ್ಟಿಮನಿ, ಮಾಜಿ ಶಾಸಕರು

ಚಿಕ್ಕೋಡಿ ವಿಧಾನಸಭೆ ಕ್ಷೇತ್ರದ ಮಾಜಿ ಶಾಸಕ ಮನೋಹರ್ ಕಟ್ಟಿಮನೆ ಇವರು ಕೊರೋನಾ ಸೋಂಕಿನಿಂದ ಮೃತಪಟ್ಟಿದ್ದರೆ. ಇವರಿಗೆ 65 ವರ್ಷ ವಯಸ್ಸಾಗಿತ್ತು. 1999ರ ವಿಧಾನ ಸಭೆ ಸಾರ್ವತ್ರಿಕ ಚುನಾವಣೆಯಲ್ಲಿ ಜೆಡಿಯು ಪಕ್ಷದಿಂದ ಶಾಸಕರಾಗಿ ಆಯ್ಕೆಯಾಗಿದ್ದರು.

ಆಧಾರ:ವಿಜಯವಾಣಿ, ದಿನಾಂಕ:11.05.2021.

## 14. ಆರ್.ಆರ್. ಕಲ್ಲೂರ, ಮಾಜಿ ಶಾಸಕರು

ಮಾಜಿ ಶಾಸಕ, ಕಾಂಗ್ರೆಸ್‌ನ ಹಿರಿಯ ಮುಖಂಡ ಆರ್.ಆರ್. ಕಲ್ಲೂರ ಅವರು ನಿಧನ ಹೊಂದಿರುತ್ತಾರೆ. ಇವರಿಗೆ 92 ವರ್ಷ ವಯಸ್ಸಾಗಿತ್ತು. ಇಂಡಿ ತಾಲ್ಲೂಕಿನ ಹಿರೇಮಸಳಿ ಗ್ರಾಮದವರಾಗಿದ್ದ ಇವರು 1978, 1983 ಮತ್ತು 1989ರಲ್ಲಿ ಇಂಡಿ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾಗಿದ್ದರು. 1983ರಲ್ಲಿ ಬರಗಾಲ ಬಿದ್ದಾಗ ಕ್ಷೇತ್ರದ ರೈತರ ಬಾವಿಗಳಿಗೆ ಉಚಿತ ವಿದ್ಯುತ್ ಮತ್ತು ಪಂಪ್‌ಸೆಟ್ ನೀಡಲು ಆಗಿನ ಮುಖ್ಯಮಂತ್ರಿ ಗುಂಡೂರಾವ್ ಅವರನ್ನು ಆಗ್ರಹಿಸಿ, ಹೆಚ್ಚು ರೈತರಿಗೆ ಮಂಜೂರು ಮಾಡಿಸಿಕೊಟ್ಟಿದ್ದರು. ಇಂದಿಗೂ ರಾಜ್ಯದಲ್ಲಿಯೇ ಅತೀ ಹೆಚ್ಚು ತೆರೆದ ಬಾವಿಗಳಿರುವ ಕ್ಷೇತ್ರ ಎಂದರೆ ಅದು ಇಂಡಿ ತಾಲ್ಲೂಕಾಗಿದೆ.

ಶಾಸಕರಾಗಿದ್ದ ಅವಧಿಯಲ್ಲಿ ಅಂದಿನ ಪ್ರಧಾನಿ ಇಂದಿರಾಗಾಂಧಿ ಅವರನ್ನು ಇಂಡಿ ಪಟ್ಟಣಕ್ಕೆ ಕರೆಯಿಸಿ, ಬೆಳ್ಳಿ ಪಂಪ್ ಸೆಟ್ ನೀಡಿ ಗೌರವಿಸಿದ್ದರು. ಇಂಡಿಗೆ ಭೀಮಾ ನದಿಯಿಂದ ಕುಡಿಯುವ ನೀರು

ತರುವ ಯೋಜನೆ ರೂವಾರಿ ಆಗಿದ್ದರು. ಕರ್ನಾಟಕ ಭೂಸೇನಾ ನಿಗಮದ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು.

ಆಧಾರ:ಪ್ರಜಾವಾಣಿ, ದಿನಾಂಕ:14.05.2021.

## 15. ಮಹದೇವ ಪ್ರಕಾಶ್, ಹಿರಿಯ ಪತ್ರಕರ್ತರು

ಹಿರಿಯ ಪತ್ರಕರ್ತರಾಗಿದ್ದ ಮಹದೇವ್ ಪ್ರಕಾಶ್ ಅವರು ಕೋವಿಡ್‌ನಿಂದ ಮೃತಪಟ್ಟಿದ್ದಾರೆ. ಅವರಿಗೆ 65 ವರ್ಷ ವಯಸ್ಸಾಗಿತ್ತು. 1975ರಲ್ಲಿ ಮಾಜಿ ಮುಖ್ಯಮಂತ್ರಿ ವೀರೇಂದ್ರಪಾಟೀಲ ಅವರು ಆರಂಭಿಸಿದ್ದ ಲೋಕವಾಣಿ ಪತ್ರಿಕೆ ಮೂಲಕ ಪತ್ರಿಕೋದ್ಯಮ ಪ್ರವೇಶಿಸಿದ್ದರು. ಕೆಲ ವರ್ಷಗಳಿಂದ 'ಈ ಭಾನುವಾರ' ಎಂಬ ವಾರಪತ್ರಿಕೆಯನ್ನು ನಡೆಸುತ್ತಿದ್ದರು. ಯಡಿಯೂರಪ್ಪ ಮುಖ್ಯಮಂತ್ರಿ ಆದ ಬಳಿಕ ಮಾಧ್ಯಮ ಸಲಹೆಗಾರರಾಗಿ ನೇಮಗೊಂಡಿದ್ದರು . ಕಳೆದ ವರ್ಷಾಂತ್ಯದಲ್ಲಿ ಆ ಹುದ್ದೆಗೆ ರಾಜೀನಾಮೆ ನೀಡಿದ್ದರು.

ಆಧಾರ:ಪ್ರಜಾವಾಣಿ, ದಿನಾಂಕ:15.05.2021.

## 16. ಬಾಬಾಗೌಡ ಪಾಟೀಲ, ಕೇಂದ್ರ ಮಾಜಿ ಸಚಿವರು

ಬೆಳಗಾವಿ ರೈತ ಹೋರಾಟಗಾರ ಹಾಗೂ ಕೇಂದ್ರದ ಮಾಜಿ ಸಚಿವ ಬಾಬಾಗೌಡ ಪಾಟೀಲ ಇವರು ಅನಾರೋಗ್ಯದಿಂದಾಗಿ ನಿಧನರಾದರು. ಇವರಿಗೆ 78 ವರ್ಷ ವಯಸ್ಸಾಗಿತ್ತು. ಬೈಲಹೊಂಗಲ ತಾಲ್ಲೂಕಿನ ಚಿಕ್ಕಬಾಗೇವಾಡಿ ಗ್ರಾಮದವರಾಗಿದ್ದ ಅವರು ಕರ್ನಾಟಕ ರೈತ ಸಂಘಟನೆ ಹೋರಾಟದಿಂದ ಪ್ರೇರಣೆಗೊಂಡು ಅದೇ ಸಂಘಟನೆಯಲ್ಲಿ ತೊಡಗಿ ಪ್ರಮುಖ ನಾಯಕರಾಗಿ ಬೆಳೆದರು. ರೈತ ಸಂಘಟನೆ ಮೂಲಕ 1989ರ ವಿಧಾನ ಸಭೆ ಚುನಾವಣೆಯಲ್ಲಿ ಕಿತ್ತೂರು ಮತ್ತು ಧಾರವಾಡ ಗ್ರಾಮೀಣ ಕ್ಷೇತ್ರದಿಂದ ಸ್ಪರ್ಧಿಸಿದ್ದು, ಎರಡು ಕಡೆ ಆಯ್ಕೆಯಾಗಿದ್ದರು. ಬಳಿಕ ಧಾರವಾಡ ಗ್ರಾಮೀಣ ಕ್ಷೇತ್ರಕ್ಕೆ ರಾಜೀನಾಮೆ ನೀಡಿದ್ದರು.

ರೈತ ಸಂಘಟನೆ ನಾಯಕರೊಂದಿಗಿನ ಭಿನ್ನಾಭಿಪ್ರಾಯದಿಂದ ಬಿಜೆಪಿ ಸೇರಿದ ಅವರು ಬೆಳಗಾವಿ ಲೋಕಸಭೆ ಕ್ಷೇತ್ರದಿಂದ ಆಯ್ಕೆಯಾಗಿ 1998ರಲ್ಲಿ ಅಟಲ್ ಬಿಹಾರಿ ವಾಜಪೇಯಿ ನೇತೃತ್ವದ ಸರ್ಕಾರದಲ್ಲಿ ಗ್ರಾಮೀಣಾಭಿವೃದ್ಧಿ ಖಾತೆ ಸಚಿವರಾಗಿದ್ದರು. ನಂತರ ಬಿಜೆಪಿ ತೊರೆದು ಕೆಲ ವರ್ಷ ಜೆಡಿಎಸ್‌ನಲ್ಲಿದ್ದರು. ಅದನ್ನು ತೊರೆದು ತಮ್ಮ ನೇತೃತ್ವದಲ್ಲಿ ಅಖಂಡ ಕರ್ನಾಟಕ ರೈತ ಸಂಘ ಸ್ಥಾಪಿಸಿದ್ದರು. ಕೇಂದ್ರ ಸರ್ಕಾರವು ಕೃಷಿ ಕಾಯ್ದೆಗಳಿಗೆ ತಿದ್ದುಪಡಿ ತಂದಿರುವುದು ರೈತರಿಗೆ ಮರಣ ಶಾಸನವಾಗಿದೆ ಎಂದು ಬಲವಾಗಿ ವಿರೋಧಿಸುತ್ತಿದ್ದರು. ಕೃಷಿ ಕಾಯ್ದೆಗಳ ವಿರುದ್ಧ ಹೋರಾಟ ಮಾಡುತ್ತಿರುವ ರಾಕೇಶ್ ಟಿಕಾಯತ್ ಅವರ ಕಿಸಾನ್ ಮಹಾ ಪಂಚಾಯತ್‌ನಲ್ಲೂ ಮುಂಚೂಣಿಯಲ್ಲಿದ್ದರು. ರಾಜ್ಯದಲ್ಲಿ ಕಿಸಾನ್ ಮಹಾಪಂಚಾಯತ್‌ಗಳನ್ನು ಸಂಘಟಿಸುವಲ್ಲಿ ನೇತೃತ್ವ ವಹಿಸಿದ್ದರು.

ಆಧಾರ:ಪ್ರಜಾವಾಣಿ, ದಿನಾಂಕ:22.05.2021.

## 17. ಕೆ.ಆರ್.ಪೇಟೆ ಕೃಷ್ಣ, ಮಾಜಿ ವಿಧಾನ ಸಭಾಧ್ಯಕ್ಷರು

ಮೇಷ್ಟ್ರು ಎಂದೇ ಖ್ಯಾತರಾಗಿದ್ದ ಮಾಜಿ ಸಭಾಧ್ಯಕ್ಷರು ಅನಾರೋಗ್ಯದಿಂದ ನಿಧನರಾದರು. ಅವರಿಗೆ 80 ವರ್ಷ ವಯಸ್ಸಾಗಿತ್ತು. ವಕೀಲರಾಗಿ ಖ್ಯಾತರಾಗಿದ್ದ ಅವರು ಜನತಾ ಪರಿವಾರದಿಂದ ತಾಲ್ಲೂಕು ಬೋರ್ಡ್ ಸದಸ್ಯರಾಗಿ ರಾಜಕೀಯ ಜೀವನ ಆರಂಭಿಸಿ, ಶಾಸಕ, ಸಚಿವ, ಸಂಸದರಾಗಿ ಕಾರ್ಯನಿರ್ವಹಿಸಿದ್ದರು. ಬಿಜೆಪಿ–ಜೆಡಿಎಸ್ ಸಮ್ಮಿಶ್ರ ಸರ್ಕಾರದಲ್ಲಿ ಹೆಚ್.ಡಿ. ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದಾಗ ವಿಧಾನಸಭೆ ಸಭಾಧ್ಯಕ್ಷರಾಗಿದ್ದರು.

ಆಧಾರ:ವಿಶ್ವವಾಣಿ, ದಿನಾಂಕ:22.05.2021.

## 18. ದೊರೆಸ್ವಾಮಿ, ಸ್ವಾತಂತ್ರ್ಯ ಹೋರಾಟಗಾರರು

ಸ್ವಾತಂತ್ರ್ಯ ಹೋರಾಟಗಾರ ಶತಾಯುಷಿ ಹಾರೋಹಳ್ಳಿ ಶ್ರೀನಿವಾಸಯ್ಯ ದೊರೆಸ್ವಾಮಿ ಇವರು ನಿಧನರಾದರು. ಇವರಿಗೆ 103 ವರ್ಷ ವಯಸ್ಸಾಗಿತ್ತು. ಅಪಾರವಾದ ಸಾಮಾಜಿಕ ಕಳಕಳಿ ಹೊಂದಿದ್ದ ದೊರೆಸ್ವಾಮಿ ಅವರು ಯಾವುದೇ ಸರ್ಕಾರವಿದ್ದರೂ ತಪ್ಪು ಮಾಡಿದಾಗ ಆಕ್ಷೇಪ ವ್ಯಕ್ತಪಡಿಸುತ್ತಿದ್ದರು.

ನಾಡಿನ ನೆಲ–ಜಲ, ನೈಸರ್ಗಿಕ ಸಂಪತ್ತಿನ ರಕ್ಷಣೆ, ಬಡವರ, ಧ್ವನಿ ಇಲ್ಲದವರ ಮಾನವಹಕ್ಕುಗಳ ವಿಚಾರವಾಗಿ ಬೀದಿ ಹೋರಾಟ ನಡೆಸುತ್ತಿದ್ದ ಹೆಚ್.ಎಸ್.ದೊರೆಸ್ವಾಮಿ ಅವರು ಇದೇ ವಿಷಯಗಳನ್ನು ಮುಂದಿಟ್ಟುಕೊಂಡು ಕಾನೂನು ಹೋರಾಟ ಸಹ ನಡೆಸಿರುವ ಕೆಲ ನಿದರ್ಶನಗಳಿವೆ. ಅನೇಕ ವಿಚಾರಗಳ ಕುರಿತು ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಸಲ್ಲಿಸುವ ಮೂಲಕ ನೊಂದವರಿಗೆ ನ್ಯಾಯ ಕೊಡಿಸಲು ಮತ್ತು ತಪ್ಪಿತಸ್ಥರಿಗೆ ಕಾನೂನು ರೀತಿ ಶಿಕ್ಷೆ ಅಗಲು ಪ್ರಮುಖ ಪಾತ್ರ ವಹಿಸಿದ್ದರು. ಮುಖ್ಯವಾಗಿ ಬಳ್ಳಾರಿ, ಚಿತ್ರದುರ್ಗ, ತುಮಕೂರಿನಲ್ಲಿ ನಡೆದ ಅಕ್ರಮ ಗಣಿಗಾರಿಕೆ ಮತ್ತು ಬೇಲಿಕೇರಿ ಬಂದರಿನ ಮೂಲಕ ಅಕ್ರಮ ಅದಿರು ಸಾಗಾಟ ಹಗರಣಕ್ಕೆ ಸಂಬಂಧಿಸಿದಂತೆ ದೊರೆಸ್ವಾಮಿಯವರು 2009ರಲ್ಲಿ ಹೈಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು. ಇದರ ಬಳಿಕ ಮಾಜಿ ಸಚಿವ ಗಾಲಿ ಜನಾರ್ದನ ರೆಡ್ಡಿ ಅವರ ವಿರುದ್ಧದ ಕಾನೂನು ಕುಣಿಕೆ ಬಿಗಿಗೊಂಡಿತ್ತು. ಭೂಕಬಳಿಕೆ ಪ್ರಕರಣಗಳ ವಿಚಾರಣೆಗೆ 2014–15ರಲ್ಲಿ ವಿಶೇಷ ನ್ಯಾಯಾಲಯ ಸ್ಥಾಪಿಸುವ ಸರ್ಕಾರದ ನಿರ್ಧಾರದ ಹಿಂದೆ ದೊರೆಸ್ವಾಮಿ ಅವರ ಪಾತ್ರ ಪ್ರಮುಖವಾಗಿತ್ತು. ಇದಕ್ಕಾಗಿ ವಿಧಾನಸೌಧದ ಕಾನೂನು ಸಚಿವರ ಕೊಠಡಿ ಎದುರು ದೊರೆಸ್ವಾಮಿ ಹಾಗೂ ಎ.ಟಿ. ರಾಮಸ್ವಾಮಿ ಧರಣಿ ನಡೆಸಿದ್ದರು. 2016ರ ಭೂದಾನ ಚಳವಳಿಗೆ ಕಾನೂನು ಹೋರಾಟದ ರೂಪ ನೀಡಲು ಅವರು ಪ್ರಯತ್ನಿಸಿದ್ದರು.

ಆಧಾರ:ಉದಯವಾಣಿ, ದಿನಾಂಕ:27.05.2021.

## 19. ಎನ್.ಎಸ್. ಖೇಡ್, ಮಾಜಿ ಶಾಸಕರು

ಇಂಡಿ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಎನ್. ಎಸ್. ಖೇಡ್ ಅನಾರೋಗ್ಯದಿಂದ ನಿಧನ ಹೊಂದಿರುತ್ತಾರೆ. ಇವರಿಗೆ 74 ವರ್ಷ ವಯಸ್ಸಾಗಿತ್ತು. ಇಂಡಿ ತಾಲ್ಲೂಕಿನ ಸಾವಳಸಂಗ ಗ್ರಾಮದ ರೈತ ಕುಟುಂಬದಿಂದ ಬಂದಿದ್ದ ಎನ್. ಎಸ್. ಖೇಡ್ ಅವರು ದಿವಂಗತ ಬಿ.ಎಂ. ಪಾಟೀಲ್ ಅನುಯಾಯಿಯಾಗಿ ರಾಜಕೀಯ ಪ್ರವೇಶ ಮಾಡಿದ್ದರು. 1980ರಲ್ಲಿ ಜನತಾ ಪಕ್ಷದಿಂದ ಲೋಕಸಭೆಯಲ್ಲಿ ಸ್ಪರ್ಧಿಸಿದ್ದರು. ಮಾಜಿ ಪ್ರಧಾನಿಯವರಾದ ಹೆಚ್.ಡಿ. ದೇವೇಗೌಡ, ಚಂದ್ರಶೇಖರ್ ಅವರ ದೀರ್ಘಕಾಲದ ಒಡನಾಡಿಯಾಗಿದ್ದ ಎನ್.ಎಸ್.ಖೇಡ್ ಅವರು 1985–89ರವರೆಗೆ ಇಂಡಿ ಕ್ಷೇತ್ರದ ಶಾಸಕರಾಗಿದ್ದರು. ಧಾರವಾಡ ಕೃಷಿ ವಿವಿ ಆಡಳಿತ ಮಂಡಳಿ ಸದಸ್ಯರಾಗಿ, ವಿಜಯಪುರದ ಹಿಟ್ನಳ್ಳಿಯಲ್ಲಿ ಕೃಷಿ ಕಾಲೇಜು ಆರಂಭಕ್ಕೆ ಕಾರಣರಾಗಿದ್ದರು. ಬಿ.ಎಲ್.ಡಿ.ಇ. ಸಂಸ್ಥೆಯ ಆಜೀವ ಸದಸ್ಯರಾಗಿ, ವೈದ್ಯಕೀಯ ಕಾಲೇಜು ಸ್ಥಾಪನೆಯಲ್ಲಿ ಶ್ರಮವಹಿಸಿದ್ದರು.

ಆಧಾರ:ಸಂಯುಕ್ತ ಕರ್ನಾಟಕ, ದಿನಾಂಕ:04.06.2021.

## 20. ಮಮ್ತಾಜ್ ಆಲಿ ಖಾನ್, ಮಾಜಿ ಸಚಿವರು

ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ಮಾಜಿ ಸಚಿವ ನಿವೃತ್ತ ಪ್ರೊಫೆಸರ್ ಮಮ್ತಾಜ್ ಆಲಿ ಖಾನ್ ನಿಧನ ಹೊಂದಿರುತ್ತಾರೆ. 2008ರಲ್ಲಿ ಯಡಿಯೂರಪ್ಪ ಅವರ ಸಂಪುಟದಲ್ಲಿ ಅಲ್ಪಸಂಖ್ಯಾತ ಕಲ್ಯಾಣ ಹಜ್ ವಕ್ಫ್ ಖಾತೆ ಸಚಿವರಾಗಿ ಸೇವೆ ಸಲ್ಲಿಸಿದ್ದ ಅವರು ಬೆಂಗಳೂರು ಕೃಷಿ ವಿವಿನಲ್ಲಿ ಸಮಾಜಶಾಸ್ತ್ರ ಪ್ರೊಫೆಸರ್ ಆಗಿ ಸಹ ಕೆಲಸ ನಿರ್ವಹಿಸಿದ್ದರು. ಮಾಜಿ ಸಚಿವ ಪ್ರೊ. ಮಮ್ತಾಜ್ ಆಲಿಖಾನ್ ವಿಧಾನ ಪರಿಷತ್ ಸದಸ್ಯರಾಗಿ, ಹಜ್ ವಕ್ಫ್ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರಾಗಿ ಅತ್ಯುತ್ತಮ ಸೇವೆ ಸಲ್ಲಿಸಿದ ಅವರು ಶಿಕ್ಷಣ ಕ್ಷೇತ್ರಕ್ಕೆ ಗಮನಾರ್ಹ ಕೊಡುಗೆ ನೀಡಿದ್ದಾರೆ.

ಆಧಾರ:ಸಂಯುಕ್ತ ಕರ್ನಾಟಕ, ದಿನಾಂಕ:08.06.2021.

## 21. ಸಿ.ಎಂ.ಉದಾಸಿ, ಮಾಜಿ ಸಚಿವರು

ನಾಡಿನ ಹಿರಿಯ ಮುತ್ಸದ್ದಿ ರಾಜಕಾರಣಿ, ಮಾಜಿ ಸಚಿವ ಹಾಗೂ ಹಾನಗಲ್ ವಿಧಾನಸಭಾ ಕ್ಷೇತ್ರದ ಶಾಸಕರಾದ ಚನ್ನಮಲ್ಲಪ್ಪ ಮಹಾಲಿಂಗಪ್ಪ ಉದಾಸಿ ವಯೋ ಸಹಜ ಕಾಯಿಲೆಯಿಂದ ನಿಧನರಾಗಿದ್ದಾರೆ. ಅವರಿಗೆ 85 ವರ್ಷ ವಯಸ್ಸಾಗಿತ್ತು. ರಾಜ್ಯದ ಹಿರಿಯ ಮುತ್ಸದ್ದಿ, ರಾಜಕಾರಣಿಗಳಲ್ಲಿ ಒಬ್ಬರಾಗಿದ್ದ ಸಿ.ಎಂ. ಉದಾಸಿ ಅವರು ಕ್ಷೇತ್ರದ ಅಭಿವೃದ್ದಿಯೊಂದಿಗೆ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಕ್ರಿಯಾಶೀಲರಾಗಿ ಶ್ರಮಿಸುತ್ತಿದ್ದರು.

ಆಧಾರ:ವಿಶ್ವವಾಣಿ, ದಿನಾಂಕ:09.06.2021.

## 22. ಡಾ: ಸಿದ್ದಲಿಂಗಯ್ಯ, ಖ್ಯಾತ ಸಾಹಿತಿ

ಕನ್ನಡ ಪ್ರತಿಭಟನಾ ಕಾವ್ಯಕ್ಕೆ ತಳ ಸಮುದಾಯದ ರಾಗ–ಸಿಟ್ಟು ಸೆಡುವುಗಳನ್ನು ಆಡುಭಾಷೆಯಲ್ಲಿ ನೇಯ್ದಂತಹ ಹಾಡುಗಳ ಮೂಲಕವೇ ಒಂದೆರಡು ತಲೆಮಾರನ್ನು ಪ್ರಭಾವಿಸಿ ಹೋರಾಟದ ಸಾಗರಕ್ಕೆ ಸಾವಿರಾರು ನದಿಗಳನ್ನು ಹರಿಯಿಸಿ ಪರಿವರ್ತನೆಯ ಮುನ್ನುಡಿ ಬರೆದ ಕವಿ ಡಾ:ಸಿದ್ಧಲಿಂಗಯ್ಯ ಅವರು ಹೃದಯಾಘಾತದಿಂದ ನಿಧನರಾಗಿದ್ದಾರೆ. ಅವರಿಗೆ 67 ವರ್ಷ ವಯಸ್ಸಾಗಿತ್ತು. ಕಾವ್ಯ ನಾಟಕ, ಪ್ರಬಂಧ ವಿಮರ್ಶೆ, ಸಂಶೋಧನೆ, ಆತ್ಮಕಥನ ಮುಂತಾದ ಪ್ರಕಾರಗಳಲ್ಲಿ ಸಾಹಿತ್ಯ ರಚನೆ ಮಾಡಿದ್ದ ಸಿದ್ದಲಿಂಗಯ್ಯರವರು ಕವಿಗಳು ಎಂದೇ ಕರೆಯಿಸಿಕೊಂಡವರು. ತುಳಿತಕ್ಕೊಳಗಾದ ಸಮುದಾಯದವರಲ್ಲಿ ಸ್ವಾಭಿಮಾನದ ಕಿಡಿಯನ್ನು ಹಚ್ಚುವ ಜೊತೆಗೆ ಕಾವ್ಯವನ್ನೆ ಖಡ್ಗದಂತೆ ಬಳಸಿದರು.

ಆಧಾರ:ಪ್ರಜಾವಾಣಿ, ದಿನಾಂಕ:12.06.2021.

## 23. ಸಂಚಾರಿ ವಿಜಯ್, ಖ್ಯಾತ ಚಲನಚಿತ್ರ ನಟ

ಖ್ಯಾತ ಚಲನಚಿತ್ರ ನಟ ಹಾಗೂ ರಾಷ್ಟ್ರೀಯ ಪ್ರಶಸ್ತಿ ವಿಜೇತ ಸಂಚಾರಿ ವಿಜಯ್ ಇವರು ಬೈಕ್ ಅಪಘಾತದಲ್ಲಿ ಗಾಯಗೊಂಡು ಚಿಕಿತ್ಸೆ ಫಲಕಾರಿಯಾಗದೆ ನಿಧನ ಹೊಂದಿರುತ್ತಾರೆ. ಇವರಿಗೆ 42 ವರ್ಷ ವಯಸ್ಸಾಗಿತ್ತು. ಸ್ವಾರ್ಥ ರಹಿತ ಸೇವೆಯಲ್ಲಿ ನಿರತರಾದ ವಿಜಯ್ ಅಂಗಾಂಗ ದಾನದ ಮೂಲಕ ತಮ್ಮ ಕೊನೆಯ ಕ್ಷಣದಲ್ಲೂ ಸಾರ್ಥಕತೆ ಮೆರೆದಿದ್ದಾರೆ. ಲಾಕ್‌ಡೌನ್ ಸಂದರ್ಭದಲ್ಲಿ ಸಾಕಷ್ಟು ಸಾಮಾಜಿಕ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದರು.

ಆಧಾರ:ಉದಯವಾಣಿ, ದಿನಾಂಕ:15.06.2021.

## 24. ಕೆಸಿಎನ್ ಚಂದ್ರು, ಖ್ಯಾತ ನಿರ್ಮಾಪಕ

ಕನ್ನಡ ಚಿತ್ರರಂಗದ ಖ್ಯಾತ ನಿರ್ಮಾಪಕ ಕೆಸಿಎನ್ ಚಂದ್ರಶೇಖರ್ (69) ನಿಧನರಾಗಿದ್ದಾರೆ. ಅವರು ಎರಡು ಸಲ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷರಾಗಿ ಒಂದು ಬಾರಿ ಸೌತ್ ಇಂಡಿಯನ್ ಫಿಲಂ ಫೆಡರೇಷನ್ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಸಿನಿಮಾ ನಿರ್ಮಾಣ, ವಿತರಣೆ ಹಾಗೂ ಪ್ರದರ್ಶನ ವಿಭಾಗದಲ್ಲಿ ತೊಡಗಿಸಿಕೊಂಡಿದ್ದರು. ಬಹುಭಾಷೆಯಲ್ಲಿ ಚಿತ್ರಗಳನ್ನು ನಿರ್ಮಿಸಿದ್ದ ಕೀರ್ತಿಯೂ ಅವರಿಗಿದೆ.

ಆಧಾರ:ಕನ್ನಡಪ್ರಭ, ದಿನಾಂಕ:15.06.2021.

## 25. ಬಿ. ವಿಜಯಕೃಷ್ಣ, ಮಾಜಿ ಕ್ರಿಕೆಟಿಗ

ಬಹು ಅಂಗಾಂಗ ವೈಫಲ್ಯದಿಂದ ಬಳಲುತ್ತಿದ್ದ ಕರ್ನಾಟಕದ ಮಾಜಿ ಕ್ರಿಕೆಟಿಗ ಬಿ. ವಿಜಯಕೃಷ್ಣ ಅವರು ನಿಧನರಾಗಿದ್ದಾರೆ. ಇವರಿಗೆ 71 ವರ್ಷ ವಯಸ್ಸಾಗಿತ್ತು.

1970 ಹಾಗೂ 1980ರ ದಶಕದಲ್ಲಿ ಕರ್ನಾಟಕ ಕ್ರಿಕೆಟ್ ತಂಡದ ಅವಿಭಾಜ್ಯ ಅಂಗವಾಗಿದ್ದ ಅವರು 15 ವರ್ಷಗಳ ಕಾಲ ರಾಜ್ಯ ತಂಡದ ಭಾಗವಾಗಿದ್ದ ಎಡಗೈ ಬ್ಯಾಟ್ಸ್‌ಮೆನ್ ಹಾಗೂ ಸ್ಪಿನ್ನರ್ ಆಡಿದ 80 ಪ್ರಥಮ ದರ್ಜೆ ಪಂದ್ಯಗಳಿಂದ 2 ಶತಕ ಹಾಗೂ 16 ಅರ್ಧ ಶತಕ ಸೇರಿದಂತೆ 2,297 ರನ್

ಸಿಡಿಸಿ, 194 ವಿಕೆಟ್ ಕಬಳಿಸಿದ್ದರು. 1949ರ ಆಕ್ಟೋಬರ್ 12 ರಂದು ಬೆಂಗಳೂರಿನಲ್ಲಿ ಜನಿಸಿದ ವಿಜಯಕೃಷ್ಣ 1960ರಲ್ಲಿ ಕೆ. ನಾಗಭೂಷಣ್ ಮಾರ್ಗದರ್ಶನದಲ್ಲಿ ಕ್ರಿಕೆಟ್ ಆಡಲು ಆರಂಭಿಸಿದ್ದರು. 1968ರಲ್ಲಿ ಹೈದರಾಬಾದ್ ವಿರುದ್ಧ ರಣಜಿ ಟ್ರೋಫಿಗೆ ಪದಾರ್ಪಣೆ ಮಾಡಿದ ಅವರು ಮದ್ರಾಸ್ ತಂಡದ ವಿರುದ್ಧ 6 ವಿಕೆಟ್ ಕಬಳಿಸಿ ಮಿಂಚಿದ್ದರು.

ಆಧಾರ: ವಿಜಯವಾಣಿ, ದಿನಾಂಕ:18.06.2021.

## 26. ರಾಮಯ್ಯ, ಸ್ವಾತಂತ್ರ್ಯ ಹೋರಾಟಗಾರರು

ಸ್ವಾತಂತ್ರ್ಯ ಹೋರಾಟಗಾರ ಹಾಗೂ ಮಾಜಿ ಶಾಸಕ ಸೂ.ರಂ. ರಾಮಯ್ಯ(102) ನಿಧನರಾದರು ವಿದ್ಯಾರ್ಥಿ ದೆಸೆಯಲ್ಲೇ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ಗೊಂಡಿದ್ದ ರಾಮಯ್ಯ ಅವರು ಮಹಾತ್ಮ ಗಾಂಧಿ ವಿಚಾರಧಾರೆಗೆ ಆಕರ್ಷಿತರಾಗಿದ್ದರು. ಗಾಂಧಿ ತತ್ವಾದರ್ಶ ಅಳವಡಿಸಿಕೊಂಡಿದ್ದರು. 1957ರಲ್ಲಿ ಹೊಸಕೋಟೆ–ದೇವನಹಳ್ಳಿ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾಗಿದ್ದರು. ಗ್ರಾಮ ಪಂಚಾಯತ್, ತಾಲ್ಲೂಕು ಪಂಚಾಯತ್ ಅಧ್ಯಕ್ಷರಾಗಿ ಜಿಲ್ಲಾ ಪಂಚಾಯತ್ ಸದಸ್ಯರಾಗಿ, ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಸಮಿತಿ ಗೌರವಾಧ್ಯಕ್ಷರಾಗಿದ್ದರು. ಶಿಕ್ಷಣಕ್ಕೆ ಒತ್ತು ನೀಡುತ್ತಿದ್ದ ಅವರು ಸ್ವಾಮಿ ವಿವೇಕಾನಂದ ವಿದ್ಯಾಭಿವೃದ್ಧಿ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರು. ಸೂಲಿಬೆಲೆ ಒಳಗೊಂಡು ತಾಲ್ಲೂಕಿನಾದ್ಯಂತ ಅನೇಕ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಜನಸಾಮಾನ್ಯರನ್ನು ಸುಶಿಕ್ಷತರನ್ನಾಗಿಸಿ ಸ್ವಾಭಿಮಾನ, ದೇಶಾಭಿಮಾನ ಮೂಡಿಸುವಲ್ಲಿ ಶ್ರಮಿಸಿದ್ದಾರೆ.

ಆಧಾರ:ವಿಜಯವಾಣಿ, ದಿನಾಂಕ:19.06.2021.

## 27. ಮಿಲ್ಕಾ ಸಿಂಗ್, ಆಟಗಾರರು

ಫ್ಲೆಯಿಂಗ್ ಸಿಖ್ ಎಂದೇ ಖ್ಯಾತನಾಮರಾಗಿದ್ದ ಓಟದ ದಂತಕತೆ ಮಿಲ್ಕಾಸಿಂಗ್ ಇನ್ನಿಲ್ಲ. ಕೊರೋನಾ ಕಾರಣದಿಂದಾಗಿ 91ನೇ ವಯಸ್ಸಿನ ಮಿಲ್ಕಾಸಿಂಗ್ ವಿಧಿವಶರಾಗಿದ್ದಾರೆ.

ಮಿಲ್ಕಾಸಿಂಗ್ ಅವರು ಏಷ್ಯನ್ ಗೇಮ್ಸ್‌ನಲ್ಲಿ 4 ಬಾರಿ ಚಿನ್ನದ ಪದಕ ಪಡೆದಿದ್ದರು. 1958ರ ಕಾಮನ್ವೆಲ್ತ್ ಗೇಮ್ಸ್‌ನಲ್ಲಿಯೇ ಚಾಂಪಿಯನ್ ಆಗಿದ್ದರು. ಆದರೆ ಇವರ ಅತ್ಯಂತ ಶ್ರೇಷ್ಠ ಪ್ರದರ್ಶನವೆಂದರೆ 1960ರ ರೋಮ್ ಒಲಿಂಪಿಕ್ಸ್‌ನಲ್ಲಿ 400 ಮೀ. ಓಟದಲ್ಲಿ ನಾಲ್ಕನೇ ಸ್ಥಾನಗಳಿಸಿದ್ದು, ಜೊತೆಗೆ 1956 ಮತ್ತು 1964ರ ಒಲಿಂಪಿಕ್ಸ್‌ನಲ್ಲಿಯೂ ಮಿಲ್ಕಾಸಿಂಗ್ ಭಾಗಿಯಾಗಿದ್ದರು. ಮಿಲ್ಕಾ ಅವರಿಗೆ 1959ರಲ್ಲಿ ಪದ್ಮಶ್ರೀ ನೀಡಲಾಗಿತ್ತು.

ಆಧಾರ:ಉದಯವಾಣಿ, ದಿನಾಂಕ:19.06.2021.

## 28. ಡಾ: ಎಂ. ಉದಯಕುಮಾರ್, ಖ್ಯಾತ ವಿಜ್ಞಾನಿ

ಖ್ಯಾತ ವಿಜ್ಞಾನಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಸಸ್ಯಶರೀರಶಾಸ್ತ್ರದ ಡಾ:ಎಂ. ಉದಯಕುಮಾರ್ (75) ನಿಧನರಾದರು. ಮೂಲ ಆಂಧ್ರಪ್ರದೇಶದ ಗುಂಟೂರಿನ ಡಾ:ಉದಯಕುಮಾರ್, ಎಂಎಸ್ಸಿ ಹಾಗೂ ಪಿಹೆಚ್‌ಡಿಗಳನ್ನು ರಷ್ಯಾದಲ್ಲಿ ಮುಗಿಸಿ 1973ರಲ್ಲಿ ಬೆಂಗಳೂರು ಕೃಷಿ ಸಂಶೋಧನಾ ಸಂಸ್ಥೆ (ಐಎಆರ್‌ಐ) ಹಾಗೂ ನೆದರ್‌ಲ್ಯಾಂಡಿನ ವ್ಯಾಗನಿಂಗೆನ್ ವಿಶ್ವವಿದ್ಯಾಲಯಗಳಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದರು. ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಕುಲಾಂತರಿ ಸಸ್ಯಗಳ ಕುರಿತಾದ ಸಮೀಕ್ಷಾ ಸಮಿತಿಯ ಸಹ ಅಧ್ಯಕ್ಷರಾಗಿ, ಕೇಂದ್ರ ಪರಿಸರ ಇಲಾಖೆಯ ಕುಲಾಂತರಿ ಸಸ್ಯಗಳ ಅಭಿವೃದ್ಧಿ ಬಗ್ಗೆ ಕಾನೂನುಗಳನ್ನು ರೂಪಿಸಲು ಶ್ರಮಿಸಿದ್ದರು.

ಐಎನ್‌ಎಸ್‌ಎ ಹಿರಿಯ ವಿಜ್ಞಾನಿ, ಪ್ರೊಫೆಸರ್ ಆರ್.ಡಿ ಅಸನಾ ಮೆಡಲ್ ಸೇರಿದಂತೆ ಹಲವು ಪ್ರಶಸ್ತಿಗಳು ಇವರಿಗೆ ಸಂದಿವೆ. ಭಾರತದಲ್ಲಿನ ನಾಲ್ಕು ವಿಜ್ಞಾನ ಅಕಾಡೆಮಿಗಳ (ಬೆಂಗಳೂರು, ದೆಹಲಿ

ಅಲಹಾಬಾದ್ ನವದೆಹಲಿ) ಫೆಲೋ ಆಗಿ ಕೆಲಸ ಮಾಡಿದ್ದರು. ಸಸ್ಯಗಳಲ್ಲಿ ಧ್ಯುತಿಸಂಶ್ಲೇಷಣೆ ನೀರಿನ ಬಳಕೆಯ ದಕ್ಷತೆ ಸಸ್ಯ ವಂಶವಾಹಿ ವಿಜ್ಞಾನ ಕುಲಾಂತರಿ ಸಸ್ಯಗಳ ಬಗ್ಗೆ ಗಮನಾರ್ಹ ಪಾಂಡಿತ್ಯವಿತ್ತು. ಅವರು ಕೆಲಸ ಮಾಡುತ್ತಿದ್ದ ವಿಭಾಗದಲ್ಲಿ ಸಸ್ಯ ಸಂಶೋಧನೆಯಲ್ಲಿ ರೇಡಿಯೋ ಐಸೋಟೋಪ್ಸ್ ಬಳಕೆ ಬಗ್ಗೆ ಪ್ರಥಮ ಬಾರಿಗೆ ರಾಷ್ಟ್ರೀಯ ಅಧ್ಯಯನ ಕೇಂದ್ರ ಸ್ಥಾಪಿಸಿದ್ದರು.

ಆಧಾರ:ಉದಯವಾಣಿ, ದಿನಾಂಕ:28.06.2021.

## 29. ಎಸ್. ಬಿ. ಸಿದ್ನಾಳ, ಮಾಜಿ ಸಂಸದ

ಬೆಳಗಾವಿ ಜಿಲ್ಲೆಯ ಹಿರಿಯ ರಾಜಕಾರಣಿ ಬೆಳಗಾವಿ ಲೋಕಸಭಾ ಕ್ಷೇತ್ರದ ಮಾಜಿ ಸಂಸದ ಎಸ್. ಬಿ. ಸಿದ್ನಾಳ ಅವರು ಅನಾರೋಗ್ಯದಿಂದ ನಿಧನಹೊಂದಿರುತ್ತಾರೆ. ಅವರಿಗೆ 85 ವರ್ಷ ವಯಸ್ಸಾಗಿತ್ತು. 1980, 1984, 1989 ಮತ್ತು 1991ರ ಅವಧಿಯಲ್ಲಿ ನಾಲ್ಕು ಬಾರಿ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಗೆದ್ದು ಸಂಸದರಾಗಿದ್ದರು. ಕ್ಷೇತ್ರದಲ್ಲಿ ಮೊದಲ ಹ್ಯಾಟ್ರಿಕ್ ಗೆಲುವಿನ ದಾಖಲೆ ಇವರ ಹೆಸರಲ್ಲಿದೆ. 1980ರ ದಶಕದಲ್ಲಿ ಕಾಂಗ್ರೆಸ್‌ನಲ್ಲಿ ಪ್ರಭಾವಿ ನಾಯಕರಾಗಿದ್ದರು. ಇಂದಿರಾ ಗಾಂಧಿ ಹಾಗೂ ಎಸ್.ನಿಜಲಿಂಗಪ್ಪ ಅವರ ಭಿನ್ನಮತದಿಂದ ಪಕ್ಷ ಇಬ್ಭಾಗವಾದಾಗ ಸಿದ್ನಾಳ ಅವರು ಇಂದಿರಾ ಗಾಂಧಿ ಅವರ ಜೊತೆ ಗುರುತಿಸಿಕೊಂಡಿದ್ದರು.

ಆಧಾರ:ಪ್ರಜಾವಾಣಿ, ದಿನಾಂಕ:28.06.2021.

# ಭಾಗ–8

# ಪ್ರಮುಖ ಲೇಖನಗಳು

## 1. ಶಾಲೆಗಳ ಜೀರ್ಣೋದ್ಧಾರದಿಂದ ಹರಡುತ್ತಿದೆ ಅಕ್ಷರಗಳ ಬೆಳಕು

ಐಸಿಯುನಲ್ಲಿ ಪೇಷಂಟ್ ಇಲ್ಲ ಅಂತ ಆಸ್ಪತ್ರೆ ಮುಚ್ಚಲ್ಲ. ಸದಸ್ಯರು ಬರಲ್ಲ ಅಂತ ಅಸೆಂಬ್ಲಿ, ಪಾರ್ಲಿಮೆಂಟ್ ಮುಚ್ಚಲ್ಲ. ಮಕ್ಕಳಿಲ್ಲ ಅಂತ ಶಾಲೆ ಮುಚ್ಚೋದು ಸರಿನಾ? ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕಾಸರಗೋಡು ಸಿನಿಮಾದ ಈ ಡೈಲಾಗ್ ಸಂಚಲನ ಸೃಷ್ಟಿಸಿದ್ದು ಮಾತ್ರವಲ್ಲ. ಸರ್ಕಾರಿ ಶಾಲೆಗಳು ಉಳಿಯಬೇಕು ಎಂಬ ಕಿಚ್ಚನ್ನೂ ಎಷ್ಟೋ ಜನರಲ್ಲಿ ಜಾಗೃತಗೊಳಿಸಿತು. ಶಿಕ್ಷಣದ ಸವಾಲುಗಳ ಬಗ್ಗೆ ಚರ್ಚೆಯಾಗುವಾಗಲೆಲ್ಲ ಸರ್ಕಾರಿ ಶಾಲೆಗಳ ದಯನೀಯ ಸ್ಥಿತಿಯ ಕಳವಳ ಗಟ್ಟಿದನಿಯಲ್ಲೇ ಕೇಳಿಬರುತ್ತದೆ. ಗ್ರಾಮೀಣ ಭಾಗದಲ್ಲಿ ಮಕ್ಕಳು ಶಾಲೆಗೆ ಬರಲು ಸಿದ್ದರಿದ್ದರೂ, ಆಗಲೋ ಈಗಲೋ ಬೀಳುವಂಥ ಕಟ್ಟಡಗಳು, ಸೋರುವ ತರಗತಿ ಕೋಣೆಗಳು, ಮುರಿದ ಬೆಂಚು, ಟೇಬಲ್‌ಗಳು, ಕುಡಿಯುವ ನೀರಿಗೂ ತತ್ವಾರದಂಥ ಸ್ಥಿತಿ ಇರುವಾಗ ಅಲ್ಲಿ ಶೈಕ್ಷಣಿಕ ವಾತಾವರಣ ರೂಪುಗೊಳ್ಳಲು ಹೇಗೆ ಸಾಧ್ಯ? ಅಧ್ಯಯನವೊಂದರ ಪ್ರಕಾರ, ಭಾರತದಲ್ಲಿನ ಬಹುತೇಕ ಸರ್ಕಾರಿ ಶಾಲೆಗಳು ನಿರ್ಮಾಣವಾಗಿರುವುದು 1930–40ರ ದಶಕದಲ್ಲಿ ಆ ಕಟ್ಟಡಗಳು ಈಗ ಶಿಥಿಲಾವಸ್ಥೆ ತಲುಪಿದ್ದು, ಕಲಿಕೆಗೆ ಪೂರಕವಾಗುವಂಥ ಸೌಲಭ್ಯಗಳಿಂದ ವಂಚಿತವಾಗಿವೆ.

ಸರ್ಕಾರಿ ಶಾಲೆ ಎಂದರೆ ಅದು ಬರೀ ಭೌತಿಕ ವಿನ್ಯಾಸವಲ್ಲ. ಇಲ್ಲಿ ಆಕಾರಗಳು ಅರಳುತ್ತವೆ. ಬಾಲ್ಯ ನಲಿದಾಡುತ್ತದೆ. ವಿದ್ಯೆ ಉಸಿರಾಡುತ್ತದೆ. ಜ್ಞಾನ ವೃದ್ಧಿಯಾಗುತ್ತದೆ. ಕನಸುಗಳು ಹರಡಿಕೊಳ್ಳುತ್ತವೆ. ಕಲಿಸುತ್ತ ಕಲಿಸುತ್ತ ಶಿಕ್ಷಕರೂ ಮಕ್ಕಳಾಗುತ್ತಾರೆ. ಗೆಳೆಯರ ಕಲರವ ಹೊಸ ಲೋಕವನ್ನೇ ಸೃಷ್ಟಿಸುತ್ತದೆ. ಚಿಣ್ಣರ ಮುಗ್ಧ ಮನಸುಗಳು ಎತ್ತರಕ್ಕೆ ಹಾರಲು ಹೊಸ ರೆಕ್ಕೆಗಳನ್ನು ಕಟ್ಟಿಕೊಳ್ಳುತ್ತವೆ. ಕಲಿಕೆಯ ಒಂದೊಂದೇ ಹಂತ ಆತ್ಮ ವಿಶ್ವಾಸವನ್ನು ಗಟ್ಟಿಮಾಡುತ್ತ ಹೋಗುತ್ತದೆ. ಇದು ನಮ್ಮ ಶಾಲೆ ನಮ್ಮ ತರಗತಿ, ನಮ್ಮ ಆಟದ ಅಂಗಳ ಎಂಬ ಭಾವಸಂಭ್ರಮ ಸರ್ಕಾರಿ ಶಾಲೆಯನ್ನು ಮಕ್ಕಳ ಎರಡನೇ ಮನೆಯಾಗಿ ಅಷ್ಟೇ ಅಲ್ಲ ಪ್ರತ್ಯಕ್ಷ ವಿದ್ಯಾದೇಗುಲವಾಗಿಸುತ್ತದೆ. ಆದರೆ ಶಾಲೆ ಎಂದಾಕ್ಷಣ ಅಲ್ಲೊಂದು ಚೇತೋಹಾರಿಯಾದ ಶೈಕ್ಷಣಿಕ ವಾತಾವರಣ ಇರಬೇಕು ಅಲ್ಲವೇ? ದುರ್ಬಲವಾದ ಕಟ್ಟಡಗಳಲ್ಲಿ ಸಶಕ್ತವಾದ ಮನಸ್ಸುಗಳನ್ನು ಕಟ್ಟಲು ಹೇಗೆ ತಾನೆ ಸಾಧ್ಯ? ಈ ಪ್ರಶ್ನೆ ಒಂದಿಷ್ಟು ಕನ್ನಡಿಗರೇ ಆದ ಅನಿವಾಸಿ ಭಾರತೀಯರಿಗೆ ಕಾಡಿದ್ದೇ ತಡ, ಅವರೆಲ್ಲ ಅದು ಸರ್ಕಾರದ ಜವಾಬ್ದಾರಿ ಎಂದು ನುಣುಚಿಕೊಳ್ಳಲಿಲ್ಲ. ಬದಲಾಗಿ ಅವರದ್ದೇ ಆದ ಸಣ್ಣ ತಂಡ ರೂಪಿಸಿಕೊಂಡು ಶಿಥಿಲಾವಸ್ಥೆಯಲ್ಲಿರುವ ಸರ್ಕಾರಿ ಶಾಲೆಗಳ ಮರುನಿರ್ಮಾಣ ಆರಂಭಿಸಿಯೇ ಬಿಟ್ಟರು. ಒಳ್ಳೆಯ ಸಂಕಲ್ಪ ಕೆಲಸಗಳಿಗೆ ಸಮಾಜ ನೆರವಾಗುತ್ತದೆ ಎಂಬ ನಂಬಿಕೆ ಮತ್ತೆ ನಿಜವಾಯಿತು. ಒಂದೊಂದೇ ಶಾಲೆಗಳು ಸುಸಜ್ಜಿತ ಕಟ್ಟಡಗಳೊಂದಿಗೆ ಎದೆಯುಬ್ಬಿಸಿ ನಿಂತಾಗ, ಅಲ್ಲಿ ನನಸಾಗಿದ್ದು ನೂರಾರು ಕನಸುಗಳು ನೂರಾರು ಮಕ್ಕಳ ಆಶಯಗಳು ಸಂಸ್ಕೃತಿಯ ಉತ್ಥಾನಕ್ಕಾಗಿ ದೇವಸ್ಥಾನಗಳ ಜೀರ್ಣೋದ್ಧಾರ ಎಷ್ಟು ಅವಶ್ಯವೋ, ಸಮಾಜದ ನವೋತ್ಕರ್ಷಕ್ಕೆ ಶಾಲೆಗಳ ಜೀರ್ಣೋದ್ದಾರ ಅಷ್ಟೇ ಅವಶ್ಯ.

ಸಮಾಜದ ದೊಡ್ಡ ಕೊರತೆಯನ್ನು ನೀಗಿಸುತ್ತಿರುವ ಲಾಭರಹಿತ ಸ್ವಯಂಸೇವಾ ಸಂಸ್ಥೆ ಓಸ್ಯಾಟ್ ಅಂದರೆ one school at a time ಅಮೆರಿಕದಲ್ಲಿ ಐಟಿ ಸೇರಿದಂತೆ ವಿವಿಧ ವೃತ್ತಿಯಲ್ಲಿ ತೊಡಗಿರುವ ಕನ್ನಡಿಗರು ಶಾಲೆಗಳ ಮರುನಿರ್ಮಾಣ ಕಾರ್ಯಕ್ಕೆ ಆಂದೋಲನದ ಸ್ವರೂಪ ನೀಡಿದ್ದಾರೆ. 2003ರಲ್ಲಿ ಅಮೆರಿಕದಲ್ಲಿ ನೋಂದಣಿಯಾಗಿ ಕೆಲಸ ಆರಂಭಿಸಿದ ಈ ಸಂಸ್ಥೆ ಭಾರತದಲ್ಲಿ ಕೆಲವರು ಇದ್ದು ಶಾಲೆಗಳಿಗೆ ಹೊಸರೂಪ ನೀಡುವುದು ಅಗತ್ಯ ಎಂದು ಸ್ವಲ್ಪ ಸಮಯದಲ್ಲೇ ಮನಗಂಡಿತು. 2005–06ರಲ್ಲಿ ಒಂದಿಷ್ಟು ಎನ್‌ಆರ್‌ಐಗಳು ಕನ್ನಡನಾಡಿನ ಮಡಿಲಿಗೆ ಮರಳಿದರು. 2011ರಲ್ಲಿ ಸಂಸ್ಥೆಯ ಶಾಖೆ ಭಾರತದಲ್ಲಿ ಕಾರ್ಯಾರಂಭ ಮಾಡಿತು. ವಾದಿರಾಜ್ ಭಟ್ ಮತ್ತು ಅವರ 50 ಸದಸ್ಯರ ತಂಡ ಕಾರ್ಯಹೊಣೆ ಸ್ವೀಕರಿಸಿತು. 2015ರ ಹೊತ್ತಿಗೆ 9–10 ಯೋಜನೆಗಳು ಪೂರ್ಣಗೊಂಡವು. ಆ ಬಳಿಕ

ಕೆಲಸ ಮತ್ತಷ್ಟು ಚುರುಕು ಪಡೆದುಕೊಂಡಿತು. 2021ರ ಹೊತ್ತಿಗೆ ಕರ್ನಾಟಕ, ಮಹಾರಾಷ್ಟ್ರ, ಉತ್ತರಪ್ರದೇಶ, ಮಣಿಪುರ ಸೇರಿ 42 ಯೋಜನೆಗಳು ಪೂರ್ಣಗೊಂಡಿವೆ. 2021ರ ಅಂತ್ಯಕ್ಕೆ 55 ಯೋಜನೆಗಳು ಪೂರ್ಣಗೊಳ್ಳುವ ನಿರೀಕ್ಷೆ ಇದೆ.

ಶಾಲಾ ಕಟ್ಟಡ, ತರಗತಿ ಕೋಣೆ ಶೌಚಗೃಹ ನಿರ್ಮಾಣ ವ್ಯವಸ್ಥಿತವಾಗಿ ಮತ್ತು ಪಾರದರ್ಶಕವಾಗಿ ಮಾಡಲಾಗಿದೆ. ಪ್ರತಿ ಯೋಜನೆಗೂ ಸರಾಸರಿ ರೂ.40 ಲಕ್ಷ ವೆಚ್ಚ ಮಾಡಲಾಗಿದೆ. ಅಗತ್ಯ ಇರುವಲ್ಲಿ ಹೆಚ್ಚಿನ ಮೊತ್ತವನ್ನೂ ವ್ಯಯಿಸಲಾಗಿದೆ. ಕಳೆದ ವರ್ಷ ಕೋಲಾರ ಜಿಲ್ಲೆಯ ಮಾಲೂರಿನಲ್ಲಿ ಸರ್ಕಾರಿ ಹಿರಿಯ ಬಾಲಕಿಯರ ಪ್ರಾಥಮಿಕ ಶಾಲೆಯನ್ನು ರೂ.95 ಲಕ್ಷ ವೆಚ್ಚದಲ್ಲಿ ನಿರ್ಮಿಸಲಾಗಿದೆ. ರಾಜ್ಯದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಸುರೇಶ್ ಕುಮಾರ್ ಈ ಕಟ್ಟಡವನ್ನು ಉದ್ಘಾಟಿಸಿ, ಓಸ್ಯಾಟ್ ಕಾರ್ಯವನ್ನು ಶ್ಲಾಘಿಸಿದ್ದಾರೆ. ಡಿವಿಜಿ ಹುಟ್ಟಿದ ಅವರ ಪೂರ್ವಜರ ಮನೆ, ಸರ್ಕಾರಕ್ಕೆ ದಾನವಾಗಿ ಬಂದು, ಶಾಲೆಯಾಗಿ ಪರಿವರ್ತನೆಗೊಂಡಿತು. ಶಿಥಿಲಗೊಂಡಿರುವ ಆ ಕಟ್ಟಡದ ಪುನರ್ ನಿರ್ಮಾಣದ ಹೊಣೆ ಹೊರಲು ಓಸ್ಯಾಟ್ ಸಂಸ್ಥೆ ಸಿದ್ಧವಾಗುತ್ತಿದೆ.

ಕಟ್ಟಡ ನಿರ್ಮಾಣ ಎಂದರೆ ಅದು ಕೇವಲ ಇಟ್ಟಿಗೆ, ಸಿಮೆಂಟ್‌ಗಳ ಮಿಶ್ರಣ ಅಥವಾ ನಾಲ್ಕು ಗೋಡೆಗಳ ಆವರಣ ಅಲ್ಲ. ಪ್ರತಿ ಮಗುವಿನಲ್ಲೂ ಕಲಿಕೆಯಲ್ಲಿ ಉತ್ಸಾಹ ಬರುವಂಥ, ಶಿಕ್ಷಕರಿಗೂ ಸ್ಫೂರ್ತಿ ತುಂಬ ಬಲ್ಲ ವಾತಾವರಣವನ್ನು ಈ ನಿರ್ಮಾಣಗಳ ಮೂಲಕ ಸೃಷ್ಟಿಸಲಾಗುತ್ತಿದೆ. ಇಷ್ಟೊಂದು ಹಣ ಯಾರು ಕೊಡುತ್ತಾರೆ ಎಂಬ ಪ್ರಶ್ನೆ ಕಾಡಬಹುದು. ಅನಿವಾಸಿ ಭಾರತೀಯರ ವೈಯಕ್ತಿಕ ದೇಣಿಗೆ ಮತ್ತು ಕಾರ್ಪೋರೇಟ್ ಸಂಸ್ಥೆಗಳ ದೇಣಿಗೆ (ಸಿಎಸ್‌ಆರ್) ಮೂಲಕ ಇದು ಸಾಧ್ಯವಾಗಿದೆ. ಒಬ್ಬರೇ ಇಡೀ ಶಾಲೆಯ ಮರು ನಿರ್ಮಾಣದ ಹೊಣೆ ಹೊತ್ತ ನಿದರ್ಶನಗಳೂ ಇವೆ. ಅಷ್ಟೇ ಅಲ್ಲ ಓಸ್ಯಾಟ್ ಯುಎಸ್‌ಎ ತಂಡ ಸಂಗೀತ, ನೃತ್ಯ ಮನರಂಜನೆಯ ಕಾರ್ಯಕ್ರಮಗಳನ್ನು ನಡೆಸಿ ಹಣ ಸಂಗ್ರಹಿಸುತ್ತದೆ.

2025ರ ಹೊತ್ತಿಗೆ 100 ಶಾಲೆಗಳ ಮರು ನಿರ್ಮಾಣ ಮಾಡುವ ಗುರಿ ಇದೆ ಎಂದು ತಿಳಿಸುತ್ತಾ ಈ ಪ್ರೇರಣದಾಯಿ ಪಯಣದ ಪರಿಣಾಮಗಳನ್ನೂ ವಿವರಿಸಿದರು. ಓಸ್ಯಾಟ್ ತಂಡ ಜಿ.ಕೆ.ಭಟ್, ಸುಧೀರ್ ಹುಲುಮನೆ ಮತ್ತು ಎನ್‌ವಿಜಿಕೆ ಭಟ್, ಎಲ್ಲೆಲ್ಲಿ ಶಾಲೆಗಳ ಮರುನಿರ್ಮಾಣ ಅಥವಾ ಜೀರ್ಣೋದ್ಧಾರವಾಗಿದೆಯೇ ಅಲ್ಲೆಲ್ಲ ಮಕ್ಕಳ ಪ್ರವೇಶಾತಿ ಸಂಖ್ಯೆ ಹೆಚ್ಚಿದೆ. ಕಲಿಕೆಯಲ್ಲಿ ಫಲಿತಾಂಶದಲ್ಲಿ ಪ್ರಗತಿ ಕಂಡು ಬಂದಿದೆ. ಶಾಲೆಗಳ ಆಯ್ಕೆಗೆ ಓಸ್ಯಾಟ್ ಗಟ್ಟಿ ವ್ಯವಸ್ಥೆಯನ್ನು ರೂಪಿಸಿಕೊಂಡಿದೆ. ಗ್ರಾಮೀಣ ಭಾಗದ ಸರ್ಕಾರಿ ಶಾಲೆಗಳಿಗೆ ಪ್ರಾಶಸ್ತ್ಯ ಮತ್ತು ಅಲ್ಲಿನ ಪ್ರತಿ ತರಗತಿ 25 ಮಕ್ಕಳಾದರೂ ಇರಬೇಕು. ಶಾಲೆಯ ಮುಖ್ಯೋಪಾಧ್ಯಾಯರು ಶಿಕ್ಷಕರು ಮಕ್ಕಳ ಅಭಿವೃದ್ಧಿ ಬಗ್ಗೆ ಎಸ್‌ಡಿಎಂಸಿ ಮತ್ತು ಹಳ್ಳಿಯ ಧುರೀಣರು ಶಾಲೆಯ ನಿರ್ವಹಣೆಯ ಬಗ್ಗೆ ಆಸಕ್ತಿ ಹೊಂದಿರಬೇಕು. ಇದನ್ನೆಲ್ಲ ಅವಲೋಕಿಸಲೆಂದೇ ಒಂದು ತಂಡ ಶಾಲೆಗೆ ಭೇಟಿ ನೀಡುತ್ತದೆ. ಈ ಮೇಲ್ಕಂಡ ಅಂಶಗಳೆಲ್ಲ ಪೂರಕವಾಗಿದ್ದರೆ, ಪ್ರಾಜೆಕ್ಟ್ ರಿಪೋರ್ಟ್ ಸಿದ್ಧಗೊಳ್ಳುತ್ತದೆ. ದಾನಿಗಳ ಮುಂದೆ ಅದನ್ನು ಪ್ರಸ್ತುತ ಪಡಿಸಲಾಗುತ್ತದೆ. ಸ್ಥಳೀಯ ಮಟ್ಟದಲ್ಲಿ ಗುತ್ತಿಗೆ ನೀಡಿ, ನಿಗದಿತ ಕಾಲಮಿತಿಯಲ್ಲಿ ನಿರ್ಮಿಸಲಾಗುತ್ತದೆ ಮತ್ತು ಮೇಲುಸ್ತುವಾರಿಗಾಗಿ ಓಸ್ಯಾಟ್‌ನ ಸ್ವಯಂಸೇವಕರನ್ನು ನಿಯೋಜಿಸಲಾಗುತ್ತದೆ. ಕಟ್ಟಡ ನಿರ್ಮಾಣದ ಬಳಿಕ ಕಂಡುಬರುವ ಸುಧಾರಣೆ ಬದಲಾವಣೆಗಳನ್ನೂ ಗಮನಿಸಲಾಗುತ್ತದೆ. ದೇಣಿಗೆ ಸಂಗ್ರಹದಲ್ಲಿ ಪಾರದರ್ಶಕ ವ್ಯವಸ್ಥೆ ಅಳವಡಿಸಿಕೊಂಡಿರುವುದರಿಂದ ಕೊಡುವ ಕೈಗಳ ಸಂಖ್ಯೆ ಹೆಚ್ಚುತ್ತಿದೆಯೇ ಹೊರತು ಕಡಿಮೆಯಾಗಿಲ್ಲ. ಇಡೀ ಹಳ್ಳಿಯ ಹೆಮ್ಮೆಯ ಪ್ರತೀಕವಾಗಿ ಈ ಜ್ಞಾನದೇಗುಲಗಳು ತಲೆಎತ್ತಿವೆ. ಅಲ್ಲದೆ ಸರ್ಕಾರಿ ಶಾಲೆಗಳು ಹೇಗಿರಬೇಕು ಎಂಬುದಕ್ಕೂ ಮಾದರಿಯಾಗಿವೆ. ಓಸ್ಯಾಟ್‌ನ ಮೊದಲ ಯೋಜನೆ ಪೂರ್ಣಗೊಂಡಿದ್ದು ಕಾರ್ಕಳ ತಾಲ್ಲೂಕಿನ ಬಜಗೋಳಿಯಲ್ಲಿ (2005) ಅಲ್ಲಿ ಮೂರು ತರಗತಿ ಕೋಣೆಗಳನ್ನು ನಿರ್ಮಿಸಿ, ಪೀಠೋಪಕರಣ, ಪಾಠೋಪಕರಣ ಒದಗಿಸಲಾಯಿತು. ಹಳೆಯ ಶಿಥಿಲ ಕಟ್ಟಡವನ್ನು ಕೆಡವಿ ಬನ್ನೇರಘಟ್ಟ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ (2007) ನಿರ್ಮಿಸಲಾಯಿತು. ಆಂಧ್ರದ ಕರ್ನೂಲ್ ಜಿಲ್ಲೆಯ ಪೆದ್ದತುಂಬಲಮ್ ಗ್ರಾಮದ ಜಿಲ್ಲಾ ಪಂಚಾಯತ್ ಹೈಸ್ಕೂಲ್ 2020 ರಲ್ಲಿ ಮರು ನಿರ್ಮಾಣಗೊಂಡಿದ್ದರೆ

ದಾವಣಗೆರೆ ಜಿಲ್ಲೆ ಸುರಹೊನ್ನೆ ಗ್ರಾಮದ ಹಿರಿಯ ಪ್ರಾಥಮಿಕ ಶಾಲೆಯ ಜೀರ್ಣೋದ್ಧಾರ ಈ ವರ್ಷ ಪೂರ್ಣಗೊಂಡಿದೆ.

ಕೊರೋನಾ ಮಹಾಮಾರಿಯ ಅವಧಿಯಲ್ಲಿ ಗ್ರಾಮಾಂತರ ವಿದ್ಯಾರ್ಥಿಗಳು ವಿದ್ಯಾಭ್ಯಾಸದಿಂದ ವಂಚಿತವಾಗುತ್ತಿರುವುದನ್ನು ಗಮನಿಸಿ ನಗರ ಮತ್ತು ಗ್ರಾಮಾಂತರ ಪ್ರದೇಶಗಳ ನಡುವಿನ ಡಿಜಿಟಲ್ ಅಂತರವನ್ನು ಕಡಿಮೆ ಮಾಡಲು odisi-osaat digital school infrastructure ಎಂಬ ವಿನೂತನ ಯೋಜನೆಯನ್ನು ಓಸ್ವಾಲ್ ಕೈಗೊಂಡಿದೆ.

ಮೂರ್‍ನಾಲ್ಕು ವಿದ್ಯಾರ್ಥಿಗಳ ತಂಡಕ್ಕೆ ಒಂದು ಟ್ಯಾಬ್ ನೀಡಿ, ಅದರಲ್ಲಿ ಪಾಠ ನೋಡುವಂತೆ, ಕೇಳುವಂತೆ ಮಾಡಲಾಗಿದೆ. ಪ್ರತಿ ಪಾಠದ ನಂತರ ಅದಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಕಿರುಪರೀಕ್ಷೆಗಳನ್ನು ಎದುರಿಸಲು ಇದು ಸಹಾಯಕವಾಗಿದೆ. ಮಕ್ಕಳ ರಿವಿಜನ್‌ಗೂ ಅನುಕೂಲವಾಗಿದ್ದು, ಕಲಿಕೆ ಪರಿಣಾಮಕಾರಿಯಾಗಿದೆ. ಬೇರೆ ಆ್ಯಪ್‌ಗಳು ಡೌನ್‌ಲೋಡ್ ಆಗದಂತೆ ಲಾಕ್ ವ್ಯವಸ್ಥೆ ಇದ್ದು, ಪಾಠಕ್ಕೆ ಸಂಬಂಧಿಸಿದ ಸಾಮಗ್ರಿಗಳು ಸುಲಭವಾಗಿ ಲಭ್ಯ ಆಗುತ್ತದೆ. ಮಕ್ಕಳು ಕಲಿಕೆಯ ಯಾವ ಹಂತದಲ್ಲಿದ್ದಾರೆ ಎಂದು ಪರೀಕ್ಷಿಸುವ ಆಯ್ಕೆಯನ್ನೂ ಈ ಟ್ಯಾಬ್ ಮೂಲಕ ಶಿಕ್ಷಕರಿಗೆ ನೀಡಲಾಗಿದೆ. ಕೆಲ ಶಾಲೆಗಳಲ್ಲಿ ಪ್ರಾಯೋಗಿಕವಾಗಿ ಇದು ಜಾರಿಗೆ ಬಂದಿದ್ದು ಹೆಚ್ಚೆಚ್ಚು ವಿದ್ಯಾಮಂದಿರಗಳಿಗೆ ವಿಸ್ತರಿಸುವ ಯೋಜನೆ ಇದೆ.

ಶಿಕ್ಷಣದಲ್ಲಿ ಮೂಲಸೌಕರ್ಯಗಳ ಕೊರತೆ ನಿವಾರಿಸಿದರೆ, ದೊಡ್ಡ ಬದಲಾವಣೆ ಸಾಧಿಸಿದಂತೆಯೇ. ಅದಕ್ಕಾಗಿ ನಮ್ಮ ತಂಡ ಕಾರ್ಯನಿರ್ವಹಿಸುತ್ತಿದೆ. ನಾವು ಕಲಿತ ಸರ್ಕಾರಿ ಶಾಲೆಯ ನೆನಪುಗಳು ಈ ಕಾರ್ಯಕ್ಕೆ ಪ್ರೇರೇಪಿಸಿವೆ ಎಂದು ತಂಡದ ಸದಸ್ಯರು ಹೇಳುವಾಗ, ಸಂತೃಪ್ತಿಯ ಭಾವ ಪ್ರಕಟವಾಗುತ್ತಿತ್ತು. ನಿಮ್ಮ ಹಳ್ಳಿಯ ಶಾಲೆಯೂ ಜೀರ್ಣೋದ್ಧಾರ ಆಗಬೇಕಿದೆಯೇ ? ಅದನ್ನು ಸರಿಯಾಗಿ ನಿರ್ವಹಿಸಿಕೊಂಡು ಹೋಗುವ ಇಚ್ಛಾಶಕ್ತಿ ಇದೆಯೇ ? ಹಾಗಿದ್ದರೆ ನಿಮಗೆ ನೆರವಾಗಲು ಓಸ್ಯಾಟ್ ಸಿದ್ಧವಿದೆ.

ಸಮಸ್ಯೆಗಳ ಬಗ್ಗೆ ದೂರುತ್ತ ಕಾಲ ತಳ್ಳುವುದಕ್ಕಿಂತ ಪರಿಹಾರದ ನಿಟ್ಟಿನಲ್ಲಿ ಇಟ್ಟ ಒಂದು ಹೆಜ್ಜೆಯೂ ಮುಂದೆ ಪರಿವರ್ತನೆಯ ಹೆದ್ದಾರಿಯನ್ನೇ ನಿರ್ಮಿಸಬಹುದು ಎಂಬುದಕ್ಕೆ ಇಂಥ ಪ್ರಯತ್ನಗಳು ಕಾರ್ಯಗಳು ಸಾಕ್ಷಿ. ಒಂದೊಂದು ಶಾಲೆಗಳ ಅಭಿವೃದ್ಧಿಯೆಂದರೆ ಅದು ಸಂಸ್ಕೃತಿಯ ಉತ್ಕರ್ಷವೇ ಸರಿ.

**ಲೇಖಕರು:– ರವೀಂದ್ರ ಎಸ್. ದೇಶಮುಖ್**

ಆಧಾರ: ಕನ್ನಡಪ್ರಭ, ದಿನಾಂಕ:07.04.2021

## 2. ಕೋವಿಡ್ ನಿಗ್ರಹಕ್ಕೆ ರಾಷ್ಟ್ರೀಯ ನೀತಿ: 'ಸುಪ್ರೀಂ' ಸೂಕ್ತ ಸಲಹೆ

ದೇಶದಲ್ಲಿ ಕೈಮೀರಿ ಹೋಗುತ್ತಿರುವ ಕೊರೋನಾ ಪರಿಸ್ಥಿತಿ ಹಾಗೂ ಅದನ್ನು ಎದುರಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬೇರೆ ಬೇರೆ ರೀತಿಯ ನಿರ್ಧಾರಗಳನ್ನು ಕೈಗೊಂಡು ಎಡವುತ್ತಿರುವ ಹಿನ್ನೆಲೆಯಲ್ಲಿ ಸುಪ್ರೀಂಕೋರ್ಟ್ ಮಹತ್ವದ ಸಲಹೆಯೊಂದನ್ನು ನೀಡಿದೆ. ಈಗ ದೇಶದಲ್ಲಿ ವೈದ್ಯಕೀಯ ತುರ್ತು ಪರಿಸ್ಥಿತಿಯಿದೆ ಎಂದು ಅಭಿಪ್ರಾಯಪಟ್ಟಿರುವ ಸುಪ್ರೀಂಕೋರ್ಟ್, ಕೊರೋನಾ ಎದುರಿಸಲು ರಾಷ್ಟ್ರೀಯ ಯೋಜನೆಯೊಂದನ್ನು ರೂಪಿಸಬೇಕು ಎಂದು ಕೇಂದ್ರ ಸರ್ಕಾರಕ್ಕೆ ಸೂಚಿಸಿದೆ. ಇದು ಮಹತ್ವದ ಸೂಚನೆ. ಕಳೆದ ವರ್ಷ ಕೊರೋನಾ ಆರಂಭವಾದಾಗ ಎಲ್ಲವನ್ನೂ ಕೇಂದ್ರವೇ ನಿರ್ಧರಿಸುತ್ತಿತ್ತು. ಕೇಂದ್ರದ ಮಾರ್ಗಸೂಚಿಗಳನ್ನು ರಾಜ್ಯಗಳು ಪಾಲನೆ ಮಾಡುತ್ತಿದ್ದವು. ಆ ವ್ಯವಸ್ಥೆ ಕೆಲ ಕಾಲ ಸರಿಯಾಗಿಯೇ ಕೆಲಸ ಮಾಡಿತು. ಆದರೆ, ಕ್ರಮೇಣ ಪರಿಸ್ಥಿತಿ ಬದಲಾಯಿತು. ಕೇಂದ್ರ ಸರ್ಕಾರ ಹಲವು ಹೊಣೆಗಾರಿಕೆಗಳನ್ನು ರಾಜ್ಯಗಳಿಗೆ ವರ್ಗಾಯಿಸಿತು. ಕೊರೋನಾ ಎದುರಿಸಲು ಬೇಕಿರುವ ಎಲ್ಲಾ ಆರ್ಥಿಕ ಸಂಪನ್ಮೂಲಗಳನ್ನು ಕೇಂದ್ರವೊಂದೇ ಒದಗಿಸಲು ಸಾಧ್ಯವಿರಲಿಲ್ಲ. ಜೊತೆಗೆ, ರಾಜ್ಯಗಳಲ್ಲಿ ಸ್ಥಳೀಯ ಮಟ್ಟದ ಪರಿಸ್ಥಿತಿ ನೋಡಿಕೊಂಡು ಅಸ್ತವ್ಯಸ್ತವಾಗಿದೆ. ಕೋವಿಡ್ ಎದುರಿಸಲು ಒಂದೊಂದು ರಾಜ್ಯಗಳು ಒಂದೊಂದು ರೀತಿಯ ಕ್ರಮ ಕೈಗೊಳ್ಳುತ್ತಿದೆ. ರಾಜ್ಯ–ರಾಜ್ಯಗಳ ನಡುವೆ ಸಂವಹನ ಅಥವಾ

ಹೊಂದಾಣಿಕೆ ಇಲ್ಲ. ಕೇಂದ್ರದ ಜೊತೆಗೂ ಎಲ್ಲಾ ರಾಜ್ಯಗಳು ನಿರಂತರ ಸಂಪರ್ಕ ಹೊಂದಿಲ್ಲ. ಈ ವಿಚಾರದಲ್ಲಿ ರಾಜಕಾರಣ ಕೂಡ ನಡೆಯುತ್ತಿದೆ. ಹೀಗಾಗಿ ದೇಶದಲ್ಲಿ ಕೊರೋನಾದ ಎರಡನೇ ಅಲೆ ದೊಡ್ಡ ಪ್ರಮಾಣದಲ್ಲೇ ಹಾನಿ ಉಂಟುಮಾಡುವುದು ಮೊದಲೇ ನಿಶ್ಚಿತವಿದ್ದರೂ, ಆ ಬಗ್ಗೆ ತಜ್ಞರು ಸಾಕಷ್ಟು ಎಚ್ಚರಿಕೆ ನೀಡಿದ್ದರೂ ಕೇಂದ್ರವಾಗಲೀ ರಾಜ್ಯಗಳಾಗಲೀ ಯಾವುದೇ ವ್ಯವಸ್ಥೆ ಮಾಡಿಕೊಳ್ಳಲಿಲ್ಲ. ಅದರ ಪರಿಣಾಮವಾಗಿ ಈಗ ಜಗತ್ತಿನಲ್ಲೇ ಏಕದಿನದ ಸೋಂಕಿನಲ್ಲಿ ಭಾರತ ನಂ.1 ಸ್ಥಾನಕ್ಕೆ ಏರಿ ಕುಳಿತಿದೆ.

ಇನ್ನೊಂದೆಡೆ, ವಿವಿಧ ರಾಜ್ಯಗಳು ಕೊರೋನಾ ನಿಗ್ರಹಕ್ಕೆ ಜಾರಿಗೊಳಿಸಿದ ನಿರ್ಬಂಧಗಳನ್ನು ಪ್ರಶ್ನಿಸಿ ಅಥವಾ ಹೊಸ ನಿರ್ಬಂಧಗಳನ್ನು ಹೇರಬೇಕು ಎಂದು ಮನವಿ ಮಾಡಿ ಅಲ್ಲಿನ ಹೈಕೋರ್ಟುಗಳಿಗೆ ಅರ್ಜಿಗಳು ಸಲ್ಲಿಕೆಯಾಗುತ್ತಿವೆ. ಆ ಅರ್ಜಿಯ ವಿಷಯಗಳು ಕೇಂದ್ರ ಪಟ್ಟಿಯಲ್ಲಿರುವ ವಿಚಾರಗಳಿಗೂ ಸಂಬಂಧಪಡುವುದರಿಂದ ಹೈಕೋರ್ಟುಗಳು ಏಕಕಾಲಕ್ಕೆ ವಿಭಿನ್ನ ಆದೇಶಗಳನ್ನು ರಾಜ್ಯಗಳಿಗೂ ಕೇಂದ್ರ ಸರ್ಕಾರಕ್ಕೂ ನೀಡುತ್ತಿವೆ. ಮತ್ತೊಂದೆಡೆ ಸುಪ್ರೀಂಕೋರ್ಟ್ ಕೂಡ ಕೊರೋನಾ ಪರಿಸ್ಥಿತಿ ಮೀರುತ್ತಿರುವುದು, ಆಮ್ಲಜನಕ ಕೊರತೆ, ಔಷಧಗಳಿಗೆ ಕೊರತೆ, ಸೋಂಕಿತರಿಗೆ ಆಸ್ಪತ್ರೆಯ ಬೆಡ್ ಸಿಗದಿರುವುದು ಹೀಗೆ ನಾನಾ ಸಮಸ್ಯೆಗಳನ್ನು ಮನಗಂಡು ಸ್ವಯಂಪ್ರೇರಿತ ವಿಚಾರಣೆ ನಡೆಸುತ್ತಿದೆ. ಹೀಗಾಗಿ ಹೊಂದಾಣಿಕೆಯಿಲ್ಲದೆ ಈ ಸಾಂಕ್ರಾಮಿಕವನ್ನು ಎದುರಿಸಲು ಸಾಧ್ಯವಿಲ್ಲ ಎಂಬುದು ಮತ್ತೊಮ್ಮೆ ಎಲ್ಲರಿಗೂ ಮನದಟ್ಟಾಗಿದೆ.

ನಮ್ಮ ದೇಶದಲ್ಲೇ ವಿವಿಧ ರಾಜ್ಯಗಳಲ್ಲಿ ಕೊರೋನಾ ಬೇರೆ ಬೇರೆ ರೀತಿಯಲ್ಲಿ ಹರಡುತ್ತಿದೆ. ದೆಹಲಿಯಲ್ಲಿ ನಾಲ್ಕನೇ ಅಲೆ ಬಂದಿದೆ. ಕೇರಳದಲ್ಲಿ ಮೂರ್‍ನಾಲ್ಕು ಬಾರಿ ಸೋಂಕಿನ ಪ್ರಮಾಣ ಏರಿಳಿತವಾಗಿದೆ. ಇತರ ರಾಜ್ಯಗಳಲ್ಲಿ ಎರಡನೇ ಅಲೆಯಿದೆ. ಇನ್ನು, ಅಮೇರಿಕಾದಲ್ಲಿ ನಾಲ್ಕನೇ ಅಲೆ ಬರುತ್ತಿದೆ. ದಕ್ಷಿಣ ಕೊರಿಯಾದಲ್ಲಿ ನಾಲ್ಕನೇ ಅಲೆ ಬಂದಿದೆ. ಇದರರ್ಥ ಇಷ್ಟೇ: ಕೊರೋನಾ ಬೇಗ ಹೋಗುವುದಕ್ಕೆ ಬಂದಿಲ್ಲ. ಇದು ಇನ್ನೂ ಕೆಲ ವರ್ಷಗಳ ಕಾಲ ಇರಲಿದೆ. ಹೀಗಾಗಿ ಇದರ ವಿರುದ್ಧ ದೀರ್ಘಕಾಲೀನ ಹೋರಾಟದಲ್ಲೇ ನಡೆಸಬೇಕು. ಭಾರತದಂತಹ ದೇಶದಲ್ಲಿ ರಾಜ್ಯಗಳು ತಮ್ಮ ಮೂಗಿನ ನೇರಕ್ಕೆ ನಿರ್ಧಾರಗಳನ್ನು ಕೈಗೊಳ್ಳುತ್ತಾ, ನೆರೆ ರಾಜ್ಯಗಳ ಪರಿಸ್ಥಿತಿ ತಮಗೆ ಸಂಬಂಧವಿಲ್ಲ ಎಂಬಂತಿದ್ದರೆ ಈ ಹೋರಾಟ ಕಷ್ಟ. ಅದೇ ವೇಳೆ, ಸೋಂಕು ನಿಗ್ರಹಕ್ಕೆ ಬೇಕಾದ ಮೂಲಸೌಕರ್ಯಗಳ ವಿಷಯದಲ್ಲೂ ಯೋಜಿತ ಪ್ರಯತ್ನ ಬೇಕಿದೆ. ಹೀಗಾಗಿ ಸುಪ್ರೀಂಕೋರ್ಟ್‌ನ ಸಲಹೆಯಂತೆ ರಾಷ್ಟ್ರೀಯ ನೀತಿ ರೂಪಿಸುವ ಅಗತ್ಯವಿದೆ. ಕೇಂದ್ರ ಸರ್ಕಾರವು ಎಲ್ಲಾ ರಾಜ್ಯಗಳ ಜೊತೆ ಸೇರಿ ಈ ನಿಟ್ಟಿನಲ್ಲಿ ಕೂಡಲೇ ಕಾರ್ಯಪ್ರವೃತ್ತವಾಗಬೇಕು. ರಾಜ್ಯಗಳು ಕೂಡ ಸೂಕ್ತ ಸಹಕಾರ ನೀಡಬೇಕು.

ಆಧಾರ:ಕನ್ನಡಪ್ರಭ, ದಿನಾಂಕ:24.04.2021

## 3. ಮಾಸ್ ಲೀಡರ್ ಸಿಎಂ ಬದಲಾವಣೆ ಸುಲಭವಲ್ಲ.

ಯಡಿಯೂರಪ್ಪನವರ ವಯಸ್ಸು 80ರ ಅಂಚಿಗೆ ಬರುತ್ತಿದೆ. ಆದ್ದರಿಂದ  ಸಹಜವಾಗಿಯೇ ಇನ್ನು ಬಹಳ ಕಾಲ ಅವರ ನಾಯಕತ್ವ ಮುಂದುವರೆಸಲು ಆಗುವುದಿಲ್ಲ. ಅದಕ್ಕಾಗಿ ಕರ್ನಾಟಕ ಬಿಜೆಪಿಗೆ ಹೊಸ ನಾಯಕತ್ವ ಬೇಕು ಎಂಬ ಚಿಂತನೆ ಬಿಜೆಪಿ ಹೈಕಮಾಂಡ್ ಮತ್ತು ಆರ್.ಎಸ್.ಎಸ್‌ನಲ್ಲಿ ಇದೆ ಎಂಬುದು ಸತ್ಯ. ಆದರೆ ನಾಯಕತ್ವ ಬದಲಾವಣೆ ಮಾಡುವುದಾದರೆ ಹೇಗೆ, ಯಾರೂ ಅವರ ಜಾಗಕ್ಕೆ ಬರುವವರು. ಇದಕ್ಕೆ ಯಡಿಯೂರಪ್ಪ ಪ್ರತಿಕ್ರಿಯೆ ಏನು ಇವೆಲ್ಲ ಮುಂದೆ ನಿರ್ಧಾರ ಆಗಬೇಕಾದ ವಿಷಯಗಳು. ಸದ್ಯಕ್ಕೆ ಬಸನಗೌಡ ಪಾಟೀಲ್ ಯತ್ನಾಳ್, ಅರವಿಂದ ಬೆಲ್ಲದ ಮತ್ತು ಸಿ.ಪಿ. ಯೋಗೇಶ್ವರ್ ಪದೇ ಪದೇ ದಿಲ್ಲಿಗೆ ಹೋಗಿ ಬರುತ್ತಿದ್ದಾರೆ. ದಿಲ್ಲಿಯಿಂದ ವೀಕ್ಷಕರನ್ನು ಕರೆಸಿ ಶಾಸಕಾಂಗ ಪಕ್ಷ ಸಭೆ ಕರೆಸಲು ಶಾಸಕರ ಸಹಿ ಸಂಗ್ರಹಕ್ಕೆ ಕೂಡ ಪ್ರಯತ್ನ ನಡೆಸಿದ್ದಾರೆ. ಆದರೆ ಹೈಕಮಾಂಡ್ ಮೂಲಗಳು ಹೇಳುವ ಪ್ರಕಾರ, ಪ್ರಧಾನಿ ನರೇಂದ್ರ ಮೋದಿ ಅನುಮತಿ ದೊರೆತು ಒಂದು ವೇಳೆ ನಿರ್ಧಾರ ತೆಗೆದುಕೊಳ್ಳುವುದೇ ಆದಲ್ಲಿ, ಅಮಿತ್ ಶಾ ಜೆ.ಪಿ.ನಡ್ಡಾ ಮತ್ತು ಸಂಘದ ಸಹ ಸರಕಾರ್ಯವಾಹ ಮುಕುಂದ ಅವರು ನೇರವಾಗಿ ಯಡಿಯೂರಪ್ಪ ಜೊತೆ ಮಾತನಾಡುತ್ತಾರೆ. ಆ ಮಾತುಕತೆಯಲ್ಲಿ ನಾಯಕತ್ವ ಬದಲಾವಣೆ ವಿಚಾರ ಪ್ರಸ್ತಾಪಿಸುತ್ತಾರೆಯೇ ಹೊರತು, ಯಾವುದೇ ಹಾದಿ ಬೀದಿ ರಂಪಕ್ಕೆ ಅವಕಾಶ ಕೊಡುವ ಪ್ರಶ್ನೆಯೇ ಇಲ್ಲ

ಎಂದು ಹೇಳಲಾಗುತ್ತಿದೆ. ವಯಸ್ಸಿನ ಕಾರಣದಿಂದ ಹೊಸ ತಲೆಮಾರಿಗೆ ಅಧಿಕಾರ ವರ್ಗಾವಣೆ ಆಗಿ ಮುಂದಿನ ಚುನಾವಣೆ ಎದುರಿಸಬೇಕು. ಯಡಿಯೂರಪ್ಪ ಅವರನ್ನು ಗೌರವ ಪೂರ್ವಕವಾಗಿ ನಡೆಸಿಕೊಳ್ಳಬೇಕು ಎಂಬ ಚಿಂತನೆ ದಿಲ್ಲಿ ಅಂಗಳದಲ್ಲಿಯೇ ಹೊರತು ಬಣಗಳ ತಿಕ್ಕಾಟಕ್ಕೆ ಶಕ್ತಿ ಪ್ರದರ್ಶನಕ್ಕೆ ಅವಕಾಶ ಇಲ್ಲ ಎಂದು ಹೈಕಮಾಂಡ್ ಮೂಲಗಳು ಹೇಳುತ್ತಿವೆ, ಆದರೆ ನಾಯಕತ್ವ ಬದಲಾವಣೆ ಹೇಗೆ ಮತ್ತು ಯಾವಾಗ ಎಂಬ ಪ್ರಶ್ನೆಗೆ ಸಂಘದ ನಾಯಕರು ಮತ್ತು ದಿಲ್ಲಿ ಮೂಲಗಳ ಬಳಿ ಇನ್ನೂ ಖಚಿತ ಉತ್ತರವಿಲ್ಲ. ಕಳೆದ 7 ವರ್ಷಗಳಲ್ಲಿ ಮೋದಿ ಕಾಲದಲ್ಲಿ ಬಿಜೆಪಿ 3 ಮುಖ್ಯಮಂತ್ರಿಗಳನ್ನು ಬದಲಾಯಿಸಿದೆ. ಮೊದಲನೆಯವರು ಗುಜರಾತಿನ ಆನಂದಿ ಬೆನ್ ಪಟೇಲ್, ಉತ್ತರಾಖಂಡದ ತ್ರಿವೇಂದ್ರ ಸಿಂಗ್ ರಾವತ್ ಮತ್ತು ಆಸ್ಸಾಂನ ಸರಬಾನಂದ ಸೋನಾವಾಲ್. ಈ ಮೂರು ಬದಲಾವಣೆಗಳು ಒಂದು ಚಿಟಿಕೆಯಲ್ಲಿ ಮುಗಿದುಹೋಗಿವೆ. ಆದರೆ ಈ ಮೂವರು ಆದಕ್ಕೂ ಮೊದಲು ಮುಖ್ಯಮಂತ್ರಿಯಾಗಿ ನೇಮಕಗೊಂಡಿದ್ದೇ ಹೈಕಮಾಂಡ್‌ನಿಂದ ಅಂದರೆ ಇವರು ಹೈಕಮಾಂಡ್‌ನಿಂದ ಆಯ್ಕೆಯಾಗಿದ್ದರೇ ಹೊರತು ಯಡಿಯೂರಪ್ಪನವರ ತರಹ ಮಾಸ್ ಲೀಡರ್ ಆಗಿರಲಿಲ್ಲ ಎಂಬುದು ಪ್ರಮುಖ ವ್ಯತ್ಯಾಸ. ಹೀಗಾಗಿ ಕರ್ನಾಟಕ ಕ್ಲೈಮ್ಯಾಕ್ಸ್‌ನಲ್ಲಿ ಕುತೂಹಲ ಹೆಚ್ಚು.

**ಮಾಸ್ ಲೀಡರನ್ನು ತೆಗೆದಿದ್ದಾಗ:** ಇಲ್ಲಿಯವರೆಗೆ ಬಿಜೆಪಿಯ ಇತಿಹಾಸದಲ್ಲಿ ಯಡಿಯೂರಪ್ಪನವರೂ ಸೇರಿದಂತೆ ಐವರು ಜನನಾಯಕರನ್ನು ಬಿಜೆಪಿ ಹೈಕಮಾಂಡ್ ಬದಲಾಯಿಸಿದೆ. ಅದರಲ್ಲಿ ಉತ್ತರ ಪ್ರದೇಶದಲ್ಲಿ ಕಲ್ಯಾಣ ಸಿಂಗ್, ಮಧ್ಯ ಪ್ರದೇಶದಲ್ಲಿ ಉಮಾಭಾರತಿ, ದಿಲ್ಲಿಯಲ್ಲಿ ಮದನ್‌ಲಾಲ್ ಖುರಾನಾ, ಗುಜರಾತ್‌ನಲ್ಲಿ ಕೇಶುಭಾಯಿ ಬದಲಿಗೆ ನರೇಂದ್ರ ಮೋದಿ ಮತ್ತು ಉಮಾಭಾರತಿ ಬದಲಿಗೆ ಶಿವರಾಜ್ ಸಿಂಗ್ ಚೌಹಾಣ್‌ರಿಗೆ ಮಾತ್ರ ಜನನಾಯಕರನ್ನು ಬದಲಿಸಿ ಕೂಡ ಅಧಿಕಾರ ಉಳಿಸಿಕೊಳ್ಳಲು ಸಾಧ್ಯ ಆಯಿತು. ಆದರೆ ದಿಲ್ಲಿಯಲ್ಲಿ 1998ರಲ್ಲಿ ಹೋದ ಅಧಿಕಾರ 23 ವರ್ಷ ಆದರು ಇನ್ನು ಬಂದಿಲ್ಲ. ಯುಪಿಯಲ್ಲಿ ಕಲ್ಯಾಣ ಸಿಂಗ್‌ರನ್ನು ತಂದರೂ ಉಪಯೋಗ ಆಗಲಿಲ್ಲ. ಇನ್ನು ಕರ್ನಾಟಕದಲ್ಲಿ ಯಡಿಯೂರಪ್ಪ ಹೊರಗೆ ಹೋದಾಗ ಹೋದ ಅಧಿಕಾರ ಮತ್ತೆ ಅವರ ಜೊತೆಯೇ ವಾಪಸ್ ಬಂತು. ಅರ್ಥ ಸ್ಪಷ್ಟ ಜನನಾಯಕರನ್ನು ನಾನಾ ಕಾರಣ ನೀಡಿ ಕೆಳಗಿಳಿಸುವುದೇನೋ ಸರಿ, ಆದರೆ ಸಮರ್ಥರನ್ನು ತರುವುದು ಅಷ್ಟೇ ಮುಖ್ಯ. ಯಾವುದೇ ರಾಷ್ಟ್ರೀಯ ಪಕ್ಷದಲ್ಲಿ ಎರಡು ತರಹದ ನಾಯಕರು ಇರುತ್ತಾರೆ. ಒಬ್ಬರು ಉದ್ಭವ ಮೂರ್ತಿ, ಇನ್ನೊಬ್ಬರು ಕೆತ್ತಿದ ಮೂರ್ತಿ ಸ್ವಯಂಭುಮೂರ್ತಿಯನ್ನು ನಾನಾ ಕಾರಣದಿಂದ ತೆಗೆಯಬೇಕಾದರೆ ಕನಿಷ್ಠ ಪಕ್ಷ ಒಂದು ಒಳ್ಳೆಯ ಕೆತ್ತಿದ ಮೂರ್ತಿ ಆದರೂ ಇಡಬೇಕು. ಇಲ್ಲವಾದಲ್ಲಿ ದೇವಸ್ಥಾನ ಪಾಳು ಬೀಳಬಹುದು.

**ಅರಸು ಕಾಲದಲ್ಲಿ ಏನಾಗಿತ್ತು:** ಕರ್ನಾಟಕದ ರಾಜಕಾರಣದಲ್ಲಿ ಪ್ರಬಲ ಹೈಕಮಾಂಡ್ ವಿರುದ್ಧ ಗುಟುರು ಹಾಕಿದ್ದು ಮೊದಲಿಗೆ ನಿಜಲಿಂಗಪ್ಪನವರು ಹೌದಾದರೂ, ಇಂದಿರಾ ಗಾಂಧಿ ಜೊತೆಗಿನ ಗುದ್ದಾಟದಲ್ಲಿ ಅಧಿಕಾರ ಕಳೆದುಕೊಂಡಿದ್ದು, ಸ್ವಂತ ಶಕ್ತಿ ಮೇಲೆ ಎರಡು ಚುನಾವಣೆ ಗೆದ್ದಿದ್ದು ದೇವರಾಜ್ ಅರಸ್ ಮಾತ್ರ. 1977ರಲ್ಲಿ ರಾಯ್ ಬರೇಲಿಯಲ್ಲಿ ಸೋತಿದ್ದ ಇಂದಿರಾ ಗಾಂಧಿಗೆ 1978ರಲ್ಲಿ ಚಿಕ್ಕಮಗಳೂರಿನಲ್ಲಿ ಗೆಲ್ಲಿಸಿ ಪುನರ್ಜನ್ಮ ಕೊಟ್ಟಿದ್ದೂ ಅರಸು ಅವರೇ. ಆದರೆ ಯಾವಾಗ ಸಂಜಯ್ ಗಾಂಧಿ ಸಕ್ರಿಯರಾಗತೊಡಗಿದರೋ ಆಗ ಅರಸು ಮತ್ತು ಇಂದಿರಾ ಸಂಬಂಧ ಹಾಳಾಗತೊಡಗಿತ್ತು. 2ನೇ ಬಾರಿಗೆ ಮುಖ್ಯಮಂತ್ರಿಯಾದ ನಂತರ ದೇವರಾಜ್ ಅರಸರಿಗೆ ನಾನೇ ರಾಷ್ಟ್ರೀಯ ನಾಯಕ ಆಗಬಹುದು ಎಂಬ ಯೋಚನೆ ಬರುವುದಕ್ಕೂ, ಸಂಜಯ್ ಗಾಂಧಿ ಹೇಳಿದ ಕೆಲಸಗಳನ್ನು ಮಾಡಲು ನಿರಾಕರಿಸಿದ್ದಕ್ಕೂ ತಾಳೆಯಾಗಿತ್ತು. ನೋಡುನೋಡುತ್ತಲೇ ಸಂಜಯ್ ಗಾಂಧಿಗೆ ಆಪ್ತರಾದ ಗುಂಡೂರಾಯರು, ಎಫ್.ಎಂ. ಖಾನ್ ಬಂಡೆದ್ದರು. ಪಕ್ಷ ಇಬ್ಭಾಗವಾಗಿ 1980ರ ಲೋಕಸಭಾ ಚುನಾವಣೆಯ ಹೀನಾಯ ಸೋಲಿನ ನಂತರ ರಾತ್ರೋರಾತ್ರಿ ಹೆಚ್.ಸಿ.ಶ್ರೀಕಂಠಯ್ಯ ನೇತೃತ್ವದಲ್ಲಿ 90 ಶಾಸಕರು ಗುಂಡೂರಾಯರ ಕಡೆ ಹೋಗುವುರೊಂದಿಗೆ ರಾಜ್ಯ ಕಂಡ ಅತ್ಯಂತ ಸಣ್ಣ ಸಮುದಾಯದಿಂದ ಬಂದ ಜನನಾಯಕನ ರಾಜಕೀಯ ದುರಂತ ಅಂತ್ಯವಾಗಿತ್ತು. ಜೊತೆಗೆ 3 ವರ್ಷದ ನಂತರ 1983ರಲ್ಲಿ ನಡೆದ ಚುನಾವಣೆಯಲ್ಲಿ ಮೊದಲ ಬಾರಿಗೆ ಕಾಂಗ್ರೆಸ್ ಅಧಿಕಾರ ಕಳೆದುಕೊಂಡಿತ್ತು.

**ಪಾಟೀಲರನ್ನು ತೆಗೆದಾಗ ಏನಾಗಿತ್ತು:** 1989ರಲ್ಲಿ 170ಕ್ಕೂ ಹೆಚ್ಚು ಶಾಸಕರು ಗೆಲ್ಲುವುದರೊಂದಿಗೆ ಮುಖ್ಯಮಂತ್ರಿಯಾದ ವೀರೇಂದ್ರ ಪಾಟೀಲರು ಸಾರಾಯಿ ಮಾಫಿಯಾ ಮತ್ತು ರಿಯಲ್ ಎಸ್ಟೇಟ್ ಮಾಫಿಯಾ ವಿರುದ್ಧ ಹೋರಾಟ ಆರಂಭಿಸಿದರು. ಆಗ ಅಧಿಕಾರ ಕಳೆದುಕೊಂಡಿದ್ದ ರಾಜೀವ್ ಗಾಂಧಿ, ಪಾಟೀಲರನ್ನು ಚೆನ್ನೈಗೆ ಕರೆಸಿಕೊಂಡು ಪಕ್ಷ ನಡೆಸಲು ದುಡ್ಡು ಕೊಡಿ ಎಂದಿದ್ದರಂತೆ, ಅದಕ್ಕೆ ಪಾಟೋಲರು, ನೀವು ಕೇಳಿದ್ದು, ಕೊಡಲು ಆಗೋದಿಲ್ಲ ಎಂದು ಬೆಂಗಳೂರಿಗೆ ಬಂದ ಮರುದಿನವೇ ಪಾರ್ಶ್ವವಾಯು ಪೀಡಿತರಾದರು. ಅವರನ್ನು ನೋಡಲೇಂದು ಬೆಂಗಳೂರಿಗೆ ಬಂದ ರಾಜೀವ್ ಗಾಂಧಿ ಹೆಚ್‌ಎಎಲ್ ವಿಮಾನ ನಿಲ್ದಾಣದಲ್ಲಿ ಕರ್ನಾಟಕಕ್ಕೆ ಹೊಸ ಮುಖ್ಯಮಂತ್ರಿ ಬರುತ್ತಾರೆ ಎಂದು ಘೋಷಿಸಿ ಹೋದರು. ಆಗ ವೀರೇಂದ್ರ ಪಾಟೀಲ್, ನಾನು ರಾಜೀನಾಮೆ ಕೋಡೋದಿಲ್ಲ ಎಂದು ಹೇಳಿದರೂ 45 ಲಿಂಗಾಯಿತರು ಸೇರಿದಂತೆ ಅಷ್ಟೂ ಶಾಸಕರು ಹೈಕಮಾಂಡ್ ಆಶೀರ್ವಾದ ಇದ್ದ ಬಂಗಾರಪ್ಪ ಕಡೆ ಹೋಗಿ ಆಗಿತ್ತು. ಪಾಟೀಲರ ಬಳಿ ಉಳಿದಿದ್ದು ರಾಜಶೇಖರ ಮೂರ್ತಿ ಮತ್ತು ಕೆ ಹೆಚ್. ರಂಗನಾಥ್ ಮಾತ್ರ.

**ಏಕಾಂಗಿ ಆಗಿದ್ದ ಬಂಗಾರಪ್ಪ:** ರಾಜೀವ್ ಗಾಂಧಿ ಆಶೀರ್ವಾದದೊಂದಿಗೆ ಮುಖ್ಯಮಂತ್ರಿ ಆದ ಬಂಗಾರಪ್ಪ ಅವರಿಗೆ ರಾಜ್ಯದ ತುಂಬೆಲ್ಲಾ ಶಿಷ್ಯರಿದ್ದರು. ಪಿ.ವಿ. ನರಸಿಂಹರಾವ್ ಪ್ರಧಾನಿ ಆಗಿದ್ದರೂ ಬಂಗಾರಪ್ಪ ಯಾರಿಗೂ ಸೊಪ್ಪು ಹಾಕುತ್ತಿರಲಿಲ್ಲ. ಆಗ ಕ್ಲಾಸಿಕ್ ಕಂಪ್ಯೂಟರ್ ಹಗರಣದಲ್ಲಿ ಬಂಗಾರಪ್ಪ ಹೆಸರು ಕೇಳಿಬಂದಾಗ ಜನಾರ್ಧನ ಪೂಜಾರಿ ಮೂಲಕ ಪಿ.ವಿ. ನರಸಿಂಹರಾವ್ ಮುಖ್ಯಮಂತ್ರಿಗಳನ್ನು ದಿಲ್ಲಿಗೆ ಕರೆಸಿಕೊಂಡರು. ಮಾತುಕತೆ ಆಗಿ ಬಂಗಾರಪ್ಪ ದಿಲ್ಲಿ ವಿಮಾನ ನಿಲ್ದಾಣದಲ್ಲಿ ಕಾರು ಇಳಿಯಬೇಕು ಎಂದಾಗ ಜನಾರ್ದನ ಪೂಜಾರಿ ಒಂದು ಮಡಚಿದ ಕಾಗದ ಕೈಗಿಟ್ಟು ಹೋದರು. ಏನೆಂದು ತೆಗೆದು ನೋಡಿದರೆ ರಾಜೀನಾಮೆ ಕೊಡಿ ಎಂಬ ಸೂಚನೆ. ವ್ಯಗ್ರರಾದ ಬಂಗಾರಪ್ಪ ಕೂಗಾಡಿ, ಚೀರಾಡಿ ಬೆಂಗಳೂರಿನ ಅಶೋಕ ಹೊಟೇಲ್‌ಲ್ಲಿ ಶಾಸಕರೆಲ್ಲರೂ ಒಟ್ಟುಗೂಡುವಂತೆ ಹೇಳಿ ವಿಮಾನ ಹತ್ತಿದರು. ಬೆಂಗಳೂರಿಗೆ ಬಂದು ನೋಡುತ್ತಾರೆ ಒಬ್ಬರೂ ಶಾಸಕರಿಲ್ಲ. ಒಂದು ಗಂಟೆ ಮುಂಚಿನವರೆಗೆ ಬಂಗಾರಪ್ಪ ಅವರೇ ನಮ್ಮ ನಾಯಕರು, ನಾಯಕತ್ವ ಬದಲಾವಣೆ ಇಲ್ಲ ಎನ್ನುತ್ತಿದ್ದ ಖರ್ಗೆ, ಧರ್ಮಸಿಂಗ್ ಅಂಥವರೇ ಹೈಕಮಾಂಡ್ ಆದೇಶ ಅಂತಿಮ ಎಂದು ಕೈ ಚೆಲ್ಲಿದರು. ಬಂಡಾಯದ ಉಮೇದಿಯಲ್ಲಿ ದಿಲ್ಲಿಯಲ್ಲಿ ವಿಮಾನ ಹತ್ತಿದ್ದ ಬಂಗಾರಪ್ಪ ರಾಜ್ಯಪಾಲರಿಗೆ ಹೋಗಿ ರಾಜೀನಾಮೆ ಸಲ್ಲಿಸಿ ಬರಬೇಕಾಯಿತು. ಆಗ ಹೈಕಮಾಂಡ್ ಲಕೋಟೆ ಕಳುಹಿಸಿ ಮುಖ್ಯಮಂತ್ರಿ ಮಾಡಿದ್ದೂ ವೀರಪ್ಪ ಮೊಯ್ಲಿ ಅವರನ್ನು, ಆದರೆ ನಂತರದ 1994ರಲ್ಲಿ ಕಾಂಗ್ರೆಸ್ ಬಂಗಾರಪ್ಪ ಕಟ್ಟಿದ್ದ ಕೆಸಿಪಿಯಿಂದ ಹೀನಾಯ ಸೋಲು ಅನುಭವಿಸಿದರು.

**ಜಿಂದಾಲ್ ವಿವಾದಕ್ಕೆ ಅಮಿತ್ ಶಾ ಹೇಳಿದ್ದೇನು:** ಜಿಂದಾಲ್‌ಗೆ ಭೂಮಿ ಪರಭಾರೆಗೆ ಸಂಬಂಧಪಟ್ಟಂತೆ ರಾಜ್ಯ ಸಚಿವ ಸಂಪುಟವೇ ತನ್ನ ಹಳೆಯ ನಿರ್ಣಯ ಬದಲಾಯಿಸಿದೆ. ಹೀಗಾಗಿ ಸದ್ಯಕ್ಕೆ ಆ ವಿಷಯ ಇಟ್ಟುಕೊಂಡು ಶಾಸಕಾಂಗ ಸಭೆ ಕರೆಯುವಂತೆ ಮಾಡುವ ಸ್ವಪಕ್ಷೀಯರ ಒತ್ತಡ ಮತ್ತು ನ್ಯಾಯಾಲಯದ ಪರಭಾರೆ ಪರಿಶೀಲನೆಯ ತೂಗುಕತ್ತಿಯಿಂದ ಯಡಿಯೂರಪ್ಪ ಸದ್ಯಕ್ಕೆ ಪಾರಾಗಿದ್ದಾರೆ. ಮೂಲಗಳ ಪ್ರಕಾರ, ಜಿಂದಾಲ್‌ಗೆ ಸಂಬಂಧಪಟ್ಟ ನಿರ್ಣಯಕ್ಕೆ ಹಿಂದಿನ ಸಂಪುಟ ಸಭೆಯಲ್ಲಿ ಸಚಿವರಾದ ಅರವಿಂದ ಲಿಂಬಾವಳಿ ಮತ್ತು ಮಾಧುಸ್ವಾಮಿ ವಿರೋಧ ವ್ಯಕ್ತಪಡಿಸಿದ್ದರು. ಆದರೆ, ಸಂಪುಟದಲ್ಲಿ ಒಪ್ಪಿಗೆ ಪಡೆಯಲಾಗಿತ್ತು. ಕೊನೆಗೆ ಅರವಿಂದ ಬೆಲ್ಲದ, ಯತ್ನಾಳ್ ದಿಲ್ಲಿಗೆ ಪತ್ರ ಬರೆದು, ಪ್ರಕರಣ ಕೋರ್ಟ್ ಮೆಟ್ಟಲು ಏರಿದಾಗ ತಮ್ಮನ್ನು ಭೇಟಿಯಾದ ಬೊಮ್ಮಾಯಿ ಮತ್ತು ಅಡ್ವೋಕೇಟ್ ಜನರಲ್‌ಗೆ ಅಮಿತ್ ಶಾ, ಜೋ ಸರ್ಕಾರ್ ಕೋ ಆನಾ ಹೈ ಆನಾ ಚಾಹಿಯೇ (ಎಷ್ಟು ದುಡ್ಡು ಸರ್ಕಾರಕ್ಕೆ ಬರಬೇಕೋ ಬರಲೇಬೇಕು) ಎಂದು ಹೇಳಿ ಕಳುಹಿಸಿದ್ದರಂತೆ. ಹೀಗಾಗಿ ಇವತ್ತಿನ ಸಂಪುಟ ಸಭೆ ಹೊಸ ನಿರ್ಣಯ ತೆಗೆದುಕೊಂಡಿದೆ. ಹೀಗಾಗಿ ಮುಂದೆ ಮತ್ತೊಮ್ಮೆ ಹೆಚ್ಚಿನ ಹಾಗೂ ನ್ಯಾಯಯುತ ಬೆಲೆ ಜಿಂದಾಲ್‌ಗೆ ಭೂಮಿ ನೀಡಬಹುದೋ ಇಲ್ಲವೋ ಎಂಬುದು ಸ್ಪಷ್ಟವಿಲ್ಲ.

**ರಾಜ್ಯಕ್ಕೆ ಬರುತ್ತಾರಾ ಸಂತೋಷ್:** ರಾಜ್ಯ ಬಿಜೆಪಿ ಇತಿಹಾಸದಲ್ಲಿ ಪಕ್ಷ ಕಟ್ಟಲು ಹಗಲು–ಇರುಳು ರಾಜ್ಯದ ಉದ್ದಗಲಕ್ಕೂ ಓಡಾಡಿದವರೆಂದರೆ ಜಗನ್ನಾಥರಾವ್ ಜೋಶಿ, ಬಾವುರಾವ್ ದೇಶಪಾಂಡೆ, ಯಡಿಯೂರಪ್ಪ, ಅನಂತಕುಮಾರ್ ಮತ್ತು ಸಂತೋಷ್ ಅವರು ನಾಲ್ವರು ಬ್ರಾಹ್ಮಣರು, ಯಡಿಯೂರಪ್ಪ

ಮಾತ್ರ ಲಿಂಗಾಯತರು, ಜಾತಿ ಕೂಡ ಒಂದು ಹೆಚ್ಚುವರಿ ಲಾಭ ಆದ್ದರಿಂದ ಯಡಿಯೂರಪ್ಪ ದೊಡ್ಡದಾಗಿ ಬೆಳೆಯಲು ಸಾಧ್ಯ ಆಯಿತು. ಈಗ ಅನಂತಕುಮಾರ್ ಇಲ್ಲ. ಹೀಗಾಗಿ ಗುಜರಾತ್‌ನಲ್ಲಿ ಪ್ರಚಾರಕ್ಕೆ ಮೋದಿ ಅವರನ್ನು ಕಳಿಸಿದಂತೆ ಸಂತೋಷ್‌ರನ್ನು ಕರ್ನಾಟಕಕ್ಕೆ ಕಳುಹಿಸುತ್ತಾರೇನೋ ಎಂಬ ಚರ್ಚೆ ಸಂಘ ಪರಿಹಾರದ ವಲಯದಲ್ಲಂತೂ ಇದೆ. ಆದರೆ ರಾಜ್ಯದ ಕೆಲ ಸಂಸದರು ಕರ್ನಾಟಕದ ಬಿಜೆಪಿ ಬೆಳವಣಿಗೆಗಳ ಬಗ್ಗೆ ಹೋಗಿ ಸಂತೋಷ್ ಬಳಿ ಕೇಳಿದಾಗ ನಾನು ಕರ್ನಾಟಕದ ದೈನಂದಿನ ವಿಷಯದಲ್ಲಿ ತಲೆ ಹಾಕುವುದಿಲ್ಲ ಎಂದು ಹೇಳಿ ಕಳುಹಿಸಿದ್ದಾರೆ. ಆದರೆ ಸಂತೋಷ್ ಕಣ್ಸನ್ನೆ ಇಲ್ಲದೇ ಬಿಜೆಪಿ ಸಂಘಟನೆಯಲ್ಲಿ ಕಡ್ಡಿ ಕೂಡ ಅಲುಗಾಡುವುದಿಲ್ಲ  ಅನ್ನುವುದು ಕೂಡ ಅಷ್ಟೇ ಸತ್ಯ.

**ಲೇಖಕರು: ಪ್ರಶಾಂತ್ ನಾತು,**
**ಸುವರ್ಣ ನ್ಯೂಸ್**

ಆಧಾರ: ಕನ್ನಡಪ್ರಭ, ದಿನಾಂಕ:28.05.2021.

## 4. ಗಿಮಿಕ್ ಅಲ್ಲ ತಜ್ಞರ ಶಿಫಾರಸ್ಸು

ಯಾವುದೇ ಕಾಯಿಲೆಗೆ ಲಸಿಕೆ ಅಭಿವೃದ್ಧಿಪಡಿಸುವುದು ಒಂದು ಸಂಕೀರ್ಣ ಪ್ರಕ್ರಿಯೆ. ಇದಕ್ಕೆ ದಶಕ ಅಥವಾ ಅದಕ್ಕಿಂತ ಹೆಚ್ಚು ಸಮಯ ಬೇಕಾಗುತ್ತದೆ. ಬಹುತೇಕ ಸಂದರ್ಭಗಳಲ್ಲಿ ಸರ್ಕಾರಿ ಹಾಗೂ ಖಾಸಗಿ ವಲಯದ ಸಹಭಾಗಿತ್ವದಲ್ಲಿ ಇದು ನಡೆಯಬೇಕಾಗುತ್ತದೆ. ಅಭಿವೃದ್ಧಿ ಪಡಿಸಿದ ಲಸಿಕೆಯು ಬಳಕೆಗೆ ಸುರಕ್ಷಿತ ಎಂದು ಘೋಷಿಸಬೇಕಾದರೆ ಹಲವು ಹಂತಗಳ ಪರೀಕ್ಷೆಗೆ ಒಳಪಡಬೇಕಾಗುತ್ತದೆ. ಸಂಶೋಧನಾ ಹಂತದಿಂದ ಚಿಕಿತ್ಸಾಪೂರ್ವ ಹಂತದವರೆಗೆ ನಡೆಯುವ ಹಲವಾರು ಪರೀಕ್ಷೆಗಳಿಗೆ ವರ್ಷಗಳೇ ಬೇಕಾಗುತ್ತದೆ. ಇತರ ಸಾಮಾನ್ಯ ಔಷಧಗಳಿಗಿಂತ ವಿಸ್ತೃತ ಹಾಗೂ ಸಮಗ್ರ ಪರೀಕ್ಷೆಗೆ ಲಸಿಕೆಯನ್ನು ಒಳಪಡಿಸಲಾಗುತ್ತದೆ.

ಕೊರೋನಾ ವೈರಾಣು ತಡೆಗೆ ನಡೆದ ಲಸಿಕೆಯ ಆವಿಷ್ಕಾರವು 2020ರಲ್ಲಿ ಜಗತ್ತಿನ ಗಮನ ಸೆಳೆಯಿತು. ಕೊರೋನಾ ಲಸಿಕೆಯು ಅತ್ಯಂತ ತ್ವರಿತವಾಗಿ ಅಭಿವೃದ್ಧಿಗೊಂಡ ಲಸಿಕೆ ಎಂದು ವೈದ್ಯಕೀಯ ಇತಿಹಾಸದಲ್ಲಿ ದಾಖಲಾಗಲಿದೆ. ಸಂಬಂಧಪಟ್ಟ ನಿಯಂತ್ರಕ ಸಂಸ್ಥೆಗಳು ಕ್ಷಿಪ್ರವಾಗಿ ಅನುಮತಿಗಳನ್ನು ನೀಡಿದ್ದು ಹಾಗೂ ವಿಳಂಬಕ್ಕೆ ಆಸ್ಪದವಾಗದಂತೆ ಪ್ರತಿ ಹಂತದಲ್ಲೂ ಕಾರ್ಯನಿರ್ವಹಿಸಿದ್ದು ಇದಕ್ಕೆ ಕಾರಣ, ಹಾಗೇಂದ ಮಾತ್ರಕ್ಕೆ  ವೈದ್ಯಕೀಯ ಸಂಹಿತೆಯ ಪಾಲನೆಯಲ್ಲಿ ರಾಜಿ ಮಾಡಿಕೊಳ್ಳಲಾಗಿದೆ ಎಂದಾಗಲಿ, ಲಸಿಕೆಯ ಅಪೇಕ್ಷಿತ ಫಲಿತಾಂಶವನ್ನು ಕಡೆಗಣಿಸಲಾಗಿದೆ ಎಂದಾಗಲಿ ಭಾವಿಸಬೇಕಾಗಿಲ್ಲ. ಸಿಡುಬಿನಿಂದ ಸೋಂಕಿತರಾಗಿದ್ದ ಪ್ರತಿಯೊಬ್ಬರನ್ನೂ  ಗುರುತಿಸಿ, ತಡಮಾಡದೆ ಅಂಥವರಿಗೆ ಲಸಿಕೆ ಹಾಕಲಾಯಿತು ಈ ಕಾರ್ಯತಂತ್ರವು ಸೋಂಕಿನ ವಿರುದ್ಧದ ಹೋರಾಟದಲ್ಲಿ ಯಶಸ್ಸು ತಂದುಕೊಟ್ಟಿತು. ಪ್ರತಿಯೊಂದು ವೈಜ್ಞಾನಿಕ ಆವಿಷ್ಕಾರವನ್ನು ಆರಂಭದಲ್ಲಿ ಅನುಮಾನದ ಕಣ್ಣುಗಳಿಂದಲೇ ನೋಡಲಾಗುತ್ತದೆ. ಆದರೆ, ಕಾಲಾಂತರದಲ್ಲಿ ಇಂಥ ಅನುಮಾನಗಳು ಅರ್ಥಹೀನ ಎಂಬುದು ಸಾಬೀತಾಗುತ್ತಲೇ ಬಂದಿದೆ.

ರೋಗದ ವಿರುದ್ಧ ಗರಿಷ್ಠ ರಕ್ಷಣೆ ಲಭಿಸಬೇಕೆಂದಾದರೆ ಕೆಲವು ಲಸಿಕೆಗಳನ್ನು ಕೆಲವು ವಾರಗಳ ಅಥವಾ ತಿಂಗಳುಗಳ ಅಂತರದಲ್ಲಿ ಹಲವು ಡೋಸ್‌ಗಳಲ್ಲಿ ಕೊಡಬೇಕಾಗುತ್ತದೆ. ಲಸಿಕೆಯನ್ನು ಹಾಕಿಸಿಕೊಂಡ ವ್ಯಕ್ತಿಯ ದೇಹದೊಳಗೆ ಪ್ರತಿಕಾಯಗಳು ಬೆಳೆಯಲು ಡೋಸ್‌ಗಳ ನಡುವೆ ನಿಗದಿತ ಅಂತರ ಪಾಲಿಸುವುದು ಅಗತ್ಯ.

ಅದೇ ರೀತಿ ಕೋವಿಡ್‌ಗೆ ಕೊಡಲಾಗುತ್ತಿರುವ ಕೋವಿಶೀಲ್ಡ್, ಲಸಿಕೆಯ ಡೋಸ್‌ಗಳ ನಡುವೆ ಹೆಚ್ಚಿನ ಅಂತರವಿದ್ದರೆ ಫಲಿತಾಂಶವು ಶೇ.90ರಷ್ಟು ಇರುತ್ತದೆ ಎಂಬ ಅಧ್ಯಯನ ವರದಿಯು ವೈದ್ಯಕೀಯ ನಿಯತಕಾಲಿಕ ಲ್ಯಾನ್ಸೆಟ್‌ನನ್ನಿಚೆಗೆ ಪ್ರಕಟವಾಗಿದೆ. ಕೋವಿಶೀಲ್ಡ್ ಲಸಿಕೆಯ ಎರಡು ಡೋಸ್‌ಗಳ ನಡುವೆ 4 ರಿಂದ 6 ವಾರಗಳ ಅಂತರವು 6 ರಿಂದ 12 ವಾರಗಳಷ್ಟು ಇದ್ದರೆ ಉತ್ತಮ ಎಂದು ಇತ್ತೀಚೆಗೆ ನಡೆಸಿದ ಅಧ್ಯಯನದ ವರದಿಗಳು ಹೇಳಿವೆ.

ಲಸಿಕೆಯ ಡೋಸ್‌ಗಳ ನಡುವೆ ಇಂತಿಷ್ಟೇ ಅಂತರ ಇರಬೇಕು ಎಂಬ ನಿಯಮವೇನೂ ಇಲ್ಲ. ಆದರೂ ದೇಹದಲ್ಲಿ ಪ್ರತಿರೋಧ ಶಕ್ತಿ ಬೆಳೆಯಬೇಕೆಂದರೆ ಕನಿಷ್ಠ 3 ವಾರಗಳ ಸಮಯ ಬೇಕಾಗುತ್ತದೆ ಎಂಬುದು ತಜ್ಞರ ಅಭಿಮತ. ಇದೇ ವೇಳೆ, ಲಸಿಕೆ ಹಾಕಿಸಿಕೊಂಡ ಮೇಲೆ ದೇಹದಲ್ಲಿ ಪ್ರತಿಕಾಯಗಳು ಪೂರ್ಣ ಪ್ರಮಾಣದಲ್ಲಿ ಸಕ್ರಿಯವಾಗಲು ಎಂಟು ವಾರಗಳು ಬೇಕಾಗುತ್ತವೆ ಎಂಬುದು ಪರಿಣತರ ಅಭಿಪ್ರಾಯವಾಗಿದೆ.

ಲಸಿಕೆಯ ಡೋಸ್‌ಗಳ ನಡುವೆ ಅವಧಿ ಹೆಚ್ಚಿದ್ದಷ್ಟೂ ಅದರ ಪರಿಣಾಮ ಹಾಗೂ ಸುರಕ್ಷತೆ ಹೆಚ್ಚು ಎಂಬುದನ್ನು ನಾವು ಮರೆತುಬಿಡುತ್ತೇವೆ. ಇದೀಗ ಕೋವಿಶೀಲ್ಡ್ ಡೋಸ್‌ಗಳ ನಡುವೆ ಅಂತರವನ್ನು ಹೆಚ್ಚಿಸಿರುವುದಕ್ಕೆ ಕೆಲವರು ತಮ್ಮದೇ ರೀತಿಯಲ್ಲಿ ಟೀಕೆಗಳನ್ನು ವ್ಯಕ್ತಪಡಿಸುತ್ತಿದ್ದಾರೆ. ಹೌದು, ಕೇಂದ್ರ ಸರ್ಕಾರವು ಕಳೆದ ಮೂರು ತಿಂಗಳ ಅವಧಿಯಲ್ಲಿ ಈ ಲಸಿಕೆಯ ಡೋಸ್‌ಗಳ ನಡುವಿನ ಅಂತರವನ್ನು ಎರಡು ಸಲ ಪರಿಷ್ಕರಿಸಿ ಆದೇಶ ಹೊರಡಿಸಿದೆ. ಡೋಸ್‌ಗಳ ನಡುವೆ 28 ದಿನಗಳ ಅಂತರವಿರಬೇಕು ಎಂದು ಆರಂಭದಲ್ಲಿ ತೀರ್ಮಾನಿಸಲಾಗಿತ್ತು. ಆ ಅವಧಿಯನ್ನು 6 ರಿಂದ 8 ವಾರಗಳಿಗೆ ಹೆಚ್ಚಿಸಿ ಮಾರ್ಚ್‌ನಲ್ಲಿ ಆದೇಶ ನೀಡಲಾಯಿತು. ಇದೀಗ ಆ ಅಂತರವನ್ನು 12 ರಿಂದ 16 ವಾರಗಳಿಗೆ ಹೆಚ್ಚಿಸಲಾಗಿದೆ. ರೋಗ ನಿರೋಧಕತೆ ಸಂಬಂಧವಾಗಿ ಕಾರ್ಯನಿರ್ವಹಿಸುವ ರಾಷ್ಟ್ರೀಯ ತಾಂತ್ರಿಕ ಸಲಹಾ ತಂಡವು ನೀಡಿದ ಸಲಹೆಗೆ ಅನುಸಾರವಾಗಿ ಈ ಪರಿಷ್ಕರಣೆಗಳನ್ನು ಮಾಡಲಾಗಿದೆ.

ಈ ಸಲಹೆ ಹಾಗೂ ನಿರ್ಧಾರವನ್ನು ಸಮರ್ಥಿಸುವಂತಹ ಕೆಲವು ಉದಾಹರಣೆಗಳನ್ನು ನಾವು ಗಮನಿಸಬೇಕಾಗಿದೆ. ಕೋವಿಶೀಲ್ಡ್ ಲಸಿಕಾ ಅಭಿಯಾನವನ್ನು ನಡೆಸುತ್ತಿರುವ ಬ್ರಿಟನ್ ಮತ್ತು ಕೆನಡಾ ದೇಶಗಳು, ಡೋಸ್‌ಗಳ ನಡುವಿನ ಅಂತರವನ್ನು ಈಗಾಗಲೇ 4 ತಿಂಗಳಿಗೆ ಹೆಚ್ಚಿಸಿವೆ. ಕೆನಡಾದಲ್ಲಿ ಕೋವಿಡ್‌ನ ಎಲ್ಲ ಲಸಿಕೆಗಳ ಎರಡು ಡೋಸ್‌ಗಳ ನಡುವಿನ ಅಂತರವನ್ನು 4 ತಿಂಗಳಿಗೆ ಹೆಚ್ಚಿಸಿವೆ. ಕೆನಡಾದಲ್ಲಿ ಕೋವಿಡ್‌ನ ಎಲ್ಲ ಲಸಿಕೆಗಳ ಎರಡು ಡೋಸ್‌ಗಳ ನಡುವಿನ ಅಂತರವನ್ನು 4 ತಿಂಗಳಿಗೆ ನಿಗದಿಗೊಳಿಸುವ ನೀತಿಯನ್ನು ಜಾರಿಗೆ ತರಲಾಗಿದೆ. ಬ್ರಿಟನ್‌ನಲ್ಲಿ ಎರಡನೇ ಡೋಸ್ ನೀಡುವ ಪ್ರಕ್ರಿಯೆ ಈಗಷ್ಟೇ ಆರಂಭವಾಗಿದೆ. ಅಲ್ಲಿ ಮೊದಲ ಡೋಸ್ ನೀಡಿದ ನಂತರ ಮರಣ ಪ್ರಮಾಣ ಇಳಿಮುಖವಾಗಿರುವುದು ಅಂಕಿ-ಅಂಶಗಳಿಂದ ಕಂಡುಬಂದಿದೆ. ಡೋಸ್‌ಗಳ ನಡುವಿನ ಅಂತರವನ್ನು ಹೆಚ್ಚಿಸಬೇಕು ಎಂದು ವಿಶ್ವಾರೋಗ್ಯ ಸಂಸ್ಥೆಯೂ (ಡಬ್ಲ್ಯುಎಚ್‌ಓ) ಶಿಫಾರಸ್ಸು ಮಾಡಿದೆ. ಇದರ ಹೊರತಾಗಿಯೂ, ಭಾರತದಲ್ಲಿ ಅಂತಹ ನಿರ್ಧಾರ ತೆಗೆದುಕೊಂಡರೆ ಅದನ್ನು ರಜಕೀಯ ಗಿಮಿಕ್ ಎಂದು ಮೊದಲಿಸಲಾಗುತ್ತದೆ ಎಂಬುದು ವಿಪರ್ಯಾಸ.

ಲಸಿಕೆ ಎಂಬುದು ರೋಗದಿಂದ ನಮ್ಮನ್ನು ರಕ್ಷಿಸಿಕೊಳ್ಳಲು ಇರುವ ಮಾರ್ಗಗಳಲ್ಲಿ ಒಂದು. ಇದನ್ನೇ ಮಾಸ್ಕ್ ಧರಿಸದೇ ಇರಲು, ವ್ಯಕ್ತಿವ್ಯಕ್ತಿಗಳ ನಡುವೆ ಭೌತಿಕ ಅಂತರ ಪಾಲಿಸದೇ ಇರಲು ಅಥವಾ ಸ್ವಚ್ಛತೆಯನ್ನು ನಿರ್ಲಕ್ಷಿಸಲು ನೀಡುವ ಪರವಾನಿಗಿ ಎಂದು ಭಾವಿಸಬಾರದು. ಲಸಿಕೆ ಹಾಕಿಸಿದರೂ ಕೊರೋನಾ ಸಂಪೂರ್ಣ ನಿರ್ಮೂಲನೆಯಾಗುವವರೆಗೆ ಈ ಅಭ್ಯಾಸಗಳನ್ನು ಪಾಲಿಸಲೇಬೇಕಾಗುತ್ತದೆ.

ಕೊರೋನಾ ತೊಡೆದು ಹಾಕಲು ಸರ್ಕಾರವು ಎಲ್ಲ ರೀತಿಯ ಪ್ರಯತ್ನಗಳನ್ನು ಮಾಡುತ್ತಿದೆ. ಕೋವಿಡ್ ಲಸಿಕೆ ಹಾಕಿಸಿಕೊಂಡ ಮೇಲೆ ಸೋಂಕಿನ ಬಾಧೆಗೆ ಒಳಗಾಗುವ ಸಾಧ್ಯತೆ ಶೇ.5 ರಷ್ಟು ಮಾತ್ರ ಇರುತ್ತದೆ ಎಂಬುದು ದೃಢಪಟ್ಟಿದೆ. ಲಸಿಕೆಗೆ ಸಂಬಂಧಿಸಿದಂತೆ ನಾಗರಿಕರಿಗೆ ಸ್ವಯಂ ನಿರ್ಧಾರ ತೆಗೆದುಕೊಳ್ಳುವುದು ಕಷ್ಟದ ಸಂಗತಿ ಎಂಬ ಅರಿವು ಸರ್ಕಾರಕ್ಕಿದೆ. ಈ ವಿಷಯವಾಗಿ ಪರಿಣತರು, ವಿಜ್ಞಾನಿಗಳು ಹಾಗೂ ಸರ್ಕಾರದ ಮೇಲೆ ವಿಶ್ವಾಸ ಇಡಬೇಕು. ಸೋಂಕನ್ನು ಭೂಮಿಯ ಮೇಲಿನಿಂದ ನಿರ್ಮೂಲನೆ ಮಾಡುವ ಶಕ್ತಿ- ಸಾಮರ್ಥ್ಯ ಮನುಷ್ಯನಿಗೆ ಇದೆ ಎಂದು ಲೂಯಿಸ್ ಪಾಶ್ಚರ್ ಹೇಳಿದ್ದರು. ಆದರಂತೆ, ಕೋವಿಡ್-19 ನಿರ್ಮೂಲನೆಗೆ ನಾವೆಲ್ಲರೂ ಪಣತೊಡಬೇಕಾಗಿದೆ. ಒಗ್ಗಟ್ಟಿನಿಂದ ಹೋರಾಡಿದರೆ ಇದು ಸಾಧ್ಯ.

**ಡಬ್ಲ್ಯುಎಚ್‌ಓ ಹೇಳುವುದೇನು**: ಲಸಿಕೆ ನೀಡಿಕೆ ಕುರಿತ ಪ್ರಶ್ನೆಗಳಿಗೆ ವಿಶ್ವ ಆರೋಗ್ಯ ಸಂಸ್ಥೆಯ (ಡಬ್ಲ್ಯುಎಚ್‌ಓ) ಪ್ರಧಾನ ವಿಜ್ಞಾನಿ ಡಾ:ಸೌಮ್ಯಾ ಸ್ವಾಮಿನಾಥನ್ ಅವರು ಉತ್ತರಿಸಿದ್ದಾರೆ. ಜಗತ್ತಿನಲ್ಲಿ

ಹಲವು ಲಸಿಕೆಗಳು ಅಭಿವೃದ್ಧಿಯ ಹಂತದಲ್ಲಿವೆ. ಡೋಸ್ ನೀಡಿಕೆಯಲ್ಲಿ ಎಲ್ಲವೂ ಭಿನ್ನ ಮಾದರಿ ಹೊಂದಿವೆ. ಬಹುತೇಕ ಲಸಿಕೆಗಳನ್ನು ಎರಡು ಡೋಸ್‌ಗಳಲ್ಲಿ ನೀಡಬೇಕು ಒಂದೇ ಡೋಸ್‌ನ ಲಸಿಕೆಗಳನ್ನು ಎರಡು ಡೋಸ್‌ಗಳಲ್ಲಿ ನೀಡಬೇಕು ಒಂದೇ ಡೋಸ್‌ನ ಲಸಿಕೆಗಳು ಇವೆ. ಎರಡು ಲಸಿಕೆಗಳ ನಡುವಣ ಅಂತರವನ್ನು ಆಯಾ ಲಸಿಕೆ ತಯಾರಿಕಾ ಕಂಪನಿಗಳು ಮತ್ತು ಸರ್ಕಾರಗಳು ನಿರ್ಣಯಿಸಬೇಕು ಎನ್ನುತ್ತಾರೆ ಅವರು.

ಪ್ರಸ್ತುತ ಎರಡು ಲಸಿಕೆಗಳ ನಡುವಿನ ಅಂತರ 3–4 ವಾರ ಇದೆ. ಆದರೆ ಎರಡನೇ ಲಸಿಕೆಯನ್ನು 12 ವಾರದ ಬಳಿಕ ನೀಡುವುದರಿಂದ ರೋಗ ನಿರೋಧಕ ಶಕ್ತಿ ಹೆಚ್ಚುತ್ತದೆ ಎಂದು ಆಸ್ಟ್ರಾಜೆನೆಕ ಕಂಪನಿ ಹೇಳಿಕೊಂಡಿದೆ. ಎರಡನೇ ಡೋಸ್ ಪಡೆಯುವುದು ತಪ್ಪಿ ಹೋಗಿದ್ದರೂ ಅಥವಾ ವಿಳಂಬವಾಗಿದ್ದರೂ ಅದನ್ನು ಪಡೆಯುವುದು ಸೂಕ್ತ. ನಿಗದಿತ ದಿನಾಂಕಕ್ಕಿಂತ ಮೊದಲು ಅಥವಾ ಕೆಲವು ದಿನ ಅಥವಾ ಒಂದೆರಡು ವಾರ ತಡವಾಗಿದ್ದರೂ ಪರವಾಗಿಲ್ಲ ಡೋಸ್ ಹಾಕಿಸಿಕೊಳ್ಳಬೇಕು ಎನ್ನುತ್ತಾರೆ ಡಾ: ಸೌಮ್ಯಾ.

ಮೊದಲ ಡೋಸ್ ನಮ್ಮ ದೇಹದ ಪ್ರತಿರಕ್ಷಣಾ ವ್ಯವಸ್ಥೆಗೆ ಪ್ರತಿಕಾಯಗಳನ್ನು ಒದಗಿಸಿದರೆ, ಎರಡನೇ ಡೋಸ್ ರೋಗ ನಿರೋಧಕ ಶಕ್ತಿಯನ್ನು ಇನ್ನಷ್ಟು ಉತ್ತೇಜಿಸುತ್ತದೆ. ಆದರೆ ಯಾವ ಕಂಪನಿಯ ಮೊದಲ ಡೋಸ್ ಪಡೆದುಕೊಳ್ಳಬೆಕು. ಎರಡೂ ಬೇರೆ ಬೇರೆ ಕಂಪನಿಗಳ ಡೋಸ್ ಪಡೆದುಕೊಳ್ಳಬೇಕು. ಎರಡು ಬೇರೆ ಬೇರೆ ಕಂಪನಿಗಳ ಡೋಸ್‌ಗಳನ್ನು ಪಡೆದುಕೊಳ್ಳಬಹುದು ಎಂದು ಶಿಫಾರಸ್ಸು ಮಾಡುವ ದಾಖಲೆಗಳು ಲಭ್ಯವಿಲ್ಲ ಎಂದು ಸ್ವಾಮಿನಾಥನ್ ತಿಳಿಸಿದ್ದಾರೆ.

ಪ್ರತ್ಯೇಕ ಕಂಪನಿ ಡೋಸ್‌ಗಳನ್ನು ಪಡೆದುಕೊಳ್ಳುವ ಬಗ್ಗೆ ಅಧ್ಯಯನಗಳು ನಡೆಯುತ್ತಿವೆ. ಆದರೆ, ಸದ್ಯದ ಪ್ರಕಾರ ಅದನ್ನು ಶಿಫಾರಸ್ಸು ಮಾಡುವುದಿಲ್ಲ ಎಂದಿದ್ದಾರೆ.

**ಲೇಖಕರು:ಡಾ: ಸಿ.ಎನ್. ಅಶ್ವಥ್‌ನಾರಾಯಣ, ಉಪಮುಖ್ಯಮಂತ್ರಿ**
**ಕೋವಿಡ್ ಕಾರ್ಯಪಡೆ, ಅಧ್ಯಕ್ಷರು**
**ಕಸ್ತೂರಬಾ ಮೆಡಿಕಲ್ ಕಾಲೇಜಿನ ಹಳೆ ವಿದ್ಯಾರ್ಥಿ**

ಆಧಾರ: ಪ್ರಜಾವಾಣಿ, ದಿನಾಂಕ:18–5–2021

## 5. ರಾಷ್ಟ್ರೀಯ ಸರ್ಕಾರವೆಂಬುದೇ ಸಾಂವಿಧಾನಿಕ

ಅಂಬೇಡ್ಕರ್ ಅವರು ಸಂವಿಧಾನ ರಚನಾ ಸಭೆಯಲ್ಲಿನ ತಮ್ಮ ಕೊನೆಯ ಭಾಷಣದಲ್ಲಿ ಹೀಗೆ ಉಲ್ಲೇಖಿಸುತ್ತಾರೆ 'ಸಂವಿಧಾನದ ಗುಣಮಟ್ಟದ ಬಗ್ಗೆ ನಾನೀಗ ಚರ್ಚಿಸಲು ಇಷ್ಟಪಡುವುದಿಲ್ಲ. ಕಾರಣ, ಸಂವಿಧಾನವೊಂದು ತುಂಬಾ ಚೆನ್ನಾಗಿರಬಹುದು, ಆದರೆ ಅದಕ್ಕೆ ಕಾರ್ಯರೂಪ ಕೊಡುವ ಜನರು ಕೆಟ್ಟವರಾದಲ್ಲಿ ಸಂವಿಧಾನವೂ ಕೆಟ್ಟದ್ದೇ ಆಗುವುದು. ತದ್ವಿರುದ್ಧವಾಗಿ ಒಂದು ಕೆಟ್ಟ ಸಂವಿಧಾನವೂ ಉತ್ತಮರ ಕೈಗಳಲ್ಲಿ ಜನಹಿತಕಾರಿಯೇ ಆಗಬಹುದು,' ಅಂಬೇಡ್ಕರ್ ಇಷ್ಟವಾಗುವುದು ಈ ರೀತಿಯ ದೂರದೃಷ್ಟಿಯ ನಡವಳಿಕೆಗಳಿಂದ. 'ಭಾರತೀಯವಾದ' ಸಂವಿಧಾನವನ್ನು ರಚನೆ ಮಾಡುವ ಪಣತೊಟ್ಟಿದ್ದು ಅವರ ಮತ್ತೊಂದು ವಿಶೇಷತೆ.

**ದೂರದೃಷ್ಟಿ ಚಿಂತನೆ:** ಬಹುಮತ ಹೊಂದಿದ ಕಾಂಗ್ರೆಸ್‌ನ ವಿರೋಧದ ನಡುವೆಯೂ ಭಾರತೀಯವಾದ ಸಂವಿಧಾನ ರಚಿಸುವಲ್ಲಿ ಅಂಬೇಡ್ಕರ್ ಯಶಸ್ವಿಯಾದರು. ಆದರೆ ಅವರ ದೂರದೃಷ್ಟಿಯಂತೆ ಮೌಲ್ಯದ ಜೊತೆ ತರ್ಕಿಸಿ ರಚಿಸಿದ ಸಂವಿಧಾನ ಅಪಾಯಕ್ಕೆ ಸಿಲುಕಲು ಹೆಚ್ಚು ವರ್ಷ ಬೇಕಾಗಲಿಲ್ಲ. ಅಂಬೇಡ್ಕರ್ ನಿಧನರಾದ 20 ವರ್ಷಗಳಲ್ಲಿ, ಅವರು ರಚಿಸಿದ ಸಂವಿಧಾನದ ಅಸ್ತಿತ್ವಕ್ಕೆ ಬಂದ 26 ವರ್ಷಗಳಲ್ಲಿ, ಅವರು ರಚಿಸಿದ ಸಂವಿಧಾನದ ಆಶಯಗಳನ್ನೇ ಅಂದಿನ ಸರ್ಕಾರ ಹೊಸಕಿಹಾಕಿತ್ತು. ಅದು ತುರ್ತು ಸ್ಥಿತಿಯ ಮೂಲಕ. ಅಧಿಕಾರದಿಂದ ಕೆಳಗಿಳಿಯುವಂತೆ ನ್ಯಾಯಾಲಯ ನೀಡಿದ ಆದೇಶವನ್ನು ಧಿಕ್ಕರಿಸಿ 1975ರಲ್ಲಿ ಅಂದಿನ ಪ್ರಧಾನಿ ಇಂದಿರಾಗಾಂಧಿ ತುರ್ತು ಪರಿಸ್ಥಿತಿ ಹೇರಿದರು. ವೀಸಾದಂಥ ಕಾಯ್ದೆ ಜಾರಿಗೆ ತಂದು ಕಾನೂನಿನ ಮುಂದೆ ಎಲ್ಲರೂ ಸಮಾನರು ಎಂಬ

ತತ್ವವನ್ನು ಬೀದಿಗೆ ಎಸೆದರು. ಇದೆಲ್ಲಕ್ಕೂ ಮೀರಿ, ಆಗಸ್ಟ್ 10, 1975ರಂದು ಇಂದಿರಾ ತಮ್ಮ ವೈಯುಕ್ತಿಕ ಕಾರಣಕ್ಕಾಗಿ ಭಾರತದ ಸಂವಿಧಾನಕ್ಕೆ 39ನೇ ತಿದ್ದುಪಡಿಯನ್ನು ಮಾಡಿಕೊಳ್ಳುವ ಮೂಲಕ ಪ್ರಜಾಪ್ರಭುತ್ವವನ್ನು ಮಣ್ಣುಪಾಲಾಗಿಸಿದ್ದು ಇತಿಹಾಸ.

ಇಂದು ಈ ಎಲ್ಲ ವಿಷಯಗಳನ್ನು ಚರ್ಚೆಯ ಬದಿಗೆ ಎಳೆದು ತರಬೇಕಾದ ಅನಿವಾರ್ಯ ಸೃಷ್ಟಿಸಿರುವುದು ಕನ್ನಡಪ್ರಭ ಪತ್ರಿಕೆಯಲ್ಲಿ ಎಸ್. ಆರ್. ಹಿರೇಮಠ್ ಬರೆದ ಲೇಖನ. ಅದರಲ್ಲಿ ರಾಷ್ಟ್ರೀಯ ಸರ್ಕಾರ ರಚನೆಗೆ ಆಗ್ರಹಿಸಲಾಗಿದೆ. ಮೂಲಭೂತವಾಗಿ ಇಂತಹ ಆಗ್ರಹವೇ ಅಸಾಂವಿಧಾನಿಕ. ಏಕೆಂದರೆ ಸಂವಿಧಾನದಲ್ಲಿ ಇರದ ಯಾವುದೇ ಸಂಗತಿ ಆಚರಣೆಗೆ ಬರಲು ಸಾಧ್ಯವಾಗುವುದಿಲ್ಲ.

**ಆಗ್ರಹ ಕೂಡ ಅಕ್ಷಮ್ಯವೇ:** ರಾಷ್ಟ್ರೀಯ ಸರ್ಕಾರ ರಚನೆಯಾಗಬೇಕು ಎಂದು ಕೆಲವರು ಆಗ್ರಹಿಸುತ್ತಿರುವುದಕ್ಕೆ ಕಾರಣ ಕೊರೋನಾ ನಿಗ್ರಹದಲ್ಲಿ ಸರ್ಕಾರ ವಿಫಲವಾಗಿದೆ ಎಂಬ ಆರೋಪ. ವಾಸ್ತವವಾಗಿ ಈ ಆಗ್ರಹವು ಅಂಬೇಡ್ಕರ್ ರಚಿಸದ ಸಂವಿಧಾನವನ್ನು ಶಿಥಿಲಗೊಳಿಸುವ ಹುನ್ನಾರದ ಒಂದು ಭಾಗ. ಸಂವಿಧಾನ ಶಿಲ್ಪಿ ಭಾರತಕ್ಕೆ ಎಂಥ ಮಾದರಿ ಸರ್ಕಾರ ಬೇಕು ಎಂಬ ಚರ್ಚೆಯಲ್ಲಿ, ಬಲಿಷ್ಠ ಕೇಂದ್ರ ಸರ್ಕಾರವನ್ನು ಪ್ರತಿಪಾದಿಸುತ್ತ ಕೆನಡಾದಂಥ ಸಂಯುಕ್ತ ಸರ್ಕಾರವನ್ನು ಸಮರ್ಥಿಸುತ್ತಾರೆ. ಅಮೇರಿಕ ರೀತಿಯ ಸಂಯುಕ್ತ ವ್ಯವಸ್ಥೆಯನ್ನು ಸ್ಪಷ್ಟವಾಗಿ ತಿರಸ್ಕರಿಸುತ್ತಾರೆ.

**ಬಲಿಷ್ಠ ಸರ್ಕಾರ:** ಕೇಂದ್ರ ಪಟ್ಟಿ, ರಾಜ್ಯ ಪಟ್ಟಿ, ಸಮವರ್ತಿ ಪಟ್ಟಿಯಲ್ಲಿನ ವಿಷಯಗಳ ಹೊರತಾಗಿ, ರೆಸಿಡರಿ ವಿಷಯಗಳನ್ನು ಸಂವಿಧಾನದಲ್ಲಿ ಕೇಂದ್ರ ಸರ್ಕಾರಕ್ಕೆ ನೀಡಲಾಗಿದೆ. ಸ್ವಾತಂತ್ರ್ಯ ಪೂರ್ವದಲ್ಲಿ 540ಕ್ಕೂ ಹೆಚ್ಚಿನ ಪ್ರಾಂತ್ಯಗಳಾಗಿ ತುಂಡಾಗಿದ್ದ ಭಾರತ, ಸಂವಿಧಾನೋತ್ತರ ಕಾಲಘಟ್ಟದಲ್ಲಿ ಐಕ್ಯವಾಗಿ ಉಳಿಯಬೇಕು. ಆ ಕಾರಣಕ್ಕಾಗಿ ಬಲಿಷ್ಠ ಮತ್ತು ಸ್ಥಿರ ಸರ್ಕಾರದ ಅಗತ್ಯತೆ ಇದ್ದೇ ಇದೆ ಎಂದು ಅಂಬೇಡ್ಕರ್ ಆಶಯದಂತೆ ಅಸ್ಥಿರ ಸಮ್ಮಿಶ್ರ ಸರ್ಕಾರದ ಬದಲು, 330ಕ್ಕೂ ಹೆಚ್ಚು ಸ್ಥಾನಗಳನ್ನು ನೀಡುವುದರ ಮುಖಾಂತರ ಭಾರತೀಯ ಪ್ರಜಾವರ್ಗ ಸ್ಥಿರ ಸರ್ಕಾರವನ್ನು ನೀಡಿದೆ. ಇಂತಹ ಸರ್ಕಾರವನ್ನು ಅಸ್ಥಿರಗೊಳಿಸಿ ಭಾರತೀಯವಲ್ಲದ ರಾಷ್ಟ್ರೀಯ ಸರ್ಕಾರದ ಆಗ್ರಹ ಮಾಡಲು ಹೊರಟಿರುವುದು ಮತ್ತೊಮ್ಮೆ ಸಂವಿಧಾನವನ್ನು ನೆಲಕ್ಕುರುಳಿಸಲು.

ಲೇಖಕರು ಸ್ವಾತಂತ್ರ್ಯ ಪೂರ್ವದಲ್ಲಿ ಭಾರತದಲ್ಲಿ ರಾಷ್ಟ್ರೀಯ ಸರ್ಕಾರವಿತ್ತು ಎಂಬ ಮಿಥ್ಯವನ್ನು ಸತ್ಯವನ್ನಾಗಿಸಲು ಯತ್ನಿಸಿದ್ದಾರೆ. ಭಾರತದಲ್ಲೆಂದೂ ರಾಷ್ಟ್ರೀಯ ಸರ್ಕಾರ ಇರಲಿಲ್ಲ. ಅದಕ್ಕೆ ಸಂವಿಧಾನದಲ್ಲಿ ಅವಕಾಶವೂ ಇಲ್ಲ. ಸೆಪ್ಟಂಬರ್ 2, 1946 ರಂದು ಭಾರತದಲ್ಲಿ ಅಸ್ತಿತ್ವಕ್ಕೆ ಬಂದದ್ದು ಮಧ್ಯಂತರ ಸರ್ಕಾರ. ಅದು ಪರಮಾಧಿಕಾರ ಹೊಂದಿಲ್ಲದ ಬ್ರಿಟಿಷ್ ರಾಜ ಪ್ರಭುತ್ವದ ತಾತ್ಕಾಲಿಕ ಸರ್ಕಾರ. ಸಂವಿಧಾನ ರಚನೆಯಾಗುವವರೆಗೆ ಅಧಿಕೃತ ಸ್ವಾತಂತ್ರ್ಯ ಘೋಷಣೆಯಾಗುವವರೆಗೂ, ತಾತ್ಕಾಲಿಕವಾಗಿ ಅಸ್ತಿತ್ವದಲ್ಲಿದ್ದ ಆಡಳಿತ ಭಾರತಕ್ಕೆ ಸ್ವಾತಂತ್ರ್ಯ ಲಭಿಸಿದ ಆಗಸ್ಟ್ 15, 1947 ರಂದು ಅಸ್ತಿತ್ವ ಕಳೆದುಕೊಂಡಿದೆ.

**ದಾಸ್ಯದ ಮಾದರಿ ಏಕೆ ಬೇಕು:** ಲೇಖಕರ 2ನೇ ಮಿಥ್ಯ ರಾಷ್ಟ್ರೀಯ ಸರ್ಕಾರ ಎಲ್ಲ ರಾಜಕೀಯ ಪಕ್ಷಗಳನ್ನು, ಸಮಾಜವನ್ನು ಒಳಗೊಂಡಿತ್ತು ಎಂಬುದು. ಅಂದಿನ ಸರ್ಕಾರದಲ್ಲಿ ಕಾಂಗ್ರೇಸ್ ಮತ್ತು ಮುಸ್ಲಿಂ ಲೀಗ್ ಮಾತ್ರ ಪಾಲುದಾರರಾಗಿದ್ದವು. ಇತರ ಎಲ್ಲರಿಗೂ ಅವಕಾಶ ನಿರಾಕರಿಸಲಾಗಿತ್ತು. ಇಂತಹ ಸರ್ಕಾರವನ್ನು ಕ್ಯಾಬಿನೆಟ್ ಆಫ್ ಬ್ರಿಟಿಷ್ ಇಂಡಿಯಾ ಎಂದು ಕರೆಯಲಾಗುತ್ತಿತ್ತು. ಈಗ ಸ್ವತಂತ್ರ್ಯ ದೇಶವೊಂದು, ಪರಮಾಧಿಕಾರದ ದೇಶವೊಂದು ಮತ್ತೆ ದಾಸ್ಯದ ಮಾದರಿಯ ಸರ್ಕಾರ ರಚಿಸಿಕೊಳ್ಳಬೇಕು ಎಂಬ ಆಗ್ರಹ ನಗೆಪಾಟಲಿನದ್ದಾಗಿದೆ. ಆದರೂ ಇವರು ಕೇಳುತ್ತಿರುವ ಅವಕಾಶವಿಲ್ಲದ ರಾಷ್ಟ್ರೀಯ ಸರ್ಕಾರ ಯಾರನ್ನು ಒಳಗೊಳ್ಳಬೇಕು ಎನ್ನುವುದು ಚರ್ಚಿತ ವಿಷಯ.

**ಯಾರನ್ನು ಒಳಗೊಳ್ಳಬೇಕು:** ಹಾಗೆ ನೋಡಿದರೆ, 2014ರಿಂದ ಭಾರತೀಯ ಪ್ರಜಾವರ್ಗವು ಕಾಂಗ್ರೇಸ್‌ಅನ್ನು ಕನಿಷ್ಠ ಅಧಿಕೃತ ವಿಪಕ್ಷವಾಗಿಯೂ ಒಪ್ಪಲು ಮನಸ್ಸು ಮಾಡಿಲ್ಲ. ಈ ಪಕ್ಷ ಹಾಗೂ ಅಂಬೇಡ್ಕರ್ ಅವರನ್ನು ದೇಶ ದ್ರೋಹಿ ಎಂದು ಅವರ ಚುನಾವಣೆ ವೇಳೆ ಕರಪತ್ರ ಹಂಚಿ, ಸೋಲು ಖಚಿತವಾಗುವಂತೆ ಮಾಡಿದ ಕಮ್ಯುನಿಸ್ಟ್ ಪಕ್ಷವನ್ನು, ಚುನಾವಣೆಯ ಗೆಲುವಿನ ನಂತರವೂ ಹಿಂಸೆಗೆ

ಕಾರಣವಾಗುತ್ತಿರುವ ಟಿಎಂಸಿ ಹಾಗೂ ಭಾರತದ ಪರಮಾಧಿಕಾರವನ್ನು ಪ್ರಶ್ನಿಸುವ ಓವೈಸಿ ಪಕ್ಷವನ್ನು ರಾಷ್ಟ್ರೀಯ ಸರ್ಕಾರದ ಭಾಗವಾಗಿಸಬೇಕೆ?

ಬಹುಮತ ಕಳೆದುಕೊಂಡ ಪಕ್ಷವನ್ನೇ ಅಧಿಕಾರದಿಂದ ಕೆಳಗಿಳಿಸಲು ನೇರವಾಗಿ ಅವಕಾಶವಿರದೆ, ಮೊದಲು ಅಮಾನತುಗೊಳಿಸಬೇಕೆಂಬ ಸರ್ವೋಚ್ಚ ನ್ಯಾಯಾಲಯದ ಆದೇಶ ಉಲ್ಲಂಘಿಸಲಿ ಎಂಬುದು ನಿಮ್ಮ ಅಭಿಮತವೇ? ಸ್ಥಿರ ಸರ್ಕಾರವನ್ನು ವಿಸರ್ಜಿಸಿ ಅರಾಜಕತೆ ತರಬೇಕೆಂಬುದು ನಿಮ್ಮ ಅನಿಸಿಕೆಯೇ? ಸಂವಿಧಾನದ ಯಾವ ಭಾಗದಲ್ಲಿ ರಾಷ್ಟ್ರೀಯ ಸರ್ಕಾರಕ್ಕೆ ಅವಕಾಶವನ್ನು ಕಲ್ಪಿಸಲಾಗಿದೆ? ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ರಾಷ್ಟ್ರದ ಪರಮಾಧಿಕಾರವನ್ನು ಕೇಂದ್ರ ಸರ್ಕಾರ ಉಳಿಸಿಕೊಳ್ಳಬೇಕೆಂಬ ಸಂವಿಧಾನದ ನಿಯಮವನ್ನೇ ಈಗ ಮೀರಬೇಕೆಂಬುದು ನಿಮ್ಮ ಪತ್ರದ ಸಾರವೇ?

ಇಂತಹ ಸಂದಿಗ್ಧ ಸಂದರ್ಭದಲ್ಲಿ ಸರ್ಕಾರಕ್ಕೆ ಸಲಹೆ, ಸೂಚನೆ ನೀಡಲು, ಸರ್ವಪಕ್ಷ ಸಭೆ ಕರೆಯಲು, ಸಮಿತಿ ರಚಿಸಲು ಆಗ್ರಹಿಸುವ ಸ್ಪಷ್ಟ ಅಧಿಕಾರಿ ಭಾರತೀಯ ಪ್ರಜೆಗಳಾದ ನಿಮಗೆ ಇದ್ದೇ ಇದೆ. ಆದರೆ ಪರಕೀಯ ಪರಿಕಲ್ಪನೆ ಹಾಗೂ ಸಂವಿಧಾನ ಬಾಹಿರ ರಾಷ್ಟ್ರೀಯ ಸರ್ಕಾರ ರಚನೆ ಆಗ್ರಹಿಸುವ ಅಧಿಕಾರ ಕೊಟ್ಟವರು ಯಾರು?

**ನಿರ್ವಹಣೆಯಲ್ಲಿ ಲೋಪವಿರಬಹುದು:** ನೀವು ಅವಕಾಶವೇ ಇಲ್ಲದ ರಾಷ್ಟ್ರೀಯ ಸರ್ಕಾರದ ರಚನೆಗೆ ಆಗ್ರಹಿಸಿದ ಕೂಡಲೇ ಅದನ್ನು ಪ್ರಜ್ಞಾವಂತ ಸಮಾಜ ಗಂಭೀರವಾಗಿ ತೆಗೆದಕೊಳ್ಳುವುದಿಲ್ಲ ದಿಟವೇ. ಆದಾಗ್ಯೂ ಅಂಬೇಡ್ಕರ್ ಕೊಟ್ಟ ಹಕ್ಕಿನ ಅನ್ವಯ ನಿಮ್ಮನ್ನು ದಿಕ್ಕರಿಸುವ ಬಹುಪಾಲು ನಾಗರಿಕ ಸಮಾಜ ಜಾಗೃತವಾಗಿದೆ ಎಂಬುದನ್ನು ತಿಳಯಪಡಿಸುವ ಸಲುವಾಗಿ ಲೇಖನವನ್ನು ಪರಾಮರ್ಶಿಸಿಸುವ ಜರೂರು ಸೃಷ್ಟಿಯಾಯಿತು ಸರ್ಕಾರ ಕೊರೋನಾ ಕಾಲಘಟ್ಟದಲ್ಲಿ ಎಲ್ಲ ಆಯಾಮಗಳನ್ನು ವೈಫಲ್ಯಗಳಿಲ್ಲದೆ ನಿರ್ವಹಿಸಿದೆ ಎಂದು ಸಾಬೀತುಪಡಿಸುವುದು ಅಥವಾ ಸಮರ್ಥನೆ ಮಾಡಿಕೊಳ್ಳುವುದು ಸತ್ ನಡಾವಳಿಯಲ್ಲ. ಆದರೆ, 130 ಕೋಟಿಗೂ ಅಧಿಕ ಜನಸಂಖ್ಯೆ ಇರುವ, 87 ಪ್ರಧಾನಮಂತ್ರಿಗಳ ಆಡಳಿತವನ್ನು ಸಮೀಕರಿಸಬಹುದಾದ ನಾಡಿನಲ್ಲಿ, ನಿರ್ವಹಣೆಯ ಸಂದರ್ಭದಲ್ಲಿ ಲೋಪವಿರಬಹುದು. ಆ ಬಗ್ಗೆ ಎಚ್ಚರಿಸುವ ಹಾಗೂ ಸರ್ಕಾರದ ಬೆನ್ನಿಗೆ ನಿಲ್ಲುವ ಸಂಕಲ್ಪ ಭಾರತೀಯರದ್ದಾಗಬೇಕು.

**ಲೇಖಕರು:– ಡಾ. ಸುಧಾಕರ ಹೊಸಳ್ಳಿ**
**ಸಂವಿಧಾನ ವಿಶೇಷಕ**
ಆಧಾರ: ಕನ್ನಡಪ್ರಭ, ದಿನಾಂಕ:28.05.2021.

## 6. ಇದು ಕೆಸರೆರಚಾಟದ ಸಮಯ ಅಲ್ಲ

ಕಳೆದ ಒಂದು ವರ್ಷದಿಂದ ಇಡೀ ವಿಶ್ವವೇ ಕೋವಿಡ್ ಸಾಂಕ್ರಾಮಿಕ ಮಹಾಮಾರಿಯೊಂದಿಗೆ ಹೊರಾಡುತ್ತಿದೆ. ಭಾರತವನ್ನು ಒಳಗೊಂಡಂತೆ ವಿಶ್ವದ ಮುಂದುವರೆದ ಮತ್ತು ಬಲಿಷ್ಠ ರಾಷ್ಟ್ರಗಳು ಕೊರೋನಾ ವಿರುದ್ಧ ಹೋರಾಡುತ್ತಿವೆ. ಕಳೆದ ಬಾರಿ ಸೋಂಕಿನ ಮೊದಲನೇ ಅಲೆ ಬೀಸಿದ್ದ ಸಂದರ್ಭದಲ್ಲಿ ನಮ್ಮ ರಾಷ್ಟ್ರವು ಪರಿಸ್ಥಿತಿಯನ್ನು ಸಮರ್ಥವಾಗಿ ನಿರ್ವಹಿಸುವ ಮೂಲಕ ವಿಶ್ವದಾದ್ಯಂತ ಪ್ರಶಂಸೆಗೆ ಪಾತ್ರವಾಗಿತ್ತು. ವಿದೇಶದಲ್ಲಿ ಸಿಲುಕಿದ್ದ ಭಾರತಿಯರನ್ನು ಹಿಂದಕ್ಕೆ ಕರೆಸಿಕೊಳ್ಳುವ ಪ್ರಕ್ರಿಯೆಯಿಂದ ಪ್ರಾರಂಭಿಸಿ ಸೋಂಕಿನಿಂದ ಹೆಚ್ಚು ಬಾಧಿಸಲ್ಪಟ್ಟ ರಾಷ್ಟ್ರಗಳಿಗೆ ಸಹಾಯ ಹಸ್ತ ಚಾಚುವ ಮೂಲಕ ಭಾರತವು ತನ್ನ 'ವಸುದೈವ ಕುಟುಂಬಕಂ' ಎಂಬ ಸಿದ್ಧಾಂತವನ್ನು ಕೃತಿಯ ಮೂಲಕವೂ ತೋರಿಸಿತ್ತು. ಇವೆಲ್ಲದರ ನಡುವೆ ನಮ್ಮ ದೇಶದ ಎರಡು ಸಂಸ್ಥೆಗಳು ಕೋವಿಡ್ ಸೋಂಕಿಗೆ ಯಶಸ್ವಿಯಾಗಿ ಲಸಿಕೆಗಳನ್ನು ಕಂಡು ಹಿಡಿದಿವೆ.

**ವಿಪಕ್ಷಗಳ ಕೆಲಸ ಏನು:** ಪ್ರತಿಯೊಂದು ಪ್ರಜಾಪ್ರಭುತ್ವ ರಾಷ್ಟ್ರವು ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳನ್ನು ಹೊಂದಿರುವುದು ಸಾಮಾನ್ಯ. ಬಹುತೇಕ ಎರಡು ಪಕ್ಷಗಳ ಸಿದ್ಧಾಂತಗಳು ಭಿನ್ನವಾಗಿರುತ್ತವೆ. ಅಂದರೆ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳು ಸೈದ್ಧಾಂತಿಕವಾಗಿ ಉತ್ತರ–ದಕ್ಷಿಣದಂತೆ ಸಂಪೂರ್ಣ ಭಿನ್ನ ಸಿದ್ಧಾಂತ ಹೊಂದಿರುವುದು ಕೂಡ ಸಾಧಾರಣ ವಿಚಾರ. ಆಡಳಿತ ಪಕ್ಷ ನಿರ್ಧಾರಗಳನ್ನು ತೆಗೆದುಕೊಳ್ಳುವ ಸಂದರ್ಭದಲ್ಲಿ ಎಡವಿದರೆ, ಎಚ್ಚರಿಸುವುದು ವಿರೋಧ ಪಕ್ಷದ ಕೆಲಸ ಎಂಬುದು

ಜನಪ್ರತಿನಿಧಿಗಳಾಗಿ ನಾವು ಒಪ್ಪತಕ್ಕ ವಿಚಾರ. ಆದರೆ ಆಡಳಿತ ಪಕ್ಷದೊಂದಿಗಿನ ಸೈದ್ಧಾಂತಿಕ ವಿರೋಧಕ್ಕಾಗಿ ನಮ್ಮನ್ನು ಆರಿಸಿ ಕಳುಹಿಸಿದ ಪ್ರಜೆಗಳ ಹಿತವನ್ನೇ ಕಡೆಗಣಿಸುವುದನ್ನು ಒಪ್ಪಲು ಸಾಧ್ಯವೇ? ಕೇಂದ್ರ ಸರ್ಕಾರವು ಯಾವುದೇ ರೀತಿಯ ಜನಾನುರಾಗಿ ಮತ್ತು ಅಭಿವೃದ್ಧಿ ಕೇಂದ್ರಿತ ಯೋಜನೆಗಳನ್ನು ತಂದಾಗಲು ಪ್ರತಿಯೊಂದು ವಿರೋಧ ಪಕ್ಷವು ಯೋಜನೆಗಳ ಕುರಿತಾಗಿ ಸಾಮಾನ್ಯ ಜನರ ಮನದಲ್ಲಿ ಗೊಂದಲವನ್ನು ಮೂಡಿಸುವಂತಹ ಹೇಳಿಕೆಗಳನ್ನು ನೀಡಿ ಜನಸಾಮಾನ್ಯರನ್ನು ಹಾದಿ ತಪ್ಪಿಸಿದ ವಿಚಾರಗಳು ನಮಗೆಲ್ಲರಿಗೂ ತಿಳಿದೇ ಇದೆ. ಆದರೆ ಇಂದು ದೇಶವು ಕೊರೋನಾದ ಸಂಕಷ್ಟದಲ್ಲಿರುವಾಗಲು ಇಂತಹ ರಾಜಕೀಯ ಕೆಸರೆರಚಾಟದ ಅವಶ್ಯಕತೆ ಇದೆಯೇ?

ಕೊರೋನಾ ಮೊದಲನೇ ಅಲೆ ದೇಶದಲ್ಲಿ ಕಂಡುಬಂದ ತಕ್ಷಣವೇ ಕೇಂದ್ರ ಸರ್ಕಾರ ಅನೇಕ ಮುನ್ನೆಚ್ಚರಿಕೆಯ ಕಾರ್ಯಗಳನ್ನು ಕೈಗೊಂಡಿತ್ತು. ಪ್ರತಿಯೊಂದು ಇಲಾಖೆಯು ಕಾರ್ಯೋನ್ಮುಖವಾಯಿತು. ಕೆಲವೇ ತಿಂಗಳಲ್ಲಿ ಲಸಿಕೆಯು ಸಿದ್ಧವಾಯಿತು. ಲಸಿಕೆಗಳು ಜನಸಾಮಾನ್ಯರಿಗೆ ಲಭ್ಯವಾಗುವಂತೆ ಯೋಜನೆಯು ಜಾರಿಗೆ ಬಂದಿತು. ಲಸಿಕೆಯನ್ನು ಯಾವುದೇ ಜಾತಿ, ಮತ, ಸಿದ್ಧಾಂತಗಳ ಮೀಸಲಾತಿಯ ಪ್ರಕಾರ ವಿತರಣೆ ಮಾಡುತ್ತಿಲ್ಲ. ಬದಲಾಗಿ ಮೊದಲಿಗೆ ಆರೋಗ್ಯ ಕ್ಷೇತ್ರದ ಯೋಧರಾದ ವೈದ್ಯರು, ದಾದಿಯರಿಗೆ, ಮುಂಚೂಣಿ ಕಾರ್ಯಕರ್ತರಿಗೆ ನೀಡಲಾಯಿತು. ಬಳಿಕ 2ನೇ ಹಂತದಲ್ಲಿ ಕೊರೋನಾದಿಂದ ಹೆಚ್ಚಿನ ತೊಂದರೆ ಉಂಟಾಗುವ ಸಾಧ್ಯತೆ ಇರುವ ಹಿರಿಯ ವಯೋಮಾನದ ಸಾರ್ವಜನಿಕರಿಗೆ ನೀಡಲಾಯಿತು. ಇಲ್ಲಿ ಗಮನಿಸಬೇಕಾದ ಪ್ರಮುಖ ಅಂಶವೊಂದಿದೆ, ದೇಶದ ಪ್ರಧಾನ ಸೇವಕರಾದ ಮೋದಿ ಸಹ ತಮ್ಮ ಸರದಿ ಬಂದಾಗ ಸಾಮಾನ್ಯರಂತೆ ಲಸಿಕೆ ನೀಡಲಾಗುವ ಸ್ಥಳಕ್ಕೆ ಹೋಗಿ ಲಸಿಕೆ ಪಡೆದುಕೊಂಡರು.

**ಲಸಿಕೆ ಬಗ್ಗೆ ಅಪಪ್ರಚಾರ:** 'ಒಲ್ಲದ ಗಂಡನಿಗೆ ಮೊಸರಿನಲ್ಲೂ ಕಲ್ಲು' ಎಂಬಂತೆ ವಿರೋಧ ಪಕ್ಷದ ನಾಯಕರು ಲಸಿಕೆಯ ವಿಚಾರದಲ್ಲೂ ರಾಜಕೀಯ ಪ್ರಾರಂಭಿಸಿದರು. ಮೊದಲಿಗೆ ಲಸಿಕೆಯ ಮೇಲೆ ನಂಬಿಕೆಯಿಲ್ಲ ಎನ್ನುವ ಬಾಲಿಶ ಹೇಳಿಕೆ ನೀಡಲಾಯಿತು. ಲಸಿಕೆ ತಯಾರಿಸಿದ ಶ್ರೇಯಸ್ಸು ವಿಜ್ಞಾನಿಗಳಿಗೆ ಸಲ್ಲಬೇಕಾದದ್ದೇ ಹೊರತು ಅದು ಯಾವುದೇ ಪಕ್ಷಕ್ಕೆ ಸೀಮಿತವಾದ ಲಸಿಕೆಯಲ್ಲ ಎಂಬುದನ್ನು ಮರೆತದ್ದೂ ಖಂಡನೀಯ. ಆನಂತರದಲ್ಲಿ ಇನ್ನು ಒಂದು ಹೆಜ್ಜೆ ಮುಂದುವರೆದು ವಿರೋಧ ಪಕ್ಷವು ಲಸಿಕೆಯ ಕುರಿತಾಗಿ ಅಪಪ್ರಚಾರ ನಡೆಸಲು ಪ್ರಾರಂಭಿಸಿತು, ಅವುಗಳಲ್ಲಿ ಪ್ರಮುಖವಾದ ಸುಳ್ಳು ಲಸಿಕೆಯನ್ನು ಪಡೆಯುವುದರಿಂದ ಸಂತಾನೋತ್ಪತ್ತಿ ಶಕ್ತಿ ಕುಂಠಿತವಾಗುತ್ತದೆ' ಎಂಬುದು. ಈ ರೀತಿಯ ಸುಳ್ಳುಗಳನ್ನು ವ್ಯವಸ್ಥಿತವಾಗಿ ಹರಡಲು ಪ್ರಾರಂಭಿಸಿದ ಬಳಿಕ, ಲಸಿಕೆಯ ಕುರಿತಾಗಿಯೇ ಅಪನಂಬಿಕೆಯಿದೆ. ಆದ್ದರಿಂದ ಅಪನಂಬಿಕೆಯನ್ನು ಹೋಗಲಾಡಿಸಲು ಪ್ರಧಾನಿಯೇ ಮೊದಲು ಲಸಿಕೆ ಪಡೆಯಲಿ' ಎಂಬಂಥ ಅಪ್ರಬುದ್ಧ ಹೇಳಿಕೆಗಳನ್ನು ನೀಡಲಾಯಿತು. ಇವೆಲ್ಲದರ ಪರಿಣಾಮವಾಗಿ ಅನೇಕರು ಲಸಿಕೆ ಪಡೆಯಬೇಕೆ ಬೇಡವೇ ಎಂಬ ಗೊಂದಲಕ್ಕೆ ಬಿದ್ದರು. ಆದರೆ ಲಸಿಕೆಯ ಕುರಿತಾಗಿ ಸುಳ್ಳನ್ನು ಹರಡಿದ ಪ್ರಭಾವಿ ನಾಯಕರು ಸ್ವತಃ ಲಸಿಕೆ ಪಡೆದಿದ್ದಾರೆ ಎಂಬ ವಿಚಾರವು ನಿಧಾನವಾಗಿ ಹೊರಬಿದ್ದಿದೆ.

**ರಾಜಕೀಯವೇ ಮುಖ್ಯವೇ:** ಇಂಥ ಸಂಕಷ್ಟದ ಸಂದರ್ಭದಲ್ಲಿ ತಮ್ಮನ್ನು ಆರಿಸಿ ಕಳುಹಿಸಿದ ಮತದಾರರ ಯೋಗಕ್ಷೇಮಕ್ಕಿಂತಲೂ ರಾಜಕೀಯ ಮತ್ತು ಅಧಿಕಾರವೇ ಮುಖ್ಯವಾಗಿ ಕಾಣಿಸುತ್ತಿರುವುದು ಅಮಾನವೀಯತೆಯಲ್ಲವೇ? ತಾವು ಮುಂಜಾಗರೂಕತೆಯಿಂದ ಲಸಿಕೆ ಪಡೆದು, ಮತದಾರರಲ್ಲಿ ಗೊಂದಲ ಮೂಡಿಸಿ, ಲಸಿಕೆಯ ಕುರಿತಾಗಿ ಭಯ ಹುಟ್ಟಿಸಿ, ಲಸಿಕೆ ಪಡೆಯದಂತೆ ಪ್ರೇರೇಪಿಸುವುದು ಕಂಡವರ ಮಕ್ಕಳನ್ನು ಬಾವಿಗೆ ತಳ್ಳಿ ಆಳ ಅರಿಯುವ ಮನಸ್ಥಿತಿಯಲ್ಲವೇ? ದೇಶವೇ ಸಂಕಷ್ಟದಲ್ಲಿರುವ ಸಂದರ್ಭದಲ್ಲಿ ವಿರೋಧ ಪಕ್ಷಗಳು ಆಡಳಿತ ಪಕ್ಷದೊಂದಿಗೆ ಕೈಜೋಡಿಸಬೇಕಾದ ಅವಶ್ಯಕತೆ ಖಂಡಿತ ಇದೆ. ಸಂಸದರು, ಶಾಸಕರು ತಾವು ಆಯ್ಕೆಯಾದ ಕ್ಷೇತ್ರದಲ್ಲಿ ತಮ್ಮ ಜನರಲ್ಲಿ ಲಸಿಕೆಯ ಕುರಿತಾಗಿ ಜಾಗೃತಿ ಮೂಡಿಸುವುದನ್ನು ತಮ್ಮ ಆದ್ಯತೆಯನ್ನಾಗಿಸಬೇಕಾಗಿತ್ತು.

**ಜನರಿಗೆ ಈಗೇನು ಬೇಕಿದೆ:** ಇತ್ತೀಚಿಗೆ ಆಡಳಿತ ಪಕ್ಷದ ಸಂಸದರೊಬ್ಬರು ಬೆಂಗಳೂರಿನಲ್ಲಿ ನಡೆಯುತ್ತಿದ್ದ ಆಸ್ಪತ್ರೆಯ ಹಾಸಿಗೆ ಕೊರತೆಯ ಕುರಿತಂತೆ ನಡೆಯುತ್ತಿದ್ದ ಅವ್ಯವಹಾರವನ್ನು ಬಯಲಿಗೆಳೆದರು. ಆದರೆ ತಾವು ಜಾತ್ಯತೀತರು ಎಂದು ಹೇಳಿಕೊಳ್ಳುವ ವಿರೋಧ ಪಕ್ಷದ ಧುರೀಣರು

ಹಗರಣದ ವಿಚಾರವನ್ನೇ ಸಂಪೂರ್ಣವಾಗಿ ಕಡೆಗಣಿಸಿ, ಆರೋಪಿಗಳ ಜಾತಿಯನ್ನೇ ಗುರಾಣಿಯನ್ನಾಗಿ ಬಳಸಿಕೊಂಡು ಹೇಳಿಕೆಗಳನ್ನು ನೀಡಿದ್ದು ನಮ್ಮೆಲ್ಲರಿಗೂ ತಿಳಿದಿದೆ. ಆರೋಪಿತರೆಲ್ಲರೂ ನಮ್ಮ ಸ್ನೇಹಿತರು, ಬಂಧುಗಳು, ಅವರನ್ನು ಸಿಲುಕಿಸುವ ಷಡ್ಯಂತ್ರ ನಡೆಯುತ್ತಿದೆ ಎನ್ನುವ ಮೂಲಕ ಸಂಪೂರ್ಣ ವಿಚಾರವನ್ನೇ ಇನ್ನೊಂದು ದಿಕ್ಕಿಗೆ ಕೊಂಡೊಯ್ದರು. ಒಂದು ಮತ ಅಥವಾ ಜಾತಿಯವರು ಮಾತ್ರ ಬಂಧುಗಳೇ? ಹಾಗಾದರೆ ಚಿಕಿತ್ಸೆಗಾಗಿ ಹಾಸಿಗೆ ಸಿಗದೇ ಒದ್ದಾಡಿ ಪ್ರಾಣ ಕಳೆದುಕೊಂಡ ಸಾಮಾನ್ಯ ಜನರು ಮತ್ತವರ ಕುಟುಂಬದವರೇನು? ತನ್ನ ಸರ್ವಸ್ವವೇ ಆಗಿದ್ದ ವ್ಯಕ್ತಿಯನ್ನು ಕಳೆದು ಕೊಂಡ ಕುಟುಂಬಕ್ಕೆ ಬೇಕಿರುವುದು ರಾಜಕೀಯದ ಬಣ್ಣದ ಮಾತುಗಳಲ್ಲ, ಸೌಹಾರ್ದತೆಯ ಪಾಠವಲ್ಲ. ಬದಲಾಗಿ ಆತ್ಮಸ್ಥೈರ್ಯ, ಸಾಂತ್ವನ ಎಂಬ ಅರಿವು ಜನಪ್ರತಿನಿಧಿಗಳಿಗೆ ಇಲ್ಲವೇ? ಸೋಂಕಿತರಿಗೆ ಸಿಗಬೇಕಾದ್ದು ಮನೋಬಲ ಮತ್ತು ಚಿಕಿತ್ಸೆ. ಇಂದು ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿದರುವುದು ಆಡಳಿತ ಪಕ್ಷದ ಸಾಮಾನ್ಯ ಕಾರ್ಯಕರ್ತರು ಮಾತ್ರ. ಆದರೆ, ವಿರೋಧ ಪಕ್ಷದ ಮುಖ್ಯ ಕಾರ್ಯವು ಇದೇ ಆಗಿರಬೇಕಿತ್ತಲ್ಲವೇ?

**ಅಪ್ರಬುದ್ಧ ವಿಪಕ್ಷಗಳು:** ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ಪಕ್ಷದ ವಿರುದ್ಧ ನಿಮ್ಮ ವಿರೋಧವೇನೇ ಇದ್ದರು ರಾಜ್ಯ ಸರ್ಕಾರಗಳು ಈ ಸಂದರ್ಭದಲ್ಲಿ ಅದನ್ನು ಬದಿಗೊತ್ತಿ ಜನರಿಗಾಗಿ ಕಾರ್ಯನಿರ್ವಹಿಸಬೇಕು. ಆದರೆ ವಿರೋಧ ಪಕ್ಷದ ನಾಯಕರು ಅದೆಷ್ಟು ಅಪ್ರಬುದ್ಧವಾಗಿ ವರ್ತಿಸುತ್ತಿದ್ದಾರೆ ಎಂದು ನಾವೆಲ್ಲ ನೋಡುತ್ತಿದ್ದೇವೆ. ರಾಜ್ಯವೊಂದರ ಮುಖ್ಯಮಂತ್ರಿ, ಪ್ರಧಾನ ಮಂತ್ರಿಗಳ ಪಿಎಂ ಕೇರ್ಸ್ ನಿಧಿಯಿಂದ ನೀಡಲಾದ ವೆಂಟಿಲೇಟರ್‌ಗಳನ್ನು ಕೆಲವು ರಾಜ್ಯಗಳು ಉಪಯೋಗಿಸದೆ ವ್ಯರ್ಥವಾಗಿಸುತ್ತಿವೆ. ನಮ್ಮ ರಾಜ್ಯದಲ್ಲಿ ಲಸಿಕೆ ಖರೀದಿಗಾಗಿ ನಾವು 100 ಕೋಟಿ ರೂಪಾಯಿ ನೀಡುತ್ತೇವೆ ಎಂದು ನಾಯಕರು ಹಣ ಬಿಡುಗಡೆ ಮಾಡುವಂತೆ ಸರ್ಕಾರಕ್ಕೆ ಪತ್ರ ಬರೆಯುತ್ತಾರೆ. ದೇಶದ ಪ್ರಮುಖ ವಿರೋಧ ಪಕ್ಷವೊಂದರ ಪ್ರಥಮ ಮಹಿಳೆ ಕೇಂದ್ರ ಸರ್ಕಾರ ಲಸಿಕೆ ನೀಡಬೇಕೆಂದು ಹೇಳಿಕೆ ನೀಡಿದರೆ, ಅದೇ ಪಕ್ಷದ ಅಧ್ಯಕ್ಷರು ಲಸಿಕೆಯ ವಿಚಾರದಲ್ಲಿ ರಾಜ್ಯ ಸರ್ಕಾರಗಳು ಹೆಚ್ಚಿನ ಅಧಿಕಾರ ಹೊಂದಬೇಕೆಂದು ಹೇಳಿಕೆ ನೀಡುತ್ತಾರೆ. ಇದರ ಅರ್ಥವೇನು? ಯಾವುದೇ ವಿಚಾರದ ಕುರಿತಾಗಿ ಸ್ಪಷ್ಟತೆ ಇಲ್ಲದೆಯೇ ರಾಜಕೀಯ ದುರುದ್ದೇಶ ಪೂರ್ವಕ ಹೇಳಿಕೆಗಳನ್ನು ನೀಡುತ್ತಾ ಜನರಲ್ಲಿ ಗೊಂದಲವನ್ನು ಮೂಡಿಸುತ್ತಿದ್ದಾರೆ ಎಂದೇ ಅಲ್ಲವೇ?

**ಜನರ ಯೋಗಕ್ಷೇಮವೇ ಮುಖ್ಯ:** ಅಧಿಕಾರ, ಪದವಿ ಇಂದು ಇರುತ್ತದೆ, ನಾಳೆ ಹೋಗುತ್ತದೆ ಅಥವಾ ಇಂದು ಇರದಿದ್ದರೆ ನಾಳೆ ಗಳಿಸಬಹುದು. ಆದರೆ ಜನರ ಪ್ರಾಣ ಹಾಗಲ್ಲ. ಒಂದು ಬಾರಿ ಹೋದ ಜೀವ ಹಿಂತಿರುಗಿ ಬಾರದು ಎಂಬ ಕನಿಷ್ಠ ಜ್ಞಾನವನ್ನು ಪ್ರತಿಯೊಬ್ಬ ಮನುಷ್ಯನು ಹೊಂದಿರಬೇಕು. ತನ್ನ ಜನರನ್ನು ಸುರಕ್ಷಿತವಾಗಿರಿಸುವುದು ಜನ ಪ್ರತಿನಿಧಿಯೊಬ್ಬನ ಆದ್ಯತೆಯಾಗಿರಬೇಕೇ ಹೊರತು ರಾಜಕೀಯವಲ್ಲ. ಜನರು ಕ್ಷೇಮವಾಗಿ ಉಳಿದರಷ್ಟೇ ಅಲ್ಲವೇ ಚುನಾವಣೆ, ಗೆಲುವು ಸೋಲು, ಅಧಿಕಾರ ಎಲ್ಲವೂ. ಆದ್ದರಿಂದ ವಿರೋಧ ಪಕ್ಷದ ನಾಯಕರು ಅಪ್ರಬುದ್ಧರಂತೆ ಬಾಲಿಶ ಹೇಳಿಕೆಗಳನ್ನು ನೀಡುವುದರ ಮೂಲಕ ಜನರಲ್ಲಿ ಗೊಂದಲ ಮೂಡಿಸುವ ಬದಲಾಗಿ, ಆಡಳಿತ ಪಕ್ಷದೊಂದಿಗೆ ಕೊರೋನಾ ವಿರುದ್ಧದ ಹೋರಾಟಕ್ಕೆ ಕೈಜೋಡಿಸಬೇಕು. ತಮ್ಮ ಕ್ಷೇತ್ರದ ಜನತೆಯ ಕುಂದು ಕೊರತೆಗಳನ್ನು ನೀಗಿಸುವತ್ತ ಕಾರ್ಯಪ್ರವೃತ್ತರಾಗಬೇಕು ಎಂಬ ಮತದಾರನ ಅಭಿಲಾಷೆಯನ್ನು ಜನಪ್ರತಿನಿಧಿಗಳಾದ ನಾವು ಅರ್ಥೈಸಿಕೊಂಡು ಕಾರ್ಯ ಪ್ರವೃತ್ತರಾಗೋಣ. ರಾಜಕೀಯ ನಡೆಸಲು ಮುಂದೆ ಸಾಕಷ್ಟು ಸಮಯವಿದೆ ಅಲ್ಲವೇ

**ಲೇಖಕರು:– ಪಿ. ಮುನಿರಾಜುಗೌಡ (ತುಳಸಿ)**
**ಎಂ.ಎಲ್.ಸಿ, ರಾಜ್ಯ ಬಿಜೆಪಿ ಕಾರ್ಯದರ್ಶಿ**
ಆಧಾರ: ಕನ್ನಡಪ್ರಭ, ದಿನಾಂಕ:25.05.2021.

## 7. ಫೋನ್ ಕದ್ದಾಲಿಕೆ ಭೂತ ರಾಜಕೀಯದ ಪ್ರೇತ

ದೂರವಾಣಿ ಕದ್ದಾಲಿಕೆ ಪ್ರವೃತ್ತಿ ಈಗಿನ ಮಟ್ಟಿಗೆ ಒಂದು ವೃತ್ತಿ. ಏಕೆಂದರೆ, ತಂತ್ರಜ್ಞಾನದ ಪ್ರಯೋಗಶಾಲೆಯಲ್ಲಿ ನಾನಾ ನಮೂನೆಯ ಸೌಲಭ್ಯಗಳು ಸುಲಭವಾಗಿ ದೊರಕುವಾಗ ದೂರವಾಣಿ ಕದ್ದಾಲಿಸಲು ಸರ್ಕಾರದ ಅಭ್ಯಂತರ ಯಾವುದೇ ರೀತಿಯಲ್ಲೂ ಕಳ್ಳ ಕೇಳುಗರಿಗೆ ನಿರ್ಬಂಧ ಹೇರಲಾಗದು. ಇದು ಮುಕ್ತ ಸಮಾಜ ಹಾಗೂ ಜಾಗತಿಕ ಗ್ರಾಮ ಎಂದು ಪರಿಭಾವಿಸಲಾಗಿರುವ ಆಧುನಿಕ ಜಗತ್ತಿನ ಮಹಿಮೆ. ಒಂದು ಕಾಲದಲ್ಲಿ ಸ್ಥಿರ ದೂರವಾಣಿಯೇ ದೂರಸಂಪರ್ಕದ ಏಕೈಕ ಮಾರ್ಗವಾಗಿದ್ದಾಗ ಸರ್ಕಾರದ ಅನುಮತಿಯ ಮೂಲಕವೇ ಇಲ್ಲವೇ ಸರ್ಕಾರದವರೇ ಅನುಮತಿ ಇಲ್ಲದಿದ್ದರೂ ಕದ್ದುಮುಚ್ಚಿ ಕೇಳಲು ಅವಕಾಶ ದೊರಕುತ್ತಿತ್ತು. ಇದರ ಪರಿಣಾಮ ಏನಾಯಿತು – ಏನ್ನಿಲ್ಲ ಎಂಬುದಕ್ಕೆ ಕರ್ನಾಟಕ ಬಹುಶ: ಜಗತ್ತಿಗೆ ಒಂದು ಎಚ್ಚರಿಕೆಯ ಗಂಟೆಯಾಗಿ ಹೊರಹೊಮ್ಮಿದ್ದನ್ನು ಮರೆಯುವಂತಿಲ್ಲ.

ಕದ್ದಾಲಿಕೆ ಪ್ರಕರಣಕ್ಕೆ ಮರುಜೀವ ಬರಲು ಬಿಜೆಪಿಯ ಶಾಸಕ ಅರವಿಂದ ಬೆಲ್ಲದ ಬಹಿರಂಗವಾಗಿ ಮಾಡಿರುವ ಆರೋಪವೇ ಪ್ರೇರಣೆ. ಕಳೆದ ಒಂದು ತಿಂಗಳಿನಿಂದ ನನ್ನ ದೂರವಾಣಿ ಕದ್ದಾಲಿಸಲಾಗುತ್ತಿದೆ ಎಂಬುದಕ್ಕೆ ನನ್ನ ಬಳಿ ಸಾಕಷ್ಟು ಪುರಾವೆಗಳಿವೆ. ನಾನು ಎಲ್ಲಿ ಹೋಗುತ್ತೇನೆ ಎಂಬ ಸಂಗತಿ ಮುಖ್ಯಮಂತ್ರಿಗಳು ಹಾಗೂ ಅವರ ಆಪ್ತರಿಗೆ ಮೊದಲೇ ಸಿಕ್ಕುವುದು ಕದ್ದಾಲಿಕೆಯಿಂದಲೇ ಎಂಬುದು ನನಗೆ ಖಾತರಿಯಾಗಿದೆ ಎಂಬ ಆರೋಪವನ್ನು ನೇರವಾಗಿ ಮಾಡಿ ನಾನಾ ಅಕ್ರಮಗಳಿಗಾಗಿ ಜೈಲು ವಾಸಿಯಾಗಿರುವ ಯುವರಾಜ ಎಂಬ ನಾಮಧೇಯದ ಒಂದು ಕಾಲದ ಮಠಾಧೀಶರಾಗಿದ್ದವರು ಜೈಲಿನಿಂದ ದೂರವಾಣಿ ಮಾಡಿದ ಅನುಭವವನ್ನು ಹಂಚಿಕೊಂಡಿರುವುದು ನಿಜಕ್ಕೂ ಎಲ್ಲರೂ ಕಣ್ತೆರೆದು ನೋಡಬೇಕಾದ ಸಂಗತಿ.

ಈಗಿನ ಕಾಲದಲ್ಲಿ ಸ್ಥಿರ ದೂರವಾಣಿಯ ಮೇಲೆ ಆಧರಿಸಿದವರ ಸಂಖ್ಯೆ ಬೆರಳೆಣಿಕೆಯಷ್ಟು. ಅದೊಂದು ರೀತಿಯಲ್ಲಿ ಅಲಂಕಾರದ ಗೊಂಬೆ. ಈಗೇನಿದ್ದರೂ ಮೊಬೈಲ್‌ಗಳ ಕಾಲ. ತಂತ್ರಜ್ಞಾನಕ್ಕೆ ಅನುಗುಣವಾಗಿ ನಾನಾ ಕಂಪನಿಗಳ ಮೊಬೈಲ್ ಸೇವೆ ಸರ್ವಾಂತರ್ಯಾಮಿಯಂತೆ ದೊರಕುತ್ತಿರುವಾಗ ಮೊಬೈಲ್ ಇದ್ದವರೆಲ್ಲ ಸರ್ವಶಕ್ತರಾಗಿ ಸರ್ವಾಧಿಕಾರಿಯಂತೆ ಮೆರೆಯುತ್ತಿದ್ದಾರೆ ಎಂದು ಹೇಳಲು ಕಾರಣಗಳು ಸಾಕಷ್ಟು. ಮೊಬೈಲ್ ಫೋನ್‌ಗಳನ್ನು ಕದ್ದಾಲಿಸಲು ಅಧಿಕೃತವಾಗಿ ಸರ್ಕಾರದ ಪೂರ್ವಾನುಮತಿ ಅಗತ್ಯ ಎಂಬುದೇನೋ ನಿಜ. ಆದರೆ, ಮನಸ್ಸು ಮಾಡಿದರೆ, ಅಥವಾ ಮೊಬೈಲ್ ಕಂಪನಿಗಳು ಮನಸ್ಸು ಮಾಡುವಂತೆ ಪ್ರೇರಣೆ ನೀಡಿದರೆ ಗ್ರಾಹಕರ ದೂರವಾಣಿಯನ್ನು ಆಲಿಸುವುದಷ್ಟೆ ಅಲ್ಲ ಧ್ವನಿ ಮುದ್ರಿಸಿಕೊಳ್ಳಲೂ ಕೂಡಾ ಮುಕ್ತ ಅವಕಾಶ. ಈ ಸಾಮಾಜಿಕ ಮಾಧ್ಯಮಗಳ ಭರಾಟೆಯ ಕಾಲದಲ್ಲಂತೂ ಮಾತಾಡಿದ್ದನ್ನು ನೋಡುವ ಅವಕಾಶವೂ ಮೊಬೈಲ್‌ನಲ್ಲಿದೆ. ಹೀಗಾಗಿ ದೂರವಾಣಿ ಕದ್ದಾಲಿಕೆ ಎಂಬುದು ವಿಡಂಬನಾತ್ಮಕವಾಗಿ ಹೇಳುವುದಾದರೆ ಭೂತಚೇಷ್ಟೆ ಮಾತ್ರ.

ಅರವಿಂದ್ ಬೆಲ್ಲದ ಭಿನ್ನಮತೀಯ ಶಾಸಕರಾಗಿ ಅದಕ್ಕಿಂತಲೂ ಮಿಗಿಲಾಗಿ ಮುಖ್ಯಮಂತ್ರಿ ಯಡಿಯೂರಪ್ಪ ಅವರ ಪರ್ಯಾಯ ನಾಯಕನಾಗಿ ಗುರುತಿಸಿಕೊಳ್ಳುತ್ತಿರುವ ಉದಯೋನ್ಮುಖ ನಾಯಕ. ಇಂತಹ ಹೊಸ ಮುಖಗಳಿಗೆ ತಂತ್ರಜ್ಞಾನದ ಹಳೆಯ ಮುಖಗಳ ಜೊತೆಗೆ ಅದರ ನವೀನ ಮಾರ್ಗಗಳು ಕರತಲಾತ್ಮಲಕ. ಬೆಲ್ಲದ್ ಹೇಳಿ ಕೇಳಿ ಎಂಜಿನಿಯರಿಂಗ್ ಪದವೀಧರ. ಸಾಕಷ್ಟು ತಿಳಿವಳಿಕೆ ಉಳ್ಳವರು. ರಾಜಕಾರಣ ಅವರಿಗೆ ಪಿತ್ರಾರ್ಜಿತವಾಗಿ ಒಲಿದುಬಂದಿರುವ ಪರಂಪರೆ. ತಂದೆ ಚಂದ್ರಕಾಂತ ಬೆಲ್ಲದ ಜನತಾ ಪರಿವಾರ ಹಾಗೂ ಬಿಜೆಪಿಯಲ್ಲಿ ಒಟ್ಟು ಐದು ಬಾರಿ ಶಾಸಕರಾಗಿದ್ದವರು. ಹೀಗಾಗಿ ಬೆಲ್ಲದ ಅವರ ಮಾತುಗಳನ್ನು ಸಾರಾಸಗಟಾಗಿ ನಿರಾಕರಿಸುವುದು ಕಷ್ಟವೇ. ಇದಕ್ಕೆ ಮೊದಲಿಗೆ ಆಗಬೇಕಾದದ್ದು ಸಮಗ್ರ ತನಿಖೆ, ಏಕೆಂದರೆ, ಸರ್ಕಾರವನ್ನು ಉರುಳಿಸುವ ಹಾಗೂ ಉಳಿಸುವ ಸಾಮರ್ಥ್ಯ ಈ ಮೊಬೈಲ್ ಫೋನ್‌ಗಳಿಗೆ ಇದೆ ಎಂಬುದು ಖಾತರಿಯಾದರೆ ಮುಂದೆ ಎಂತಹ ಗಂಡಾಂತರಗಳನ್ನು ನಿರೀಕ್ಷಿಸಬಹುದು ಎಂಬುದನ್ನು ನೆನಪಿಸಿಕೊಂಡರೆ ಕೃತಕ ಪ್ರಳಯಗಳು ಸಾಮಾನ್ಯವಾಗಿ ಬಿಡುವ ಅಪಾಯ

ಕಾಡುತ್ತಿದೆ. ಕೊರೋನಾ ವ್ಯಾಧಿಯ ಬಗ್ಗೆಯೇ ಇಂತಹ ಅನುಮಾನಗಳು ಕಾಡುತ್ತಿರುವ ಸಂದರ್ಭದಲ್ಲಿ ಈ ಕದ್ದಾಲಿಕೆಯೂ ಕೂಡ ಅಂತಹುದೇ ಭೀತಿಯನ್ನು ಮೂಡಿಸಿದರೆ ಅಚ್ಚರಿಯೇನಲ್ಲ.

ಕರ್ನಾಟಕದಲ್ಲಿ ದೂರವಾಣಿ ಕದ್ದಾಲಿಕೆಯಿಂದ ರಾಮಕೃಷ್ಣ ಹೆಗಡೆ ಸರ್ಕಾರ ಪದಚ್ಯುತಗೊಂಡಿದ್ದನ್ನು ಮರೆಯುವಂತಿಲ್ಲ. ಭಿನ್ನಮತೀಯರ ಚಟುವಟಿಕೆ ನಿಗ್ರಹಿಸಲು ದೂರವಾಣಿ ಕದ್ದಾಲಿಕೆಗೆ ಗುಪ್ತ ದಳಕ್ಕೆ ಅವಕಾಶ ಕಲ್ಪಿಸಿದ್ದು ವಿವಾದಕ್ಕೆ ಕಾರಣವಾಗಿ ಕಡೆಗೆ ಸರ್ಕಾರದಿಂದಲೇ ನಿರ್ಗಮಿಸಬೇಕಾಯಿತು. ಇದಾದ ನಂತರ ಕದ್ದಾಲಿಕೆ ದೂರಿನ ಪ್ರಕರಣಗಳು ಕರ್ನಾಟಕದಲ್ಲಿ ಸಾಕಷ್ಟು ಬಾರಿ ಕೇಳಿಬಂದವು. ಬಂಗಾರಪ್ಪ ಸರ್ಕಾರದ ವಿರುದ್ಧ ಇಂತಹುದೇ ಆರೋಪ ಕೇಳಿಬಂದಿತ್ತು. ವೀರಪ್ಪ ಮೊಯಿಲಿ ಸರ್ಕಾರದ ವಿರುದ್ಧ ಗಂಭೀರ ಸ್ವರೂಪದ ಆರೋಪ ಕೇಳಿ ಬರಲು ಪತ್ರಕರ್ತರ ದೂರವಾಣಿ ಕದ್ದಾಲಿಸಿದ ಆರೋಪ ಕಾರಣವಾಗಿತ್ತು. ಆದರೆ, ಮೊಯಿಲಿ ಸರ್ಕಾರ ಈ ಆರೋಪವನ್ನು ಸಾರಸಗಟಾಗಿ ತಿರಸ್ಕರಿಸಿತ್ತು. ಭಿನ್ನಮತೀಯ ಚಟುವಟಿಕೆ ತಾರಕಕ್ಕೆ ಏರಿದಾಗಲೆಲ್ಲ ಫೋನ್ ಕದ್ದಾಲಿಕೆ ಭೂತ ಚೇಷ್ಟೆ ಅನಾವರಣಗೊಳ್ಳುವುದು ವಾಡಿಕೆ.

ಜೈಲ್‌ಸಿಂಗ್ ರಾಷ್ಟ್ರಪತಿ ಆಗಿದ್ದ ಸಂದರ್ಭದಲ್ಲಿ ರಾಜೀವ್ ಗಾಂಧಿ ಸರ್ಕಾರ ಅಂಚೆ ಲಕೋಟೆಗಳನ್ನು ಒಡೆದು ನೋಡುವ ಅವಕಾಶವನ್ನು ಪೊಲೀಸರಿಗೆ ಶಾಸನಾತ್ಮಕವಾಗಿ ಕೊಟ್ಟ ಅವಕಾಶ ಪ್ರತಿಭಟನೆಗೆ ಕಾರಣವಾದರೂ ಇದರಿಂದ ಪರಮಾಧಿಕಾರ ದೊರೆತದ್ದು ದೂರವಾಣಿ ಕದ್ದಾಲಿಕೆಗೆ. ದೇಶದ್ರೋಹಿಗಳು, ಆರ್ಥಿಕ ವಂಚಕರು ಭೂಗತ ಪಾತಕಿಗಳ ಮಟ್ಟ ಹಾಕಲು ಪೊಲೀಸರಿಗೆ ಕೆಲವು ಕರಾರುಗಳನ್ನು ವಿಧಿಸಿ ದೂರವಾಣಿ ಕದ್ದಾಲಿಸಲು ಈಗಲೂ ಅವಕಾಶವಿದೆ. ಆದರೆ, ದೇಶದ್ರೋಹಿಗಳ ಹೆಸರಿನಲ್ಲಿ ಭಿನ್ನಮತೀಯರ ಹಾಗೂ ವಿರೋಧಿಗಳ ಚಲನವಲನವನ್ನು ಹಿಂಬಾಲಿಸಲು ದೂರವಾಣಿ ಕದ್ದಾಲಿಸುವ ಕಳ್ಳ ಮಾರ್ಗ ಹೆಚ್ಚು ದಿನ ರಹಸ್ಯವಾಗಿ ಉಳಿಯುವುದಿಲ್ಲ. ಏಕೆಂದರೆ ಇದು ತಂತ್ರಜ್ಞಾನದ ಯುಗ. ಎಲ್ಲವೂ ದರ್ಶಕ ಯುಗ. ಪಾರದರ್ಶಕತೆಯ ಕಾಲದಲ್ಲಿ ಎಲ್ಲವೂ ಜಗಜ್ಜಾಹೀರು. ಆದರೆ, ಆಳುವ ಸರ್ಕಾರಗಳಿಗೆ ಇಂತಹ ಪರಿಜ್ಞಾನ ಇರುವುದಿಲ್ಲ ಎನ್ನುವುದಕ್ಕಿಂತಲೂ ಪರಂಪರೆಯಾಗಿ ಸರ್ಕಾರದ ಆಡಳಿತದಲ್ಲಿ ಮುಂದುವರೆದುಕೊಂಡು ಬಂದಿರುವ ಓಬಿರಾಯನ ಕಾಲದ ಈ ಕಳ್ಳಮಾರ್ಗವೇ ಆಡಳಿತಕ್ಕೆ ಯಾವಾಗಲೂ ರಾಜಮಾರ್ಗ.

ಆಧಾರ:ಸಂಯುಕ್ತ ಕರ್ನಾಟಕ, ದಿನಾಂಕ: 18.06.2021

## 8. ಆರೋಗ್ಯ ಸುಧಾರಣೆ ಚರ್ಚೆಗೆ ನಡೆಯಲಿ ವಿಶೇಷ ಅಧಿವೇಶನ

ಕೊರೋನಾ ಸಾಂಕ್ರಾಮಿಕ ರೋಗ ದೇಶದ, ರಾಜ್ಯದ ಆರೋಗ್ಯ ಸೇವಾ ವ್ಯವಸ್ಥೆಯ ನೈಜ ಸ್ಥಿತಿಯನ್ನು ಬೆತ್ತಲಾಗಿಸಿದೆ. ನಾವು ಎಷ್ಟು ಬೇಜವಾಬ್ದಾರಿಯಿಂದ ಆರೋಗ್ಯ ಕ್ಷೇತ್ರವನ್ನು ನಿರ್ಲಕ್ಷಿಸಿದ್ದೇವೆ ಎಂಬುದರ ಸ್ಪಷ್ಟ ಅರಿವು ಈಗ ಎಲ್ಲರಿಗೂ ಆಗತೊಡಗಿದೆ. ಮೂಲ ಸೌಲಭ್ಯಗಳಿಲ್ಲದ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸುಸಜ್ಜಿತ ಆಸ್ಪತ್ರೆಗಳ ಕೊರತೆ, ಆಸ್ಪತ್ರೆಗಳಲ್ಲಿ ಜನಸಂಖ್ಯೆಗೆ ಅನುಸಾರ ಬೆಡ್‌ಗಳ ಕೊರತೆ, ತಜ್ಞರು, ವೈದ್ಯರು, ವೈದ್ಯಕೀಯ ಸಿಬ್ಬಂದಿ ಕೊರತೆ ಈ ಆಧುನಿಕ ಯುಗದಲ್ಲೂ ನಮ್ಮನ್ನು ಅಣಕಿಸುತ್ತಿವೆ. ಸಮಾಜದ ಮುಖ್ಯವಾಹಿನಿಯಲ್ಲಿ ಮುಂಚೂಣಿಯಲ್ಲಿರುವ ನಾವೆಲ್ಲ ತಲೆ ತಗ್ಗಿಸುವಂತಾಗಿದೆ. ಆರೋಗ್ಯ ಕ್ಷೇತ್ರದ ಸರ್ವಾಂಗೀಣ ಸುಧಾರಣೆಗೆ ಒತ್ತು ನೀಡುವ ಕೆಲಸ ತುರ್ತಾಗಿ ಆಗಬೇಕಾಗಿದೆ. ಇಡೀ ಆರೋಗ್ಯ ವ್ಯವಸ್ಥೆಯನ್ನು ಸಮಗ್ರವಾಗಿ ಪುನರ್ ರಚಿಸಬೇಕಾದ ಅನಿವಾರ್ಯತೆ ಸರಕಾರದ ಮುಂದಿದೆ.

ಐರೋಪ್ಯ ರಾಷ್ಟ್ರಗಳಾಗಿರಬಹುದು ಅಥವಾ ಮುಂದುವರಿದ ದೊಡ್ಡ ರಾಷ್ಟ್ರ ಅಮೇರಿಕವಾಗಿರಬಹುದು. ಇವೆಲ್ಲವೂ ಆರೋಗ್ಯ ಕ್ಷೇತ್ರಕ್ಕೆ ಹೆಚ್ಚು ಆದ್ಯತೆ ನೀಡಿ, ಅದ್ವಿತೀಯ ಸಾಧನೆ ಮಾಡಿವೆ. ಅಲ್ಲಿರುವ ಸುಧಾರಿತ ಆರೋಗ್ಯ ವ್ಯವಸ್ಥೆ, ಉನ್ನತ ದರ್ಜೆ ಮತ್ತು ಆಧುನಿಕ ಸೌಲಭ್ಯಗಳುಳ್ಳ ವೈದ್ಯಕೀಯ ಚಿಕಿತ್ಸಾ ವ್ಯವಸ್ಥೆಗಳು ಆ ರಾಷ್ಟ್ರಗಳ ಹಿರಿಮೆಗೆ ಸಾಕ್ಷಿಯಾಗಿವೆ. ಹೊಸ ಆವಿಷ್ಕಾರಗಳನ್ನು ಅನುಷ್ಠಾನಗೊಳಿಸುವಲ್ಲಿ ಮತ್ತು ಅವುಗಳನ್ನು ತಮ್ಮ ದೇಶದ ಪ್ರಜೆಗಳಿಗೆ ತಲುಪಿಸಲು ಆ ದೇಶಗಳ ಚುನಾಯಿತ ಸರಕಾರಗಳು ಆರೋಗ್ಯ ಕ್ಷೇತ್ರವನ್ನೇ ಆದ್ಯತೆಯ ಕ್ಷೇತ್ರವನ್ನಾಗಿಸಿಕೊಂಡಿವೆ.

ದೇಶಕ್ಕೆ ಸ್ವಾತಂತ್ರ್ಯ ಬಂದು 70 ವರ್ಷಗಳೇ ಸಂದರೂ ನಮ್ಮ ದೇಶ ಎಲ್ಲಿದೆ, ಇಂತಹ ಸಂದಿಗ್ಧ ಪರಿಸ್ಥಿತಿಗಳನ್ನು ಎದುರಿಸಲು ಹೇಗೆ ಸಿದ್ಧರಿದ್ದೇವೆ, ಏನು ಸಾಧಿಸಿದ್ದೇವೆ, ನಮ್ಮ ಹಿಂದಿನ ಸರಕಾರಗಳು ಆರೋಗ್ಯ ಕ್ಷೇತ್ರಕ್ಕೆ ಏನು ಕೊಡುಗೆ ನೀಡಿವೆ ಎಂಬುದನ್ನು ತುಲನೆ ಮಾಡಬೇಕಾಗಿದೆ. ಪಾಶ್ಚಿಮಾತ್ಯ ಮತ್ತು ಐರೋಪ್ಯ ದೇಶಗಳಿಗೆ ಹೋಲಿಸಿದರೆ ಭಾರತದ ಜನರಿಗೆ ಸುಧಾರಿತ ವೈದ್ಯಕೀಯ ಚಿಕಿತ್ಸೆ ಒದಗಿಸಲು, ಇಂತಹ ಮಹಾಮಾರಿ ರೋಗ ರುಜಿನಗಳಿಂದ ಜನರನ್ನು ರಕ್ಷಿಸಲು ಸರಕಾರಗಳು ತೆರೆದುಕೊಂಡಿದ್ದ ಕ್ರಮಗಳೇನು? ಆಧುನಿಕ ಆರೋಗ್ಯ ವ್ಯವಸ್ಥೆಗಳೇನು ಎನ್ನುವ ಪ್ರಶ್ನೆ ನಮ್ಮನ್ನ ಸದಾ ಕಾಡುತ್ತಿದೆ.

ಗ್ರಾಮೀಣ ಭಾಗದ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸ್ಥಿತಿ ಅತ್ಯಂತ ಶೋಚನೀಯವಾಗಿದೆ. ಅಲ್ಲಿನ ಸಿಬ್ಬಂದಿ, ಮೂಲ ಸೌಕರ್ಯಗಳ ಅವ್ಯವಸ್ಥೆ ನೋಡಿದಾಗ ನಾವು ಎಲ್ಲೋ ಒಂದು ಕಡೆ ಗ್ರಾಮೀಣ ಆರೋಗ್ಯ ವ್ಯವಸ್ಥೆಯನ್ನು ಸಂಪೂರ್ಣ ನಿರ್ಲಕ್ಷ್ಯ ಮಾಡಿದ್ದೇವೆಂದೇ ಹೇಳಬೇಕಾಗುತ್ತದೆ. ದೂರದ ಬೆಂಗಳೂರಿನ ದೊಡ್ಡ ದೊಡ್ಡ ಆಸ್ಪತ್ರೆಗಳು, ಸುಧಾರಿತ ಆರೋಗ್ಯ ವ್ಯವಸ್ಥೆಗಳನ್ನು ಗಮನಿಸಿದಾಗ ಗ್ರಾಮೀಣ ಭಾಗದಲ್ಲಿರುವ ಆರೋಗ್ಯ ವ್ಯವಸ್ಥೆ ಮೂಲ ಸೌಕರ್ಯಗಳ ಕೊರತೆಯಿಂದ ತೀರಾ ಅಧೋಗತಿಗಿಳಿದಿದೆ. ಇಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರು, ದಾದಿಯರ ಕೊರತೆ ಜೊತೆಗೆ ಲ್ಯಾಬೋರೇಟಿಗಳು, ಪ್ಯಾರಾ ಮೆಡಿಕಲ್ ಸ್ಟಾಫ್‌ಗಳಂತೂ ಇಲ್ಲವೇ ಇಲ್ಲ. ತಾಲ್ಲೂಕು ಆಸ್ಪತ್ರೆಗಳಲ್ಲಿ ಡಯಾಲಿಸಿಸ್ ಮಷಿನ್, ವೆಂಟಿಲೇಟರ್‌ಗಳಿದ್ದರೂ ಅವುಗಳನ್ನು ಬಳಸುವಂತಹ ತಾಂತ್ರಿಕ ಸಿಬ್ಬಂದಿ ಇಲ್ಲ. ಎಷ್ಟೋ ಆಸ್ಪತ್ರೆಗಳಲ್ಲಿ ಇವುಗಳೆಲ್ಲ ಧೂಳು ತಿನ್ನುತ್ತಿವೆ! ಇಲ್ಲಿಯೂ ನುರಿತ ತಜ್ಞ ವೈದ್ಯರ ಕೊರತೆ.

ಪಾಶ್ಚಾತ್ಯ ದೇಶಗಳಲ್ಲಿರುವ ಆರೋಗ್ಯ ವ್ಯವಸ್ಥೆಯ ಸಮಾನಾಂತರವಾಗಿ ನಾವು ಬೆಳೆಯಬೇಕಾದರೆ ನಾವಿನ್ನೂ ಬಹಳಷ್ಟು ದೂರದ ಹಾದಿ ಕ್ರಮಿಸಬೇಕಾಗಿದೆ. ಒಂದು ಸಣ್ಣ ಉದಾಹರಣೆ ನೋಡುವುದಾದರೆ, ಭಾರದತಲ್ಲಿ ಪ್ರತಿ 1000 ಜನಸಂಖ್ಯೆಗೆ 0.55 ಬೆಡ್‌ಗಳು ಇದ್ದರೆ, ಇಂಗ್ಲೆಂಡ್‌ನಲ್ಲಿ 2.6 ಬೆಡ್‌ಗಳು ಸಿಗುತ್ತವೆ. ಹಾಗೆಯೇ, ನಮ್ಮಲ್ಲಿ ಪ್ರತಿ 1000 ಜನಸಂಖ್ಯೆಗೆ 1.34 ವೈದ್ಯರು, 1.5 ದಾದಿಯರಿದ್ದಾರೆ. ನಮ್ಮಲ್ಲಿ ಆರೋಗ್ಯ ಸೇವೆಗೆ ಜಿಡಿಪಿಯ ಶೇ.1.6ರಷ್ಟು ಹಣಕಾಸು ಮೀಸಲಾಗಿದ್ದರೆ, ಇಂಗ್ಲೆಂಡ್ ಶೇ.7.53 ರಷ್ಟನ್ನು ಬಳಸುತ್ತದೆ! ಇಂತಹ ಪರಿಸ್ಥಿತಿಯಲ್ಲಿ ಕೊರೋನಾ 3ನೇ ಅಲೆ ಎದುರಿಸಲು ನಾವು ಸುಧಾರಿತ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಾದ ಮಾಡಿಕೊಳ್ಳಬೇಕಾದ ಅನಿವಾರ್ಯತೆ ಎದುರಾಗಿದೆ. ಸರಕಾರಗಳು ಬರುತ್ತವೆ, ಹೋಗುತ್ತವೆ. ಆದರೆ ಮುಂದಿನ ಪೀಳಿಗೆಗೆ ಒಂದು ಭದ್ರ ಬುನಾದಿ ಹಾಕಿ ಕೊಡಬೇಕಾದ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಆ ನಿಟ್ಟಿನಲ್ಲಿ ನಾವು ಚಿಂತಿಸಬೇಕಾಗಿದೆ. 60ರ ದಶಕದಲ್ಲಿ ಕರ್ನಾಟಕದಲ್ಲಿ ಸರಕಾರಿ ವಲಯದ ಮೈಸೂರು ಮೆಡಿಕಲ್ ಕಾಲೇಜ್ (1924), ಬೆಂಗಳೂರು ಮೆಡಿಕಲ್ ಕಾಲೇಜ್ (1955) ಹಾಗೂ ಹುಬ್ಬಳ್ಳಿಯ ಕಿಮ್ಸ್(1957) ಹೊರತು ಪಡಿಸಿದರೆ ಖಾಸಗಿ ವೈದ್ಯಕೀಯ ಶಿಕ್ಷಣ ಸಂಸ್ಥೆಗಳೇ ಇರಲಿಲ್ಲ. ಆ ಸಮಯದಲ್ಲಿ ಎಸ್.ನಿಜಲಿಂಗಪ್ಪನವರು ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ವೈದ್ಯಕೀಯ ಮಹಾವಿದ್ಯಾಲಯಗಳನ್ನು ಆರಂಭಿಸುವುದರ ಮೂಲಕ ಖಾಸಗಿ ವೈದ್ಯಕೀಯ ಶಿಕ್ಷಣ ನೀತಿಗೆ ಹೊಸ ಆಯಾಮ ನೀಡಿದರು. ಆ ಹಿನ್ನೆಲೆಯಲ್ಲಿ ಪ್ರಾರಂಭವಾದ ವೈದ್ಯಕೀಯ ಶಿಕ್ಷಣ ಸಂಸ್ಥೆಗಳೆಂದರೆ ಮಂಗಳೂರಿನ ಕಸ್ತೂರಬಾ ಮೆಡಿಕಲ್ ಕಾಲೇಜ್ (1955), ಬೆಳಗಾವಿಯ ಕೆಎಲ್‌ಇ ಸಂಸ್ಥೆಯ ಜವಹರಲಾಲ್ ನೆಹರು ವೈದ್ಯಕೀಯ ಮಹಾವಿದ್ಯಾಲಯ (1963), ಎಚ್‌ಕೆಇ ಸಂಸ್ಥೆಯ ಎಂ.ರಾಂಪುರ ಮೆಡಿಕಲ್ ಕಾಲೇಜ್ (1963) ಮುಂತಾದವು.

80ರ ದಶಕದಲ್ಲಿ ಮಾಜಿ ಮುಖ್ಯಮಂತ್ರಿ ದಿ.ಗುಂಡೂರಾವ್ ಅವರ ಆಳ್ವಿಕೆಯ ಅಂತ್ಯದಲ್ಲಿ ವೈದ್ಯಕೀಯ ಶಿಕ್ಷಣಕ್ಕೆ ಆದ್ಯತೆ ನೀಡುವ ಕೆಲಸ ಆರಂಭವಾಯಿತು. ನಂತರ ಬಂದ ಅಂದಿನ ಮುಖ್ಯಮಂತ್ರಿಗಳಾದ ರಾಮಕೃಷ್ಣ ಹೆಗಡೆಯವರು ರಾಜ್ಯದ ಖಾಸಗಿ ಶಿಕ್ಷಣ ಸಂಸ್ಥೆಗಳ ಬೆನ್ನುತಟ್ಟಿ ವೈದ್ಯಕೀಯ ಮಹಾವಿದ್ಯಾಲಯ ಪ್ರಾರಂಭಿಸಲು ಅನುಮತಿ ನೀಡುವುದರ ಮೂಲಕ ಹೆಗಡೆಯವರು ಪ್ರೇರಣೆಯಾದರು. ಇದರ ಜೊತೆ ಜೊತೆಗೆ ಅನೇಕ ನರ್ಸಿಂಗ್ ಕಾಲೇಜುಗಳನ್ನು ಸಹ ಪ್ರಾರಂಭಿಸಲು ಮಂಜೂರಾತಿ ನೀಡಿ ವೈದ್ಯಕೀಯ ಶಿಕ್ಷಣಕ್ಕೆ ಒತ್ತು ಕೊಡಲು ಹಸಿರು ನಿಶಾನೆ ತೋರಿದರು. ಈಗ ನಮ್ಮ ರಾಜ್ಯದಲ್ಲಿ ದೂರದ ಮೈಸೂರಿನಿಂದ ಕಲಬುರಗಿವರೆಗೆ ಸುಮಾರು 41 ಖಾಸಗಿ ವೈದ್ಯಕೀಯ ಮಹಾವಿದ್ಯಾಲಯಗಳು ಮತ್ತು 19 ಸರಕಾರಿ ವೈದ್ಯಕೀಯ ಮಹಾವಿದ್ಯಾಲಯಗಳಿವೆ. ವೈದ್ಯಕೀಯ

ಮಹಾವಿದ್ಯಾಲಯಗಳ ಜೊತೆಯಲ್ಲೇ ಇಂಡಿಯನ್ ಮೆಡಿಕಲ್ ಕೌನ್ಸಿಲ್ ನಿಯಮಾವಳಿಯಂತೆ ಕನಿಷ್ಠ 500 ರಿಂದ 1000 ಹಾಸಿಗೆಗಳ ಆಸ್ಪತ್ರೆಗಳನ್ನು ಸಹ ಈ ವೈದ್ಯಕೀಯ ಮಹಾ ವಿದ್ಯಾಲಯಗಳು ಹೊಂದಿವೆ. ಇಂದು ಅವುಗಳ ಅನುಪಮ ಸೇವೆ ಇಡೀ ಸಮಾಜಕ್ಕೆ ಸಂದಿದೆ.

ಖಾಸಗಿ ವೈದ್ಯಕೀಯ ಶಿಕ್ಷಣದ ವಿದ್ಯಾಲಯಗಳು ಸಮಾಜದ ಒಳಿತಿಗೆ ಶ್ರಮಿಸುತ್ತಿದ್ದರು. ಕೆಲವೊಂದು ಮಹಾವಿದ್ಯಾಲಯಗಳ ಶಿಕ್ಷಣದ ಬಗ್ಗೆ ವೈದ್ಯಕೀಯ ಸೇವೆಗಳ ಬಗ್ಗೆ ಅಲ್ಲಿರುವ ವ್ಯವಸ್ಥೆಗಳ ಬಗ್ಗೆ ಅನೇಕ ಟೀಕೆ ಟಿಪ್ಪಣಿಗಳಿರಬಹುದು. ಆದರೂ ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಕರ್ನಾಟಕದಲ್ಲಿರುವ ಖಾಸಗಿ ಶಿಕ್ಷಣ ಸಂಸ್ಥೆಗಳ ಬೆಳವಣಿಗೆಗಳು, ಸಾಮಾಜಿಕ ಜವಾಬ್ದಾರಿಗಳು ಈ ಕೊರೋನಾದಂತಹ ಸಂದಿಗ್ಧ ಪರಿಸ್ಥಿತಿಯನ್ನು ಎದುರಿಸುವಲ್ಲಿ ಬಹಳಷ್ಟು ಸಹಕಾರಿಯಾಗಿವೆ ಎಂಬುದು ನನ್ನ ನಿಲುವು.

2005ರಲ್ಲಿ ಮಾಜಿ ಮುಖ್ಯಮಂತ್ರಿ ಧರ್ಮಸಿಂಗ್ ಸರಕಾರ ರಾಜ್ಯದಲ್ಲಿ ಖಾಸಗಿ ವೈದ್ಯಕೀಯ ಮಹಾವಿದ್ಯಾಲಯಗಳ ಜೊತೆಗೆ ಸರಕಾರಿ ವೈದ್ಯಕೀಯ ಮಹಾವಿದ್ಯಾಲಯಗಳನ್ನು ಜಿಲ್ಲೆಗೊಂದರಂತೆ ತೆರೆಯುವ ನಿರ್ಧಾರ ಮಾಡಿದ್ದು ಅತ್ಯಂತ ಶ್ಲಾಘನೀಯ. ಆ ಪ್ರತಿ ವೈದ್ಯಕೀಯ ಮಹಾವಿದ್ಯಾಲಯಗಳ ಜೊತೆಗೆ ಕನಿಷ್ಠ 750 ರಿಂದ 1000 ಹಾಸಿಗೆಗಳ ಆಸ್ಪತ್ರೆಗಳು ನಿರ್ಮಾಣಗೊಂಡವು. ರಾಜ್ಯದ ಜನರ ಆರೋಗ್ಯ ಸೇವೆಗಾಗಿ ತಲೆ ಎತ್ತಿ ನಿಂತ ಇವು ನಮಗೆಲ್ಲರಿಗೂ ಕೊರೋನಾ ಮಹಾಮಾರಿ ಎದುರಿಸುವಲ್ಲಿ ಸಹಕಾರಿಯಾಗಿವೆ. ಇದರ ಜೊತೆಗೆ ಈ ಸರಕಾರಿ ಮತ್ತು ಖಾಸಗಿ ಮಹಾ ವಿದ್ಯಾಲಯಗಳಲ್ಲಿರುವ ವೈದ್ಯರು ತಮ್ಮದೇ ನರ್ಸಿಂಗ್ ಹೋಂ, ಆಸ್ಪತ್ರೆಗಳನ್ನು ತೆರೆಯುವುದರ ಮೂಲಕ ರಾಜ್ಯಾದಾದ್ಯಂತ ಜನರ ಆರೋಗ್ಯ ಸೇವೆಗೆ ಕೊಡುಗೆಯನ್ನು ನೀಡುತ್ತಿದ್ದಾರೆ.

ಬೆಂಗಳೂರು ಮಹಾನಗರದಲ್ಲಿ ಸುಮಾರು 1,27,64,935 ಜನಸಂಖ್ಯೆ ಇದೆ. ಆದೆ ಬೆಡ್‌ಗಳ ಪ್ರಮಾಣ ಮಾತ್ರ ಪ್ರತಿ 1000 ಜನರಿಗೆ 1.46ರಷ್ಟು ಲಭ್ಯವಿದೆ. ಕೊರೋನಾ ನಮಗೆಲ್ಲರಿಗೂ ಒಂದು ಸರಿಯಾದ ಪಾಠ ಕಲಿಸಿದೆ. ಒಂದು ದೊಡ್ಡ ಅಲಾರ್ಮ್ ಗಂಟೆ ಬಾರಿಸಿ ನಮ್ಮೆಲ್ಲರನ್ನೂ ಬಡಿದೆಬ್ಬಿಸಿದೆ. ಈಗಲಾದರೂ ನಾವು ಎಚ್ಚೆತ್ತುಕೊಳ್ಳಬೇಕಾಗಿದೆ. ಕೊರೋನಾ ವೈರಸ್ ಅನ್ನು ಬಹಳಷ್ಟು ಮಂದಿ ಇದೊಂದು ಜೈವಿಕ ಅಸ್ತ್ರ. ಬಲಿಷ್ಠ ರಾಷ್ಟ್ರಗಳನ್ನು ಹಣಿಯಲು ಸೃಷ್ಟಿಸಿದ ಶಸ್ತ್ರವೆಂದೂ ಕರೆಯುತ್ತಿದ್ದಾರೆ. ಮುಂದೆ ಅಣುಬಾಂಬ್‌ಗಳಿಂದಲ್ಲ. ಅಣು ಜೀವಿಗಳನ್ನೇ ಶಸ್ತ್ರಾಸ್ತ್ರಗಳನ್ನಾಗಿ ಬಳಸಿ ಮಹಾಸಮರಗಳು ಜರುಗಿದರೂ ಆಶ್ಚರ್ಯಪಡಬೇಕಾಗಿಲ್ಲ. ಆದ್ದರಿಂದ ಮುಂದೆ ಎದುರಾಗುವ ಕಠಿಣ ಸಮಸ್ಯೆಗಳನ್ನು ದೂರಾಲೋಚಿಸಿ, ಅದಕ್ಕೆ ಸಿದ್ಧತೆಗಳನ್ನು ಈಗಿನಿಂದಲೇ ಮಾಡಬೇಕಾಗಿರುವುದು ಅನಿವಾರ್ಯ ಎಂಬುದು ನನ್ನ ಅಭಿಮತ.

ಈ ಹಿನ್ನೆಲೆಯಲ್ಲಿ ಮುಂದಿನ 10 ವರ್ಷಗಳಲ್ಲಿ ಆರೋಗ್ಯ ಕ್ಷೇತ್ರದಲ್ಲಿ ಯಾವ ಯಾವ ರೀತಿ ನಾವು ಬದಲಾವಣೆಗಳನ್ನು ತರಬಹುದು, ಗ್ರಾಮೀಣ ಕ್ಷೇತ್ರಗಳ ಬಡಜನರಿಗೆ ಕೈಗೆಟುಕುವ ಆರೋಗ್ಯವನ್ನು ಹೇಗೆ ನೀಡಬಹುದು. ಗ್ರಾಮೀಣಪ್ರದೇಶದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಆ ಭಾಗದ ಜನತೆಯ ನಿರೀಕ್ಷೆಗಳಿಗನುಗುಣವಾಗಿ ಹೇಗೆ ಸುಧಾರಿಸಬಹುದು, ಆರೋಗ್ಯ ವಲಯಕ್ಕೆ ಏನೆಲ್ಲ ಮೂಲ ಸೌಕರ್ಯಗಳು ಬೇಕಾಗಬಹುದು ಮತ್ತು ವೈದ್ಯರ ಕೊರತೆ, ದಾದಿಯರ ಕೊರತೆ, ಪ್ಯಾರಾ ಮೆಡಿಕಲ್ ತಂತ್ರಜ್ಞರ ಕೊರತೆ, ಸುಸಜ್ಜಿತ ಲ್ಯಾಬ್‌ಗಳ ಕೊರತೆಗಳನ್ನು ಹೇಗೆ ನೀಗಿಸಬಹುದು ಎಂಬುದರ ಬಗ್ಗೆ ಚಿಂತಿಸಬೇಕಾಗಿದೆ. ರಾಜ್ಯದ ಇಡೀ ಆರೋಗ್ಯ ವ್ಯವಸ್ಥೆಯನ್ನು ಸಮಗ್ರವಾಗಿ ಸುಧಾರಿಸಿ ಬದಲಾವಣೆ ತರಲು ನಾವು ಇಂದೇ ನಾಂದಿ ಹಾಡಬೇಕಾಗಿದೆ. ನಾನು ಇದೆಲ್ಲವೂ ಒಂದೇ ದಿನದಲ್ಲಿ, ಒಂದೇ ವರ್ಷದಲ್ಲಿ ಒಂದೇ ಸರಕಾರದಿಂದ ಸಾಧ್ಯವಾಗುತ್ತದೆಂದು ಹೇಳುವುದಿಲ್ಲ. ಆದರೆ ಆರೋಗ್ಯ ಕ್ಷೇತ್ರಕ್ಕೆ, ವೈದ್ಯಕೀಯ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಲು, ಇದನ್ನೇ ಆದ್ಯತೆಯ ಕ್ಷೇತ್ರವಾಗಿ ಮಾಡಿಕೊಳ್ಳಬೇಕಾಗಿದೆ. ಮುಖ್ಯವಾಗಿ, ಚುನಾಯಿತ ಸರಕಾರಗಳ ನಿಲುವು ಬದಲಾಗಬೇಕಾಗಿದೆ.

ಇಂದು ರಾಜ್ಯದ ಮುಖ್ಯಮಂತ್ರಿಗಳು ಮತ್ತು ಆರೋಗ್ಯ ಸಚಿವರು ಆ ನಿಟ್ಟಿನಲ್ಲಿ ವಿರೋಧ ಪಕ್ಷಗಳನ್ನು ಸಹಿತ ವಿಶ್ವಾಸಕ್ಕೆ ತೆಗೆದುಕೊಂಡು ಕಾರ್ಯೋನ್ಮುಖರಾಗಿರುವುದು ಶ್ಲಾಘನೀಯ. ನಾವು ಈ ರಾಜ್ಯದ ಜನಪ್ರತಿನಿಧಿಗಳಾಗಿ ಆರೋಗ್ಯ ಕ್ಷೇತ್ರವನ್ನು ಸುಧಾರಿಸುವಲ್ಲಿ ನಮ್ಮ ನಮ್ಮ ವಿಚಾರಧಾರೆಗಳನ್ನು

ಸಲಹೆ ಸೂಚನೆಗಳನ್ನು ಪಕ್ಷಾತೀತವಾಗಿ ವ್ಯಕ್ತಪಡಿಸುವ ಮುಖಾಂತರ ಸರಕಾರಕ್ಕೆ ಸಹಕರಿಸಬೇಕಾಗಿದೆ. ಗ್ರಾಮೀಣ ಜನರ ಆರೋಗ್ಯ ರಕ್ಷಿಸುವ ನಿಟ್ಟಿನಲ್ಲಿ ಜನಪ್ರತಿನಿಧಿಗಳು ತಮ್ಮ ಜವಾಬ್ದಾರಿ ಯಶಸ್ವಿಯಾಗಿ ನಿಭಾಯಿಸಬೇಕಿದೆ. ಈ ಕೊರೋನಾ 2ನೇ ಅಲೆ ಕಡಿಮೆಯಾದ ನಂತರ ಒಂದು ವಿಶೇಷ ಅಧಿವೇಶನವನ್ನು ಇದಕ್ಕಾಗಿಯೇ ಕರೆದು, ಕರ್ನಾಟಕದ ಆರೋಗ್ಯ ಕ್ಷೇತ್ರದ ಸಮಗ್ರ ಸುಧಾರಣೆಗೆ ಮಾರ್ಗಸೂಚಿ ರೂಪಿಸುವ ಕಾರ್ಯ ಆಗಬೇಕಾಗಿದೆ. ಈ ವಿಚಾರದಲ್ಲಿ ಸರಕಾರ ಒಂದಾಗಬೇಕು, ಮುಂದಾಗಬೇಕು ಎಂಬುದು ನಮ್ಮೆಲ್ಲರ ಸದಾಶಯ.

**ಲೇಖಕರು: ಮಹಾಂತೇಶ್ ಮ.ಕವಟಗಿಮಠ**
**ಸರ್ಕಾರದ ಮುಖ್ಯ ಸಚೇತಕರು,**
**ಕರ್ನಾಟಕ ವಿಧಾನ ಪರಿಷತ್ತು.**
ಆಧಾರ:ವಿಜಯ ಕರ್ನಾಟಕ, ದಿನಾಂಕ: 20.06.2021.

ನಿರ್ದೇಶಕರು, ಸರ್ಕಾರಿ ಮುದ್ರಣಾಲಯ, ವಿಕಾಸಸೌಧ ಘಟಕ, ಬೆಂಗಳೂರು, ಕಾ.ಸೂ. 237 – 500 ಪ್ರತಿಗಳು